ಭಾನುವಾರ, ಫೆಬ್ರುವರಿ 26, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 57 | ಪುಟ 22

www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
70 ವರ್ಷಗಳ ಹಿಂದಿನ ಗಂಗಾವತಿಯ ಜಲ ಸುರಂಗದ ಕಥೆ



ಗೋಧ್ರೋತ್ತರ ಗಲಭೆ: ಐವರು ಆರೋಪಿಗಳ ಖುಲಾಸೆ 8
ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣೆ ಕಾಯ್ದೆ ಅನುಷ್ಠಾನಕ್ಕೆ ತೊಡಕು
ನಾಳೆ ರಾಜ್ಯಕ್ಕೆ ಮತ್ತೆ ಪ್ರಧಾನಿ ಮೋದಿ 7
'ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ' 9

ಈರುಳ್ಳಿ: ಮುಗಿಯದ ಕಣ್ಣೀರು

ಮಹಾರಾಷ್ಟ್ರದ ಈರುಳ್ಳಿ ಪ್ರವಾಹಕ್ಕೆ ಮುಳುಗುವ ಬದುಕು • ಕಾಡುವ ಮೂಲಸೌಲಭ್ಯ ಕೊರತೆ

• ಎಂ.ಜಿ.ಬಾಲಕೃಷ್ಣ

ಬೆಂಗಳೂರು: ಈರುಳ್ಳಿ ಕತ್ತರಿಸುವಾಗ ಸುರಿಯುವ ಕಣ್ಣೀರು ತಾತ್ಕಾಲಿಕ. ಆದರೆ ಈರುಳ್ಳಿ ಬೆಳೆಯುವ ರೈತರು ಸುರಿಸುತ್ತಿರುವ ಕಣ್ಣೀರು ಮಾತ್ರ ಅಲ್ಪಕಾಲದ್ದಲ್ಲ. ಅಕಾಲಿಕ ಮಳೆ, ದಿಢೀರ್ ಬೆಲೆ ಕುಸಿತ, ದಾಸ್ತಾನು ಮಾಡುವ ಸೌಲಭ್ಯದ ಕೊರತೆ, ಮಧ್ಯವರ್ತಿ ಹಾವಳಿಗಳು ರೈತರ ಬದುಕನ್ನು ಹಿಂಡಿಬಿಟ್ಟಿವೆ.

ಫೆಬ್ರುವರಿ ಮಧ್ಯಭಾಗದವರೆಗೆ ಈರುಳ್ಳಿ ಬೆಳೆದ ರೈತರಿಗೆ ಕ್ವಿಂಟಲ್‌ಗೆ ₹2 ಸಾವಿರದಿಂದ 2,500 ಸಿಗುತ್ತಿತ್ತು. ಶಿವರಾತ್ರಿ ಕಳೆಯುತ್ತಲೇ ದರ ₹1,400ಕ್ಕಿಂತ ಕಡಿಮೆಯಾಗಿದೆ. ಬೆಳಗಾವಿ ಎಪಿಎಂಸಿಯಲ್ಲಿ ನಾಲ್ಕು ತಿಂಗಳ ಹಿಂದೆ ಪ್ರತಿ ಕ್ವಿಂಟಲ್‌ಗೆ ₹ 3 ಸಾವಿರ ದರವಿತ್ತು. ಒಂದೇ ತಿಂಗಳಲ್ಲಿ ಅದು ₹ 900ರವರೆಗೂ ಕುಸಿದಿತ್ತು. ಬಳಿಕ ಮತ್ತೆ ದರ ಚೇತರಿಸಿಕೊಂಡಿತ್ತು. ರಾಜ್ಯದಲ್ಲಿ ನಾಲ್ಕೈದು ವರ್ಷಗಳಿಂದಲೂ ದರ ಏರುಪೇರು ಆಗುತ್ತಲೇ ಇದೆ. 2018–19ರಲ್ಲಿ ಈರುಳ್ಳಿ ಸರಾಸರಿ ಬೆಲೆ ಪಾತಾಳಕ್ಕೆ ಕುಸಿದಿತ್ತು. ಆಗ ರೈತರಿಗೆ ಸಿಕ್ಕಿದ್ದು ಕ್ವಿಂಟಲ್‌ಗೆ ₹ 906 ಮಾತ್ರ. 2019–20ರಲ್ಲಿ ಅದು ₹2,304ಕ್ಕೆ ನೆಗೆಯಿತು. ಈ ದರ ಹೆಚ್ಚಳ ಸ್ಥಿರವಾಗಲಿಲ್ಲ, ಮತ್ತೆ ಕುಸಿಯಿತು. 2021–22ರಲ್ಲಿ ರೈತರಿಗೆ ದೊರೆತ ಸರಾಸರಿ ದರ ₹ 1,822 ಮಾತ್ರ.

ಈರುಳ್ಳಿಗೆ ಚಿನ್ನದ ದರ ಬಂದಾಗ ಮೈತುಂಬ ಚಿನ್ನ ಹಾಕಿಸಿಕೊಳ್ಳುವ ಮಂದಿ ಚಿತ್ರದುರ್ಗದಿಂದ ತೊಡಗಿ ಬೀದರ್‌ವರೆಗೂ ಕಾಣಸಿಗುತ್ತಾರೆ. ಆದರೆ ದರ ಪಾತಾಳಕ್ಕೆ ಕುಸಿದಂತೆ ಆ ಚಿನ್ನದ ಸರವನ್ನೆಲ್ಲಾ ಅಡವಿಟ್ಟೋ, ಮಾರಾಟ ಮಾಡಿಯೋ ಜೀವನ ಸಾಗಿಸುವ ಕಷ್ಟದ ದಾರಿಯನ್ನು ಅವರು ಕಾಣುತ್ತಿದ್ದಾರೆ. ಈರುಳ್ಳಿ ದರವನ್ನು ಸ್ಥಿರವಾಗಿ ಇಡುವ ನಿಟ್ಟಿನಲ್ಲಿ ರಾಜ್ಯದಲ್ಲಿ ಇದುವರೆಗೂ ಯಾವುದೇ ಗಂಭೀರ ಪ್ರಯತ್ನ ನಡೆದಿಲ್ಲ ಎಂಬುದೂ ವಾಸ್ತವ.

ಈರುಳ್ಳಿ ಬೆಳೆ ಕೊಯ್ಲಿಗೆ ಬಂದ ತಕ್ಷಣ ಮಾರಾಟ ಮಾಡಬೇಕಾದ ಒತ್ತಡದಲ್ಲಿ ರಾಜ್ಯದ ಕೃಷಿಕರು ಇದ್ದಾರೆ. ಇದಕ್ಕೆ ಕಾರಣ ರಾಜ್ಯದಲ್ಲಿ ಗೋದಾಮುಗಳ ಕೊರತೆ. ಮಹಾರಾಷ್ಟ್ರದಲ್ಲಿ ಇಂತಹ ಸ್ಥಿತಿ ಇಲ್ಲ. ಹೀಗಾಗಿ ಬೇಡಿಕೆ ಇದ್ದಾಗ ಕರ್ನಾಟಕದ ಮಾರುಕಟ್ಟೆಗೆ ಈರುಳ್ಳಿ ನುಗ್ಗಿಸುವುದು, ಲಾಭ ಮಾಡಿಕೊಳ್ಳುವುದು ಮಹಾರಾಷ್ಟ್ರಕ್ಕೆ ಸಾಧ್ಯವಾಗುತ್ತಿದೆ. ನಮ್ಮ ರೈತರು ಕಡಿಮೆ ಬೆಲೆಗೇ ತಮ್ಮ ಫಸಲು ಮಾರಾಟ ಮಾಡುತ್ತ ಸದಾ ಕಣ್ಣೀರಲ್ಲಿ ಕೈತೊಳೆಯುವ ಸ್ಥಿತಿ ಇದೆ.

ನಾಲ್ಕು ಕಾರಣಗಳಿಂದ ದಿಢೀರ್ ಏರಿಳಿತ: ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ಭಾಗದಲ್ಲೇ ಈರುಳ್ಳಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದರೂ, ಈರುಳ್ಳಿಯ ಬೆಲೆ ಬಹುತೇಕ ನಿರ್ಧಾರವಾಗುವುದು ಬೆಂಗಳೂರಿನಲ್ಲಿ ಎಂಬುದು ವಿಶೇಷ. ಬೆಂಗಳೂರು ಯಶವಂತಪುರದ ಈರುಳ್ಳಿ ಮಾರುಕಟ್ಟೆಯೇ ಈರುಳ್ಳಿ ಬೆಲೆಯ ದಿಢೀರ್ ಏರಿಳಿತದ ಕೇಂದ್ರ ಬಿಂದು. ಹುಬ್ಬಳ್ಳಿ, ಬೆಳಗಾವಿಗಳು ಇತರ ಪ್ರಮುಖ ಈರುಳ್ಳಿ ವಹಿವಾಟು ಕೇಂದ್ರಗಳು. ಬೆಲೆ ಏರಿಳಿತಕ್ಕೆ ಮುಖ್ಯವಾಗಿ ನಾಲ್ಕು ಕಾರಣಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಅಕಾಲಿಕ ಅಧಿಕ ಮಳೆ, ಹರಾಜಿನ ಮೂಲಕವೇ ಬೆಲೆ ನಿರ್ಧಾರ, ದಾಸ್ತಾನಿಗೆ ಸೌಲಭ್ಯ ಇಲ್ಲದಿರುವುದು, ಕೆಲವೊಮ್ಮೆ ಕೃತಕ ಅಭಾವ ಸೃಷ್ಟಿಸುವ ಪ್ರಯತ್ನ.

ಅಧಿಕ ಮಳೆಯೇ ಪ್ರಮುಖ ವೈರಿ: ಭಾರಿ ಮಳೆಯಿಂದ ರೈತರು ಕೃಷಿ ಭೂಮಿಯಲ್ಲಿ ಈರುಳ್ಳಿ ಕಳೆದುಕೊಂಡಿದ್ದನ್ನು ನಾವು ಕಳೆದ ಮೂರ್ನಾಲ್ಕು ವರ್ಷಗಳಿಂದ ನೋಡುತ್ತಲೇ ಬಂದಿದ್ದೇವೆ. ಇದೇ ಮಳೆ ಬೆಚ್ಚಗಿನ ಯಶವಂತಪುರ ಮಾರುಕಟ್ಟೆಗೂ ಚಳಿ ಹಿಡಿಯುವಂತೆ ಮಾಡುತ್ತದೆ. ಸರಿಯಾಗಿ ಒಣಗದ ಈರುಳ್ಳಿ ಬೇಗ ಕೊಳೆತುಹೋಗುವ ಸಾಧ್ಯತೆ ಇರುತ್ತದೆ. ಅಂತಹ ಈರುಳ್ಳಿ ಕಡಿಮೆ ಬೆಲೆಗೆ ಹರಾಜಾಗುತ್ತದೆ. ವರ್ತಕರೂ ಅಷ್ಟೇ, ಅಂತಹ ಈರುಳ್ಳಿಯನ್ನು ಬೇರೆ ರಾಜ್ಯ/ದೇಶಗಳಿಗೆ ಕಳುಹಿಸುವ ಬದಲು ಅಧಿಕ ಬೇಡಿಕೆ ಇರುವ ಬೆಂಗಳೂರಿನಲ್ಲಿ ಚಿಲ್ಲರೆ ವ್ಯಾಪಾರಕ್ಕೆ ಕಳುಹಿಸುತ್ತಾರೆ. ಆಗ 100 ರೂಪಾಯಿಗೆ ಐದರಿಂದ ಆರು ಕೆ.ಜಿ.ಯಷ್ಟು ಈರುಳ್ಳಿಯೂ ಮನೆ ಬಾಗಿಲಿಗೆ ಬಂದಿರುತ್ತದೆ. ಇದರ ಒಟ್ಟಾರೆ ಪರಿಣಾಮ ಎದುರಾಗುವುದು ಬೆಳೆದ ಕೃಷಿಕರಿಗೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಹರಾಜಿನ ಮೂಲಕವೇ ಬೆಲೆ ನಿರ್ಧಾರ: ಈರುಳ್ಳಿ ಬೆಳೆದ ರೈತರು ನೇರವಾಗಿ ಮಾರಾಟ ಮಾಡುವ ವ್ಯವಸ್ಥೆ ಇಲ್ಲ. ಹೀಗಾಗಿ ಕೊಯಿಲು ಆಗುವಾಗ ಹೊಲದ ಬಳಿಗೆ ಬರುವ ವರ್ತಕರು ಹೇಳಿದ ಬೆಲೆಗೆ ಮಾರಾಟ ಮಾಡಬೇಕಾದ ಸ್ಥಿತಿ ಇದೆ.

6ನೇ ಪುಟ ನೋಡಿ

ಒಳನೋಟ

ಕುಸಿದ ಬೆಲೆ, ಕಸಿದ ಬದುಕು

ಪ್ರತಿಕ್ರಿಯಿಸಿ: 9606038256
feedback@prajavani.co.in

'ನಾವು ಬೆಳೆದ ಈರುಳ್ಳಿಗೆ ಖರೀದಿದಾರರು ಮನ ಬಂದಂತೆ ಬೆಲೆ ಕೇಳುತ್ತಾರೆ. ಈರುಳ್ಳಿ ಮಾರಿದರೂ ತಕ್ಷಣಕ್ಕೆ ಹಣ ಸಿಗುವುದಿಲ್ಲ

ದಿಲೀಪಕುಮಾರ ಕಿವಡೆ
ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡದ ಪ್ರಗತಿಪರ ರೈತ

ಸರ್ಕಾರದ ಸಹಾಯಧನ ಪಡೆದುಕೊಂಡು ಹೊಲದಲ್ಲೇ ಈರುಳ್ಳಿ ಸಂಗ್ರಹಣಾ ಘಟಕಗಳನ್ನು ಮಾಡುವತ್ತ ರೈತರು ಗಮನ ಹರಿಸಬೇಕು

ಸುರೇಶ್ ಕುಂಬಾರ, ಗದಗ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ



ದಾವಣಗೆರೆಯ ಈರುಳ್ಳಿ ಮಾರುಕಟ್ಟೆಯಲ್ಲಿನ ಈರುಳ್ಳಿ ವಹಿವಾಟಿನ ದೃಶ್ಯ
ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ರಾಯಪುರದಲ್ಲಿ ಕಾಂಗ್ರೆಸ್ ಮಹಾಧಿವೇಶನ

ಸಮಾನಮನಸ್ಕ ಒಕ್ಕೂಟ: ಇಂಗಿತ

ಪ್ರಜಾವಾಣಿ ವಾರ್ತೆ

ರಾಯಪುರ: 2024ರ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎಯನ್ನು ಸಮರ್ಥವಾಗಿ ಎದುರಿಸಲು ಸಮಾನ ಮನಸ್ಕ ಪ್ರತಿಪಕ್ಷಗಳು ಒಗ್ಗೂಡಿದ ಮೈತ್ರಿಕೂಟ ಅಗತ್ಯವಿದೆ ಎಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ. ಸಾರ್ವತ್ರಿಕ ಚುನಾವಣೆಗೂ ಮುನ್ನ ಜಾತ್ಯತೀತ ಸಿದ್ಧಾಂತದ ಪ್ರಾದೇಶಿಕ ಪಕ್ಷಗಳನ್ನು ಗುರುತಿಸಿ, ಅವುಗಳನ್ನು ಒಗ್ಗೂಡಿಸುವ ಭರವಸೆಯನ್ನು ಪಕ್ಷ ನೀಡಿದೆ.

ರಾಯಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಮಹಾಧಿವೇಶನದಲ್ಲಿ ತೆಗೆದುಕೊಳ್ಳಲಾದ ರಾಜಕೀಯ ನಿರ್ಣಯ ಹಾಗೂ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭಾಷಣದಲ್ಲಿ ಈ ವಿಚಾರ ಮುಖ್ಯವಾಗಿ ಪ್ರಸ್ತಾಪವಾಗಿದೆ.

2004ರಿಂದ 2014ರವರೆಗೆ ಕಾಂಗ್ರೆಸ್ ಪಕ್ಷವು ಸಮಾನ ಮನಸ್ಕ ಪಕ್ಷಗಳ ಒಕ್ಕೂಟ ಸರ್ಕಾರದ ನಾಯಕತ್ವ ವಹಿಸಿದ್ದ ರೀತಿಯಲ್ಲಿ ಮತ್ತೊಮ್ಮೆ ಅದೇ ನೆಲೆಯ ಮೈತ್ರಿಕೂಟವೊಂದರ ಮುಂದಾಳತ್ವ ವಹಿಸಲು ಸಿದ್ಧ ಎಂದು ಖರ್ಗೆ ಹೇಳಿದ್ದಾರೆ. ಜನವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ಮೋದಿ ಸರ್ಕಾರದ ವಿರುದ್ಧ ಸಮರ್ಥ ಪರ್ಯಾಯ ಮೈತ್ರಿಕೂಟ ರಚಿಸಲು ಪಕ್ಷ ಸಿದ್ಧವಾಗಿದೆ ಎಂಬ ಸಂದೇಶವನ್ನು ಅವರು ತಮ್ಮ ಭಾಷಣದಲ್ಲಿ ನೀಡಿದ್ದಾರೆ.

2024ರ ಸಾರ್ವತ್ರಿಕ ಚುನಾವಣೆಗಾಗಿ, ಸಾಮಾಜಿಕ ಭದ್ರತೆಗೆ ಒತ್ತು ನೀಡುವ 'ವಿಷನ್ ಡಾಕ್ಯುಮೆಂಟ್' ಸಿದ್ಧಪಡಿಸಲು ಕಾಂಗ್ರೆಸ್ ನಿರ್ಧರಿಸಿದೆ. ಈಗಿರುವ ಹಿಮ್ಮುಖ ಬೆಳವಣಿಗೆಯ ಪಥಕ್ಕೆ ಬದಲಾಗಿ, ಜೀವನ ಭದ್ರತೆ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ಮಾನವೀಯ ಸ್ಪರ್ಶದ ಪ್ರಗತಿಪಥಕ್ಕೆ ಆದ್ಯತೆ ನೀಡುವುದಾಗಿ ಪಕ್ಷ ಭರವಸೆ ನೀಡಿದೆ.

9ನೇ ಪುಟ ನೋಡಿ

ಕಾಂಗ್ರೆಸ್ ಮಹಾಧಿವೇಶನದಲ್ಲಿ ಪಕ್ಷದ ನಾಯಕಿ ಸೋನಿಯಾ ಗಾಂಧಿ ಹಾಗೂ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತುಕತೆಯಲ್ಲಿ ತೊಡಗಿದ್ದರು—ಪಿಟಿಐ ಚಿತ್ರ

ಸೋನಿಯಾ ನಿವೃತ್ತಿ ಸುಳಿವು?

ತಮ್ಮ 'ಇನ್ನಿಂಗ್ಸ್' ಅನ್ನು ಭಾರತ್ ಜೋಡೊ ಯಾತ್ರೆಯೊಂದಿಗೆ ಮುಕ್ತಾಯಗೊಳಿಸುತ್ತಿದ್ದೇನೆ ಎಂಬುದಾಗಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ನೀಡಿರುವ ಹೇಳಿಕೆಯು, ಅವರ ರಾಜಕೀಯ ನಿವೃತ್ತಿಯ ಬಗ್ಗೆ ಚರ್ಚೆ ಹುಟ್ಟುಹಾಕಿದೆ. ಕಾಂಗ್ರೆಸ್ ಮಹಾಧಿವೇಶದನಲ್ಲಿ ಶನಿವಾರ ಅವರು ಮಾಡಿದ ಭಾಷಣವು, ಸಕ್ರಿಯ ರಾಜಕೀಯದಿಂದ ನಿವೃತ್ತಿ ಪಡೆಯುವ ಸೂಚನೆ ನೀಡುವಂತಿದೆ ಎಂದು ವಿಶ್ಲೇಷಿಸಲಾಗಿದೆ. ಆದರೆ ಇದಕ್ಕೆ ಸ್ಪಷ್ಟನೆ ನೀಡಿರುವ ಪಕ್ಷದ ಮುಖಂಡರು, ಸೋನಿಯಾ ಅವರು ತಮ್ಮ ಅಧ್ಯಕ್ಷೀಯ ಅವಧಿ ಮುಕ್ತಾಯದ ಕುರಿತಷ್ಟೇ ಈ ಮಾತು ಹೇಳಿದ್ದಾರೆ ಎಂದು ಹೇಳಿದ್ದಾರೆ.

ಸೋನಿಯಾ ಅವರು ಹಿಂದಿನ ದಿನಗಳನ್ನು ತಮ್ಮ ಭಾಷಣದಲ್ಲಿ ಮೆಲುಕು ಹಾಕಿದರು. '1998ರಲ್ಲಿ ಅಧ್ಯಕ್ಷೆ ಹುದ್ದೆ ವಹಿಸಿಕೊಂಡಿದ್ದು ತಮಗೆ ಸಿಕ್ಕ ದೊಡ್ಡ ಗೌರವ. 25 ವರ್ಷಗಳಲ್ಲಿ ಪಕ್ಷ ಸಾಕಷ್ಟು ಏಳುಬೀಳು ಕಂಡಿದೆ. 2004 ಹಾಗೂ 2009ರ ಚುನಾವಣಾ ಗೆಲುವು, ಮನಮೋಹನ್ ಸಿಂಗ್ ಅವರ ಸಮರ್ಥ ನಾಯಕತ್ವ ವೈಯಕ್ತಿಕವಾಗಿ ತೃಪ್ತಿ ನೀಡಿವೆ. ಭಾರತ್ ಜೋಡೊ ಯಾತ್ರೆಯೊಂದಿಗೆ ನನ್ನ ಇನ್ನಿಂಗ್ಸ್ ಮುಕ್ತಾಯವಾಗುತ್ತಿರುವುದು ಸಂತಸ ನೀಡಿದೆ' ಎಂದು ಸೋನಿಯಾ ಹೇಳಿದರು.

100 ಕ್ಕೆ ಬಿಜೆಪಿ ಕಟ್ಟಿಹಾಕಬಹುದು: ನಿತೀಶ್

ಕಾಂಗ್ರೆಸ್ ಒಳಗೊಂಡಂತೆ ಎಲ್ಲ ಪ್ರತಿಪಕ್ಷಗಳು ಒಗ್ಗಟ್ಟಾಗಿ ಲೋಕಸಭಾ ಚುನಾವಣೆಯನ್ನು ಎದುರಿಸಿದರೆ, ಬಿಜೆಪಿಯನ್ನು 100 ಸ್ಥಾನಗಳಿಗೆ ಕಟ್ಟಿಹಾಕಲು ಸಾಧ್ಯವಿದೆ ಎಂದು ಬಿಹಾರ ಮುಖ್ಯಮಂತ್ರಿ ಹಾಗೂ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಶನಿವಾರ ಹೇಳಿದ್ದಾರೆ.

ಬಿಹಾರದ ಪೂರ್ಣಿಯಾದಲ್ಲಿ ಮಹಾಮೈತ್ರಿಕೂಟದ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಈ ನಿಟ್ಟಿನಲ್ಲಿ ಕಾಂಗ್ರೆಸ್ ತಕ್ಷಣ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದರು. 'ನನ್ನ ಸಲಹೆಯನ್ನು ಪರಿಗಣಿಸಿದರೆ ಇದು ಸಾಧ್ಯ. ನಿರ್ಧರಿಸದೇ ಇದ್ದರೆ ಏನಾಗಬಹುದು ಎಂಬುದು ನಿಮಗೆ ಗೊತ್ತಿದೆ' ಎಂದು ನಿತೀಶ್ ಹೇಳಿದ್ದಾರೆ.

ನಾಗರಹೊಳೆ: ಹೊರ ರಾಜ್ಯದ ವಾಹನಗಳಿಗೆ ಪ್ರವೇಶ ಶುಲ್ಕ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರರಾಜ್ಯ ಗಡಿಗಳಲ್ಲಿ ಹೊರರಾಜ್ಯದಿಂದ ಬರುವ ವಾಹನಗಳಿಗೆ ಅರಣ್ಯ ಇಲಾಖೆ ಶುಲ್ಕ ವಿಧಿಸಲು ಆರಂಭಿಸಿದೆ.

ಲಘು ಮೋಟಾರು ವಾಹನಗಳಿಗೆ ₹ 20, ಭಾರಿ ವಾಹನಗಳಿಗೆ ₹ 50 ಪ್ರವೇಶ ದರ ನಿಗದಿಪಡಿಸಲಾಗಿದೆ. ಈ ಹಣವನ್ನು ಅರಣ್ಯದಲ್ಲಿ ಹಾದು ಹೋಗುವ ರಸ್ತೆಯ ಸ್ವಚ್ಛತೆಗೆ ಬಳಸಲು ನಿರ್ಧರಿಸಲಾಗಿದೆ.

'ಕುಟ್ಟ, ನಾಣಚ್ಚಿ, ಆನೆಚೌಕೂರು, ವೀರನಹೊಸಹಳ್ಳಿ, ಮಾಲ್ದಾರೆ, ಕಾರ್ಮಾಡು ಹಾಗೂ ಇತರ ಗೇಟ್‌ಗಳಲ್ಲಿ ಶುಲ್ಕ ವಸೂಲಾತಿ ಆರಂಭವಾಗಿದೆ' ಎಂದು ನಾಗರಹೊಳೆ ವನ್ಯಜೀವಿ ವಿಭಾಗದ ಎಸಿಎಫ್ ಗೋಪಾಲ್ ತಿಳಿಸಿದರು.

'7ನೇ ವೇತನ ಆಯೋಗ: ಲಿಖಿತ ಭರವಸೆ ಸಿಕ್ಕರೆ ಮುಷ್ಕರ ವಾಪಸ್'

ಶಿವಮೊಗ್ಗ: '7ನೇ ವೇತನ ಆಯೋಗದ ಮಧ್ಯಂತರ ವರದಿ ಅನುಷ್ಠಾನದ ಬಗ್ಗೆ ಸರ್ಕಾರ ಆದೇಶ ಹೊರಡಿಸಿದರೆ ಮಾತ್ರ ಈಗ ಕರೆ ನೀಡಿರುವ ಮಾರ್ಚ್ 1ರಂದು ನಡೆಯುವ ಮುಷ್ಕರ ವಾಪಸ್ ಪಡೆಯಲಾಗುವುದು' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '7 ನೇ ವೇತನ ಆಯೋಗದಿಂದ ಶೀಘ್ರ ಮಧ್ಯಂತರ ವರದಿ ಪಡೆದು ಜಾರಿ ಮಾಡುವಂತೆ ಈ ಹಿಂದಿನಿಂದಲೂ ಒತ್ತಾಯಿಸುತ್ತಲೇ ಬಂದಿದ್ದೇವೆ. ಬಜೆಟ್‌ನಲ್ಲಿ ಈ ಬಗ್ಗೆ ಘೋಷಣೆ ಮಾಡುವ ನಿರೀಕ್ಷೆ ಇತ್ತಾದರೂ ಅದು ಹುಸಿಯಾಗಿದೆ. ಅನಿವಾರ್ಯವಾಗಿ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಸರ್ಕಾರಿ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದೇವೆ' ಎಂದು ಹೇಳಿದರು. 'ಸರ್ಕಾರಿ ನೌಕರರ ಸಂಘಟನೆಗಳ 5,000ಕ್ಕೂ ಹೆಚ್ಚು ಪ್ರತಿನಿಧಿಗಳು ಬೆಂಗಳೂರಿನಲ್ಲಿ ಫೆಬ್ರುವರಿ 21ರಂದು ಸಭೆ ಸೇರಿ ಪ್ರತಿಭಟನೆ ನಡೆಸುವ ತೀರ್ಮಾನ ಕೈಗೊಂಡಿದ್ದೇವೆ. ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದವರೆಗೆ ಎಲ್ಲ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗಲಿದ್ದಾರೆ. ಶಿಕ್ಷಣ ಕ್ಷೇತ್ರದ ಸೇವೆಗಳೂ ಲಭ್ಯ ಇರುವುದಿಲ್ಲ' ಎಂದರು.

'ಜುಲೈ 1, 2022ರಿಂದ ಜಾರಿಗೆ ಬರುವಂತೆ ಶೇ 40ರಷ್ಟು ವೇತನ ಹೆಚ್ಚಳ ಸೌಲಭ್ಯ ಒದಗಿಸಬೇಕು. ಎನ್‌ಪಿಎಸ್ ರದ್ದು ಮಾಡಿ, ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೆ ತರಬೇಕು ಎಂಬ ಎರಡು ಪ್ರಮುಖ ಬೇಡಿಕೆಗಳನ್ನು ಈಗಾಗಲೇ ಸರ್ಕಾರದ ಮುಂದೆ ಇಡಲಾಗಿದೆ' ಎಂದರು.

'ಸಂಕಷ್ಟದಲ್ಲಿರುವ ದೇಶಗಳ ನೆರವಿಗೆ ಸಂಘಟಿತ ಯತ್ನ ಅಗತ್ಯ'

ಬೆಂಗಳೂರು (ಪಿಟಿಐ): ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಣಕಾಸಿನ ಅಗತ್ಯಗಳನ್ನು ಈಡೇರಿಸಲು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ವಿಶ್ವ ಬ್ಯಾಂಕ್ ತರಹದ ಹಲವು ಸಂಸ್ಥೆಗಳ ಜೊತೆಗೂಡಿ ಕೆಲಸ ಮಾಡುವ ಅಗತ್ಯ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಎರಡು ದಿನಗಳವರೆಗೆ ನಡೆದ ಜಿ20 ಸದಸ್ಯ ರಾಷ್ಟ್ರಗಳ ಹಣಕಾಸು ಸಚಿವರ ಸಭೆಯ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

8ನೇ ಪುಟ ನೋಡಿ

ಒಳ ಪುಟ

'ವೋಟಿಗಾಗಿ ಬಿಜೆಪಿಯಿಂದ ಬಿಎಸ್‌ವೈ ಧ್ಯಾನ' 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸುಲಲಿತ ಜೀವನ ಸೂಚ್ಯಂಕ ರ‍್ಯಾಂಕಿಂಗ್: ವಿವರಣೆ ಕೇಳಿದ ಕೇಂದ್ರ ವಸತಿ ಸಚಿವಾಲಯ

ರಾಜ್ಯದ ದತ್ತಾಂಶದಲ್ಲಿ ಭಾರಿ ವ್ಯತ್ಯಾಸ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: ಬೆಂಗಳೂರಿನ ನಗರ ಸ್ಥಳೀಯ ಸಂಸ್ಥೆಗಳ (ಬಿಬಿಎಂಪಿ ಸೇರಿ) ವ್ಯಾಪ್ತಿಯಲ್ಲಿ 2020ರಲ್ಲಿ 148 ಸ್ಮಶಾನಗಳು ಇದ್ದವು. 2022ರಲ್ಲಿ ಅವುಗಳ ಸಂಖ್ಯೆ 12ಕ್ಕೆ ಇಳಿದಿದೆ. ಬೆಂಗಳೂರಿನಲ್ಲಿ 2020ರಲ್ಲಿ 1,020 ಉದ್ಯಾನಗಳಿದ್ದವು. 2022ರಲ್ಲಿ ಅವುಗಳ ಸಂಖ್ಯೆ 700 ಆಗಿದೆ. ಶಿವಮೊಗ್ಗದಲ್ಲಿ 1,182 ಇದ್ದ ಬಸ್‌ಗಳ ಸಂಖ್ಯೆ 33ಕ್ಕೆ ಕುಸಿದಿದೆ!

ಎರಡೇ ವರ್ಷಗಳಲ್ಲಿ ಮೂಲ ಸೌಕರ್ಯ ವ್ಯವಸ್ಥೆಯಲ್ಲಿ ಇಷ್ಟೊಂದು ಬದಲಾವಣೆಯಾಯಿತೇ ಎಂದು ಅಚ್ಚರಿಯಾಯಿತೇ? ಕರ್ನಾಟಕ ಸರ್ಕಾರದ ಅಧಿಕಾರಿಗಳು 2020 ಹಾಗೂ 2022ರಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸಿರುವ ಮಾಹಿತಿಗಳ ಸ್ಯಾಂಪಲ್ ಇದು.

'ಸುಲಲಿತ ಜೀವನ ಸೂಚ್ಯಂಕ' ರ‍್ಯಾಂಕಿಂಗ್‌ಗಾಗಿ ಕರ್ನಾಟಕ ಸರ್ಕಾರವು ಸಲ್ಲಿಸಿರುವ ದಾಖಲೆಗಳನ್ನು ವಿಶ್ಲೇಷಿಸಿರುವ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯವು, ರಾಜ್ಯ ಒದಗಿಸಿರುವ ದತ್ತಾಂಶಗಳಲ್ಲಿನ ಎಡವಟ್ಟುಗಳನ್ನು ಬೊಟ್ಟು ಮಾಡಿ ತೋರಿಸಿದೆ. ರಾಜ್ಯದ ಆರು ನಗರಗಳು ಒದಗಿಸಿರುವ 38 ಪ್ರಮುಖ ದತ್ತಾಂಶಗಳಲ್ಲಿ ಎರಡೇ ವರ್ಷಗಳಲ್ಲಿ ಭಾರಿ ವ್ಯತ್ಯಾಸ ಆಗಿದೆ. ಈ ವ್ಯತ್ಯಾಸಕ್ಕೆ ಕಾರಣ ಏನು ಎಂದು ಸಚಿವಾಲಯ ಪ್ರಶ್ನಿಸಿದೆ. ಈ ಸಂಬಂಧ ಸಚಿವಾಲಯದ ಜಂಟಿ ಕಾರ್ಯದರ್ಶಿಯೂ ಆಗಿರುವ ಸ್ಮಾರ್ಟ್ ಸಿಟಿ ಮಿಷನ್ ನಿರ್ದೇಶಕ ಕುನಾಲ್ ಕುಮಾರ್ ಅವರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪತ್ರ ಬರೆದು ಮಾಹಿತಿ ಕೇಳಿದ್ದಾರೆ.

ನಗರಗಳ ದತ್ತಾಂಶ ಸಂಗ್ರಹಿಸಲು ಸಚಿವಾಲಯವು ಸಮಗ್ರ ದತ್ತಾಂಶ ಪೋರ್ಟಲ್ ಅನ್ನು 2022ರ ಜೂನ್‌ನಲ್ಲಿ ಅಭಿವೃದ್ಧಿಪಡಿಸಿದೆ. ನಗರ ಫಲಿತಾಂಶ ಚೌಕಟ್ಟಿನಡಿ (ಯುಒಎಫ್) ಸಂಗ್ರಹಿಸುವ ದತ್ತಾಂಶವು ಸುಲಲಿತ ಜೀವನ ಸೂಚ್ಯಂಕದ ರ‍್ಯಾಂಕಿಂಗ್ ನೀಡಲು ನೆರವಾಗುತ್ತದೆ. ಉತ್ತಮ ಗುಣಮಟ್ಟದ ಜೀವನ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ನಗರೀಕರಣದ ಸವಾಲುಗಳ ಕುರಿತು ಮೌಲ್ಯಮಾಪನ ನಡೆಸಿ ರ‍್ಯಾಂಕಿಂಗ್ ನೀಡಲಾಗುತ್ತದೆ. ಉತ್ತಮ ಸಾಧನೆ ಮಾಡಿದ ನಗರಗಳಲ್ಲಿ ಹೂಡಿಕೆಗೆ ಇನ್ನಷ್ಟು ಉತ್ತೇಜನ ಸಿಗಲಿದೆ.

9ನೇ ಪುಟ ನೋಡಿ

ಮುಖ್ಯಾಂಶಗಳು

- ತಾಳೆಯಾಗದ ಆರು ನಗರಗಳ ದತ್ತಾಂಶ
- ಕೇಂದ್ರ ವಸತಿ ಸಚಿವಾಲಯದಿಂದ ರಾಜ್ಯಕ್ಕೆ ಪತ್ರ
- ಹೂಡಿಕೆ ಮೇಲೂ ಪರಿಣಾಮ– ಎಚ್ಚರಿಕೆ

ದತ್ತಾಂಶ–ವ್ಯತ್ಯಾಸ ಎಲ್ಲೆಲ್ಲಿ

ನಗರ	ಎಷ್ಟು ದತ್ತಾಂಶಗಳಲ್ಲಿ ವ್ಯತ್ಯಾಸ	ಅನುಮೋದಿತ ದತ್ತಾಂಶ ಪಾಯಿಂಟ್‌ಗಳ ಶೇಕಡಾವಾರು
ಬೆಂಗಳೂರು	14	94.9
ಬೆಳಗಾವಿ	9	81.8
ಮಂಗಳೂರು	6	72.5
ಶಿವಮೊಗ್ಗ	3	93
ತುಮಕೂರು	5	90.7
ಹುಬ್ಬಳ್ಳಿ ಧಾರವಾಡ	3	84.4

ಗುಂಡಿಗೆ ಬಿದ್ದು ಆರು ವರ್ಷದ ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಲ್ತಾನ್‌ಪೇಟೆ ಬಳಿ ನಿರ್ಮಾಣ ಹಂತದ ಕಟ್ಟಡದ ಗುಂಡಿಗೆ ಬಿದ್ದು ಮಗು ಮೃತಪಟ್ಟಿದೆ.

ಮಹೇಶ್ವರಿ (6) ಮೃತಪಟ್ಟ ಮಗು. ಮಗುವಿನ ಪೋಷಕರು ನಿರ್ಮಾಣದ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು.

ವಿಕ್ರಂ ಅವರಿಗೆ ಸೇರಿದ ಕಟ್ಟಡ ಇದಾಗಿದ್ದು, ಸ್ಥಳದಲ್ಲಿ ಮುನ್ನೆಚ್ಚರಿಕೆ ವಹಿಸಿರಲಿಲ್ಲ. ಲಿಫ್ಟ್ ಅಳವಡಿಸಲು ಗುಂಡಿ ತೆಗೆಯಲಾಗಿತ್ತು. ಅದರಲ್ಲಿ ನೀರು ತುಂಬಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಜಾಹೀರಾತು

ವಿಜಯನಗರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಉಮೇಶ್ ಶೆಟ್ಟಿ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿವಿಧ ಕಾರ್ಯಕ್ರಮಗಳ ಆಯೋಜನೆ

ಉಮೇಶ್ ಶೆಟ್ಟಿ ಚಾರಿಟಬಲ್ ಟ್ರಸ್ಟ್ ಮತ್ತು ಉತ್ತಿಷ್ಠ ಭಾರತ ವತಿಯಿಂದ ಶನಿವಾರ ವಿಜಯನಗರದ ಬಂಟರ ಸಂಘ ಸಭಾಂಗಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ನರೇಂದ್ರ ಸಂವಾದ ಹಾಗೂ ಉದ್ಯೋಗ ಮೇಳವನ್ನು ಆಯೋಜಿಸಲಾಗಿತ್ತು.

ಮಾಜಿ ಬಿಬಿಎಂಪಿ ಸದಸ್ಯ ಕೆ.ಉಮೇಶ್ ಶೆಟ್ಟಿ ನೇತೃತ್ವದಲ್ಲಿ ನಡೆದ ಆರೋಗ್ಯ ಶಿಬಿರವನ್ನು ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ಉದ್ಘಾಟಿಸಿದರು. ಶಿಬಿರದಲ್ಲಿ ಸಾಮಾನ್ಯ ತಪಾಸಣೆ, ಕಿವಿ, ಮೂಗು ಮತ್ತು ಗಂಟಲು ತಪಾಸಣೆ, ದಂತ ತಪಾಸಣೆ, ಕ್ಯಾನ್ಸರ್ ತಪಾಸಣೆ, ಹೃದಯ ಸಂಬಂಧಿ ತಪಾಸಣೆ, ಕೃತಕ ಕಾಲು ಹಾಗೂ ಕೈ ಜೋಡಣೆಗೆ ನೋಂದಣಿ, ಚರ್ಮ ಹಾಗೂ ಕೂದಲು ತಪಾಸಣೆ, ಕಣ್ಣಿನ ತಪಾಸಣೆ, ಡಯಾಲಿಸಿಸ್ ರೋಗಿಗಳ ನೋಂದಣಿ, ಸ್ತನ ಕ್ಯಾನ್ಸರ್ ಮುಂತಾದ ತಪಾಸಣೆ ನಡೆಸಲಾಯಿತು. ಸುಮಾರು 4000 ಮಂದಿ ಭಾಗವಹಿಸಿದ್ದರು. ಅದರಲ್ಲಿ 80 ಜನರಿಗೆ ವಿವಿಧ ರೋಗ ನಿವಾರಣೆಗೆ ಶಸ್ತ್ರಚಿಕಿತ್ಸೆ, 250 ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆ, 40 ವಿಕಲಚೇತನರಿಗೆ ಕೃತಕ ಕಾಲು ಹಾಗೂ ಕೈ ಜೋಡಣೆ ಶಸ್ತ್ರಚಿಕಿತ್ಸೆಗೆ ನೋಂದಣಿ ಮಾಡಲಾಯಿತು. ರಾಷ್ಟ್ರೋತ್ಥಾನ ರಕ್ತನಿಧಿಯಿಂದ ರಕ್ತದಾನ ಶಿಬಿರ ನಡೆಸಲಾಯಿತು.

ಹೆಣ್ಣುಮಕ್ಕಳ ಸ್ತನ ತಪಾಸಣೆಗಾಗಿ 1 ಪಿಂಕ್ ಬಸ್, 3 ಡೆಂಟಲ್ ಕೇರ್ ಬಸ್‌ಗಳನ್ನು ನಿಯೋಜಿಸಲಾಗಿತ್ತು. ಶಿಬಿರದಲ್ಲಿ ಜಯದೇವ ರಾಷ್ಟ್ರೋತ್ಥಾನ ಆಸ್ಪತ್ರೆ, ಆಶಾ ಇ.ಎನ್.ಟಿ ಸೆಂಟರ್, ಬೆಂಗಳೂರು ಡೆಂಟಲ್ ವಿಜ್ಞಾನ ಆಸ್ಪತ್ರೆ/ರಾಜರಾಜೇಶ್ವರಿ ದಂತ ಚಿಕಿತ್ಸಾಲಯ, ಶ್ರೀ ಶಂಕರ ಆಸ್ಪತ್ರೆ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಭಗವಾನ್ ಮಹಾವೀರ್ ವಿಕಲಾಂಗ ಸಹಾಯತ ಸಮಿತಿ, ಕಾಸ್ಮೋ ಸ್ಕಿನ್ ಆಸ್ಪತ್ರೆ, ಶ್ರೀ ಶಾರದಾ ಕಣ್ಣಿನ ಆಸ್ಪತ್ರೆ, ಸೆಂಟ್ ತೆರೇಸಾ ಆಸ್ಪತ್ರೆ, ರೋಟರಿ ಪಾಮ್ವಿಲ್ಲೆ ಮತ್ತು ಸಾಕ್ರ ವರ್ಲ್ಡ್ ಆಸ್ಪತ್ರೆ ಸೇರಿದಂತೆ ನಗರದ ಪ್ರತಿಷ್ಠಿತ ಆಸ್ಪತ್ರೆಗಳು ಪಾಲ್ಗೊಂಡಿದ್ದವು.

ನರೇಂದ್ರ ಸಂವಾದ

ಐಎಎಸ್, ಕೆಎಎಸ್ ವಿದ್ಯಾರ್ಥಿಗಳಿಗೆ ಕೆಪಿಎಸ್ಸಿ ಹಾಗೂ ಯುಪಿಎಸ್ಸಿ ಪರೀಕ್ಷೆಗೆ ಹೇಗೆ ತಯಾರಿ ನಡೆಸಬೇಕೆಂಬುದರ ಬಗ್ಗೆ ಶಿಕ್ಷಣ ತಜ್ಞರಾದ ವಿಜಯ್ ಸಾರಥಿ, ಶಕುಂತಲ ಐಯ್ಯರ್ ಸಂವಾದ ನಡೆಸಿ, ಮಾಹಿತಿ ನೀಡಿದರು. ಇದರೊಂದಿಗೆ ಮೇಜರ್ ವಿಕ್ರಮ್ ಅವರು ಆರ್ಮಿಗೆ ಸೇರಬಯಸುವ ಅಗ್ನಿವೀರರಿಗೆ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಯುವಮುಖಂಡ ಡಾ.ಅರುಣ್ ಸೋಮಣ್ಣ, ವಿಧಾನಪರಿಷತ್ ಸದಸ್ಯ ಅ.ದೇವೇಗೌಡ, ಮಾಜಿ ಬಿಬಿಎಂಪಿ ಸದಸ್ಯರಾದ ಚಂದ್ರಶೇಖರ್, ಎ.ಜಿ ಆನಂದ್, ಬಿ.ಎಸ್ ಆನಂದ, ಮಾರುತಿ ಮೆಡಿಕಲ್‌ನ ಮಹೇಂದ್ರ ಮನ್ನೋತ್, ಬಿಜೆಪಿ ಮುಖಂಡ ಆರ್ಯ ನವೀನ್ ಬಿಜೆಪಿ ಮುಖಂಡರಾದ ಕಿರಣ್ ಕುಮಾರ್, ಶಿವಕುಮಾರ್, ಹನುಮಂತರಾಯಪ್ಪ, ಮುನ್ನ ನರಸಿಂಹಮೂರ್ತಿ, ಆರ್ ಚಂದ್ರಪ್ಪ ಅವಲಳ್ಳಿ (ಜಯ ಕರ್ನಾಟಕ), ಬಾಲಾಜಿ ರೋಟರಿ ಕ್ಲಬ್‌ನ ಯಶ್ವಂತ್, ಬಂಟರ ಸಂಘ ಅಧ್ಯಕ್ಷರಾದ ಮುರಳಿಧರ್ ಹೆಗಡೆ, ಉಪೇಂದ್ರ ಶೆಟ್ಟಿ, ಉತ್ತಿಷ್ಠ ಭಾರತದ ವಿಜಯ ಸಾರಥಿ, ಯುವ ಮೋರ್ಚಾ ಅಧ್ಯಕ್ಷ ಭಾಜಪ ಅರ್ಜುನ್ ಹಾಗೂ ಹರೀಶ್ ದೇಸಾಯಿ ಸೇರಿದಂತೆ ಮತ್ತೀತರರು ಹಾಜರಿದ್ದರು.

'ಭೂಮಿಕಾ ಕ್ಲಬ್' ಕಾರ್ಯಕ್ರಮದಲ್ಲಿ ರಸಪ್ರಶ್ನೆಗೆ ಉತ್ತರಿಸಲು ಉತ್ಸಾಹ ತೋರಿದ ಪ್ರೇಕ್ಷಕರು (ಎಡಚಿತ್ರ) ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಮಾರುಕಟ್ಟೆ ಹಿರಿಯ ವ್ಯವಸ್ಥಾಪಕ ಹುಸೈಲ್ ಅಹ್ಮದ್ ಅವರು ಭವಾನಿ ಪ್ರಕಾಶ್ ಅವರನ್ನು ಗೌರವಿಸಿದರು – ಪ್ರಜಾವಾಣಿ ಚಿತ್ರಗಳು

'ಭೂಮಿಕಾ ಕ್ಲಬ್': ಮದುವೆಯ ಸಿದ್ಧತೆ ಬಗ್ಗೆ ಮಾಹಿತಿ ಒದಗಿಸಿದ ಪರಿಣತರು

ವಿವಾಹ ಸಂಭ್ರಮಕ್ಕೆ ದಿಕ್ಸೂಚಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವ್ಯಕ್ತಿಗೂ ವಿವಾಹವು ಜೀವನದ ಪ್ರಮುಖ ಘಟ್ಟ. ಇದನ್ನು ಸ್ಮರಣೀಯಗೊಳಿಸಲು ಯಾವ ರೀತಿಯ ಸೆಟ್ ರೂಪಿಸಬೇಕು?, ನಿಶ್ಚಿತಾರ್ಥ ಸೇರಿ ವಿವಿಧ ಶಾಸ್ತ್ರಗಳ ಸಂದರ್ಭದಲ್ಲಿ ಧರಿಸಬೇಕಾದ ಉಡುಪು ಯಾವ ಬಗೆಯದ್ದಾಗಿರಬೇಕು? ಚರ್ಮದ ಬಣ್ಣಕ್ಕೆ ಸರಿ ಹೊಂದುವಂತೆ ಮೇಕಪ್ ಮಾಡಿಕೊಳ್ಳುವ ಬಗೆ ಹೇಗೆ...

ಹೀಗೆ ವಿವಾಹ ನಿಶ್ಚಯವಾದಾಗ ಕಾಡುವ ಹತ್ತಾರು ಪ್ರಶ್ನೆಗಳಿಗೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ 'ಭೂಮಿಕಾ ಕ್ಲಬ್' ವೇದಿಕೆಯ ವಿವಾಹ ಆವೃತ್ತಿಯ ವಿಶೇಷ ಕಾರ್ಯಕ್ರಮ ಉತ್ತರ ಒದಗಿಸಿತು. ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಹಟ್ಟಿ ಕಾಪಿ ಹಾಗೂ ಸ್ಟೈಲ್ ಸ್ಟ್ರಾಡಾ ಸಹಯೋಗದಲ್ಲಿ ಇಲ್ಲಿನ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮಕ್ಕೆ ಚಲನಚಿತ್ರ ನಟಿ ಭವಾನಿ ಪ್ರಕಾಶ್ ಚಾಲನೆ ನೀಡಿದರು.

ಉತ್ಸಾಹದಿಂದ ಪಾಲ್ಗೊಂಡಿದ್ದ ಮಹಿಳೆಯರು, ಇತ್ತೀಚಿನ ಫ್ಯಾಷನ್, ಮೇಕಪ್ ಟ್ರೆಂಡ್‌ಗಳ ಬಗ್ಗೆ ತಿಳಿದುಕೊಂಡರು. ಕಾರ್ಯಕ್ರಮದ ಮಧ್ಯೆ ನಡೆದ ರಸಪ್ರಶ್ನೆ ಪ್ರೇಕ್ಷಕರ ಸಕ್ರಿಯ ತೊಡಗಿಸಿಕೊಳ್ಳುವಿಕೆಗೆ ನೆರವಾಯಿತು.

ಸ್ಟೈಲ್ ಸ್ಟ್ರಾಡಾ ತಂಡದ ಫ್ಯಾಷನ್ ಶೋ ಕ್ಷಣ.

ಸರಿ ಉತ್ತರ ಹೇಳಿದವರಿಗೆ ಆಕರ್ಷಕ ಉಡುಗೊರೆಗಳನ್ನೂ ನೀಡಲಾಯಿತು. ಇಡೀ ಕಾರ್ಯಕ್ರಮ ಮಾಹಿತಿ, ಮನರಂಜನೆ ಒದಗಿಸಿತು.

'ವಿವಾಹ ಆಯೋಜನೆ'ಯ ಬಗ್ಗೆ ಮಾತನಾಡಿದ ಅಡೋರೆಬ್ಲಿಸ್ ಸಂಸ್ಥೆಯ ಸ್ಥಾಪಕಿ ಗೀತಾ ನಾಯ್ಡು, '2017ರಿಂದ ವಿವಾಹ ಆಯೋಜನೆ ಮಾಡುತ್ತಾ ಬಂದಿದ್ದೇವೆ. ನಿಶ್ಚಿತಾರ್ಥ, ಅರಶಿನ ಶಾಸ್ತ್ರ, ವಿವಾಹ, ಆರತಕ್ಷತೆ ಸೇರಿ ವಿವಾಹಕ್ಕೆ ಸಂಬಂಧಿಸಿದಂತೆ ಸೆಟ್‌ಗಳನ್ನು ನಿರ್ಮಿಸಿಕೊಡುತ್ತಿದ್ದೇವೆ. ಬಜೆಟ್ ಮತ್ತು ಸಮಯ ಲಭ್ಯತೆಯ ಆಧಾರದಲ್ಲಿ ಸೆಟ್ ವಿನ್ಯಾಸ ಮಾಡಲಾಗುವುದು. ಈವರೆಗೆ 971 ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ವಿವಾಹಕ್ಕೆ ಒಂದು ದಿನವಿದ್ದಾಗಲೂ ಅದ್ದೂರಿ ಸೆಟ್ ರೂಪಿಸಿದ ಉದಾಹರಣೆಯಿದೆ. ಎಲ್ಲ ರೀತಿಯ ಶುಭ ಸಮಾರಂಭಗಳನ್ನು ಆಯೋಜಿಸುತ್ತೇವೆ' ಎಂದು ಹೇಳಿದರು.

'ಮೇಕಪ್' ಬಗ್ಗೆ ಮಾತನಾಡಿದ ಸುಷ್ಮಾ ನಾಣಯ್ಯ, 'ವಧುವಿನ ಚರ್ಮಕ್ಕೆ ಅನುಗುಣವಾಗಿ ಮೇಕಪ್ ಮಾಡಬೇಕಾಗುತ್ತದೆ. ಆದ್ದರಿಂದ ಬ್ಯೂಟಿಷಿಯನ್ ಸಂಪರ್ಕಿಸಿ, ಅಗತ್ಯ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬೇಕು. ಮದುವೆ ಹತ್ತಿರ ಇರುವಾಗ ಉತ್ತಮವಾಗಿ ನಿದ್ದೆ ಮಾಡಬೇಕು. ದೈನಂದಿನ ಸಾಮಾನ್ಯ ಮೇಕಪ್ ಅನ್ನು 15ರಿಂದ 20 ನಿಮಿಷಗಳಲ್ಲಿ ಮಾಡಬಹುದು. ವಧುವಿಗೆ ಮಾಡುವ ಮೇಕಪ್‌ಗೆ 2 ಗಂಟೆ ಬೇಕಾಗುತ್ತದೆ' ಎಂದು ತಿಳಿಸಿ, ಯುವತಿಯೊಬ್ಬರಿಗೆ ಮೇಕಪ್ ಪ್ರಾತ್ಯಕ್ಷಿಕೆ ನೀಡಿದರು.

ಭವಾನಿ ಪ್ರಕಾಶ್ ಅವರ ನೇತೃತ್ವದಲ್ಲಿ ಸ್ಟೈಲ್ ಸ್ಟ್ರಾಡಾ ವಿವಾಹಕ್ಕೆ ಸಂಬಂಧಿಸಿದ ಫ್ಯಾಷನ್ ಶೋ ನಡೆಸಿತು.

'ಹಳೆ ಬಟ್ಟೆಗೆ ಹೊಸ ವಿನ್ಯಾಸ'

'ವಿವಾಹದ ವೇಳೆ ಗಾಗ್ರಾ, ಲೆಹೆಂಗಾ, ಗೌನ್ ಹಾಗೂ ಸೀರೆ ಧರಿಸಬಹುದು. ವಿವಾಹಕ್ಕೆ ಮೂರು ತಿಂಗಳು ಮೊದಲು ಸಂಪರ್ಕಿಸಿದಲ್ಲಿ ಸರಿಹೊಂದುವ ವಿನ್ಯಾಸ ಮಾಡಲು ಸಾಧ್ಯ. ವಿವಾಹಕ್ಕೆ ಹೋಗುವವರು ಒಂದು ವಾರ ಇದ್ದಾಗ ಸಂಪರ್ಕಿಸಿದರೆ ಬಟ್ಟೆಯನ್ನು ಸಿದ್ಧಪಡಿಸಿಕೊಡಲಾಗುವುದು. ಆಭರಣಕ್ಕೆ ಅನುಗುಣವಾಗಿ ಕೇಶವಿನ್ಯಾಸವನ್ನೂ ಮಾಡಿಕೊಳ್ಳಬೇಕಾಗುತ್ತದೆ' ಎಂದು ಫ್ಯಾಷನ್ ಡಿಸೈನರ್ ಶೈನಿ ಅಲೆಕ್ಸಾಂಡರ್ ತಿಳಿಸಿದರು. 'ಮದುವೆಗೆ ಬಟ್ಟೆ ಖರೀದಿಸುವ ಮೊದಲು ವಿನ್ಯಾಸಗಾರರನ್ನು ಸಂಪರ್ಕಿಸುವುದು ಉತ್ತಮ. ಹಲವು ಬಾರಿ ಸೀರೆ ಧರಿಸಿದ ಮೇಲೆ ಬೇಸರ ಬಂದಲ್ಲಿ, ಆ ಸೀರೆಯನ್ನೇ ಲೆಹೆಂಗಾ ಅಥವಾ ಹೊಸ ವಿನ್ಯಾಸದ ಉಡುಪಾಗಿ ಸಿದ್ಧಪಡಿಸಿಕೊಡುತ್ತೇವೆ' ಎಂದು ಹೇಳಿದರು.

ಪಿಎಫ್ ಕುಂದುಕೊರತೆ: ನಾಳೆ ಪರಿಹಾರ ಶಿಬಿರ

ಬೆಂಗಳೂರು: ನೌಕರರ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ರಾಜರಾಜೇಶ್ವರಿ ನಗರ ಪ್ರಾದೇಶಿಕ ಕಚೇರಿ ಫೆ.27ರಂದು ಬೆಳಿಗ್ಗೆ 9ಕ್ಕೆ 'ನಿಧಿ ಆಪ್ಕೆ ನಿಕಟ್-2.0' ಕುರಿತು ಮಾಹಿತಿ ಶಿಬಿರ ಆಯೋಜಿಸಿದೆ.

ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್, ಪ್ಲಾಟ್ ನಂಖ್ಯೆ 7-12, ಕುಂಬಳಗೋಡು ಕೈಗಾರಿಕಾ ಪ್ರದೇಶ, 2ನೇ ಹಂತ, ಬೆಂಗಳೂರು-560074 ಹಾಗೂ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್, 28ನೇ ಕಿ.ಮೀ, ಬಿಡದಿ, ಬೆಂಗಳೂರು-562109 ಈ ಎರಡು ಸ್ಥಳಗಳಲ್ಲಿ 27ರಂದು ಶಿಬಿರಗಳು ನಡೆಯಲಿವೆ.

ನೌಕರರ ಭವಿಷ್ಯ ನಿಧಿ ಸಂಸ್ಥೆ ಪ್ರತಿ ಜಿಲ್ಲೆಯಲ್ಲೂ ಸದಸ್ಯರು, ಉದ್ಯೋಗದಾತರು ಹಾಗೂ ಪಿಂಚಣಿದಾರರ ಕುಂದುಕೊರತೆಗಳನ್ನು ಪರಿಹರಿಸಲು ಏಕಕಾಲದಲ್ಲಿ ಕುಂದುಕೊರತೆ ಪರಿಹಾರ ಶಿಬಿರ ನಡೆಸುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: CAO/CN/BNC/153/2023 ದಿನಾಂಕ: 21.02.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಲೋಂಡಾ–ಮೀರಜ್ ದ್ವಿಪಥೀಕರಣ: ವಿಜಯನಗರ (ಹೊರತುಪಡಿಸಿ) – ಮೀರಜ್ (ಹೊರತುಪಡಿಸಿ) ನಿಲ್ದಾಣಗಳ ಕಿಮೀ. 740/200 ರಿಂದ 745/250 ನಡುವೆ ಉಳಿದಿರುವ ಕತ್ತರಿಸುವುದು, ಒಡ್ಡುವುದು ಮತ್ತು ಹೊದಿಕೆ ಹಾಕುವುದು ಮುಂತಾದ ಭೂ–ಕಾಮಗಾರಿಯ ಚಾಲನೆ ಮಾಡುವುದು. (ಟೆಂಡರು ಉಲ್ಲೇಖ ಸಂ. LD-MRJ-072)	ರೂ. 4,99,73,400/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.03.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು

PUB/695/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: ECN-01-2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬಾಗಲಕೋಟೆ – ಕುಡುಚಿ ಹೊಸ ಬಿಜಿ ಲೈನ್‌ನಲ್ಲಿ ಖಜ್ಜಿಡೊನಿ ಮತ್ತು ಲೋಕಾಪುರ ನಡುವಿನ ರೈಲ್ವೆ ಚೈನೇಜ್ 34/100–200 ರಲ್ಲಿ ಪ್ರಸ್ತುತ ಇರುವ 110ಕೆವಿ ಡಬಲ್ ಸರ್ಕ್ಯೂಟ್ ಪವರ್ ಲೈನ್‌ಗೆ ಬೇಕಾದ ಬದಲಾವಣೆ ಕಾರ್ಯ.	ರೂ. 1,23,94,367/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.03.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ದಂಡು

PUB/696/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ. 08/MYS/2023 ದಿನಾಂಕ: 21.02.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಉಪ–ಕಾಮಗಾರಿ–1: ಚಿಕ್ಕಜಾಜೂರಿನಲ್ಲಿ ರೈಲ್ವೆ ಇನ್‌ಸ್ಟಿಟ್ಯೂಟ್‌ನ ನಿರ್ಮಾಣ. ಉಪ–ಕಾಮಗಾರಿ–2: ಚಿಕ್ಕಜಾಜೂರಿನಲ್ಲಿ ಒಳಾಂಗಣ ಶಟಲ್ ಬ್ಯಾಡ್ಮಿಂಟನ್ ಕೋರ್ಟ್‌ನ ನಿರ್ಮಾಣ.	ರೂ. 55,38,265/-
2	ಹರಿಹರ: ಸಿಕ್ ಲೈನ್ ಕವರ್ ಮಾಡಿದ ಶೆಡ್‌ಗಾಗಿ ಕ್ರೇನ್ ಸೌಲಭ್ಯವನ್ನು ಒದಗಿಸುವುದು.	ರೂ. 22,32,520/-
3	ಸಹಾಯಕ ವಿಭಾಗೀಯ ಇಂಜಿನಿಯರ್/ಚಿತ್ರದುರ್ಗ ಉಪ–ವಿಭಾಗದಲ್ಲಿ ಅಮೃತಾಪುರ–ಹಳಿಯೂರು ನಿಲ್ದಾಣಗಳ ನಡುವೆ ಕಿಮೀ. 16/740–17/130 (ಎರಡು ಬದಿ), 19/129–19/500 (ಎಡಬದಿ), 19/120–19/870 (ಬಲಬದಿ), 20/240–20/500 (ಎರಡು ಬದಿ) ಗಳಲ್ಲಿ ಸೈಡ್ ಡ್ರೈನ್‌ನ ನಿರ್ಮಾಣ ಮಾಡುವುದರೊಂದಿಗೆ ಡ್ರೈನೇಜ್ ಕಟಿಂಗ್‌ಗಳಿಗೆ ಅಭಿವೃದ್ಧಿ.	ರೂ. 1,92,74,097/-
4	ಸಹಾಯಕ ವಿಭಾಗೀಯ ಇಂಜಿನಿಯರ್/ದಾವಣಗೆರೆ ಉಪ–ವಿಭಾಗದಲ್ಲಿ ಹರಿಹರ–ಕುಮಾರಪಟ್ಟಣಂ ಸೈಡಿಂಗ್ ಭಾಗದಲ್ಲಿ ಕಿಮೀ. 339/500–340/000ರ ಬ್ರಿಡ್ಜ್ ಸಂ. 90 ರಲ್ಲಿ ಪೈರ್ ನಂ. 5, 6, 7 & 8 ರ ಮೇಲೆ ದುರಸ್ತಿ ಕಾರ್ಯ.	ರೂ. 1,90,87,344/-
5	ಮೈಸೂರು ವಿಭಾಗ: ಎಂಟು ಎನ್‌ಜಿಟಿ ನಿಲ್ದಾಣಗಳಿಗೆ ಐಎಸ್ 2470 ಭಾಗ–1 & ಭಾಗ–2ರ ಪ್ರಕಾರ ಸೆಪ್ಟಿಕ್ ಟ್ಯಾಂಕ್ ಮತ್ತು ಸೋಕ್‌ಪಿಟ್‌ನ ವ್ಯವಸ್ಥೆಯೊಂದಿಗೆ ನಿರ್ಮಾಣ ಕಾರ್ಯ. (ಚಾಮರಾಜನಗರ, ನಂಜನಗೂಡು, ಶ್ರೀರಂಗಪಟ್ಟಣ, ಬೀರೂರು, ಹರಿಹರ, ಸಾಗರ ಜಂಬಗಾರು, ಸುಬ್ರಮಣ್ಯ ರೋಡ್, ಹಾಸನ) (ಹರಿಹರ ವಿಭಾಗವನ್ನು ಹೊರತುಪಡಿಸಿ). ಉಪ–ಕಾಮಗಾರಿ–1: ಚಾಮರಾಜನಗರ – ಸೋಕ್ ಪಿಟ್‌ನೊಂದಿಗೆ 8 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–2: ನಂಜನಗೂಡು ಟೌನ್ – ಸೋಕ್ ಪಿಟ್‌ನೊಂದಿಗೆ 5 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–3: ಶ್ರೀರಂಗಪಟ್ಟಣ – ಸೋಕ್ ಪಿಟ್‌ನೊಂದಿಗೆ 5 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–4: ಬೀರೂರು ಸೋಕ್ ಪಿಟ್‌ನೊಂದಿಗೆ 8 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–5: ಸಾಗರ ಜಂಬಗಾರು– ಸೋಕ್ ಪಿಟ್‌ನೊಂದಿಗೆ 5 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–6: ಸುಬ್ರಮಣ್ಯ ರಸ್ತೆ – ಸೋಕ್ ಪಿಟ್‌ನೊಂದಿಗೆ 8 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ. ಉಪ–ಕಾಮಗಾರಿ–7: ಹಾಸನ – ಸೋಕ್ ಪಿಟ್‌ನೊಂದಿಗೆ 5 ಕೆಎಲ್‌ಡಿ ಸೆಪ್ಟಿಕ್ ಟ್ಯಾಂಕ್‌ನ ನಿರ್ಮಾಣ.	ರೂ. 19,48,281/-
6	ಹಾಸನ–ಮಂಗಳೂರು ವಿಭಾಗ: ಎಸ್‌ಎಸ್‌ಇ/ಬ್ರಿಡ್ಜ್/ಸಕಲೇಶಪುರ ವ್ಯಾಪ್ತಿ ಪ್ರದೇಶದ ಸಕಲೇಶಪುರ–ಯಡಕುಮಾರಿ ವಿಭಾಗದಲ್ಲಿ (ಘಾಟ್ ಪ್ರದೇಶಗಳು) ಬಿರುಕು ಬಿಟ್ಟ ಟಾಪ್ ಫ್ಲಾಂಜ್‌ಗಳನ್ನು ಬಲಪಡಿಸುವುದು ಹಾಗೂ ಕೆಳಗಿನ ಸ್ಲಂಗ್ ಗಿರ್ಡರ್‌ಗಳ ತುಕ್ಕುಹಿಡಿದ ರಿವೆಟ್‌ಗಳನ್ನು ಬದಲಾಯಿಸುವುದು (ಬ್ರಿಡ್ಜ್ ಸಂ. 142, 208, 210, 211, 217, 243, 251, 252, 293, 298 & 326) – 11 ಸೇತುವೆಗಳು.	ರೂ. 1,34,11,414/-
7	ಹಾಸನ–ಮಂಗಳೂರು ವಿಭಾಗ: ಎಸ್‌ಎಸ್‌ಇ/ಬ್ರಿಡ್ಜ್/ಸಕಲೇಶಪುರ ವ್ಯಾಪ್ತಿ ಪ್ರದೇಶದಲ್ಲಿ (ಸಕಲೇಶಪುರ ಸುಬ್ರಮಣ್ಯ ರಸ್ತೆ ಘಾಟ್ ಪ್ರದೇಶ) 2023–24ರಲ್ಲಿ ಮಾಡಬೇಕಾದ ಸ್ಟೀಲ್ ಗಿರ್ಡರ್ ಸೇತುವೆಗಳ ಬಿಯರಿಂಗ್‌ಗಳಿಗೆ ಆಯಿಲಿಂಗ್ ಮತ್ತು ಗ್ರೀಸಿಂಗ್ ಕೆಲಸ. (ಒಟ್ಟು 78 ಸೇತುವೆಗಳು)	ರೂ. 19,67,755/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.03.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಮೈಸೂರು

PUB/694/AAD/PRB/SWR/2022-23

S.W.Railways SWRRLY SWRRLY

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನೆಲಮಹಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡ, ಕೋರ್ಟ್ ಸರ್ಕಲ್ ಹತ್ತಿರ, ಕೋಲಾರ–563101

ದೂ: 08152–200010 ಇ–ಮೇಲ್: ddworkolar@gmail.com

ಸಂ: ವಿಹಿನಾಸಇ/ಜಿಅಂಕ/ಕೋ/ಎಂ.ಎಲ್.ಎ.ಲ್ಯಾಡ್/65/2022–23/662 ದಿ: 21.02.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅರ್ಹ ವಿಕಲಚೇತನ ಫಲಾನುಭವಿಗಳಿಗೆ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಸರಬರಾಜು ಮಾಡಲು ನೊಂದಾಯಿತ ಅಧಿಕೃತ ಏಜೆನ್ಸಿ/ಸಂಸ್ಥೆ/ಮಾರಾಟಗಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ Tender No.: DWCD/2022-23/IND2052ನ್ನು ಆಹ್ವಾನಿಸಲಾಗಿದೆ. ದಿನಾಂಕ: 21.02.2023 ರಿಂದ ದಿನಾಂಕ: 02.03.2023ರ ಒಳಗಾಗಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ www.https://eproc.karnataka.gov.in ಟೆಂಡರ್ ನಿರ್ವಹಣೆಯ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಾವತಿಸಬೇಕಾಗಿದೆ. ಟೆಂಡರ್‌ನ ಒಟ್ಟು ಮೌಲ್ಯ ಅಂದಾಜು ರೂ. 38.00 ಲಕ್ಷಗಳಾಗಿದ್ದು ಇ.ಎಂ.ಡಿ ಮೊತ್ತ ರೂ.95000/– ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. (1) ಯಂತ್ರಚಾಲಿತ ದ್ವಿಚಕ್ರವಾಹನ ಸರಬರಾಜು ಮಾಡುವ ಅಂದಾಜು ಸಂಖ್ಯೆ: 40. (2) ಅಂದಾಜು ಟೆಂಡರ್ ಮೌಲ್ಯ: ರೂ.38.00 ಲಕ್ಷ. (3) ಇ.ಎಂ.ಡಿ ಮೊತ್ತ: ರೂ.95000/–. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2023. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.03.2023. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಕಚೇರಿ, ಹಳೇ ತಾಲ್ಲೂಕು ಕಚೇರಿ ಕಟ್ಟಡ, ಕೋರ್ಟ್ ಆವರಣ, ಕೋಲಾರ–563101. ದೂರವಾಣಿ ಸಂಖ್ಯೆ: 08152–200010.

ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಕಛೇರಿ ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ527/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ಶ್ರೀನಿವಾಸ ಜಿ. ಕಪ್ಪಣ್ಣ–75 ಸಾಂಸ್ಕೃತಿ ಸಂಭ್ರಮ' ಇಂದು



ಬೆಂಗಳೂರು: ರಂಗಮಂಡಲ ಸಾಂಸ್ಕೃತಿಕ ಸಂಘ ಮತ್ತು ಸಿವಗಂಗ ಟ್ರಸ್ಟ್‌ನಿಂದ 'ಕಾವ್ಯ ಬದುಕಿನ ಉತ್ಸವ ಶ್ರೀನಿವಾಸ ಜಿ. ಕಪ್ಪಣ್ಣ–75 ಸಾಂಸ್ಕೃತಿಕ ಸಂಭ್ರಮ' ಕಾರ್ಯಕ್ರಮ ಫೆ. 26ರಂದು ಸರ್ ಎಂ.ವಿ. ಬಡಾವಣೆಯಲ್ಲಿರುವ ಸಿವಗಂಗ ರಂಗ ಮಂದಿರದಲ್ಲಿ ನಡೆಯಲಿದೆ.

ಸಾಹಿತಿ ಚಂದ್ರಶೇಖರ ಕಂಬಾರ ಕಾರ್ಯಕ್ರಮದ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಟಿ.ಎನ್. ಸೀತಾರಾಂ ಉದ್ಘಾಟಿಸಲಿದ್ದು, ಎಚ್.ಎಸ್. ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀನಿವಾಸ ಜಿ. ಕಪ್ಪಣ್ಣ ಉಪಸ್ಥಿತಿ, ಗಿರಿಜಾ ಲೋಕೇಶ್, ಹೇಮಾ ಪಟ್ಟಣಶೆಟ್ಟಿ, ಶ್ರೀಕಂಠಮೂರ್ತಿ ಕೆ.ಆರ್. ಟಿ.ಎಸ್. ವಿವೇಕಾನಂದ ಭಾಗವಹಿಸಲಿದ್ದಾರೆ.

5 ಕವಿಗೋಷ್ಠಿಗಳ ಅಧ್ಯಕ್ಷತೆಯನ್ನು ಶೂದ್ರ ಶ್ರೀನಿವಾಸ, ಡಾ. ಎಲ್.ಜಿ. ಮೀರಾ, ಡಾ. ಸುಕನ್ಯಾ ಮಾರುತಿ, ಸತೀಶ ಕುಲಕರ್ಣಿ ಮತ್ತು ಸಿದ್ಧರಾಮ ಹೊನ್ಕಲ್ ವಹಿಸಲಿದ್ದಾರೆ. ಎಲ್ಲ ಗೋಷ್ಠಿಗಳಲ್ಲಿ ಕಾವ್ಯ ಗಾಯನ ನಡೆಯಲಿದೆ.ಸಂಜೆ 5.15ರಿಂದ 'ಒಡನಾಡಿಗಳು ಕಂಡಂತೆ ಕಪ್ಪಣ್ಣ' ಎಂಬ ಕಾರ್ಯಕ್ರಮದಲ್ಲಿ ಅವರ ಆಪ್ತೇಷ್ಟರು ಅನುಭವಗಳನ್ನು ಮೆಲುಕು ಹಾಕುವರು. ಬೆಳಿಗ್ಗೆ 9.30 ರಿಂದ ದಿನವಿಡಿ ವಿವಿಧ ಕಾರ್ಯಕ್ರಮ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಕೌಂಟರ್: ಮೂವರು ಪೊಲೀಸರ ಸಾವು

ರಾಯಪುರ (ಪಿಟಿಐ): ಛತ್ತೀಸ್‌ಗಡದ ಸುಕ್ಮಾ ಜಿಲ್ಲೆಯಲ್ಲಿ ಶನಿವಾರ ನಕ್ಸಲರೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಜಿಲ್ಲಾ ಮೀಸಲು ಪಡೆಗೆ (ಡಿಆರ್‌ಜಿ) ಸೇರಿದ ಮೂವರು ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಬಸ್ತರ್ ವಲಯದ ಐಜಿಪಿ ಸುಂದರ್‌ರಾಜ್ ಪಿ. ತಿಳಿಸಿದ್ದಾರೆ.

ಡಿಆರ್‌ಜಿ ತಂಡವು ಜಗರ್‌ಗುಂಡ ಮತ್ತು ಕುಂದೇಡ್ ಗ್ರಾಮದಲ್ಲಿ ಶೋಧ ಕಾರ್ಯಾಚರಣೆಯಲ್ಲಿ ನಿರತರಾಗಿದ್ದ ವೇಳೆ ನಕ್ಸಲರು ಮುಖಾಮುಖಿಯಾದರು. ಈ ವೇಳೆ ನಡೆದ ಎನ್‌ಕೌಂಟರ್‌ನಲ್ಲಿ ಸಹಾಯಕ ಸಬ್ ಇನ್‌ಸ್ಪೆಕ್ಟರ್ ರಾಮುರಾಂ ನಾಗ್ (36), ಕಾನ್‌ಸ್ಟೆಬಲ್ ಕುಂಜಮ್ ಜೋಗ (33) ಮತ್ತು ವಂಜಮ್ ಭೀಮಾ (31) ಮೃತಪಟ್ಟಿದ್ದಾರೆ ಎಂದು ಅವರು ಹೇಳಿದರು.

ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ ರೈತರು, ವಿದ್ಯಾರ್ಥಿಗಳು

ರಾಷ್ಟ್ರೀಯ ತೋಟಗಾರಿಕೆ ಮೇಳಕ್ಕೆ ತೆರೆ

ಪ್ರಜಾವಾಣಿ ವಾರ್ತೆ

60 ಸಾವಿರ ನಾಲ್ಕು ದಿನದ ಮೇಳದಲ್ಲಿ ಪಾಲ್ಗೊಂಡ ಜನ

25,000 ಶನಿವಾರ ಪಾಲ್ಗೊಂಡವರು

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ತೋಟಗಾರಿಕಾ ಮೇಳ ಶನಿವಾರ ಮುಕ್ತಾಯಗೊಂಡಿತು. ದೇಶದ ವಿವಿಧ ರಾಜ್ಯಗಳಿಂದ ಭೇಟಿ ನೀಡಿದ ಸಾವಿರಾರು ರೈತರು ಮೇಳ ಕಣ್ತುಂಬಿಕೊಂಡರು.

ಎರಡನೇ ಶನಿವಾರ ರಜಾದಿನ ಆದ ಕಾರಣ ಮೇಳ ವೀಕ್ಷಿಸಲು ನಗರವಾಸಿಗಳು ಹಾಗೂ ವಿವಿಧ ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು.

ರೈತರ ಅಗತ್ಯಕ್ಕೆ ತಕ್ಕಂತೆ ಸಿದ್ಧಪಡಿಸಲಾದ ಹತ್ತಾರು ಉಪಯುಕ್ತ ಯಂತ್ರೋಪಕರಣಗಳು ಮೇಳದಲ್ಲಿ ಗಮನ ಸೆಳೆದವು. ಮೈದಾನದಲ್ಲಿ ಎಲ್ಲ ಬಗೆಯ ಉಪಕರಣಗಳನ್ನು ಪ್ರದರ್ಶನಕ್ಕಿಟ್ಟಿರುವ ವಿವಿಧ ಕಂಪನಿಗಳು, ರೈತರಿಗೆ ಪ್ರಾತ್ಯಕ್ಷಿಕೆ ತೋರಿಸುತ್ತಿದ್ದವು. ಒಟ್ಟು 200ಕ್ಕೂ ಹೆಚ್ಚು ಮಳಿಗೆಗಳು ಇಲ್ಲಿದ್ದವು. ವಿವಿಧ ತಳಿಗಳ ಬಗ್ಗೆ ಮತ್ತು ಹೊಸ ಸಂಶೋಧನೆಗಳ ಕುರಿತು ರೈತರು ಮಾಹಿತಿ ಪಡೆದುಕೊಂಡರು.

ರಾಸಾಯನಿಕ ಬಳಸಿ ಕೃಷಿ ಮಾಡದೆ ಸಾವಯವ ಕ್ಷೇತ್ರದ ಕಡೆಗೂ ರೈತರನ್ನು ಆಕರ್ಷಿಸಲಾಗುತ್ತಿದೆ. ಮಿತವ್ಯಯದ ನೀರು ಬಳಕೆಯಿಂದ ನಗರ ತೋಟಗಾರಿಕೆಗಾಗಿ ಮಣ್ಣುರಹಿತ ಕೃಷಿ, ಲಂಬ ಕೃಷಿ, ಹೈಡ್ರೋಪೋನಿಕ್ಸ್ ಕುರಿತು ನಗರವಾಸಿಗಳು ಮತ್ತು ಯುವಕರು ಐಐಎಚ್‌ಆರ್ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಳ್ಳುವಲ್ಲಿ ತಲ್ಲೀನರಾಗಿದ್ದರು.

ತೋಟಗಾರಿಕೆ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿ.ಸುರೇಶ್, ಐಐಎಚ್‌ಆರ್‌ನ ತಂತ್ರಜ್ಞಾನಗಳನ್ನು ಪ್ರತಿಯೊಬ್ಬ ರೈತರು ಬಳಸಿಕೊಂಡು ತೋಟಗಾರಿಕೆ ಬೆಳೆಗಳಲ್ಲಿ ಹೆಚ್ಚಿನ ಲಾಭ ಪಡೆದುಕೊಳ್ಳಬೇಕು. ಜೊತೆಗೆ ಪ್ರತಿಯೊಬ್ಬ ರೈತರಿಗೆ ಇಲ್ಲಿನ ಮಹತ್ವದ ಬಗ್ಗೆ ತಿಳಿಸಿಕೊಡುವ ಕೆಲಸ ಮಾಡಬೇಕು' ಎಂದು ಕರೆ ನೀಡಿದರು.

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಶನಿವಾರ ಭಾಗವಹಿಸಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರ

ಬೀಜ ಖರೀದಿಗೆ ಮುಗಿಬಿದ್ದ ಜನ: ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ಹಣ್ಣು, ತರಕಾರಿ, ಹೂವು ಸುಧಾರಿತ ಬೆಳೆಗಳ ಬಿತ್ತನೆ ಬೀಜಗಳನ್ನು ಖರೀದಿಸುವಲ್ಲಿ ರೈತರಿಗಿಂತ ಹೆಚ್ಚಾಗಿ ನಗರದ ಜನರು ಮುಗಿಬಿದ್ದಿದ್ದರು. ಬಿತ್ತನೆ ಬೀಜದ ಪ್ಯಾಕಗಳಲ್ಲಿ ವಿಶೇಷವಾಗಿ ಕುಂಬಳಕಾಯಿ, ಪಾಲಕ್ ಸೊಪ್ಪು, ಹೀರೆಕಾಯಿ ಮತ್ತಿತರ ಬೀಜಗಳನ್ನು ಖರೀದಿಸುತ್ತಿದ್ದರು. 1 ಗ್ರಾಂ ನಿಂದ 10 ಗ್ರಾಂವರೆಗೆ ಬಿತ್ತನೆ ಬೀಜಗಳು ಮಾರಾಟವಾಗುತ್ತಿದ್ದವು. ಜತೆಗೆ ಕಿಚನ ಗಾರ್ಡನ್ ಕಿಟಗಳಿಗೂ ಹೆಚ್ಚು ಬೇಡಿಕೆಯಿತ್ತು. 25 ನಾನಾ ತರಕಾರಿಯ ಬೀಜಗಳು, 10 ಬಗೆಯ ಹೂವಿನ ಬೀಜಗಳು ಮಾರಾಟವಾಗುತ್ತಿದ್ದವು. ಇದರ ಕೌಂಟರ್ ಪ್ರತ್ಯೇಕವಾಗಿತ್ತು. ಜತೆಗೆ ನರ್ಸರಿಗಳಲ್ಲಿ ಸಸಿಗಳೂ ಹೆಚ್ಚು ಮಾರಾಟವಾಗುತ್ತಿವೆ' ಎಂದು ಐಐಎಚ್‌ಆರ್‌ನ ಸಸ್ಯ ಮತ್ತು ಬೀಜೋತ್ಪಾದನೆ ವಿಭಾಗದ ಪ್ರಧಾನ ವಿಜ್ಞಾನಿ ಎಚ್.ಎಸ್. ಯೋಗೀಶ್ ಅವರು ಮಾಹಿತಿ ನೀಡಿದರು.

₹3 ಕೋಟಿಗೂ ಹೆಚ್ಚು ವಹಿವಾಟು

ನಾಲ್ಕು ದಿನ ನಡೆದ ರಾಷ್ಟ್ರೀಯ ತೋಟಗಾರಿಕೆ ಮೇಳದ ಒಟ್ಟು ₹3 ಕೋಟಿಗೂ ಹೆಚ್ಚು ವಹಿವಾಟು ನಡೆದಿದೆ. ಶನಿವಾರ ₹5 ಲಕ್ಷಕ್ಕೂ ಹೆಚ್ಚು ವಹಿವಾಟಾಗಿದೆ ಎಂದು ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ಡಾ. ಪಿ. ನಂದೀಶ್ ಮಾಹಿತಿ ನೀಡಿದರು.

ಸಸ್ಯ ಸಂರಕ್ಷಣೆಗಾಗಿ ಡ್ರೋನ್ ಸಹಾಯದ ಮೂಲಕ ರಾಸಾಯನಿಕಗಳನ್ನು ಸಿಂಪಡಣೆ ಮಾಡುವ ವಿಧಾನದ ಪ್ರಾತ್ಯಕ್ಷಿಕೆ ನೀಡಲಾಯಿತು. ಇದರಿಂದ 4 ಸಾವಿರಕ್ಕೂ ಹೆಚ್ಚು ರೈತರು ಅನುಕೂಲ ಪಡೆದುಕೊಂಡರು. ತೋಟಗಾರಿಕೆ ತಂತ್ರಜ್ಞಾನದ ಕಾರ್ಯಗಾರದಲ್ಲಿ ಶನಿವಾರ 30 ಯುವ ರೈತರು ಪಾಲ್ಗೊಂಡಿದ್ದರು ಎಂದು ತಿಳಿಸಿದರು.



ಕೇಂದ್ರೀಯ ವಿದ್ಯಾಲಯ

ರಾಷ್ಟ್ರೀಯ ವೈಮಾನಿಕ ಪ್ರಯೋಗ ಶಾಲೆ ಪರಿಸರ, ಬೆಂಗಳೂರು – 560017

(An Autonomous Body under Ministry of Education, Govt. of India)

Tel: 080-25211610 Website: https://nal.kvs.ac.in E-Mail: kvnal05@gmail.com

ಗುತ್ತಿಗೆ ಶಿಕ್ಷಕರ ನೇಮಕಾತಿಗೆ ಸೂಚನೆ

ಕೇಂದ್ರೀಯ ವಿದ್ಯಾಲಯ ಸಂಘಟನೆಯ ಎನ್.ಎ. ಎಲ್ ಕ್ಯಾಂಪಸ್, ಬೆಂಗಳೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ 2023–24 ಶೈಕ್ಷಣಿಕ ಅವಧಿಗೆ ಕಾರ್ಯ ನಿರ್ವಹಿಸಲು ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನಿರ್ದಿಷ್ಟ ಮಾಹಿತಿಗಾಗಿ ಶಾಲೆಯ ವೆಬ್‌ಸೈಟ್ https:/ nal.kvs.ac.in ಗೆ ಭೇಟಿ ನೀಡಿ.

ಪ್ರಾಂಶುಪಾಲರು
ಕೆ.ವಿ.ಎನ್.ಎ.ಎಲ್.

ಡಿಸ್ಟ್ರಿಬ್ಯೂಟರ್‌ಗಳು ಬೇಕಾಗಿದ್ದಾರೆ

ಪ್ರತಿಷ್ಠಿತ ಕಂಪನಿಯು ತಮ್ಮ ವೇಗವಾಗಿ ಮಾರಾಟವಾಗುತ್ತಿರುವಂತಹ ಉತ್ಪನ್ನಗಳಾದ ಗೋಧಿ ಹಿಟ್ಟು ಮತ್ತು ಎಲ್ಲಾ ತರನಾದ ಮಸಾಲ ಉತ್ಪನ್ನಗಳನ್ನು ನಿಮ್ಮ ಪ್ರದೇಶದಲ್ಲಿ ವಿತರಿಸಲು, ಡಿಸ್ಟ್ರಿಬ್ಯೂಟರ್‌ಗಳನ್ನು ಆಹ್ವಾನಿಸಿದ್ದಾರೆ

★ ಕನಿಷ್ಠ ರೂ. 2.5 ಲಕ್ಷಗಳ ಬಂಡವಾಳ ಹೂಡಿಕೆ

★ ತಿಂಗಳಿಗೆ ರೂ. 1 ಲಕ್ಷದವರೆಗೆ ಗಳಿಸಲು ಅವಕಾಶ

ಸಂಪರ್ಕಿಸಿ: 7026 027 027

ಇ-ಮೇಲ್: homeneedscart@gmail.com

ಅಡಿಕೆ, ತೆಂಗು ಬೆಳೆಗಳ ಬೆಳವಣಿಗೆಗೆ ಸಹಾಯಕ

ಪ್ರಾಣಿಗಳ ಮೂಳೆಯಿಂದ ಗೊಬ್ಬರ ತಯಾರಿಕೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಸಾಮಾನ್ಯವಾಗಿ ಬೆಳೆಗಳಿಗೆ ಸಾವಯವ ಮತ್ತು ರಾಸಾಯನಿಕ ಗೊಬ್ಬರ ಬಳಸಲಾಗುತ್ತದೆ. ಆದರೆ, ಈಗ ಮಾರುಕಟ್ಟೆಗೆ ಪ್ರಾಣಿಗಳ ಮೂಳೆಯಿಂದ (ಬೋನ್ ಮೀಲ್) ತಯಾರಿಸಿದ ಗೊಬ್ಬರ ಬಂದಿದೆ.

ಮೈಸೂರಿನ ಫ್ಯಾಮ್ಕೊ ಕಂಪನಿ ಈ ಗೊಬ್ಬರನ್ನು ತಯಾರಿಸಿ ಮಾರಾಟ ಮಾಡುತ್ತಿದೆ. ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಆಯೋಜಿಸಿದ್ದ ನಾಲ್ಕು ದಿನಗಳ ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಬೋನ್ ಮೀಲ್ ರೈತರ ಗಮನ ಸೆಳೆಯಿತು.

'ಅಡಿಕೆ, ತೆಂಗು, ರಬ್ಬರ್, ಶುಂಠಿ ಬೆಳೆಗಳಿಗೆ ಈ ಬೋನ್ ಮೀಲ್ (ಮೂಳೆಗೊಬ್ಬರ) ಹೆಚ್ಚಿನ ರಂಜಕ ಅಂಶವನ್ನು ಒದಗಿಸುವುದರಿಂದ ವೇಗವಾಗಿ ಬೆಳವಣಿಗೆ ಹೊಂದುತ್ತವೆ. ಇದು ಸಾವಯವ ಗೊಬ್ಬರವಾಗಿದ್ದು, ಸಸ್ಯಗಳ ನಿರಂತರ ಬೆಳವಣಿಗೆಗೆ ಪೂರಕವಾಗಿದೆ. ಸಸ್ಯಗಳ ಜೀವಕೋಶದ ಗೋಡೆಗಳನ್ನು ಬಲಪಡಿಸುವುದರ ಜೊತೆಗೆ ಆರೋಗ್ಯಕರ ಬೆಳೆವಣಿಗೆಗೂ ಉತ್ತೇಜನ ನೀಡುತ್ತದೆ' ಎಂದು ಕಂಪನಿಯ ಮಾರಾಟಗಾರ ಅಬ್ದುಲ್ ಅಲೀಮ ಮಾಹಿತಿ ನೀಡಿದರು.

ಮೂಳೆ ಗೊಬ್ಬರ

'ದ್ಯುತಿ ಸಂಶ್ಲೇಷಣೆ, ಬೀಜ ಉತ್ಪಾದನೆ ಮತ್ತು ಸಸ್ಯದೊಳಗಿನ ಶಕ್ತಿಯ ವರ್ಗಾವಣೆ ಮಾಡುವಲ್ಲಿ ಬೋನ್ ಮೀಲ್ ಪ್ರಮುಖ ಪಾತ್ರ ವಹಿಸುತ್ತದೆ. ನೈಸರ್ಗಿಕ ವಿಘಟನೆಯ ಪ್ರಕ್ರಿಯೆಯು ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳಿಗೆ ಆಹಾರವನ್ನು ನೀಡುತ್ತದೆ. ಈ ಗೊಬ್ಬರದಲ್ಲಿ ಹೆಚ್ಚಿನ ಮ್ಯಾಗ್ನೀಶಿಯಂ, ಕಬ್ಬಿಣದಂತಹ ಪೋಷಕಾಂಶಗಳಿದ್ದು, ಒಂದು ವರ್ಷದವರೆಗೆ ಬಾಳಿಕೆ ಬರುತ್ತದೆ' ಎಂದರು.

'ತೆಂಗಿನಕಾಯಿ ಗಿಡವೊಂದಕ್ಕೆ 3-4 ಕೆ.ಜಿ., ಅಡಿಕೆ ಗಿಡಕ್ಕೆ 600 ಗ್ರಾಂನಂತೆ ವರ್ಷದಲ್ಲಿ ಎರಡು ಬಾರಿ ನೀಡಬೇಕು. ಒಂದು ಎಕರೆ ಪ್ರದೇಶದಲ್ಲಿ ಬೆಳೆದ ಶುಂಠಿಗೆ ಮೊದಲ ಹಂತದಲ್ಲಿ 600 ಕೆ.ಜಿ. ಮತ್ತು ಎರಡನೇ ಹಂತದಲ್ಲಿ 750 ಕೆ.ಜಿ. ಹಾಕಬೇಕು. ರಬ್ಬರ್‌ನ ಗಿಡವೊಂದಕ್ಕೆ 1 ಕೆ.ಜಿ., ಒಂದು ಎಕರೆ ಪ್ರದೇಶದಲ್ಲಿ ಬೆಳೆದ ಗುಲಾಬಿ ಮತ್ತು ಇತರೆ ಹೂವಿನ ಗಿಡಗಳಿಗೆ 700 ಕೆ.ಜಿ. ನೀಡಬೇಕು. ದೇಶದಲ್ಲಿರುವ ಕಸಾಯಿಖಾನೆಗಳಿಂದ ಮೂಳೆಗಳನ್ನು ಆಮದು ಮಾಡಿಕೊಂಡು ಈ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಕೇರಳ ಮತ್ತು ತಮಿಳುನಾಡಿನಲ್ಲಿ ಇದಕ್ಕೆ ಭಾರಿ ಬೇಡಿಕೆ' ಇದೆ ಎಂದು ಅವರು ತಿಳಿಸಿದರು.

ಒಂದು ಟನ್ ಮೂಳೆ ಗೊಬ್ಬರಕ್ಕೆ ₹29 ಸಾವಿರ ದರ ಇದೆ.



ಸಿದ್ದರಾಮಯ್ಯ ಕಟುಸತ್ಯ ಎದುರಿಸುವ ಕಾಲ ಬಂದಿದೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಟುಸತ್ಯ ಎದುರಿಸುವ ಕಾಲ ಬಂದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಅರ್ಕಾವತಿ ಬಡಾವಣೆ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸುಳ್ಳು ಹೇಳಿದ್ದಾರೆ' ಎಂಬ ಸಿದ್ದರಾಮಯ್ಯ ಅವರ ಆರೋಪಕ್ಕೆ ಶನಿವಾರ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಸಿದ್ದರಾಮಯ್ಯ ನೇಮಿಸಿದ್ದ ನ್ಯಾಯಮೂರ್ತಿ ಕೆಂಪಣ್ಣ ಆಯೋಗ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ ವಿಚಾರಣೆ ನಡೆಸಿ ನೀಡಿದ್ದ ವರದಿಯನ್ನು ನಾನು ಓದಿದ್ದೇನೆ. ನಾನು ಸುಳ್ಳು ಹೇಳುವ ಪ್ರಶ್ನೆಯೇ ಇಲ್ಲ' ಎಂದರು.

'ಅಧಿಕಾರಿಗಳು ತೆಗೆದುಕೊಂಡು ಬಂದಿದ್ದ ಕಡತವನ್ನು ನಾನು ಅನುಮೋದಿಸಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅದರ ಅರ್ಥ ಏನು? ಅವರು ತಪ್ಪು ಮಾಡಿದ್ದಾರೆ ಎಂದಲ್ಲವೇ? ಇದಕ್ಕಿಂತ ದೊಡ್ಡ ಸಾಕ್ಷ್ಯ ಬೇಕಿಲ್ಲ. ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ' ಎಂದರು.

ಲೋಕಾಯುಕ್ತ ಸಂಸ್ಥೆ ಕುರಿತು ಸಿದ್ದರಾಮಯ್ಯ ನೀಡಿದ ಹೇಳಿಕೆಗೆ, 'ಅಡ್ವೊಕೇಟ್ ಜನರಲ್ ವಾದದ ಬಗ್ಗೆ ಸಿದ್ದರಾಮಯ್ಯ ಪ್ರಸ್ತಾಪಿಸಿದ್ದಾರೆ. ಅಡ್ವೊಕೇಟ್ ಜನರಲ್ ವಾದ ಮಾಡಿದ ಬಳಿಕ ತೀರ್ಪಿನಲ್ಲಿ ನ್ಯಾಯಮೂರ್ತಿ ಏನು ಹೇಳಿದ್ದಾರೆ ಎನ್ನುವುದು ಮುಖ್ಯ. ಭ್ರಷ್ಟರು ಹಾಗೂ ಜನಪ್ರತಿನಿಧಿಗಳ ರಕ್ಷಣೆಗೆ ಎಸಿಬಿ ಮಾಡಿದ್ದರು ಎಂದು ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನೇ ನಾನು ಹೇಳಿರುವುದು. ನ್ಯಾಯಮೂರ್ತಿ ನೀಡಿದ್ದ ತೀರ್ಪು ಓದಿದ್ದೇನೆ' ಎಂದರು.

ಕೆ.ಸಿ. ರೆಡ್ಡಿ ಕಂಚಿನ ಪ್ರತಿಮೆ ಅನಾವರಣ: ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಕಂಚಿನ ಪ್ರತಿಮೆಯನ್ನು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಅನಾವರಣ ಮಾಡಿದರು.

ಸಚಿವರಾದ ಆನಂದ್ ಸಿಂಗ್, ಸುಧಾಕರ್, ಶಾಸಕ ರಾಮಲಿಂಗಾರೆಡ್ಡಿ, ಕೆ.ಸಿ. ರೆಡ್ಡಿ ಸಂಬಂಧಿಕರು ಇದ್ದರು.

ಮ್ಯೂಸಿಯಂ ಸ್ಥಾಪನೆಗೆ ಕ್ರಮ: 'ಕರ್ನಾಟಕದ ಹೋರಾಟ, ಮುಖ್ಯಮಂತ್ರಿಗಳ ನಿರ್ಧಾರ ಇತ್ಯಾದಿಗಳ ಬಗ್ಗೆ ಮಾಹಿತಿ ನೀಡುವ ಮ್ಯೂಸಿಯಂ ಸ್ಥಾಪಿಸುವ ಕುರಿತು ಚರ್ಚಿಸಿ, ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಸರ್ಕಾರಿ ಕೊಲೆಯಲ್ಲದೆ ಬೇರೇನು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಂಚಣಿ ಆಗ್ರಹಿಸಿ ಮುಷ್ಕರದಲ್ಲಿ ತೊಡಗಿದ್ದ ಶಿಕ್ಷಕರಿಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಅವುಗಳನ್ನು ಸರ್ಕಾರಿ ಕೊಲೆಗಳು ಎನ್ನದೆ ಬೇರೇನು ಹೇಳಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಶಿಕ್ಷಕರಾದ ಬಾಗಲಕೋಟೆಯ ಸಿದ್ದಯ್ಯ ಹಿರೇಮಠ ಮತ್ತು ರಾಯಚೂರು ಜಿಲ್ಲೆ ಸಿಂಧನೂರಿನ ಶಂಕರಪ್ಪ ಬೋರಡ್ಡಿ ಅವರು ತಮ್ಮ ಹೋರಾಟಕ್ಕೆ ಸರ್ಕಾರ ಸ್ಪಂದಿಸದ ಹಿನ್ನೆಲೆಯಲ್ಲಿ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇನ್ನಷ್ಟು ಜೀವಗಳು ಬಲಿಯಾಗುವ ಮುನ್ನ ಮುಷ್ಕರ ನಿರತರನ್ನು ಕರೆದು ಬೇಡಿಕೆಗಳನ್ನು ಈಡೇರಿಸುವ ಕೆಲಸ ಮಾಡಬೇಕು. ಈಗಾಗಲೇ ಪ್ರಾಣ ಕಳೆದುಕೊಂಡವರಿಗೆ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಸ್ವಾತಂತ್ರ್ಯ ಉದ್ಯಾನದಲ್ಲಿ 141 ದಿನಗಳಿಂದ ಮುಷ್ಕರ ನಿರತರಾಗಿರುವ ಈ ಶಿಕ್ಷಕರ ಗೋಳು ಕೇಳುವವರಿಲ್ಲ. ಶಿಕ್ಷಕರು ಕೇಳುತ್ತಿರುವುದು ತಮ್ಮ ಹಕ್ಕಿನ ಪಿಂಚಣಿಯನ್ನು ಎಂಬ ಕನಿಷ್ಠ ಜ್ಞಾನ ರಾಜ್ಯ ಸರ್ಕಾರಕ್ಕೆ ಬೇಡವೇ? ಪ್ರತಿಭಟನೆ ವಿಚಾರ ತಮ್ಮ ಗಮನಕ್ಕೆ ಬಂದಿರಲಿಲ್ಲ ಎಂದು ಹೇಳುವ ಮೂಲಕ ಸರ್ಕಾರ ಇಷ್ಟು ದಿನ ಕೋಮಾದಲ್ಲಿತ್ತು ಎಂಬುದನ್ನು ಒಪ್ಪಿಕೊಂಡಿದೆ. ಕಿವಿಯಲ್ಲಿ ಸದಾ ಕಮಿಷನ್ ಸದ್ದು ಗುಯ್ಯುಡುವಾಗ ಬಡವರ ಕೂಗು ಕೇಳುವುದಾದರೂ ಹೇಗೆ' ಎಂದೂ ಕುಟುಕಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS with BA/ MA (Eng/ SS) B.Sc, M.Sc with B.Ed B.Lib/ M.Lib, & NTT Teachers. Salary upto 28000/- Contact: Sidhartha International School, Peenya Dasarahalli. 9620100046/ 9964670328

WE NEED BOLD LEADERS
A Leader who is a constant Learner, curious listener, Energetic to the core, Efficient at its best, Analytical and Appreciative of the Team efforts, Decisive and Directional, Empathetic and Effective, Result Oriented and brings home a heap of Resourcefulness

PRINCIPAL
Postgraduate with BEd having Min 20 years of Experience out of which mIn 5 years in an Over all Leadership Position in an ICSE or CBSE school.
A visionary Leader with a commitment to excel. An Excellent Communicator who builds, trains and motivates the team to maximize their potential. A people oriented leader who is able to constantly evolve in devising meaningful engagements with all stake holders including students and parents. A process oriented task execution is our way of life.
The opportunity is unlimited for the purpose driven leader

HEADMISTRESS
Post Graduate with BEd having Min 20 years Experience out of which Min 5 years in a Leadership position in the primary section
The best fit shall exhibit excellent team management skills and shall inspire a positive thinking among the team
Will be in charge of the day to Day administration of the Junior School
If you meet the above credentials, then a reputed mid sized ICSE School in the Central Bangalore District is your next destination for a rewarding and exciting career. We are people centric and give the freedom to be an out of the box thinker in order to take the institution to the next level of Excellence
SCAN THE QR CODE TO APPLY ONLINE

PRESTIGE GROUP OF INSTITUTIONS
ARKAWATHI LAYOUT | RAMPURA | GEDDALAHALLI
Affiliated to ICSE, New Delhi
KINDERGARTEN | MONTESSORI | PRIMARY SECONDARY EDUCATION
Invites Applications for 2023-24 from QUALIFIED & EXPERIENCED TEACHING FACULTY for All Subjects from Montessori, Kindergarten to Grade X
interested candidates can mail your resume to prestigeschoolblr@gmail.com pisrampura@gmail.com
Call : 91086 64753 | 78992 95545
www.prestigegroupofinstitutions.com

WANTED TEACHERS A leading educational institution at Bangalore is in urgent requirement of teachers for all classes,and faculties'from LKG to PUC Apply within 7days to:TheChairman, Crescent High School &PU College,#28 Sultan-Road Briand-Square, Bangalore-02 mmacrescent@gmail.com superscribing the envelopment with'the post applied,for Emoluments &Perks commensurate with qualification and experience ReplyForward

HERITAGE PUBLIC SCHOOL,Srinidhi Layout,JP.Nagar 8th Phase, Konanakunte, Bengaluru-62, Requires:-HIGH SCHOOL CO-ORDINATOR. MSc,BEd with`minimum 5years of`Experience at`High School Level will be Preferred`Hindi Teachers For`High School,Maths, Science, Social,Kannada & English`Teachers For`Middle &.Primary School,PE Teachers. Attractive Salary`Call: 080-26322111, 9901733776.

LAWRENCE HIGH SCHOOL, Koramangala requires Montessori trained teachers, Primary, Middle and High School Teachers for all subjects. Contact 9886583165/ 8123397089 or apply to lawrenceschool99@gmail.com (Only candidates residing in and around Koramangala and HSR to apply).

SRI AHAM AATHMA VIDYALAYA- (ICSE/ State) Gruhalakshmi layout Nagasandra post, Peenya Dasarahalli, Bangalore-73 Requires TEACHERS for the academic year 2023-2024 (1) Computer Science-BCA/MCA/B.Sc, M.Sc B.Ed (2)Teachers to teach all the subjects for Nursery/Primary/ Middle/ High-School (3) Nursery Staff, NTT& Montessori (4) Office Staff/ Receptionist Clerk/ Data/DTP Operator with Tally, IT System Admin (5) LAB-ASSISTANT Librarian. Academic Co-Ordinator (6) P.T. Offers Attractive Salary. Transportation provided. Call 9880200172, 9663778869 Email: sriaavapplic@gmail.com

ST.PHILOMENA'S PUBLIC SCHOOL BYALAKERE, NEAR YELAHANKA, BANGALORE REQUIRED TRAINED TEACHERS FOR CBSE HIGH SCHOOL ALL SUBJECTS 9480091189/ 9845036582 stphilomenas118@gmail.com

WANTED QUALIFIED and Eminent TEACHERS to teach PRIMARY andHIGHER PRIMARY ENGLISH,SOCIAL SCIENCE,MATHEMATICS and SCIENCE Subjects with good English fluency.Contact Immediately Secretary,SRI VINAYAKA VIDYA KENDRA, Kodigehalli,Sahakarnagar post, Bangalore-560092. Phone:9880357297/ 08041698983

WANTED
Head Mistress, Teachers & Computer Teachers for NCERT curriculum from Nursery to VIII, Male and Female Warden, Receptionists for
CNR PUBLIC SCHOOL
Byrashettihalli, Gollahalli Post, Nelamangala-562123
cnrpublicschool1@gmail.com
Contact: 8722227750

MOTHER TERESA PUBLIC SCHOOL (CBSE)
M.E.S Ring Road, Jalahalli, Bengaluru-560013.
Invites applications from eligible candidates for
English, Kannada, Hindi, Mathematics, Computer Science, Librarian, Music, Art, Dance Lab Assistant, NTT & MTT. and P.E.
MOTHER TERESA HIGH SCHOOL (State Board)
REQUIRES TEACHERS for English, Mathematics, Science, Office Assistant and Librarian,
Qualification: Graduation or Post Graduation with B.Ed
Candidates who have prior experience with excellent communication skills in English are requested to email their resume to hr@mtpscbse.com or
Walk-in from 10.00 am to 2.00 p.m.
Call us : 9900082315

SRI K.K. EDUCATION CENTRE
(Affiliated to CBSE, Affiliation No. 830256, NEW Delhi)
Kadabagere, Magadi Main Road, Bangalore
Applications invited for the following posts for the academic year 2023-24.
KINDERGARTEN TEACHERS Degree/ Diploma in Early Childhood care education/ NTT. with the knowledge of phonics
PRIMARY & MIDDLE SCHOOL English, Mathematics, Science, Social Science, Computer Science, Hindi. Qulfn.: B.Sc., B.A., B.CA., & B.Ed.,
HIGH SCHOOL English, Mathematics, Social Science & Computer Science. Qualfn. M.Sc.,M.A.,M.C.A.,& B.Ed.,
ASSOCIATE TEACHERS Graduates who are interested in building a career as a Teacher educator
Remuneration will not be a constraint for experienced & competent candidates. Interested candidates send your resume.
Call: 74066 66583 | Email us: srikkec@gmail.com

SREE VENKATESHWARA ENGLISH SCHOOL #1, V.S.Layout Krishnarajapuram Bangalore-560036 WANTED TEACHERS: B.Sc B.Ed. (Mathematics, Science) B.A B.Ed (Social, English, Kannada, Hindi) NTT, TCH/D.Ed, B.PEd-Computer, Clerks. Attractive Salary. Contact: 080-25611873, 7411135627 Email-svs.krp.bangalore@gmail.com

NCIPS
NEW CAMBRIDGE INTERNATIONAL PUBLIC SCHOOL
CA Site No: 6 (P), WOC Road, II Stage, Mahalakshmipuram, Bangalore - 560 086.
Email id : info@ncips.in
Contact: 9886006459 / 9845087439
REQUIRED TEACHERS
B.Sc/ B.A.B.Ed With Minimum 5 years' Experience English, Science, Social, Maths and Hindi Teachers handling CBSE Syllabus High School & Middle Primary. Pre Primary Co-Ordinator with 10 years experience

WANTED
Apoorva Construction Co., looking for Experienced Civil Engineers (B.E. or Diploma) with 2 to 4 years of experience. Interested candidates should contact with resume.
Apoorva Construction Co., TUMKUR
E-mail: projects.apoorva@gmail.com
Mobile: 93796 32449

General

Jobs
SUPERVISOR & SITE HEAD required for Corporate Travels
To Manage Employee Transportation and Cabs Booking at ITC / KR Puram. Exp: Min 1 year in same field. Salary: 18K - 30K
Ph: 7338 58 58 58 7338 59 59 59

WANTED
•SECURITY GUARDS, •FIELD OFFICERS, •OPERATION MANAGERS, •DRIVERS, •BRANCH HEADS & PHARMACISTS
TO WORK IN ALL OVER KARNATKA CONTACT IMMEDIATELY
Poojyaya2005@gmail.com 9341366744, 9428563870 9900955002, 7829322228

WANTED FEMALE Office Assistant, Cooking Staff, School Bus Driver, Contact Professional Bangalore. Call: 9886236341.

Engg/ Production Technical

STAR INFRATECH Civil leading company required a post for AGM & Senior Engineer (BE/ M.Tech) with good knowledge in Government Civil works like Layout, Roads & Bridges with 15- 20 year's experience in handling major projects of Rs. 1000 Cr & projects will be throughout Karnataka. Visit Interview on 01.03.2023. Contact no: 080- 23412304/ 05. Submit Resume to: hr.starinfratech09@gmail.com

WANTED 1)SENIOR HVAC DESIGN ENGINEER 8-10 YEARS EXPERIENCE 2)PHE & FIRE BIM ENGINEER 4-5 YEARS EXPERIENCE 3)PHE & FIRE AUTOCAD DRAFTSMAN 5-6 YEARS EXPERIENCE. CONTACT: 9945659333/ suresh.cr@dgcon.com

WANTED AT Peenya. CNC PROGRAMMER cum OPERATOR (2) VMC-PROGRAMMER cum OPERATOR (3) QUALITY ENGINEERS. Experience: 1-2 years. Contact: 9845114576

Marketing & Sales

AN ISO 9001- 2015, Bakery and Kitchen Equipment Manufacturing Company in Jigani, looking for Marketing Manager and Marketing Executives. Apply to arkamachineries@gmail.com or Call: 9686198500

WANTED EXPERIENCED SALESMAN only capable of getting bearings orders from sugar, cement, paper Govt. industries only. Required on salary cum commission basis from South India. Contact: Accurate Bearing Centre. 9341211791 or accuratebearing@yahoo.co.in

Accounts & Finance

WANTED
HR, ADMIN, ACCOUNTS, MARKETING EXECUTIVES (GEM/EPROC) & OFFICE MANAGERS TO WORK IN R.T. NAGAR
Minimum 2 Years Experience Required
Plz Send Email: Poojyaya2005@gmail.com, Raghu_sgr2@yahoo.co.in
080-23536744, 9845996744, 9844006744

Overseas

CNC OPERATORS / bridge cutters / supervisors needed for marble company in sharjah. whatsapp 7760480544 email:hr@almezoon,com

Wanted

WANTED A REPORTER for English monthly magazine. Contact immediately 9844050531/ 9538814071 E-mail: bathulexpress@gmail.com

WANTED BUSINESS DEVELOPMENT EXECUTIVES
MARK GROUP fuelling life
MARK GROUP is engaged in Clearing & Forwarding, Sales & Service and ITES associated with various Public and Private Sector Companies, headquartered in Kochi and operations spread across the states of South India. We have the following vacancies in Karnataka.
BDE for Automotive Retail Segment (Lubricants) in Bangalore North
BDE for Industrial and Institutional Segments (Fuel) in Bangalore Rural & Urban, Tumkur, Mysore, and Dakshina Kannada
Experience - Minimum 3 years in similar field
Please send in resumes to hr@markgroup.net.in Mob: 9481640101

WE ARE HIRING
Are you INSPIRED to be the change agent ?
Are you ready to experience the journey of creating SUSTAINABLE EXCELLENCE?
Enjoy the spirit of EMPOWERMENT and MAXIMIZE the potential in you to the world in the MARIAN WAY...
If you are a teacher with Min 2 years of teaching experience in an ICSE/CBSE school, its time for you to be a Marian.
JOIN OUR TEAM
SECONDARY - PG + BEd - English - History & Economics - Mathematics - Hindi
MIDDLE - Degree + BEd - Social Science & English
PRIMARY - Degree + TTC/DEd/BEd - Kannada - Special Educator
Other Positions - Lady Physical Educator-BPE/DPE - Lab assistant - Science Graduate
Interested candidates may send detailed CV with a Passport size Photograph to hr@stmaryspublicschool.co.in
St. Mary's Public School SINCE 1983 Inspiring Excellence.
#13, Queens Road, Bengaluru - 560052
www.stmaryspublicschool.co.in 080 2220 2854

WANTED VGS Elite International School
New ICSCE School
Nagaruru Extention, Nelamangala, Bengalruru
WANTED STAFF FOR ACADEMIC YEAR 2023-2024
1. Talented efficient experienced Principal
2. Teachers qualified with UG/PG with B.Ed / D.Ed PCM, PCB, Computer, Kannada, English, Hindi, Librarian, Office Clerk & Accountant
Preference to teachers worked in CBSE, ICSCE syllabus
Interested Candidates send your resume with documents to bjputtaswamy1@gmail.com.
Contact M: 9448359762 / 7204806011

Manager

WAREHOUSE MANAGER: Min 2- 3 years experience. Good communication skills in English and Kannada. Proficiency in Email, Excel & Word. Lives within 7- 8 kms of Neelasandra. Write with salary expected to: info@reynoldonline.com

Cook

FEMALE BRAHMIN Cook cum Assistant for an elder lady in Bangalore south. Good emoluments with accommodation provided . Should be preferably above 40 yrs. Mb : 76762 28828

Factory

AN ISO 9001- 2015, Engineering Company located in Jigani require suitable candidates for following position 1. Manager Operation with minimum 10 years of machine shop and fabrication experience. 2. Marketing and purchase executives 3. Quality Engineers 4. VMC and Turning Centre operators 5. CAD/ CAM Engineers 6. Planning Engineers and trainee Engineers. Please apply to: excelwirecut@yahoo.co.in or call: 9686198499

PERSONAL

Lost

LOST OF DOCUMENT
I, K.T.Ramamurthy Kenchanapura, Kengeri Hobli, Bangalore South Toluk, have Lost my Original Sale deed Document No.25321/ 2003-04 Site No.23, Situated at Kempegowdanagar, Magadi Main Road, wile Traveling. Finder Please Contact: 9900133100

AUTOMOTIVE

Four Wheelers Buying

Others

AUTO LAND TRUSTED NAME IN BUYING SELLING EXCHANGE FINANCE ALL TYPES OF CARS 9845120604 9845170731

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

MATRIMONIAL

Matrimonial Bureaus

✓ All Communities ✓ All Religions ✓ All Castes
Gathbandhan Matrimony (Personalized Matrimonial Services)
Call : 90380-00029
•Bengaluru •Hyderabad •Others
scan

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES Personalised Services All Age Groups INDIA/ ABROAD,
9611919477 9886884291

Grooms Wanted

Telugu

ALLIANCE INVITED from qualified, employed, unmarried bangalore settled boy for telugu yadava bangalore girl 42 yrs/ 5'4' MCA unmarried, nw, nv. whatsapp 9380397152.

Muslim

WE ARE seeking for a Cultured, Educated Sunni Muslim Girl for our 29 year old MBA only son having own Resorts and hotel business throughout India. Interested Families may Contact (080-69070609)

Brides Wanted

Muslim

SINGLE INDEPENDENT Healthy Educated 59 Muslim Officer needs Independent Educated Lady for marriage No BARS NO MEDIATION 8125651881

WE INVITE an educated alliance for the remarriage of our 1974 born MS Son working as a Lead Accelator program with a Reputed Organization, Marital status no Bar. (080-69070609)

Nri/Green Card

VOKKALIGA SOFTWARE engineer, 30 years, working in USA parents Rtd government officials residing in mysuru well settled seeks beautiful girl software engineer working in USA height 5'6' email: rajeshwaricb3@gmail.com or Phone: 9448601833

For Advt. Booking Contact : 9845114560

MORE Classifieds IN SUPPLEMENT

ಉತ್ತರಾಖಂಡ-ದೇವಭೂಮಿಗೆ ಹೃತ್ಪೂರ್ವಕ ಸ್ವಾಗತ
ಚಾರ್ ಧಾಮ್ ತೀರ್ಥಯಾತ್ರೆ
ಯಮುನೋತ್ರಿ – ಗಂಗೋತ್ರಿ ಕೇದಾರನಾಥ – ಬದರಿನಾಥ
11 ರಾತ್ರಿ – 12 ದಿನಗಳು
ಸ್ಟಾಂಡರ್ಡ್ ಮತ್ತು ಡಿಲಕ್ಸ್ ಪ್ಯಾಕೇಜ್‌ಗಳು ಲಭ್ಯ
• ಹರಿದ್ವಾರ ಪುಷ್ಕರಳು ಸ್ನಾನಂ
• ಕಸ್ಟಮೈಸ್ಡ್ ಪ್ಯಾಕೇಜ್‌ಗಳು
• ಹರಿದ್ವಾರದಿಂದ ಎಲ್ಲಾ ಮಾದರಿಯ ವಾಹನಗಳು ಲಭ್ಯವಿರುತ್ತವೆ
• ಗರಿಷ್ಠ 35 ಜನರ ಗುಂಪು/ತಂಡ
• ನಿರ್ದಿಷ್ಟ ಹೊರಡುವ ದಿನಾಂಕ
ಹೊರಡುವ ದಿನಾಂಕಗಳು: 23ನೇ ಏಪ್ರಿಲ್, 4ನೇ, 15ನೇ ಮತ್ತು 26ನೇ ಮೇ
ನೇಪಾಳ ರಿಲೀಜಿಯಸ್ ಟೂರ್
ಮುಕ್ತಿನಾಥ ಮತ್ತು ಪಶುಪತಿನಾಥ
ನಿಗದಿತ ಹೊರಡುವ ದಿನಾಂಕ 29ನೇ ಮಾರ್ಚ್2023
7 ರಾತ್ರಿ / 8 ದಿನ ಪ್ರತಿ ಗುಂಪಿನಲ್ಲಿ ಗರಿಷ್ಠ 27 ಜನ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
NAMAMI GANGE Tour and Travels
ನಮಾಮಿ ಗಂಗೆ ಟೂರ್ & ಟ್ರಾವೆಲ್ಸ್
ಲಕ್ಷ್ಮಿ ನಂದಕುಮಾರ್: 9845825870
ಇ-ಮೇಲ್:namamigangetravels.in

SRI KRISHNA CORRESPONDENCE COLLEGE (R)
(Singhania University) UGC Approved
ADMISSION OPEN FOR 2023-24
D.Ed, B.Ed, M.Ed, B.P.Ed & M.P.Ed
UGC & PG Courses
B.A, B.Com, B.Sc, M.A, M.Com, M.Sc & MBA
English & Hindi Medium
3rd & 4th Cross, Lakshmannagar, Hegganahalli Cross, Bangalore-91
6366321465, 6366321357, 080-23489698

explore world cuisines in veg
Pure vegetarian delights from around the world, now in Basavangudi.

INSANE RESTO CAFE 100% VEG MENU
Embark on a fantastic culinary adventure, right here in Basavangudi. Insane Resto brings you pure vegetarian cuisines from around the world. Vibrant and spicy Mexican tortillas, and baked beans, your favourite Italian pasta and pizzas topped with virgin olive oils and fresh herbs, aromatic Thai soups and curries dressed in pungent lemongrass, Thai Chillies, galangal. And not to forget your all-time favourite wok tossed Chinese noodles, and chowmein with their heady aromas, & ofcourse the yummy American burgers & a host of dishes in exciting flavours.
Food is where the heart is!
ONLY TODAY 25%off
Bring this cutout or get a photo of this Ad
Call for reservations: 9845699010 8971601394
Lunch 12.30 PM to 3.30 PM
Dinner 7 PM to 10.30 PM
19, Mobas Towers, Bull Temple Road, Basavanagudi, Bengaluru - 560 004
*Offer Valid till 26th Feb 2023

ಶೋ ಆಫ್

JAYANAGAR
COMMERCIAL Street
MANTRI SQUARE Mall
GOPALAN ARCADE Mall
Ph: 080 41145340
UPTO 50% OFF
Bangalore: • Commercial Street • DVG • Gopalan Arcade • Gopalan Signature Mall •Jayanagar • Mantri Square Mall • Malleshwaram • Phoenix Market City • Royal Meenakshi Mall • Yelahanka New Town •Belagavi • Bellary • Bidar • Bijapur • Chikmagalur • Gulburga • Hassan • Hubli •Mangalore • Mysore • Tumkur • Ahmednagar (Maharasthra)

‘ಆರ್ಥಿಕತೆಗೆ ಭದ್ರ ಬುನಾದಿ ಹಾಕಿದ ಅಂಬೇಡ್ಕರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತದ ಆರ್ಥಿಕತೆ ಮತ್ತು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸ್ಥಿರತೆ ಇದ್ದರೆ ಅದಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತಿಯ ರಿಸರ್ವ್ ಬ್ಯಾಂಕ್ ಮೂಲಕ ಹಾಕಿದ ಭದ್ರ ಬುನಾದಿಯೇ ಕಾರಣ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿ.ಆರ್. ಅಂಬೇಡ್ಕರ್ ಅವರ ‘ದಿ ಪ್ರಾಬ್ಲಮ್ ಆಫ್ ದಿ ರುಪಿ’ ಪುಸ್ತಕ ಪ್ರಕಟಣೆಯಾದ 100ನೇ ವರ್ಷದ ಅಂಗವಾಗಿ ಅಂಬೇಡ್ಕರ್ ಎಕನಾಮಿಕ್ಸ್ ಫೌಂಡೇಷನ್ ಆಯೋಜಿಸಿದ್ದ ‘ಅರ್ಥಶಾಸ್ತ್ರಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಕೊಡುಗೆ’ ಕುರಿತ ಅಂತರರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ವಿಚಾರಸಂಕಿರಣದಲ್ಲಿ ಅರ್ಥಶಾಸ್ತ್ರಜ್ಞ ಪ್ರೊ.ಸುಖದೇವ್ ಥೋರಟ್ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಅಂಬೇಡ್ಕರ್ ಎಕನಾಮಿಕ್ಸ್ ಫೌಂಡೇಷನ್ ಮುಖ್ಯ ಸಂಚಾಲಕ ಎಚ್.ಎನ್. ದೇವಾನಂದ್, ವಿಧಾನ ಪರಿಷತ್ತಿನ ಸದಸ್ಯ ಛಲವಾದಿ ಟಿ.ನಾರಾಯಣಸ್ವಾಮಿ ಇದ್ದರು

‘ಕೆಲವು ರಾಷ್ಟ್ರಗಳ ಆರ್ಥಿಕ ಸ್ಥಿತಿ ಸಂಪೂರ್ಣ ನಾಶವಾಗಿದೆ. ಬಹಳಷ್ಟು ಬ್ಯಾಂಕುಗಳು ದಿವಾಳಿಯಾಗಿವೆ. ಅಕ್ಕ-ಪಕ್ಕದ ದೇಶಗಳಲ್ಲಿ ಬದುಕು ಮತ್ತು ಆಹಾರಕ್ಕಾಗಿ ಹಾಹಾಕಾರ ಇದೆ. ನಾಳಿನ ಬಗ್ಗೆ ಕನಸುಗಳೇ ಇಲ್ಲದಂತಾಗಿವೆ. ಈ ಸಂದರ್ಭದಲ್ಲಿ ಭಾರತದ ಆರ್ಥಿಕ ಸ್ಥಿತಿಯನ್ನು ನೋಡಿದರೆ ಸಮಾಧಾನ ಎನಿಸುತ್ತದೆ. ಇದಕ್ಕೆ ಅಂಬೇಡ್ಕರ್ ನೀಡಿದ ಕೊಡುಗೆಯೇ ಕಾರಣ’ ಎಂದು ಅಭಿಪ್ರಾಯ ಪಟ್ಟರು.

‘ಕೆಲ ದೇಶಗಳಲ್ಲಿ ಆರ್ಥಿಕತೆ ಸಂಪೂರ್ಣ ನಾಶವಾಗಿದೆ. ಬಹಳಷ್ಟು ಬ್ಯಾಂಕುಗಳು ದಿವಾಳಿಯಾಗಿವೆ. ಆ ಸ್ಥಿತಿ ನಮ್ಮ ದೇಶಕ್ಕೆ ಬಾರದಿರಲು ಅಂಬೇಡ್ಕರ್ ಕಾರಣ’ ಎಂದು ಅವರು ಬಣ್ಣಿಸಿದರು.

‘ಕೋವಿಡ್ ನಂತರದ ದೇಶದ ಆರ್ಥಿಕತೆ ಮತ್ತೆ ಸಮತೋಲನ ಕಾಯ್ದುಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಆಲೋಚನೆ ಇದಕ್ಕೆ ಕಾರಣ’ ಎಂದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ‘ಜಗತ್ತಿನಾದ್ಯಂತ ಗೌರವಕ್ಕೆ ಭಾಜನವಾಗುತ್ತಿರುವ ವ್ಯಕ್ತಿ ಎಂದರೆ ಅದು ಅಂಬೇಡ್ಕರ್. ಅವರು ಭಾರತದ ಆರ್ಥಿಕತೆಗೆ ನೀಡಿದ ಕೊಡುಗೆ ಅನನ್ಯ’ ಎಂದು ಹೇಳಿದರು.

ಪಾಕ್ ಕ್ರಿಕೆಟ್ ತಂಡ ಬೆಂಬಲಿಸಿದ ವ್ಯಕ್ತಿ ಕ್ಷಮೆಯಾಚನೆ

ಪಣಜಿ (ಪಿಟಿಐ): ಗೋವಾದ ಕಲಾಂಗೂಟ್ ಬೀಚ್‌ನಲ್ಲಿನ ಅಂಗಡಿ ಮಾಲೀಕನೊಬ್ಬ ಪಾಕಿಸ್ತಾನದ ಕ್ರಿಕೆಟ್ ತಂಡವನ್ನು ಬೆಂಬಲಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದು, ಬಳಿಕ ಆತನಿಂದ ಬಲವಂತವಾಗಿ ಕ್ಷಮೆಯಾಚಿಸಿ ‘ಭಾರತ್ ಮಾತಾ ಕಿ ಜೈ’ ಎನ್ನುವ ಘೋಷಣೆ ಕೂಗಿಸಿದ ಘಟನೆ ವರದಿಯಾಗಿದೆ ಎಂದು ಶನಿವಾರ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನ್ಯೂಜಿಲೆಂಡ್ ಮತ್ತು ಪಾಕಿಸ್ತಾನದ ನಡುವಣ ಕ್ರಿಕೆಟ್ ಪಂದ್ಯದ ವೇಳೆ ಟ್ರಾವಲ್ ವ್ಲೋಗರ್ ಒಬ್ಬರು ಅಂಗಡಿ ಮಾಲೀಕನಿಗೆ ನಿಮ್ಮ ಬೆಂಬಲ ಯಾರಿಗೆ ಎಂದು ಪ್ರಶ್ನಿಸಿದಾಗ, ಅಂಗಡಿಯಾತ ‘ಪಾಕಿಸ್ತಾನಕ್ಕೆ’ ಎಂದಿದ್ದ. ಈ ವಿಡಿಯೊ ಪ್ರಸಾರವಾದ ಬಳಿಕ ಗುಂಪೊಂದು ಅಂಗಡಿ ಮಾಲೀಕನಿಂದ ಭಾರತದ ಪರ ಘೋಷಣೆ ಕೂಗಿಸಿದೆ ಎನ್ನಲಾಗಿದೆ.

ಸಂಕ್ಷಿಪ್ತ ಸುದ್ದಿ

ಬೇಹುಗಾರಿಕೆ ಪ್ರಕರಣ: ಡಿಆರ್‌ಡಿಒ ಅಧಿಕಾರಿ ಬಂಧನ

ಬಾಲಾಸೋರ್, ಒಡಿಶಾ (ಪಿಟಿಐ): ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆಯೊಂದಿಗೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡಿರುವ ಆರೋಪದ ಮೇಲೆ ಇಲ್ಲಿನ ಡಿಆರ್‌ಡಿಒದ ಅಧಿಕಾರಿಯೊಬ್ಬರನ್ನು ಬಂಧಿಸಲಾಗಿದೆ.

57 ವರ್ಷದ ಬಾಬುರಾಮ್ ಡೇ ಬಂಧಿತರು. ತಾಂತ್ರಿಕ ಅಧಿಕಾರಿಯಾಗಿದ್ದ ಇವರನ್ನು ಬಾಲಾಸೋರ್‌ನ ಚಾಂಡೀಪುರದಲ್ಲಿರುವ ಡಿಆರ್‌ಡಿಒದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್‌ಗೆ (ಐಟಿಆರ್) ನಿಯೋಜಿಸಲಾಗಿತ್ತು. ಸ್ಥಳೀಯ ನ್ಯಾಯಾಲಯವು ಶನಿವಾರ ಇವರನ್ನು ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಯುಎಇ ವೈಮಾನಿಕ ಸಮರಾಭ್ಯಾಸ: ತೇಜಸ್ ಭಾಗಿ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಭಾರತೀಯ ವಾಯುಪಡೆಯ (ಐಎಎಫ್) ತೇಜಸ್ ಲಘು ಯುದ್ಧ ವಿಮಾನಗಳು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ನಡೆಯಲಿರುವ ವೈಮಾನಿಕ ಸಮರಾಭ್ಯಾಸದಲ್ಲಿ ಇದೇ ಮೊದಲ ಬಾರಿಗೆ ಪಾಲ್ಗೊಳ್ಳಲಿವೆ. ‘ಐಎಎಫ್, ಐದು ತೇಜಸ್ ಯುದ್ಧ ವಿಮಾನಗಳು ಹಾಗೂ ಎರಡು ಸಿ–17 ಗ್ಲೋಬ್‌ಮಾಸ್ಟರ್ 3 ವಿಮಾನಗಳೊಂದಿಗೆ ವೈಮಾನಿಕ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳುತ್ತಿದೆ’ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಮಲಹೊರುವ ಪದ್ಧತಿ ನಿಷೇಧ: ವರದಿ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ತಲೆ ಮೇಲೆ ಮಲಹೊರುವ ಪದ್ಧತಿ ನಿಷೇಧ (ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್) ಕಾಯ್ದೆ–2013ರ ಅನುಷ್ಠಾನ ಹಾಗೂ ಈ ಕಾರ್ಯದಲ್ಲಿ ತೊಡಗಿದ್ದ ಜನರ ಪುನರ್ವಸತಿಗೆ ಕೈಗೊಂಡಿರುವ ಕ್ರಮಗಳ ಸ್ಥಿತಿಗತಿ ಕುರಿತ ವರದಿಯನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇದೇ 22ರಂದು ಅರ್ಜಿಯೊಂದರ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಮತ್ತು ದೀಪಾಂಕರ್ ದತ್ತ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ‘ಒಣ ಮಲ ಶೌಚಾಲಯ ನಿರ್ಮೂಲನೆ, ಒಣ ಮಲ ಗುಂಡಿಗಳು ಹಾಗೂ ಕಂಟೋನ್ಮೆಂಟ್ ಬೋರ್ಡ್ ಹಾಗೂ ರೈಲ್ವೆಯಲ್ಲಿ ಕೆಲಸ ಮಾಡುವ ಸಫಾಯಿ ಕರ್ಮಚಾರಿಗಳ ಪುನರ್ವಸತಿಗೆ ಕೈಗೊಂಡಿರುವ ಕ್ರಮಗಳ ಕುರಿತ ರಾಜ್ಯವಾರು ಮಾಹಿತಿ ಒದಗಿಸಿ’ ಎಂದು ತಿಳಿಸಿದೆ.

ಕಾಂಗ್ರೆಸ್ ಮುಖಂಡ ಸಪ್ತಗಿರಿ ಶಂಕರ್‌ನಾಯಕ್ ಅವರಿಗೆ ಬಿಜೆಪಿ ಬಾವುಟ ನೀಡುವುದರ ಮೂಲಕ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನಾ ಹಾಗೂ ಸಚಿವರಾದ ಡಾ.ಕೆ. ಸುಧಾಕರ್ ಮತ್ತು ಮುನಿರತ್ನ ಪಕ್ಷಕ್ಕೆ ಬರಮಾಡಿಕೊಂಡರು

ಕಾಂಗ್ರೆಸ್ ಮುಖಂಡರು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕಾಂಗ್ರೆಸ್ ಮುಖಂಡ ಸಪ್ತಗಿರಿ ಶಂಕರ್ ನಾಯಕ್ ಅವರು ಕಾಂಗ್ರೆಸ್ ಪಕ್ಷ ತೊರೆದು ಹಲವು ಮುಖಂಡರು, ಕಾರ್ಯಕರ್ತರೊಂದಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದ್ದಾರೆ.

‘ಕಾಂಗ್ರೆಸ್‌ನಲ್ಲಿರುವ ಭಿನ್ನಮತ, ಗುಂಪುಗಾರಿಕೆ, ಸ್ಥಳೀಯರನ್ನು ಗುರುತಿಸದಿರುವುದು, ಪ್ರತಿ ಚುನಾವಣೆಗೂ ಹೊರಗಿನಿಂದ ಅಭ್ಯರ್ಥಿಗಳನ್ನು ತರುವುದು ಹೀಗೆ ಹಲವು ಕಾರಣಗಳಿಂದ ಬೇಸತ್ತು ಬಿಜೆಪಿ ಸೇರಿದ್ದೇನೆ’ ಎಂದು ಸಪ್ತಗಿರಿ ಶಂಕರ್‌ನಾಯಕ್ ತಿಳಿಸಿದ್ದಾರೆ.

ಇವರೊಂದಿಗೆ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಅರಿಶಿನಕುಂಟೆ ಆರ್.ಉಮೇಶ್, ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯದರ್ಶಿ ಆರ್. ಸತೀಶ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಕೊಡಿಗೆಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ಯಶೋಧ ರಮೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಮಾಯಣ್ಣ, ತ್ಯಾಮಗೊಂಡ್ಲು ಗ್ರಾ.ಪಂ. ಸದಸ್ಯ ನವೀನ್, ಸೋಲದೇವನಹಳ್ಳಿ ಗ್ರಾ.ಪಂ. ಸದ ಸ್ಯರಾದ ಮೂರ್ತಿ ನಾಯಕ್, ಸಂತೋಷ್, ಬಾಣಸವಾಡಿ ಗ್ರಾ.ಪಂ.ಸದಸ್ಯ ಮೋಹನ್ ಕುಮಾರ್, ಮುಖಂಡ ರಾದ ಶಿವಕುಮಾರ್ ಸೋಂಪುರ, ಕೊಡಿಗೆಹಳ್ಳಿ ದಾಸೇಗೌಡ, ಜಯಣ್ಣ, ಡಾ.ಶಂಕರ್‌ರಾವ್ ಹಾಗೂ ಜೆಡಿಎಸ್ ನಾಯಕರಾದ ನಾಗೇಂದ್ರ, ಶ್ರೀನಿವಾಸ್ ಬಿಜೆಪಿ ಸೇರಿದರು.

₹33 ಲಕ್ಷ ದುರ್ಬಳಕೆ ಆರೋಪ: ಕೃಷಿ ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ರಾಘವೇಂದ್ರ ಕೊಂಡಗುರಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಕೃಷಿ ಇಲಾಖೆಯ ಬೀಜ ಮಾರಾಟದಿಂದ ಬಂದ ₹33 ಲಕ್ಷ ಹಣ ದುರ್ಬಳಕೆ ಮಾಡಿಕೊಂಡು, ವಿಳಂಬವಾಗಿ ಜಮೆ ಮಾಡಿದ ಆರೋಪದ ಮೇಲೆ ಕುಷ್ಟಗಿಯ ಕೃಷಿ ಅಧಿಕಾರಿ ರಾಘವೇಂದ್ರ ಕೊಂಡಗುರಿ ಎಂಬುವರನ್ನು ಸರ್ಕಾರ ಅಮಾನತು ಮಾಡಿದೆ.

‘2022-23ನೇ ವರ್ಷದ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬಿತ್ತನೆ ಬೀಜ ಮಾರಾಟದ ಹಣವನ್ನು ಕೃಷಿ ಇಲಾಖೆಗೆ ರಾಘವೇಂದ್ರ ಆಯಾ ದಿನವೇ ಜಮೆ ಮಾಡಬೇಕಿತ್ತು. ಆದರೆ, ಐದಾರು ತಿಂಗಳ ನಂತರ ಜಮೆ ಮಾಡಿದ್ದಾರೆ. ಹಣ ದುರ್ಬಳಕೆ ಜೊತೆಗೆ ಜಮೆ ಮಾಡಲು ವಿಳಂಬ ತೋರಿದ ಕಾರಣ ಅಮಾನತು ಮಾಡಲಾಗಿದೆ’ ಎಂದು ಕೃಷಿ ಇಲಾಖೆಯ ಆಯುಕ್ತ ಬಿ.ಶರತ್ ಆದೇಶದಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಡಿಸೆಂಬರ್ 1ರಿಂದ ರಾಘವೇಂದ್ರ ಕರ್ತವ್ಯಕ್ಕೆ ಗೈರು ಆಗಿದ್ದ ಕಾರಣ ಕುಟುಂಬದವರು ನೀಡಿದ ದೂರನ್ನು ಆಧರಿಸಿ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಕೆಲ ದಿನಗಳ ಬಳಿಕ, ಬೆಂಗಳೂರಿನಲ್ಲಿ ಪತ್ತೆಯಾಗಿದ್ದ ಅವರು, ಪುನಃ ಕರ್ತವ್ಯಕ್ಕೆ ಹಾಜರಾಗಿದ್ದರು.

ಹೋರಾಟದ ಬಗ್ಗೆ ಬೆಂಗಳೂರಿನಲ್ಲಿ ನಿರ್ಣಯ

ಟೋಲ್ ದರ ದುಪ್ಪಟ್ಟು: ಇಂದು ಲಾರಿ ಮಾಲೀಕರ ಸಭೆ

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ರಾಜ್ಯದ ಹೆದ್ದಾರಿಗಳ ಎಲ್ಲಾ ಟೋಲ್‌ಗಳಲ್ಲಿ ಫೆಬ್ರುವರಿ 15ರಿಂದ ದರ ದುಪ್ಪಟ್ಟು ಮಾಡಿರುವುದರಿಂದ ಲಾರಿ ಮಾಲೀಕರು ಕಂಗಾಲಾಗಿದ್ದಾರೆ. ಹೀಗಾಗಿ ಟೋಲ್ ದರ ಏರಿಕೆ ವಿರುದ್ಧ ಹೋರಾಟ ಕೈಗೊಳ್ಳಲು ಲಾರಿ ಮಾಲೀಕರು ಫೆ.26ರಂದು ಬೆಂಗಳೂರಿನಲ್ಲಿ ಸಭೆ ಹಮ್ಮಿಕೊಂಡಿದ್ದಾರೆ.

‘ಈ ಹಿಂದೆ ನಮ್ಮ ಲಾರಿ ಬೆಂಗಳೂರಿನಿಂದ ಮುಂಬೈಗೆ ಹೋಗಿ ಮತ್ತೆ ಬೆಂಗಳೂರಿಗೆ ಬರಬೇಕಿದ್ದರೆ ₹12 ಸಾವಿರ ಟೋಲ್ ಕಟ್ಟಬೇಕಿತ್ತು. ಈಗ ₹ 24 ಸಾವಿರ ಕಟ್ಟಬೇಕಾಗಿದೆ. ಇದು ಬೆಂಗಳೂರಿನಿಂದ ಮುಂಬೈಗೆ ಹೋಗಿ ಬರಲು ಲಾರಿಗೆ ಬೇಕಾದ ಡೀಸೆಲ್ ವೆಚ್ಚದಷ್ಟೇ ಆಗುತ್ತಿದೆ. ಕಷ್ಟಪಟ್ಟು ದುಡಿದು ತಿನ್ನುವವರ ಹೊಟ್ಟೆಗೆ ಹೊಡೆಯುವ ನಿರ್ಧಾರವಿದು’ ಎಂದು ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ‘ಪ್ರಜಾವಾಣಿ’ ಬಳಿ ನೋವು ಹಂಚಿಕೊಂಡಿದ್ದಾರೆ.

‘ದೆಹಲಿಗೆ ಹೋಗಿ ಬರಲು ಈ ಮೊದಲು ₹ 23,000 ಕಟ್ಟುತ್ತಿದ್ದ ಟೋಲ್ ದರ ಈಗ ₹ 46,000 ಆಗಿದೆ. ಬೆಂಗಳೂರಿನಿಂದ ಚೆನ್ನೈಗೆ ₹ 2,250 ಇದ್ದಿದ್ದು, ₹ 4,500 ಆಗಿದೆ. ಹೈದರಾಬಾದ್‌ಗೆ ₹ 5,000 ಬದಲು ₹ 10,000 ಕಟ್ಟಬೇಕಾಗಿದೆ’ ಎಂದರು.



ಅವಧಿ ಮುಗಿದ ಟೋಲ್‌ಗಳ ದರ ಕಡಿಮೆ ಮಾಡುವುದನ್ನು ಬಿಟ್ಟು ಎಲ್ಲದರ ದರ ದುಪ್ಪಟ್ಟು ಮಾಡಿರುವುದು ಅಕ್ಷಮ್ಯ.

ಜಿ.ಆರ್. ಷಣ್ಮುಖಪ್ಪ, ಅಧ್ಯಕ್ಷ, ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟ

ಕಾರು, ಜೀಪು ಮುಂತಾದ ಲಘು ವಾಹನಗಳ ದರ ಟೋಲ್‌ನಿಂದ ಟೋಲ್‌ಗೆ ಸ್ವಲ್ಪ ವ್ಯತ್ಯಾಸ ಇರುತ್ತದೆ. ಭಾರೀ ವಾಹನಗಳ ದರ ಬಹುತೇಕ ಕಡೆಗಳಲ್ಲಿ ಒಂದೇ ಇದೆ.

‘ರಾಷ್ಟ್ರೀಯ ಹೆದ್ದಾರಿ ಚತುಷ್ಪಥ, ಷಟ್ಪಥ, ಅಷ್ಟಪಥಗಳ ಕಾಮಗಾರಿ ಮುಗಿಯದೇ ಟೋಲ್ ದರ ವಸೂಲಿ ಮಾಡಬಾರದು ಎಂದು ಹಿಂದೆ ಒತ್ತಡ ಬಂದಿತ್ತು. ಆಗ ನಿಗದಿತ ಶುಲ್ಕದಲ್ಲಿ ಶೇ 25ರಷ್ಟು ಕಡಿಮೆ ಮಾಡಲಾಗಿತ್ತು. ಈಗ ಆ ಶೇ 25ರಷ್ಟು ಹೆಚ್ಚು ಮಾಡುವ ಬದಲು ದುಪ್ಪಟ್ಟು ಮಾಡಲಾಗಿದೆ’ ಎಂದು ಟೋಲ್ ಸಿಬ್ಬಂದಿ ಚಂದ್ರಶೇಖರ್ ಕಲಪನಹಳ್ಳಿ ಮಾಹಿತಿ ನೀಡಿದ್ದಾರೆ.

ದಾವಣಗೆರೆ ಜಿಲ್ಲೆಯ ಹೆಬ್ಬಾಳ್ ಟೋಲ್ ದರ

ವಾಹನ	ಹಿಂದಿನ ದರ	ಈಗಿನ ದರ
ಕಾರು, ಜೀಪು ಲಘು ವಾಹನ	₹60	₹120
ಲಘು ವಾಣಿಜ್ಯ ವಾಹನ	₹95	₹195
ಬಸ್, ಲಾರಿಗಳು	₹195	₹410
ಭಾರಿ ನಿರ್ಮಾಣ ವಾಹನಗಳು	₹630	₹780

ಅವಧಿ ಮುಗಿದಿರುವ 16 ಟೋಲ್: ರಾಜ್ಯದಲ್ಲಿ 42 ಟೋಲ್‌ಗಳಿವೆ. ಅದರಲ್ಲಿ ಹುಬ್ಬಳ್ಳಿ-ಗಬ್ಬೂರು ಟೋಲ್ ಸಹಿತ 16 ಟೋಲ್‌ಗಳ ಅವಧಿ ಮುಗಿದಿದೆ. ಆದರೂ ಅವು ಪೂರ್ಣಪ್ರಮಾಣದಲ್ಲಿ ಟೋಲ್ ಸಂಗ್ರಹಿಸುತ್ತಿವೆ. ಚಿತ್ರದುರ್ಗ-ಹೊಸಪೇಟೆ ನಡುವಿನ ಹೆದ್ದಾರಿಯಲ್ಲಿ 30 ಕಿಲೋ ಮೀಟರ್ ವ್ಯಾಪ್ತಿಯಲ್ಲಿ 3 ಟೋಲ್‌ಗಳಿವೆ. 60 ಕಿ.ಮೀ.ಗೆ ಒಂದು ಟೋಲ್ ಇರಬೇಕು. ಇಂಥ ಹೆಚ್ಚುವರಿ ಟೋಲ್‌ಗಳು ಕೂಡ ರದ್ದಾಗಿಲ್ಲ.

10 ವರ್ಷ ಮತ್ತು 15 ವರ್ಷಗಳ ಅವಧಿವರೆಗೆ ಟೋಲ್ ಸಂಗ್ರಹಿಸುವ ಒಪ್ಪಂದದಲ್ಲಿ ಇವು ಕಾರ್ಯಾಚರಣೆ ಮಾಡುತ್ತಿವೆ. ಒಪ್ಪಂದದ ಅವಧಿ ಮುಗಿದ ಬಳಿಕ ನಿರ್ವಹಣೆಗಾಗಿ ಮಾತ್ರ ಶೇ 40ರಷ್ಟು ಟೋಲ್ ವಸೂಲಿ ಮಾಡಬೇಕು. ಲಾರಿಯೊಂದಕ್ಕೆ ₹95 ಇದ್ದರೆ ಅವಧಿ ಮುಗಿದ ಟೋಲ್‌ನಲ್ಲಿ ₹34 ತೆಗೆದುಕೊಳ್ಳಬೇಕು. ಆದರೆ, ಕಡಿಮೆ ಮಾಡುವ ಬದಲು ₹ 195 ತೆಗೆದುಕೊಳ್ಳಲಾಗುತ್ತಿದೆ ಎಂದು ಲಾರಿ ಮಾಲೀಕರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

‘ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಈ ತೀರ್ಮಾನವು ಜನ ವಿರೋಧಿ, ಕಾರ್ಮಿಕ ವಿರೋಧಿಯಾಗಿದ್ದು, ಈ ಆದೇಶವನ್ನು ಹಿಂಪಡೆಯಬೇಕು. ಇದರ ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕು ಎಂಬುದನ್ನು ತೀರ್ಮಾನಿಸಲು ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟದ ಸಭೆ ಕರೆಯಲಾಗಿದೆ’ ಎಂದು ಷಣ್ಮುಖಪ್ಪ ತಿಳಿಸಿದ್ದಾರೆ.

ರಥೋತ್ಸವ ಯಾದಗಿರಿ ತಾಲ್ಲೂಕಿನ ಅಬ್ಬೆತುಮಕೂರಿನಲ್ಲಿ ಶನಿವಾರ ವಿಶ್ವಾರಾಧ್ಯ ಸಿದ್ಧ ಸಂಸ್ಥಾನ ಮಠದ ರಥೋತ್ಸವ ನೆರವೇರಿತು ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ

ಎರಡು ವರ್ಷಗಳ ಶಿಕ್ಷೆ ಮೂರು ದಿನಕ್ಕೆ ಇಳಿಕೆ

ವೃದ್ಧ ಅಪರಾಧಿಗೆ ಹೈಕೋರ್ಟ್ ಕರುಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರ ಮೇಲೆ 2008ರಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಆರೋಪದಡಿ ಎರಡು ವರ್ಷಗಳ ಜೈಲು ಶಿಕ್ಷೆಗೆ ಒಳಗಾಗಿದ್ದ 81 ವರ್ಷದ ವೃದ್ಧ ಅಪರಾಧಿಯೊಬ್ಬರ ಮೇಲೆ ಕರುಣೆ ತೋರಿರುವ ಹೈಕೋರ್ಟ್ ಶಿಕ್ಷೆಯನ್ನು ಮಾರ್ಪಾಡು ಮಾಡಿ ಮೂರು ದಿನಗಳಿಗೆ ಇಳಿಸಿದ್ದು, ಒಂದು ವರ್ಷ ಸ್ಥಳೀಯ ಅಂಗನವಾಡಿಯಲ್ಲಿ ಸಂಬಳರಹಿತ ಸೇವೆ ಸಲ್ಲಿಸುವಂತೆ ಆದೇಶಿಸಿದೆ.

ವಿಚಾರಣಾ ನ್ಯಾಯಾಲಯ ನೀಡಿದ್ದ ಶಿಕ್ಷೆಯನ್ನು ಪ್ರಶ್ನಿಸಿ ಬಂಟ್ವಾಳದ ಕರೋಪಾಡಿಯ ಐತಪ್ಪ ನಾಯ್ಕ ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ದಿನೇಶ್ ಕುಮಾರ್ ಕೆ.ರಾವ್ ಅವರು, ‘ಈ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ವಿಚಾರಣಾ ನ್ಯಾಯಾಲಯದ ಆದೇಶದಂತೆ ಈಗಾಗಲೇ ಮೂರು ದಿನಗಳ ಸಾದಾ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಅವರಿಗೆ 81 ವರ್ಷವಾಗಿದೆ. ಮಕ್ಕಳೂ ಇಲ್ಲ. ವಯಸ್ಸಾಗಿರುವ ಪತ್ನಿಯ ಆರೈಕೆಯನ್ನೂ ಅವರು ಮಾಡಬೇಕಿದೆ. ಹೀಗಾಗಿ, ಮನವಿ ಪರಿಗಣಿಸಿ ಶಿಕ್ಷೆ ಮಾರ್ಪಾಡು ಮಾಡಬೇಕು’ ಎಂದು ಕೋರಿದ್ದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಜೆಎಂಎಫ್ ಸಿ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಲಯವು 2012ರ ಜುಲೈ 7ರಂದು ನೀಡಿದ್ದ ಶಿಕ್ಷೆಯನ್ನು ಮಾರ್ಪಾಡು ಮಾಡಿದೆ.

ಅರ್ಜಿದಾರರು ಈಗಾಗಲೇ ಮೂರು ದಿನಗಳ ಜೈಲು ಶಿಕ್ಷೆ ಅನುಭವಿಸಿರುವ ಕಾರಣ 2024ರ ಫೆಬ್ರುವರಿ 20ರವರೆಗೆ ಮಿತನಡ್ಕ ಅಂಗನವಾಡಿಯಲ್ಲಿ ಸಮುದಾಯ ಸೇವೆ ಸಲ್ಲಿಸಬೇಕಿದೆ.

‘ಬಸವ ಧರ್ಮ ಪೀಠ ಟ್ರಸ್ಟ್‌ನಲ್ಲಿ ಮುಂದುವರಿಯಲು ಆದೇಶ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೂಡಲಸಂಗಮದ ಬಸವ ಧರ್ಮ ಪೀಠ ಟ್ರಸ್ಟ್‌ನಲ್ಲಿ ನಾನು ಮುಂದುವರಿಯಬಹುದು ಎಂದು ಹೈಕೋರ್ಟ್ ಈಚೆಗೆ ಮಧ್ಯಂತರ ಆದೇಶ ನೀಡಿದೆ’ ಎಂದು ಚನ್ನಬಸವಾನಂದ ಸ್ವಾಮೀಜಿ ತಿಳಿಸಿದ್ದಾರೆ.

‘ಈ ಆದೇಶದಿಂದ ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ಅಧ್ಯಕ್ಷ ಹಾಗೂ ಲಿಂಗಾಯತ ಧರ್ಮ ಮಹಾಸಭಾದ ರಾಷ್ಟ್ರೀಯ ಘಟಕದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಲಿದ್ದೇನೆ’ ಎಂದು ಬೆಂಗಳೂರಿನ ಚನ್ನಬಸವೇಶ್ವರ ಜ್ಞಾನಪೀಠದ ಅಧ್ಯಕ್ಷರೂ ಆಗಿರುವ ಅವರು ಮಾಹಿತಿ ನೀಡಿದ್ದಾರೆ.

‘ಟ್ರಸ್ಟ್‌ನಿಂದ ನನ್ನನ್ನು ಉಚ್ಚಾಟಿಸಿದ್ದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಮತ್ತು ಇತರೆ ಟ್ರಸ್ಟಿಗಳು ಕೈಗೊಂಡಿದ್ದ ನಿರ್ಣಯಗಳನ್ನು ಹೈಕೋರ್ಟ್ ಅನೂರ್ಜಿತಗೊಳಿಸಿದೆ. ಧರ್ಮಪ್ರಚಾರ ಮತ್ತು ಟ್ರಸ್ಟ್ ಆಡಳಿತದಲ್ಲಿ ಭಾಗವಹಿಸಬಹುದೆಂದು ಜನವರಿ 16 ರಂದು ಹೈಕೋರ್ಟ್ ನ್ಯಾಯಮೂರ್ತಿ ರವಿ ವಿ. ಹೊಸಮನಿ ಆದೇಶಿಸಿದ್ದಾರೆ’ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

‘ಕೈವಾರ ತಾತಯ್ಯ ಜಯಂತಿ ಬಹಿಷ್ಕಾರ ಸಲ್ಲದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿ ಒತ್ತಾಯಿಸುತ್ತಿರುವ ಕೆಲವರು ರಾಜ್ಯ ಸರ್ಕಾರ ಆಚರಿಸುವ ಕೈವಾರ ತಾತಯ್ಯ ಜಯಂತಿಯನ್ನು ಬಹಿಷ್ಕರಿಸುವುದಾಗಿ ಹೇಳಿಕೆ ನೀಡಿರುವುದನ್ನು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಖಂಡಿಸಿದೆ.

ಕೈವಾರ ತಾತಯ್ಯನವರಿಗೂ ಮೀಸಲಾತಿಗೂ ಯಾವುದೇ ಸಂಬಂಧ ಇಲ್ಲ ಎಂದು ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂ. ತೊರವಿಗೆ ಪುಟ್ಟರಾಜ ಸಮ್ಮಾನ

ಪ್ರಜಾವಾಣಿ ವಾರ್ತೆ

ಪಂ. ವಿನಾಯಕ ತೊರವಿ

ಧಾರವಾಡ: ಗ್ವಾಲಿಯರ್ ಮತ್ತು ಕಿರಾಣಾ ಘರಾಣೆಯ ಹಿಂದೂಸ್ತಾನಿ ಗಾಯಕ ಪಂ.ವಿನಾಯಕ ತೊರವಿ ಅವರು 2023ನೇ ಸಾಲಿನ ಪುಟ್ಟರಾಜ ಸಮ್ಮಾನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುತ್ತಿರುವ ಈ ಪ್ರಶಸ್ತಿಯು ₹1ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಮಾರ್ಚ್ 3ರಂದು ಸಂಜೆ 5.30ಕ್ಕೆ ಇಲ್ಲಿನ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ನಡೆಯಲಿರುವ ಡಾ. ಪುಟ್ಟರಾಜ ಗವಾಯಿ ಅವರ 109ನೇ ಜನ್ಮದಿನ ಕಾರ್ಯಕ್ರಮದಲ್ಲಿ ಸಂಗೀತೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಜಮಖಂಡಿಯ ಮಾರುತಿ ನಾವಲಗಿ ಅವರ ಶಹನಾಯಿ ವಾದನ, ಪಂ. ವಿನಾಯಕ ತೊರವಿ ಅವರ ಗಾಯನ ಅಂದು ನಡೆಯಲಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಪಂ. ಎಂ.ವೆಂಕಟೇಶ ಕುಮಾರ ತಿಳಿಸಿದ್ದಾರೆ.

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಚಿಕ್ಕೋಡಿ
Tel. No. 08338-272131 E-mail: preckdee@gmail.com

ಕ್ರ.ಸಂ. ಪಂರಾಇಂ/ಚಿವಿ/ಡಿಬಿ/ಇ-ಪ್ರೋ/2022-23/7408 ದಿನಾಂಕ: 23-02-2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆ/ಏಜನ್ಸಿದಾರರು ಅರ್ಹ ಗುತ್ತಿಗೆದಾರರಿಂದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ವಿಭಾಗದಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-1 ರ ನಿಬಂಧನೆಗೊಳಪಟ್ಟಂತೆ ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಟರ್ನ್‌ಕೀ ಆಧಾರದ ಮೇಲೆ ಆಹ್ವಾನಿಸಲಾಗಿದೆ.

1) ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆ ದಿನಾಂಕ: 03-03-2023 ಸಂಜೆ 4:00 ಗಂಟೆ. 2) ಭರ್ತಿ ಮಾಡಿದ ಟೆಂಡರ್ ಗುತ್ತಿಗೆಯನ್ನು ಇ-ಮೋಡ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 03-03-2023 ಸಾಯಂಕಾಲ 4:00 ಗಂಟೆ. 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಾಧ್ಯವಾದರೆ 06-03-2023 ಬೆಳಿಗ್ಗೆ 11:00 ಗಂಟೆ. 4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಾಧ್ಯವಾದರೆ 07-03-2023 ಬೆಳಿಗ್ಗೆ 11:00 ಗಂಟೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಪಾವತಿ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಹಣ (ರೂ.ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ (ಮಳೆಗಾಲ ಹೊರತುಪಡಿಸಿ)	3ನೇ ತಂಡದ ತಪಾಸಣೆಯ ದರ್ಜೆ
1	ಪಂಚಾಯತ ರಾಜ್ ಇಂ. ವಿಭಾಗ, ಚಿಕ್ಕೋಡಿ ವ್ಯಾಪ್ತಿಯಡಿಯಲ್ಲಿ ಬರುವ ಐದು ತಾಲೂಕುಗಳಾದ ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಮತ್ತು ರಾಯಭಾಗ ಈ ತಾಲೂಕುಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ (ಹೊಸ ಮತ್ತು ಮುಂದುವರೆದ ಕಾಮಗಾರಿಗಳು) 3ನೇ ವ್ಯಕ್ತಿಯಿಂದ ತಪಾಸಣೆ ಮಾಡಿ ತಾಂತ್ರಿಕ ಮತ್ತು ಬೌತಿಕ ವರದಿಗಳನ್ನು ನೀಡುವ ಕಾಮಗಾರಿ.	190.00	190000/-	1 ವರ್ಷ	ಸರ್ಕಾರದಿಂದ ಮಾನ್ಯತೆಪಡದ ಎನ್.ವಿ.ಬಿ.ಎಲ್. ಸಂಸ್ಥೆ

ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/- ಕಾರ್ಯಕಾರಿ ಅಭಿಯಂತರರು,
ಪಂ. ರಾಜ್ ಇಂ. ವಿಭಾಗ, ಚಿಕ್ಕೋಡಿ

DIPO/RO No. 1883/2022-23

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ.

ಸಂಖ್ಯೆ : ಗ್ರಾಕು.ನೀ. ಮತ್ತು ನೈ.ವಿ./ಬಾಗಲಕೋಟೆ/ಪಿಬಿ-4/ಟೆಂಡರ್/2022-23/2945 ದಿನಾಂಕ : 23-02-2023

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ **ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ** ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

Jamakhandi Taluka 1) Indent No - 57705 **(Hipparagi)** APT - 286.26 Lakhs, **2)** Indent No - 57702 **(Kavatagi RC)** APT - 81.10 Lakhs, **3)** Indent No - 57700 **(Bidari RC-1, Bidari RC-2, Bidari RC-3)** APT - 102.83 Lakhs, **4)** Indent No - 57698 **(Alagur RC)** APT - 121.53 Lakhs, **5)** Indent No - 57691 **(Asangi)** APT - 201.42 Lakhs, **6)** Indent No - 57695 **(Kullahalli)** APT - 209.53 Lakhs, **7)** Indent No - 57693 **(Kallalli)** APT - 153.01 Lakhs.

1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ. 2) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 03-03-2023 ಸಾಯಂಕಾಲ 4.30 ಗಂಟೆಯ ವರೆಗೆ. 3) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ. ವಿಳಾಸ www.eproc.karnataka.gov.in.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾ.ಕು.ನೀ.&ನೈ. ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/926/ಮಣಿಪಾಲ್/2022-23

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ

ನಂ. ಪಂ.ರಾ.ಇಂ/ವಿಬೆ/ಪಿಬಿ-1/ಟೆಂಡರ್-47/2022-23/ ದಿನಾಂಕ: 20-02-2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ-47/2022-23

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ಎನ್.ಎ.ಬಿ.ಎಲ್ ನೊಂದಾಯಿತ ಅರ್ಹ ಸಂಸ್ಥೆಯವರಿಂದ ಬೆಳಗಾವಿ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document ರ ನಿಬಂಧನೆಗೊಳಪಟ್ಟಂತೆ ದ್ವಿ-ಲಕೋಟೆ ಪದ್ಧತಿಯನ್ವಯಲ್ಲಿ ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಟರ್ನ್‌ಕೀ ಆಧಾರದ ಮೇಲೆ ಆಹ್ವಾನಿಸಲಾಗಿದೆ.

1) ಆಕ್ಷೇಪಣೆಗಳನ್ನು ಸ್ವೀಕರಿಸಿಕೊಳ್ಳುವ ಕೊನೆಯ ದಿನಾಂಕ: 26-02-2023, 17:28 ಘಂಟೆ. 2) ಭರ್ತಿ ಮಾಡಿದ ಟೆಂಡರ್ ಗುತ್ತಿಗೆಯನ್ನು ಇ-ಮೋಡ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 27-02-2023ರ 17:30 ಗಂಟೆಯವರೆಗೆ. 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: ಸಾಧ್ಯವಾದರೆ 02-03-2023 – 11:00 ಗಂಟೆ ನಂತರ 4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಾಧ್ಯವಾದರೆ 04-03-2023 – 11:00 ಗಂಟೆ ನಂತರ

ಕ್ರ ಸಂ	ಕಾಮಗಾರಿ ವಿವರ	ಯೋಜನೆ ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಇ.ಎಂ.ಡಿ ಹಣ (ರೂ.ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ	3ನೇ ತಂಡದ ತಪಾಸಣೆಯ ದರ್ಜೆ
1	ಪಂ.ರಾ.ಇಂ. ವಿಭಾಗ, ಬೆಳಗಾವಿ ವ್ಯಾಪ್ತಿಯಡಿಯಲ್ಲಿ ಬರುವ ಆರು ತಾಲೂಕುಗಳಾದ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಕಿತ್ತೂರು, ಸವದತ್ತಿ ಹಾಗೂ ರಾಮದುರ್ಗ ಈ ತಾಲೂಕುಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ (ಹೊಸ ಮತ್ತು ಮುಂದುವರೆದ ಕಾಮಗಾರಿಗಳು) 3ನೇ ವ್ಯಕ್ತಿಯಿಂದ ತಪಾಸಣೆ ಮಾಡಿ ತಾಂತ್ರಿಕ ಮತ್ತು ಭೌತಿಕ ವರದಿಗಳನ್ನು ನೀಡುವ ಕಾಮಗಾರಿ.	163.00	1,63,000.00	2023-24ನೇ ಆರ್ಥಿಕ ವರ್ಷ	ಸರ್ಕಾರದಿಂದ ಮಾನ್ಯತೆಪಡದ ಎನ್.ವಿ.ಬಿ.ಎಲ್. ಸಂಸ್ಥೆ

ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ

DIPO/RO No. 1847/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರರ ಕಚೇರಿ, ಘನತ್ಯಾಜ್ಯ ನಿರ್ವಹಣೆ, 4ನೇ ಮಹಡಿ,
ಅನೆಕ್ಸ್-3 ಕಟ್ಟಡ, ಬಿಬಿಎಂಪಿ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು-560002

ಪ್ರಕಟಣೆ

ಬೀದಿ ಕಸಗುಡಿಸಲು ಮತ್ತು ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸಲು ಆಧುನಿಕ ಸಲಕರಣೆಗಳ ಪ್ರದರ್ಶನಕ್ಕೆ (Demo) ಆಹ್ವಾನ

ಸ್ಥಳ: ಡಾ.ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು.
ದಿನಾಂಕ: 02.03.2023 (ಗುರುವಾರ) ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 4:00 ಗಂಟೆವರೆಗೆ

ಬಿಬಿಎಂಪಿಯು ಪ್ರತಿದಿನ ಸುಮಾರು 13,000 ಕಿಲೋಮೀಟರ್ ರಸ್ತೆಗಳ ಸ್ವಚ್ಛತೆಯನ್ನು ಕಾಪಾಡುತ್ತಿದೆ. ಬೀದಿ ಗುಡಿಸುವ ಕಾರ್ಯವನ್ನು ಮುಖ್ಯವಾಗಿ ಪೌರ ಸೇವಕರು / ಪೌರಕಾರ್ಮಿಕರು ಮಾಡುತ್ತಾರೆ. ನವೀನ ಆಲೋಚನೆಗಳು ಮತ್ತು ತಂತ್ರಜ್ಞಾನಗಳನ್ನು ಒಳಗೊಂಡಿರುವ ಕಾರ್ಯಾಚರಣೆ ಮತ್ತು ನಿರ್ವಹಣೆಯ ಸುಲಭತೆಯೊಂದಿಗೆ ಉತ್ತಮ ಸಾಧನಗಳನ್ನು ಒದಗಿಸುವ ಮೂಲಕ ಬೀದಿ ಗುಡಿಸುವ ಪೌರಕಾರ್ಮಿಕರ ಶ್ರಮವನ್ನು ಕಡಿಮೆ ಮಾಡಲು ಮತ್ತು ದಕ್ಷತೆಯನ್ನು ಹೆಚ್ಚಿಸಲು ಬಿಬಿಎಂಪಿ ಉದ್ದೇಶಿಸಿದೆ.

ವಿನೂತನವಾದ ಬೀದಿ ಕಸಗುಡಿಸುವ ಯಂತ್ರಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸುವ ಇಂತಹ ಉಪಕರಣಗಳನ್ನು ಬಿಬಿಎಂಪಿಯು ಖರೀದಿಸಲು ಉದ್ದೇಶಿಸಿದೆ. ಇದನ್ನು ನಮ್ಮ ಪೌರಕಾರ್ಮಿಕರು ಸುಲಲಿತವಾಗಿ ದಕ್ಷತೆಯಿಂದ ಬಳಸಲು ಹಾಗೂ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸುವಂತೆ ವಿನ್ಯಾಸಗೊಳಿಸಿರಬೇಕು.

ಕಾರ್ಮಿಕರ ಅಗತ್ಯವನ್ನು ಕಡಿಮೆಮಾಡಲು ಪ್ರಸ್ತಾವಿತ ಉಪಕರಣವು ಬೀದಿ ಮತ್ತು ಪಾದಚಾರಿ ಮಾರ್ಗಗಳನ್ನು ವೆಚ್ಚದ ಹೊರೆಯಾಗದಂತೆ ಮತ್ತು ಪರಿಣಾಮಕಾರಿ ರೀತಿಯಲ್ಲಿ ಸ್ವಚ್ಛಗೊಳಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಉಪಕರಣಗಳು ಸ್ವಾಯತ್ತವಾಗಿ ಅಥವಾ ಕನಿಷ್ಠ ಮಾನವ ಹಸ್ತಕ್ಷೇಪದೊಂದಿಗೆ ಕಾರ್ಯನಿರ್ವಹಿಸಲು ಮತ್ತು ಅತ್ಯುತ್ತಮ ಕಾರ್ಯಕ್ಷಮತೆಯನ್ನು ಖಚಿತಪಡಿಸಿಕೊಳ್ಳಲು ಸಂವೇದಕಗಳು ಮತ್ತು ಇತರ ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿದ್ದಾಗಿರಬೇಕು. ಪ್ರದರ್ಶನದಲ್ಲಿ ಬೀದಿ ಗುಡಿಸುವ ತ್ಯಾಜ್ಯ ನಿರ್ವಹಣೆ / ಒಯ್ಯುವ ಉಪಕರಣಗಳು/ ಬಂಡಿಗಳು/ ಕನಿಷ್ಠ 2 ವಿಭಾಗಗಳ ತಳ್ಳುವ ಗಾಡಿಗಳು, ಅಚ್ಚುಕಟ್ಟಾದ ಸುಲಲಿತವಾಗಿ ದಕ್ಷತೆಯಿಂದ ಕಸ, ಹುಲ್ಲು ಮತ್ತು ಕಳೆ ಕತ್ತರಿಸುವ ಯಂತ್ರಗಳನ್ನು ಸಹ ಒಳಗೊಂಡಿರಬಹುದು.

ಹೆಚ್ಚುವರಿಯಾಗಿ, ಉಪಕರಣಗಳು ಕಡಿಮೆ ಹೊಗೆಸೂಸುವಿಕೆ ಮತ್ತು ಶಬ್ದ ಮಟ್ಟಗಳೊಂದಿಗೆ ಪರಿಸರ ಸ್ನೇಹಿಯಾಗಿರಬೇಕು ಮತ್ತು ಎಲ್ಲಾ ರೀತಿಯ ಹವಾಮಾನ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತಿರಬೇಕು.

ಆಧುನಿಕ ಮತ್ತು ವಿನೂತನ ತಂತ್ರಜ್ಞಾನ ಬಳಸಿ ಬೀದಿ ಕಸಗುಡಿಸಲು ಮತ್ತು ಪಾದಚಾರಿ ಮಾರ್ಗ ಸ್ವಚ್ಛಗೊಳಿಸುವ ಉಪಕರಣಳನ್ನು ಪ್ರದರ್ಶಿಸಲು ಮೂಲ ಸಲಕರಣೆ ತಯಾರಕರು (OEM ಗಳು) ಮತ್ತು ಸರಬರಾಜುದಾರರಿಗೆ ಇದೊಂದು ಉತ್ತಮ ಸದಾವಕಾಶವಾಗಿದೆ. ಸಲಕರಣೆಗಳ ಕಾರ್ಯಕ್ಷಮತೆ, ದಕ್ಷತೆ ಮತ್ತು ಒಟ್ಟಾರೆ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ನಮ್ಮ ತಜ್ಞರ ತಂಡವು ಇರುತ್ತದೆ. ಉಪಕರಣದ ಬಳಕೆಯ ಸುಲಭತೆ, ನಿರ್ವಹಣೆ ಅಗತ್ಯತೆಗಳು ಮತ್ತು ಸುರಕ್ಷತಾ ವೈಶಿಷ್ಟ್ಯಗಳನ್ನು ಸಹ ನಾವು ಮೌಲ್ಯಮಾಪನಮಾಡುತ್ತೇವೆ.

ಎಲ್ಲಾ ಮೂಲ ಸಲಕರಣೆ ತಯಾರಕರು (OEM ಗಳು) ಮತ್ತು ಸರಬರಾಜುದಾರರು ವಿವರವಾದ ವಿಶೇಷಣಗಳು, ಬಳಕೆದಾರ ಕೈಪಿಡಿಗಳು ಮತ್ತು ಬೆಲೆಯ ಮಾಹಿತಿಯೊಂದಿಗೆ ಆಗಮಿಸುವವರನ್ನು ನಾವು ಪ್ರೋತ್ಸಾಹಿಸುತ್ತೇವೆ. ಪ್ರಾತ್ಯಕ್ಷಿಕೆಗೆ ಅಗತ್ಯವಾದ ಸ್ಥಳದೊಂದಿಗೆ ವಿದ್ಯುತ್ ಮತ್ತು ನೀರು ಸರಬರಾಜನ್ನು ಒದಗಿಸಲಾಗುವುದು. ಹೆಚ್ಚುವರಿಯಾಗಿ, ಎಲ್ಲಾ ಮೂಲ ಸಲಕರಣೆ ತಯಾರಕರು (OEM ಗಳು) ಮತ್ತು ಸರಬರಾಜುದಾರರು ಪ್ರದರ್ಶನ ಸಮಯದಲ್ಲಿ ಅಗತ್ಯ ಆರೋಗ್ಯ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಲು ನಾವು ವಿನಂತಿಸುತ್ತೇವೆ.

OEM ಗಳು / ಸರಬರಾಜುದಾರರು **ee3swmbbmp@gmail.com**ಗೆ ಇಮೇಲ್ ಕಳುಹಿಸುವ ಮೂಲಕ **01.03.2023ರ 4:00 ಗಂಟೆ**ಗೆಯೊಳಗೆ ನೋಂದಾಯಿಸಿಕೊಳ್ಳಬೇಕು. **01.03.2023 ಸಂಜೆ 5:30**ರ ಮೊದಲು ನೋಂದಣಿ ಮಾಡಿಕೊಂಡವರಿಗೆ **02.03.2023** ರಂದು ಪ್ರದರ್ಶನಕ್ಕಾಗಿ ಐಡಿಯನ್ನು ಒದಗಿಸಲಾಗುತ್ತದೆ.

ನೋಂದಣಿ ವಿನಂತಿಯ ಮೇಲ್ OEM ನ ಹೆಸರು, ಸರಬರಾಜುದಾರರ / OEM ವಿಳಾಸ, ಮೊಬೈಲ್ ಸಂಖ್ಯೆ, ಇಮೇಲ್ ಐಡಿ, ಪ್ರದರ್ಶನಕ್ಕಾಗಿ ಪ್ರಸ್ತಾಪಿಸಲಾದ ಸಲಕರಣೆಗಳ ಪ್ರಕಾರ ಸೇರಿದಂತೆ ಸಂಪರ್ಕ ವಿವರಗಳನ್ನು ಒಳಗೊಂಡಿರಬೇಕು. ಕಂಪನಿ ನೋಂದಣಿ ಪ್ರಮಾಣಪತ್ರಗಳು / ಕರಪತ್ರಗಳು / ISO ನಂತಹ ಗುಣಮಟ್ಟದ ಪ್ರಮಾಣಪತ್ರಗಳು ಇತ್ಯಾದಿ.

ಹಿಂದಿನ ಪೂರೈಕೆ ಆದೇಶಗಳು ಮತ್ತು ಮಾಡಿದ ಕೆಲಸ/ಕಾರ್ಯಕ್ಷಮತೆಯ ಪ್ರಮಾಣಪತ್ರಗಳು ಯಾವುದಾದರೂ ಇದ್ದರೆ (ಐಚ್ಛಿಕ).

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನೋಡಲ್ ಅಧಿಕಾರಿಯನ್ನು ಸಂಪರ್ಕಿಸಿ:
ಶ್ರೀ ಸಂತೋಷ ಕಡ್ಡಿ ಮೋ. ಸಂಖ್ಯೆ: +919845807141
ಶ್ರೀಮತಿ ದೀಪ್ತಿ ಮೋ. ಸಂಖ್ಯೆ: +917411561086

ಸಹಿ/-, ಮುಖ್ಯ ಅಭಿಯಂತರರು
ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

ಸಂ.ಕಕರಸಾ/ಕೇಕ/ಲೆಪ/ಬಿಎಸ್/3694/2022-23 ದಿನಾಂಕ:24-02-2023

:: ಟೆಂಡರ್ ಪ್ರಕಟಣೆ ::

ಕಕರಸಾ ನಿಗಮವು ರಾಜ್ಯ ಸಾರಿಗೆ ಸಂಸ್ಥೆಯಾಗಿದ್ದು, ಆರ್.ಟಿ.ಸಿ ಕಾಯ್ದೆ 1950 ರ ಪರಿಚ್ಛೇದ-3 ಅಡಿಯಲ್ಲಿ ಸ್ಥಾಪನೆಯಾಗಿರುತ್ತದೆ. ನಿಗಮವು ಉತ್ತಮ ಗುಣಮಟ್ಟ ಹಾಗೂ ನಂಬಿಕಾರ್ಹ ಸೇವೆಯನ್ನು ಪ್ರಯಾಣಿಕರಿಗೆ ನೀಡುತ್ತಿದೆ. ನಿಗಮವು ತನ್ನ ಬಾಕಿ ಹೊಣೆಗಾರಿಯ ಭವಿಷ್ಯ ನಿಧಿ ವಂತಿಗೆ ಹಾಗೂ ಉಪದಾನ ಪಾವತಿಸಲು **ರೂ. 50-00 ಕೋಟಿಗಳ** ಅವಧಿ ಸಾಲವನ್ನು ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಪಡೆಯಲು ಯೋಜಿಸಿದೆ. ಸದರಿ ಸಾಲವನ್ನು ಪಡೆಯಲು ಕರ್ನಾಟಕ ಸರ್ಕಾರವು ಪತ್ರ ಸಂಖ್ಯೆ:ಟಿಡಿ 9 ಟಿಸಿಬಿ 2020 ದಿನಾಂಕ:08-02-2020 ರಲ್ಲಿ ಅನುಮತಿಯನ್ನು ನೀಡಿದೆ. ಆದ್ದರಿಂದ ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಈ ಕೆಳಕಂಡ ಷರತ್ತು ಮತ್ತು ನಿಭಂದನೆಗಳೊಂದಿಗೆ **ರೂ. 50-00 ಕೋಟಿಗಳ** ಅವಧಿ ಸಾಲವನ್ನು ಪಡೆಯಲು ಉದ್ದೇಶಿಸಿರುತ್ತದೆ..

1) ಸ್ಥಿರ/ಚರ ಎಂಸಿಎಲ್‌ಆರ್‌ಗೆ ಹೊಂದಿರುವ ಬಡ್ಡಿ ದರವನ್ನು ನಮೂದಿಸುವುದು. (Fixed/Floating rate of interest linked to MCLR be quoted), 2) ಎಂಸಿಎಲ್‌ಆರ್ ಗೆ ಹೊಂದಿರುವ ಬಡ್ಡಿ ದರವು ಒಂದು ತಿಂಗಳು, ಮೂರು ತಿಂಗಳು, ಆರು ತಿಂಗಳು ಹಾಗೂ ಒಂದು ವರ್ಷ ರೀಸೆಟ್ ಬಗ್ಗೆ ಬೇರೆ ಬೇರೆಯಾಗಿ ನಮೂದಿಸಿರಬೇಕು. ಇತರೆ ವೆಚ್ಚಗಳು ಯಾವುದು (ಪ್ರೋಸೆಸಿಂಗ್ ಚಾರ್ಜಸ್, ಹಿಡನ್ ಚಾರ್ಜಸ್, ಅಫ್‌ಫ್ರಂಟ್ ಫೀ) ಇರಬಾರದು, 3) ಸಾಲ ಮರುಪಾವತಿಯು ಕನಿಷ್ಠ ಆರು ತಿಂಗಳ ಮೊರಟೋರಿಯಮ್ ಅವಧಿಯ ನಂತರ ಪ್ರಾರಂಭವಾಗುತ್ತದೆ ಹಾಗೂ ಸಾಲದ ಮರುಪಾವತಿ ಅವಧಿ 7 ವರ್ಷಗಳಿರಬೇಕು, 4) ಯಾವುದೇ ದಂಡ ಬಡ್ಡಿಯ ಪಾವತಿಯಿಲ್ಲದೆ ಸಾಲವನ್ನು ಅವಧಿಗೆ ಮುನ್ನ ಪೂರ್ತಿಯಾಗಿ ಪಾವತಿಸುವ ಹಕ್ಕನ್ನು ನಿಗಮವು ಹೊಂದಿರುತ್ತದೆ/ ಕಾಯ್ದಿರಿಸಿಕೊಂಡಿರುತ್ತದೆ. 5) ಸದರಿ ಪ್ರಕ್ರಿಯೆಯ ಅವಧಿ ಮತ್ತು ಷರತ್ತುಗಳನ್ನು ಬದಲಾಯಿಸುವ ಹಕ್ಕನ್ನು ನಿಗಮವು ಹೊಂದಿರುತ್ತದೆ. 6) ಸಾಲದ ಮರುಪಾವತಿಯ ಭದ್ರತೆಗಾಗಿ ನಿಗಮವು ತನ್ನ ಒಡೆತನದ ಬಸ್ಸುಗಳು/ಭೂಮಿ ಹಾಗೂ ಕಟ್ಟಡಗಳನ್ನು ಮೇಲಾಧಾರವಾಗಿ ನೀಡಲಾಗುವುದು. 7) ಕಡಿಮೆ ಬಡ್ಡಿದರದ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು ಹಾಗೂ ನಿಗಮಕ್ಕೆ ಆರ್ಥಿಕವಾಗಿ ಅನುಕೂಲಕರವಾಗುವ ನಿಟ್ಟಿನಲ್ಲಿ ಸಾಲ ಪಡೆಯುವ ಹಕ್ಕನ್ನು ಕಾಯ್ದಿರಿಸಲಾಗಿದೆ. 8) ಟೆಂಡರ್ ನಂತರ ಸಂಧಾನಕ್ಕೆ ಒಳಪಡಿಸತಕ್ಕ ಹಕ್ಕನ್ನು ಕಾಯ್ದಿರಿಸಲಾಗಿದೆ. 9) ಎಲ್ಲಾ ರಾಷ್ಟ್ರೀಕೃತ/ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದು. 10) ಮುಚ್ಚಿದ ಟೆಂಡರ್ ಲಕೋಟೆಗಳನ್ನು “ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕಕರಸಾ ನಿಗಮ, ಕೇಂದ್ರ ಕಛೇರಿ, ಸಾರಿಗೆ ಸದನ, ಮುಖ್ಯ ರಸ್ತೆ, ಕಲಬುರಗಿ-585102.” ವಿಳಾಸಕ್ಕೆ ಸಲ್ಲಿಸುವುದು.

ಆದ್ದರಿಂದ ಮುಚ್ಚಿರುವ ಟೆಂಡರ್ ಲಕೋಟೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: **28-03-2023 16-00 ಗಂಟೆವರೆಗೆ** ಮತ್ತು ಅದೇ ದಿನಾಂಕದಂದು 17-00 ಗಂಟೆಗೆ ಕ.ಕ.ರ.ಸಾ.ಸ.ನಿಗಮ ಕೇಂದ್ರ ಕಛೇರಿ ಸಾರಿಗೆ ಸದನ ಕಲಬುರಗಿಯಲ್ಲಿ ತೆರೆಯಲಾಗುವುದು. ಆಸಕ್ತರು ಹೆಚ್ಚಿನ / ಅವಶ್ಯಕ ಮಾಹಿತಿಗಾಗಿ ಮುಖ್ಯ ಲೆಕ್ಕಾಧಿಕಾರಿ/ಆ.ಸ ದೂ.ಸಂ.7760992005 ಹಾಗೂ ಉಪ ಮುಖ್ಯ ಲೆಕ್ಕಾಧಿಕಾರಿ ದೂ.ಸಂ.7760992006 ರವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆ.ಸ

ವಾ.ಸಾ.ಸಂ.ಇ/ಕಲಬುರಗಿ/1356/ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ
ಸಂ.ತಾ.ಸಾ.ಅ.(ಚ) ಪಥ್ಯಹಾರ/ಟೆಂಡರ್/1/363/2023-24 ದಿನಾಂಕ: 22.02.2023

ಇ-ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿಯಲ್ಲಿ)

2023-24ರ ಸಾಲಿಗಾಗಿ ಒಳ ರೋಗಿಗಳಿಗೆ ಪಥ್ಯಾಹಾರ (ಆಹಾರ ಪದಾರ್ಥಗಳು), ಬ್ರೆಡ್, ಹಾಲು ಸರಬರಾಜು ಮಾಡಲು ಮುಖ್ಯ ವೈದ್ಯಾಧಿಕಾರಿಗಳು, ತಾ.ಸಾ.ಆಸ್ಪತ್ರೆ, ಚಳ್ಳಕೆರೆ ಇವರ ಹೆಸರಿನಲ್ಲಿ ನಿರ್ವಹಿಸಲು, ಪ್ರತಿಷ್ಠಿತ ನೋಂದಾಯಿತ ಸಂಸ್ಥೆಯವರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಸಂಗ್ರಹಣಾ ಮುಖಾಂತರ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಟೆಂಡರ್ ನಮೂನೆಗಳನ್ನು http://eproc.karnataka.gov.in ರಲ್ಲಿ ಅಂತರ್ ಜಾಲದಲ್ಲಿ ಟೆಂಡರ್ ಫಾರಂಗಳನ್ನು (ದ್ವಿ-ಲಕೋಟೆ) ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 22.02.2023ರಿಂದ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 14.03.2023ರ ಅಪರಾಹ್ನ 05:00 ಗಂಟೆಯವರೆಗೆ. ಕಾರಣಾಂತರದಿಂದ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಮತ್ತು ಡೌನ್‌ಲೋಡ್ ಮಾಡುವ, ಟೆಂಡರ್ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://eproc.karnataka.gov.inರಲ್ಲಿ ಪಡೆಯಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ತಾ.ಸಾ. ಆಸ್ಪತ್ರೆ, ಚಳ್ಳಕೆರೆ.

RO No. 1051: DIPR/CTA/KSMCA/2022-23

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ. 6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560072
E-mail: kredlmd@gmail.com Website: www.kredl.karnataka.gov.in

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ

ವಿಷಯ : ಕೆ.ಆರ್.ಇ.ಡಿ.ಎಲ್. ವತಿಯಿಂದ ಬೀದರ್ ಜಿಲ್ಲೆಯ ಬಾಲ್ಕಿ, ಔರಾದ್ ಮತ್ತು ಇನ್ನಿತರೆ ತಾಲ್ಲೂಕುಗಳಲ್ಲಿ 500 ಮೆ.ವ್ಯಾ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (KREDL)ವು ಕೇಂದ್ರ ಸರ್ಕಾರದ ಎಮ್.ಎನ್.ಆರ್.ಇ ಸಹಾಯಧನದೊಂದಿಗೆ ಬೀದರ್ ಜಿಲ್ಲೆಯ ಬಾಲ್ಕಿ, ಔರಾದ್ ಮತ್ತು ಇನ್ನಿತರೆ ತಾಲ್ಲೂಕುಗಳಲ್ಲಿ 500 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಪಾರ್ಕ್ ಸ್ಥಾಪನೆಗಾಗಿ ಒಂದೇ ಕಡೆ ಅಂದಾಜು 2500 ಎಕರೆಯಷ್ಟು ಜಮೀನಿನ ಅವಶ್ಯಕತೆ ಇರುತ್ತದೆ. ಈ ಜಮೀನನ್ನು ಸುಮಾರು 28 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹೊಂದಲು ಸಂಸ್ಥೆಯು ಬಯಸಿದೆ. ಗುತ್ತಿಗೆ ಪಡೆದ ಜಮೀನಿಗೆ ಪ್ರತಿ ಎಕರೆ ವಿಸ್ತೀರ್ಣಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ಈಗಾಗಲೇ ಪಾವಗಡ ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿರುವ 2050 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್ ಮಾದರಿಯಡಿ ನಿಗದಿಪಡಿಸಲಾಗುವುದು. ಈ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ಭೂಮಿ ನೀಡಲು ಆಸಕ್ತಿಯುಳ್ಳ ರೈತರು ತಮ್ಮ ಒಪ್ಪಿಗೆಯನ್ನು ಲಿಖಿತವಾಗಿ ಸದರಿ ಪ್ರಕಟಣೆ ದಿನಾಂಕದಿಂದ 15 ದಿನಗಳೊಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿವರಗಳನ್ನು ಕ್ರೆಡಲ್ ಕಛೇರಿಗೆ ನೀಡಬೇಕೆಂದು ಕೋರಲಾಗಿದೆ.

ಯೋಜನೆಗೆ ಅವಶ್ಯಕ ಜಮೀನುಗಳನ್ನು ಗುತ್ತಿಗೆ ಪಡೆಯಲು KREDL ಸಂಸ್ಥೆಯಿಂದ ಅಂತಿಮಗೊಳಿಸಲಾಗುವುದು.

ಈ ಪ್ರಕಟಣೆ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಲು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9986025252, ಇ-ಮೇಲ್: **kredlroklb@gmail.com**

ಸಹಿ/-ಪ್ರಧಾನ ವ್ಯವಸ್ಥಾಪಕರು-ತಾಂತ್ರಿಕ

ದಣಿವರಿಯದ ಹೋರಾಟಗಾರ, ಅಜಾತಶತ್ರುವಿಗೆ ಹುಟ್ಟುಹಬ್ಬದ ಸಂಭ್ರಮ

ಜನಮೆಚ್ಚಿದ ನಾಯಕ ಯಡಿಯೂರಪ್ಪ

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರದ ಗದ್ದುಗೆಯಲ್ಲಿ ಬಿಜೆಪಿಯ ಬಾವುಟ ಹಾರಿಸಿದ ಶ್ರೇಯ ಹೊಂದಿರುವ ಬಿ.ಎಸ್.ಯಡಿಯೂರಪ್ಪ, ತಮ್ಮ ಕೋಟ್ಯಂತರ ಅಭಿಮಾನಿಗಳ ಪಾಲಿಗೆ ಈಗಲೂ ನೆಚ್ಚಿನ ರಾಜಾ ಹುಲಿ. ನಾಡಿನ ರೈತಾಪಿ ವರ್ಗದ ಕಣ್ಮಣಿ. ಮಂಡ್ಯ ಜಿಲ್ಲೆ ಕೆ.ಅರ್.ಪೇಟೆ ತಾಲ್ಲೂಕಿನ ಬೂಕನಕೆರೆಯಲ್ಲಿ ಸಿದ್ದಲಿಂಗಪ್ಪ ಹಾಗೂ ಪುಟ್ಟತಾಯಮ್ಮ ಅವರ ಮಗನಾಗಿ 1943 ಫೆಬ್ರವರಿ 27ರಂದು ಯಡಿಯೂರಪ್ಪ ಜನಿಸಿದರು.

1965ರಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದ ಅವರು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯರ ಜೊತೆ ಸಂಪರ್ಕಕ್ಕೆ ಬಂದಿದ್ದರು. ಅವರ ಹೋರಾಟದ ಕೆಚ್ಚು, ನಿಷ್ಠೆ, ಸಮಾಜಮುಖಿ ಬದುಕಿಗೆ ನಾಂದಿಯಾಯಿತು. ಯಡಿಯೂರಪ್ಪನವರು ಶಿಕಾರಿಪುರದ ದಿವಂಗತ ವೀರಭದ್ರಶಾಸ್ತ್ರಿ ಅವರ ಪುತ್ರಿ ಮೈತ್ರಾದೇವಿಯೊಂದಿಗೆ ವಿವಾಹ ಮಾಡಿಕೊಂಡರು. ಹೀಗಾಗಿ ಅದೇ ನೆಲ ಅವರ ಕಾರ್ಯಕ್ಷೇತ್ರವಾಯಿತು. ಆರು ದಶಕಗಳ ರಾಜಕೀಯ ಪಯಣ ಅವರನ್ನು ಶಿಕಾರಿಪುರ ಕ್ಷೇತ್ರದಿಂದ ದಾಖಲೆಯ ಎಂಟು ಬಾರಿ ಶಾಸಕ ಸ್ಥಾನಕ್ಕೆ, ನಾಲ್ಕು ಬಾರಿ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ಕೊಂಡೊಯ್ದಿತು.

ಯಡಿಯೂರಪ್ಪ ರಾಜ್ಯದ ಜನತೆಗೆ ನೀಡಿದ ಕೊಡುಗೆ..

ಮುಖ್ಯಮಂತ್ರಿಯಾಗಿ ಬಿಜೆಪಿ ಪೂರ್ಣ ಪ್ರಮಾಣದ ಸರ್ಕಾರ ರಚಿಸಿದ್ದಾಗ ರೈತರಿಗಾಗಿಯೇ ದೇಶದಲ್ಲಿ ಮೊದಲ ಕೃಷಿ ಬಜೆಟ್ ಆರಂಭಿಸಿದ ಕೀರ್ತಿ ಯಡಿಯೂರಪ್ಪ ಅವರದ್ದು. ಜೊತೆಗೆ ರಾಜ್ಯದಲ್ಲಿ ಮೊದಲ ಬಾರಿ ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ಯೋಜನೆ ಜಾರಿ ತಂದ ಶ್ರೇಯ ಅವರದ್ದು.

- ಬಿಪಿಎಲ್ ಕಾರ್ಡ್ ಹೊಂದಿದ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳಿಗೆ ಆಸರೆಯಾಗಿ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ "ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯಡಿ ₹1 ಲಕ್ಷ ಆರ್ಥಿಕ ನೆರವು ಘೋಷಣೆ.
- ಈ ಸಂಧ್ಯಾ ಸುರಕ್ಷಾ ಯೋಜನೆಯಡಿ 60 ವರ್ಷ ಮೇಲ್ಪಟ್ಟ ಕಡು ಬಡವರಿಗಾಗಿ ಮಾಸಿಕ ₹1000 ಪಿಂಚಣಿ ಯೋಜನೆ ಅನುಷ್ಠಾನ.
- 110 ಹೆಚ್ ಪಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡುವ ಯೋಜನೆ ಜಾರಿ.
- ನೇಕಾರರ ₹1 ಲಕ್ಷ ವರೆಗಿನ ಸಾಲ ಮನ್ನಾ, ಮೀನುಗಾರರ ಸಾಲ ಮನ್ನಾ, ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ ವಿಮೆ ಪಾವತಿ, ಕೆರೆಗಳ ಪುನಶ್ಚೇತನಕ್ಕೆ ಮಿಷನ್' ಕಲ್ಯಾಣಿ ಯೋಜನೆಗಳ ಜಾರಿ
- ಶಾಲಾ ಮಕ್ಕಳಿಗೆ ಉಚಿತವಾಗಿ ಬೈಸಿಕಲ್ ವಿತರಣೆ. ಒಂದಂಕಿ ಲಾಟರಿ ಹಾಗೂ ಸಾರಾಯ ನಿಷೇಧಿಸುವ ದಿಟ್ಟ ಕ್ರಮ,
- ಈ ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎಂದು ಮರು ನಾಮಕರಣ.
- ಕೋವಿಡ್‌ನಿಂದ ಸಾವಿಗೀಡಾದವರಿಗೆ ಸರ್ಕಾರದಿಂದ ₹1 ಲಕ್ಷ ಪರಿಹಾರ ವಿತರಣೆ

ತವರು ಶಿವಮೊಗ್ಗ ಜಿಲ್ಲೆಗೆ ಕೊಟ್ಟ ಕೊಡುಗೆ..

- ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಅಡಕೆ ಬೆಳೆಗಾರರು ಹಳದಿ ರೋಗದಿಂದ ಕಂಗಾಲಾಗಿದ್ದಾರೆ. ಈ ರೋಗದ ಕುರಿತು ಸಂಶೋಧನೆ ನಡೆಸಲು ಮತ್ತು ಪರ್ಯಾಯ ಬೆಳೆ ಪ್ರೋತ್ಸಾಹಕ್ಕೆ ಯಡಿಯೂರಪ್ಪ ₹25 ಕೋಟಿ ಪರಿಹಾರ ಘೋಷಣೆ ಮಾಡಿದ್ದಾರೆ.
- ₹2 ಕೋಟಿ ವೆಚ್ಚದಲ್ಲಿ ಶಿವಮೊಗ್ಗದ ಪಶುವೈದ್ಯಕೀಯ ಕಾಲೇಜಿನಲ್ಲಿ ಸಂಶೋಧನಾ ಕೇಂದ್ರವನ್ನು ಆರಂಭಿಸುವ ಘೋಷಣೆ.
- ಶಿವಮೊಗ್ಗದ ಆಯುರ್ವೇದ ಕಾಲೇಜನ್ನು ಆಯುಷ್ ವಿಶ್ವವಿದ್ಯಾಲಯವನ್ನಾಗಿ ಮೇಲ್ದರ್ಜೆಗೆ
- ಕ್ಯಾನ್ಸರ್ ರೋಗಿಗಳಿಗೆ ಸಹಾಯಕವಾಗುವಂತೆ ಮೈಸೂರು ಮತ್ತು ಶಿವಮೊಗ್ಗದಲ್ಲಿ ಕಿದ್ವಾಯಿ ಆಸ್ಪತ್ರೆ ಮಾದರಿಯಲ್ಲಿ ಆಸ್ಪತ್ರೆ ನಿರ್ಮಾಣ.
- ಶಿವಮೊಗ್ಗ- ಸವಳಂಗ-ಶಿಕಾರಿಪುರ-ಶಿರಾಳಕೊಪ್ಪ ಮಾರ್ಗದಲ್ಲಿ ಆಧುನಿಕ ಸಂಚಾರ ವ್ಯವಸ್ಥೆ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸ್ಟಿಸ್ಟಮ್ ಮತ್ತು ಸೇಫ್ಟಿ ಸಲ್ಯೂಷನ್ ಪ್ರಾಯೋಗಿಕವಾಗಿ ಆರಂಭ.
- ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ₹384 ಕೋಟಿ ಅನುದಾನ ಬಜೆಟ್‌ನಲ್ಲಿ ಘೋಷಣೆ

ಹರಸಿ, ಆರಿಸಿ ಕಳುಹಿಸಿದ ಶಿಕಾರಿಪುರಕ್ಕೆ ಕೊಟ್ಟ ಕೊಡುಗೆ..

ಉಡುಗಣಿ ತಾಳಗುಂದ ಹೊಸೂರು ಕಸಬಾ ಅಂಜನಾಪುರ ಹಾಗೂ ಹಾರೋಗೊಪ್ಪ ಕೆರೆಗೆ ನೀರು ತುಂಬಿಸುವ ಏತನೀರಾವರಿ ಯೋಜನೆಗಳು..

ಗುಡ್ಡದತುಮ್ಮಿನಕಟ್ಟೆ – ಶೀಲವಂತನಕೊಪ್ಪ – ಸನ್ಯಾಸಿಕೊಪ್ಪ ಏತನೀರಾವರಿ ಯೋಜನೆ ರಸ್ತೆಗಳು ತಾಲ್ಲೂಕಿನ ಎಲ್ಲಾ ರಸ್ತೆಗಳು ಹಾಗೂ ಗ್ರಾಮದ ಒಳಗಿನ ರಸ್ತೆಗಳು, ಗ್ರಾಮೀಣ ಸಂಪರ್ಕ ರಸ್ತೆಗಳು, ರೈತರ ಹೊಲಕ್ಕೆ ಹೋಗುವ ರಸ್ತೆಗಳ ಅಭಿವೃದ್ಧಿ

ಬಳ್ಳಿಗಾವಿ 220 ಕೆ.ವಿ ಸ್ಟೇಷನ್

- ನೆಲವಾಗಿಲು ಗ್ರಾಮದಲ್ಲಿ 220 ಕೆ.ವಿ ಸ್ಟೇಷನ್ ಹೊಸದಾಗಿ ಮಂಜೂರಾತಿ • ತೊಗರ್ಸಿ, ಭಕ್ತನಕೊಪ್ಪ, ಶಿರಾಳಕೊಪ್ಪ, ಸಂಡ, ಕೊರಟಗೆರೆ, ಅಂಬಾರಗೊಪ್ಪ, ಕಿಟ್ಟದಹಳ್ಳಿ, ಹೊಸೂರು,

ಶಿಕಾರಿಪುರ, ಈಸೂರು, ಅಂಜನಾಪುರ, ಬನ್ನೂರು (ಒಟ್ಟು 12 110/11 ಕೆ.ವಿ ಸ್ಟೇಷನ್ ನಿರ್ಮಾಣ) • ತಾಲ್ಲೂಕಿನಲ್ಲಿ 35,000 ಸಾವಿರಕ್ಕೂ ಹೆಚ್ಚು ರೈತರ ಐ.ಪಿ ಸೆಟ್ ಗಳಿಗೆ ಅಕ್ರಮ ಸಕ್ರಮ ಯೋಜನೆಯಲ್ಲಿ ₹100 ಕೋಟಿಗೂ ಹೆಚ್ಚು ಖರ್ಚು ಮಾಡಿ ವಿದ್ಯುತ್ ಸಂಪರ್ಕ ವ್ಯವಸ್ಥೆ: ಶಿಕಾರಿಪುರದಲ್ಲಿ ಮೆಸ್ಕಾಂ ಡಿವಿಷನ್ ಕಚೇರಿ • ಶಿಕಾರಿಪುರ – ಶಿರಾಳಕೊಪ್ಪದಲ್ಲಿ ಮೆಸ್ಕಾಂ ಉಪವಿಭಾಗ ಕಚೇರಿ ನಿರ್ಮಾಣ. • ಶಿಕಾರಿಪುರದಲ್ಲಿ ಟಿ.ಸಿ ರಿಪೇರಿ ಕೇಂದ್ರ • ಶಿರಾಳಕೊಪ್ಪದಲ್ಲಿ ಹೊಸ ಟಿ.ಸಿ ರಿಪೇರಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಕೆ.

ಶಿಕ್ಷಣ: ಶಿಕಾರಿಪುರದಲ್ಲಿ ಡಿಗ್ರಿ ಕಾಲೇಜು, ಐ.ಟಿ.ಐ ಕಾಲೇಜು, ಶಿರಾಳಕೊಪ್ಪದಲ್ಲಿ ಡಿಗ್ರಿ ಕಾಲೇಜು, ಮಹಿಳಾ ಪಾಲಿಟೆಕ್ನಿಕ್ ಕಾಲೇಜು.

ಶಿಕಾರಿಪುರದಲ್ಲಿ ಮೂರು ಪದವಿ ಪೂರ್ವ ಕಾಲೇಜು, ಶಿರಾಳಕಕೊಪ್ಪದಲ್ಲಿ ಎರಡು ಪದವಿ ಪೂರ್ವ ಕಾಲೇಜು, ಗ್ರಾಮಾಂತರ ಪ್ರದೇಶದ ತೊಗರ್ಸಿ, ಹುಲುಗಿನಕೊಪ್ಪ, ಹೊಸೂರು, ಹರಗುವಳ್ಳಿ, ಚಿಕ್ಕಜಂಬೂರು ಸರ್ಕಾರಿ ಪದವಿ ಪೂರ್ವ ಕಾಲೇಜು,

ಈಸೂರು, ಹಿತ್ತಲ, ಸಾಲೂರು ಗ್ರಾಮಗಳಲ್ಲಿ • ಎರಡು ಅಲ್ಪಸಂಖ್ಯಾತರ ಮೊರಾರ್ಜಿ ಶಾಲೆ ಶಿಕಾರಿಪುರ – ಶಿರಾಳಕೊಪ್ಪ-ದಲ್ಲಿ ಅಲ್ಪಸಂಖ್ಯಾತರ ಪ್ರೀ ಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್

ಹಾಸ್ಟೆಲ್, ಮಾಳೂರು, ಮಂಚಿಕೊಪ್ಪ ಹಕ್ಕಳ್ಳಿ, ಬೇಗೂರು, ಹೋಸೂರು, ಚುರ್ಚುಗುಂಡಿ, ಅಂಬಾರ ಗೊಪ್ಪ ಮುರಾರ್ಜಿ ವಸತಿ ಶಾಲೆ ನಿರ್ಮಾಣ. ಹೊಸೂರು ಮೊರಾರ್ಜಿ ಪಿ.ಯು. ಸೈನ್ಸ್ ಕಾಲೇಜು ನಿರ್ಮಾಣ,

- ತಾಲ್ಲೂಕಿನಲ್ಲಿ ಒಟ್ಟು 44 ಎಸ್.ಸಿ. ಎಸ್.ಟಿ ಹಾಗೂ ಬಿಸಿಎಂ ಹಾಸ್ಟೆಲ್ ನಿರ್ಮಾಣ. ಮಂಚಿಕೊಪ್ಪ ಹಾಗೂ ಮಳವಳ್ಳಿ ತಾಂಡದಲ್ಲಿ ಆಶ್ರಮ ಶಾಲೆ.

ಸಾರಿಗೆ:

- ₹10 ಕೋಟಿ ವೆಚ್ಚದಲ್ಲಿ ಕೆ.ಎಸ್.ಆರ್.ಟಿ.ಸಿ ಡಿಪೊ
- ₹ 3 ಕೋಟಿ ವೆಚ್ಚದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ

ಇತರೆ ಮೂಲ ಸೌಕರ್ಯ

1. ಶಿಕಾರಿಪುರದಲ್ಲಿ ಖಾಸಗಿ ಬಸ್ ನಿಲ್ದಾಣ
2. ಶಿರಾಳಕೊಪ್ಪ ಖಾಸಗಿ ಬಸ್ ನಿಲ್ದಾಣ
3. ಒಂದೇ ಸೂರಿನಡಿಯಲ್ಲಿ ಸರ್ಕಾರಿ ಕಚೇರಿ ಸಂಕೀರ್ಣ
4. ಶಿಕಾರಿಪುರ, ಶಿರಾಳಕೊಪ್ಪ, ಅಂಜನಾಪುರ ಸುಸಜ್ಜಿತ ಪ್ರವಾಸಿ ಮಂದಿರ
5. ಶಿಕಾರಿಪುರ ಹಾಗೂ ಶಿರಾಳಕೊಪ್ಪ ನಗರದಲ್ಲಿ ಅಲಂಕಾರಿಕ ವಿದ್ಯುತ್ ದೀಪ ಅಳವಡಿಕೆ
6. ಶಿಕಾರಿಪುರದಲ್ಲಿ ಶಾಹಿ ಗಾರ್ಮೆಂಟ್ ಮೂಲಕ ಯುವಕ ಯುವತಿಯರಿಗೆ ಉದ್ಯೋಗ
7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರಿಗೆ 1000 ಕ್ಕೂ ಹೆಚ್ಚು ಕಲ್ಯಾಣ ಯೋಜನೆ ಹಾಗೂ 500 ಕ್ಕೂ ಹೆಚ್ಚು ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಸಬ್ಸಿಡಿ ಸಾಲ ಯೋಜನೆ

ಹೈನುಗಾರಿಕೆಗೆ ನೆರವು:

1. ತಾಲ್ಲೂಕಿನಲ್ಲಿ ಒಟ್ಟು ಹಾಲು ಉತ್ಪಾದಕರಿಗೆ 15 ಸಾವಿರ ಕುಟುಂಬಗಳಿಗೆ ₹2 ರೂಪಾಯಿಂದ ಪ್ರಾರಂಭವಾಗಿ ಈಗ ₹5 ರೂಪಾಯಿ ಪ್ರೋತ್ಸಾಹ ಧನ (ಒಂದು ದಿನಕ್ಕೆ ₹6 ಲಕ್ಷ ಸಹಾಯ ಧನ) 2. ಸಂಡ ಗ್ರಾಮದಲ್ಲಿ ಪಶು ಆಹಾರ ಘಟಕ ನಿರ್ಮಾಣ.

ಆರೋಗ್ಯ ಸೇವೆ:

ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆ 250 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೆ. 100 ಹಾಸಿಗೆಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ. ಶಿರಾಳಕೊಪ್ಪದಲ್ಲಿ ಸಾರ್ವಜನಿಕ ಆಸ್ಪತ್ರೆ 30 ಹಾಸಿಗೆಯಿಂದ 50 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೆ • ಶಿಕಾರಿಪುರ ಪಟ್ಟಣದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ.

- ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ 18 ಕ್ಕೂ ಹೆಚ್ಚು ಪ್ರಮುಖ ಗ್ರಾಮಗಳಲ್ಲಿ ಚಿಕ್ಕಜೋಗಿಹಳ್ಳಿ, ಈಸೂರು, ಸಾಲೂರು, ಹೋತನಕಟ್ಟೆ, ಕಪ್ಪನಹಳ್ಳಿ, ಹೊಸೂರು, ಕಾಗಿನ, ಮಾರವಳ್ಳಿ, ಮತ್ತಿಕೋಟೆ, ಚಿಕ್ಕಂದು, ಹಾರೋಗೊಪ್ಪ, ಸುಣ್ಣದಕೊಪ್ಪ, ಮಳವಳ್ಳಿ, ಹರಗಿ, ತೊಗರ್ಸಿ, ಯಳಗೆರೆ, ತಾಳಗುಂದ, ಬಿಳಿಕಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ.

ಕುಡಿಯುವ ನೀರು:

- ಶಿಕಾರಿಪುರ, ಶಿರಾಳಕೊಪ್ಪ ಶುದ್ದ ಕುಡಿಯುವ ನೀರಿಗೆ ಆದ್ಯತೆ, ತಾಲ್ಲೂಕಿನ 174 ಗ್ರಾಮಗಳಿಗೆ ಮನೆ ಮನೆ ಗಂಗೆ ಯೋಜನೆ ಅಡಿ ₹131 ಕೋಟಿ ಅನುದಾನ
- ತುಂಗಾ ನದಿಯಿಂದ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಬಹುಗ್ರಾಮ ಶುದ್ಧ ಕುಡಿಯುವ ನೀರಿನ ಯೋಜನೆಯಡಿ ₹313 ಕೋಟಿ ಮೀಸಲು

ಪ್ರವಾಸೋದ್ಯಮ:

- ಶಿಕಾರಿಪುರ ಹುಚ್ಚರಾಯಸ್ವಾಮಿ ದೇವಸ್ಥಾನ ಹಾಗೂ ಕೆರೆ ಪಾರ್ಕ್ ನಿರ್ಮಾಣ. ಅಂಜನಾಪುರದಲ್ಲಿ ಪಾರ್ಕ್ ನಿರ್ಮಾಣ • ಈಸೂರು ಸ್ವತಂತ್ರ ಹೋರಾಟಗಾರರ ಸ್ಮಾರಕ ಭವನ ಸಮಗ್ರ ಅಭಿವೃದ್ಧಿ.
- ಶಿವನಪಾದ, ತೊಗರ್ಸಿ ಮಲ್ಲಿಕಾರ್ಜುನ ದೇವಸ್ಥಾನ, ಉಡುಗಣಿ ಅಕ್ಕಮಹಾದೇವಿ ಜನ್ಮ ಸ್ಥಳ, ಉಡುಗಣಿ ರಾಘವೇಂದ್ರ ಮಠ, ಬಂದಳಿಕೆ ಬನಶಂಕರಿ ದೇವಸ್ಥಾನ, ಬಳ್ಳಿಗಾವಿ ಅಲ್ಲಮಪ್ರಭು ದೇವಸ್ಥಾನ ಅಭಿವೃದ್ಧಿ ಸೇರಿ ತಾಲ್ಲೂಕಿನಲ್ಲಿ 200 ಕ್ಕೂ ಹೆಚ್ಚು ದೇವಸ್ಥಾನಗಳ ಜೀರ್ಣೋದ್ದಾರ.

ಮೂಲ ಸೌಕರ್ಯ:

- ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಸಮಾಜದ ಸಮುದಾಯಗಳಿಗೆ ಸಮುದಾಯ ಭವನ ಅನುದಾನ

ಗ್ರಾಮೀಣ ಪ್ರದೇಶದಲ್ಲಿ 500 ಕ್ಕೂ ಹೆಚ್ಚು ಸಮುದಾಯ ಭವನಗಳಿಗೆ ಅನುದಾನ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ತಾಲ್ಲೂಕು ಮಟ್ಟದ ಬಣಜಾರ ಭವನ,

ವಾಲ್ಮೀಕಿ ಭವನ, ಅಂಬೇಡ್ಕರ್ ಭವನ, ಬಾಬು ಜಗಜೀವನರಾಮ್ ಭವನ, ಕನಕ ಭವನ ನಿರ್ಮಾಣ

ಮಹಿಳಾ ಸಬಲೀಕರಣ:

ತಾಲ್ಲೂಕಿನ 1272 ಸ್ತ್ರೀಶಕ್ತಿ, ₹90,00,000 ಪ್ರೋತ್ಸಾಹ ಧನ

ಸ್ವ ಸಹಾಯ ಗುಂಪುಗಳಿಗೆ ಆದಾಯೋತ್ಪನ್ನ ಚಟುವಟಿಕೆಗಾಗಿ ಒಟ್ಟು ಸ್ತ್ರೀ ಸಾಮರ್ಥ್ಯ ಯೋಜನೆಯಡಿ 435 ಮಹಿಳೆಯರಿಗೆ ಶೇ 6ರ ಬಡ್ಡಿ ದರದಲ್ಲಿ ತಲಾ ₹50 ಸಾವಿರ ಸಾಲ ಯೋಜನೆ • ತಾಲ್ಲೂಕಿನ 38 ಸ್ತ್ರೀ ಶಕ್ತಿ ಗುಂಪುಗಳಿಗೆ ತಲಾ ₹1 ಲಕ್ಷದಂತೆ ₹38 ಲಕ್ಷ ಆದಾಯೋತ್ಪನ್ನ ಚಟುವಟಿಕೆ.

ಪ್ರೋತ್ಸಾಹ ಧನ:

- ಎನ್.ಆರ್.ಎಲ್.ಎಂ. ಯೋಜನೆ ಅಡಿ 1936 ಎಸ್.ಸಿ., ಎಸ್.ಟಿ, ಮಹಿಳೆಯರಿಗೆ ₹10 ಸಾವಿರದಂತೆ ₹1,90,00,000 ಪ್ರೋತ್ಸಾಹ ಧನ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವಿಮಾನ ನಿಲ್ದಾಣಕ್ಕೆ ಹೆಸರು: ಮುತ್ಸದ್ದಿತನ ಮೆರೆದ ಯಡಿಯೂರಪ್ಪ..

ತವರು ಜಿಲ್ಲೆ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ನಿರ್ಮಿಸಬೇಕೆಂಬುದು ಯಡಿಯೂರಪ್ಪನವರ ಬಹುದಿನಗಳ ಕನಸಾಗಿತ್ತು. ವಿಮಾನ ನಿಲ್ದಾಣ ಹಾರಾಟಕ್ಕೆ ಸಿದ್ಧವಾಗಿದೆ. ಸೋಮವಾರ ಪ್ರಧಾನಿ ನರೇಂದ್ರಮೋದಿ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ನೂತನ ವಿಮಾನ ನಿಲ್ದಾಣಕ್ಕೆ ಯಡಿಯೂರಪ್ಪ ಅವರ ಹೆಸರು ಇಡಬೇಕು ಎಂಬುದು ಬಸವರಾಜ ಬೊಮ್ಮಾಯಿ ಅವರ ಸಂಪುಟದ ಅನೇಕ ಸಹೋದ್ಯೋಗಿಗಳ ಒತ್ತಾಸೆಯಾಗಿತ್ತು. ಶಿವಮೊಗ್ಗದಲ್ಲಿಯೇ ನಡೆದ ಪಕ್ಷದ ಸಮಾವೇಶದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಿಚಾರವನ್ನು ಬಹಿರಂಗಪಡಿಸಿ ವಿಮಾನ ನಿಲ್ದಾಣಕ್ಕೆ ಬಿ.ಎಸ್.ಯಡಿಯೂರಪ್ಪ ಅವರ ಹೆಸರು ಇಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡುವುದಾಗಿ ಹೇಳಿದ್ದರು. ಈ ವಿಚಾರ ಗೊತ್ತಾಗುತ್ತಿದ್ದಂತೆಯೇ ಪತ್ರಿಕಾಗೋಷ್ಠಿ ನಡೆಸಿದ ಯಡಿಯೂರಪ್ಪ ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಬೇಡ. ಬದಲಿಗೆ ರಾಷ್ಟ್ರಕವಿ ಕುವೆಂಪು ಅವರ ಹೆಸರು ಇಡುವಂತೆ ಹೇಳಿ ದೊಡ್ಡತನ ಮೆರೆದರು. ಯಡಿಯೂರಪ್ಪ ಅವರ ಮುತ್ಸದ್ದಿತನಕ್ಕೆ ಮಣಿದ ರಾಜ್ಯ ಸರ್ಕಾರ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನೇ ಅಂತಿಮಗೊಳಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿಕೊಟ್ಟಿದೆ. ಯಡಿಯೂರಪ್ಪನವರ ಈ ನಿರ್ಧಾರಕ್ಕೆ ಅವರ ವಿರೋಧಿಗಳು ತಲೆದೂಗಿದರು.

ಯುವಜನರ ಕಣ್ಮಣಿ ವಿಜಯೇಂದ್ರ..



ಲಕ್ಷಾಂತರ ಯುವ ಜನರ ಕಣ್ಮಣಿ, ಯಡಿಯೂರಪ್ಪ ಕುಟುಂಬದ ಭವಿಷ್ಯದ ನಾಯಕ ಬಿ.ವೈ.ವಿಜಯೇಂದ್ರ ಅಪ್ಪನ ಹಾದಿಯಲ್ಲಿಯೇ ರಾಜಕೀಯ ರಂಗದಲ್ಲಿ ಹೆಜ್ಜೆ ಇಡುತ್ತಿದ್ದಾರೆ. ಬಿಜೆಪಿಯ ಹೆಜ್ಜೆ ಗುರುತು ಇಲ್ಲದ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ಹಾಗೂ ತುಮಕೂರು ಜಿಲ್ಲೆಯ ಶಿರಾ ಕ್ಷೇತ್ರಗಳ ಉಪಚುನಾವಣೆಯ ಕಠಿಣ ತಾಲೀಮನ್ನು ಸವಾಲಾಗಿ ಸ್ವೀಕರಿಸಿ ಪಕ್ಷದ ಅಭ್ಯರ್ಥಿಗನ್ನು ಗೆಲ್ಲಿಸಿ ತಮ್ಮ ಸಂಘಟನಾ ಶಕ್ತಿಯನ್ನು ಸಾಬೀತುಪಡಿಸಿದವರು ಬಿ.ವೈ.ವಿಜಯೇಂದ್ರ.

ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅಪವಿತ್ರ ಮೈತ್ರಿ ಕಳಚಿ ಬಿಜೆಪಿ ಸರ್ಕಾರಕ್ಕೆ ಅಸ್ತಿತ್ವಕ್ಕೆ ಬರಲು ಶ್ರಮಿಸಿದ್ದ ಬಿ.ವೈ. ವಿಜಯೇಂದ್ರ, ಈ ಹಿಂದೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿ ಕೆಲಸ ಮಾಡಿದ್ದಾರೆ.

ಸದ್ಯ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರಾಗಿರುವ ಬಿ.ವೈ.ವಿಜಯೇಂದ್ರ, ಈ ಬಾರಿಯ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿಯನ್ನು ಮತ್ತೆ ಪೂರ್ಣ ಬಹುಮತದಿಂದ ಅಧಿಕಾರಕ್ಕೆ ತರಲು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಅಪ್ಪ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ರಾಜ್ಯಾದ್ಯಂತ ಸುತ್ತುತ್ತಿದ್ದಾರೆ. ಜೊತೆಗೆ ಯಡಿಯೂರಪ್ಪ ಅವರ ರಾಜಕೀಯ ನಿವೃತ್ತಿಯಿಂದ ತೆರವಾಗಿರುವ ಶಿಕಾರಿಪುರ ಕ್ಷೇತ್ರದ ಹುರಿಯಾಳು ಆಗಲು ತಾಲೀಮು ನಡೆಸಿದ್ದಾರೆ. ಈಗಾಗಲೇ ಶಿಕಾರಿಪುರ ಕ್ಷೇತ್ರವನ್ನು ಎರಡು ಬಾರಿ ಸುತ್ತಾಡಿ ಪಕ್ಷ ಸಂಘಟನೆ ಮಾಡಿರುವ ವಿಜಯೇಂದ್ರ, ಮುಂಬರುವ ಚುನಾವಣೆಯಲ್ಲಿ ಬಿಜೆಪಿಯಿಂದ ಉಮೇದುವಾರಿಕೆಗೆ ಪಕ್ಷದ ವರಿಷ್ಠರ ಅನುಮತಿಯ ನಿರೀಕ್ಷೆಯಲ್ಲಿದ್ದಾರೆ. ಸಹೋದರ ಹಾಗೂ ಸಂಸದ ಬಿ.ವೈ.ರಾಘವೇಂದ್ರ ಅವರ ಶಕ್ತಿಯೂ ಶಿಕಾರಿಪುರದಲ್ಲಿ ವಿಜಯೇಂದ್ರ ಬೆನ್ನಿಗಿದೆ.

ಅಪ್ಪ, ಪರಿವಾರದ ಹಿರಿಯರ ಮಾರ್ಗದರ್ಶನ ಪ್ರೇರಕ: ಬಿವೈಆರ್

ಶಿವಮೊಗ್ಗದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ವಿಮಾನ ನಿಲ್ದಾಣ ಉದ್ಘಾಟನೆ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದ ಸಂಸದ ಬಿ.ವೈ.ರಾಘವೇಂದ್ರ ತಮ್ಮ ನಿರಂತರ ಕೆಲಸ–ಕಾರ್ಯಗಳ ನಡುವೆಯೇ 'ಪ್ರಜಾವಾಣಿ'ಗೆ ನೀಡಿದ ಪುಟ್ಟ ಸಂದರ್ಶನದ ಆಯ್ದ ಭಾಗ..

• ವಿಮಾನ ನಿಲ್ದಾಣ ನಿಮ್ಮ ಕನಸೇ?

ಸನ್ಮಾನ್ಯ ಯಡಿಯೂರಪ್ಪನವರ ಕನಸು ಇದು. ಅವರು ಈ ಹಿಂದೆ ಡಿಸಿಎಂ ಇದ್ದಾಗ ದೇವರು ಕೊಟ್ಟ ಎಲ್ಲ ಸವಲತ್ತು ಇಲ್ಲಿದೆ. ಸಂಸ್ಕೃತಿ, ಪರಂಪರೆ, ಪ್ರವಾಸೋದ್ಯಮ, ಕೈಗಾರಿಕೆ, ವಾಣಿಜ್ಯ ಚಟುವಟಿಕೆಯ ಕಾಂಬಿನೇಶನ್ ಇರುವ ಜಿಲ್ಲೆಗೆ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಶ ಕೊಡಲು ವಿಮಾನ ನಿಲ್ದಾಣ ಉತ್ತಮ ಸಾಧನ ಆಗಲಿದೆ ಎಂದು ಈ ಚಿಂತನೆ ಮಾಡಿದರು. ಆವತ್ತಿನ ಈ ಪ್ರಯತ್ನ ಆವತ್ತು ಶಂಕುಸ್ಥಾಪನೆ ಆಗಿ ಟೆಂಡರ್ ಕೂಡ ಆಗಿತ್ತು. ಅದಾದ ಮೇಲೆ ಏಳೆಂಟು ವರ್ಷ ಏನೂ ಆಗಲಿಲ್ಲ. ಆವತ್ತಿನ ಸರ್ಕಾರಗಳು ಏನೂ ಮಾಡಲಿಲ್ಲ. ಯೋಗಾಯೋಗ. ವಿಮಾನ ನಿಲ್ದಾಣ ಪೂರ್ಣಗೊಳಿಸಲು ಮತ್ತೆ ಯಡಿಯೂರಪ್ಪ ಅವರೇ ಬರಬೇಕಾಯಿತು.

• ರೈಲ್ವೆಗೆ ಅಂತಿಮ ಬಿಂದು ಶಿವಮೊಗ್ಗ ಜಿಲ್ಲೆ ಎಂಬಂತಾಗಿತ್ತು. ಅಲ್ಲಿಂದಲೂ ಮುಂದೆ ಹಾದಿ ಇದೆ ಎಂದು ತೋರಿಸಿಕೊಟ್ಟಿದ್ದೀರಿ. ಅದೆಲ್ಲಾ ಹೇಗಾಯ್ತು?

ಮೊದಲ ಬಾರಿಗೆ ಎಂಪಿ ಆದಾಗ ತಾಳಗುಪ್ಪದವರೆಗೆ ಮೀಟರ್‌ಗೇಜ್ ಇತ್ತು. ಅದನ್ನು ಬ್ರಾಡ್‌ಗೇಜ್ ಮಾಡಲಾಯಿತು. ಅದಾದ ನಂತರ ತಾಳಗುಪ್ಪದಿಂದ ಮುಂದಕ್ಕೆ ಮಾಡಲು ಪಶ್ಚಿಮ ಘಟ್ಟದ ವಿಚಾರಗಳು ಅಡ್ಡಿಯಾದವು. ಹಾಗಾಗಿ ಶಿವಮೊಗ್ಗ ಅಂತಿಮ ಬಿಂದು ಆಗಿತ್ತು.

ಬೀರೂರು ಜಂಕ್ಷನ್‌ನಿಂದ ಶಿವಮೊಗ್ಗದತ್ತ ತಿರುಗುತ್ತಿದ್ದಂತೆಯೇ ಮುಖ್ಯ ರೈಲ್ವೆ ಹಾದಿಯಿಂದ ಹೊರಗೆ ಬರುತ್ತಿದ್ದೆವು. ಹೀಗಾಗಿ ಮತ್ತೆ ಮುಖ್ಯ ಹಾದಿಯತ್ತ ಹೊರಳಲು ರಾಣೆಬೆನ್ನೂರು ಸೂಕ್ತ ಸ್ಥಳ ಎಂದು ಚಿಂತನೆ ಮಾಡಿ ₹1200 ಕೋಟಿಯ ಯೋಜನೆ ಇದು. ಮೊದಲ ಹಂತದಲ್ಲಿ ₹600 ಕೋಟಿ ಬಿಡುಗಡೆ ಆಗಿದ್ದು, ಪ್ರಧಾನಮಂತ್ರಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಜೊತೆಗೆ ಕೋಟೆ ಗಂಗೂರು ಕೋಚಿಂಗ್ ಸೆಂಟರ್ ಕೂಡ ₹100 ಕೋಟಿ ವೆಚ್ಚದಲ್ಲಿ ಆರಂಭವಾಗಲಿದೆ.

• ಸಂಸದರಾಗಿ ಕಿರಿಯ ವಯಸ್ಸಿನಲ್ಲಿ ಇಷ್ಟೊಂದು ಸಾಧನೆಗೆ ಪ್ರೇರಕ ಶಕ್ತಿ ಏನು?

ಪೂಜ್ಯ ತಂದೆಯವರ ರಾಜಕೀಯ ಹೆಜ್ಜೆ. ಅಭಿವೃದ್ಧಿಯ ಚಿಂತನೆಯಲ್ಲಿನ ಕೆಲವು ಅಂಶಗಳನ್ನು ನಾನು ಅಳವಡಿಸಿಕೊಂಡಿದ್ದೇನೆ. ಆರ್‌ಎಸ್‌ಎಸ್ ಶಾಲೆಯಲ್ಲಿ ನಾನು ಓದಿದ್ದು. ನಮ್ಮನ್ನು ಬೆಳೆಸಿದ ಪರಿವಾರದ ಹಿರಿಯರು ಹಾಗೂ ಜಿಲ್ಲೆಯ ರಾಜಕೀಯ ಮುಖಂಡರ ಮಾರ್ಗದರ್ಶನ ಸಿಗುತ್ತಿದೆ. ಇದು ಸಾಧನೆಗೆ ಪ್ರೇರಕ ಶಕ್ತಿಯಾಗಿದೆ.

• ನಿಮ್ಮ ಮುಂದಿನ ಕನಸು ಏನು?

ನಮ್ಮ ಶರಾವತಿ ಮುಳುಗಡೆಯ ಜನರು 1955ರಲ್ಲಿ ಮುಳುಗಡೆ ಆದರೂ ಇನ್ನೂ ಅವರಿಗೆ ನ್ಯಾಯ ಸಿಕ್ಕಿಲ್ಲ. ಅವರಿಗೆ ನ್ಯಾಯ ಕೊಡಿಸುವುದು ನನ್ನ ತುಂಬಾ ವರ್ಷಗಳ ಕನಸು. ಅವರಿಗೆ ಕಾನೂನಾತ್ಮಕವಾಗಿ ಸಾಗುವಳಿ ಜಮೀನು ಹಾಗೂ ವಾಸಸ್ಥಳಕ್ಕೆ ಹಕ್ಕುಪತ್ರ ಕೊಡಿಸುವ ಪ್ರಯತ್ನ ಮುಂದುವರೆಸುವೆ. ಹೊಸನಗರ, ಸಾಗರ, ಬೈಂದೂರಿನ ಗುಡ್ಡಗಾಡಿನಲ್ಲಿ ಟೆಲಿಫೋನ್ ಸಿಗ್ನಲ್ ಸಮಸ್ಯೆ ಇದೆ. ಅದನ್ನು ಸರಿಪಡಿಸಲು ಮುಂದಾಗಿರುವೆ. ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಿ ಶಿವಮೊಗ್ಗವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೆಜ್ಜೆ ಇಡುವೆ.

‘ಬಿಐಸಿ ಹಬ್ಬ’ದಲ್ಲಿ ಗಮನಸೆಳೆದ ಲೋಕೊಮೊಟಿವ್ ಎಂಜಿನ್ ರೈಲುಗಳ ಮಾಹಿತಿ

ನಾದದಲೆಯ ಪುಳಕ; ಇತಿಹಾಸದ ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನರಂಜಿಸಿದ ಸಂಗೀತದ ನಿನಾದಕ್ಕೆ ತಲೆದೂಗಿದ ಪ್ರೇಕ್ಷಕರು, ಬೆಂಗಳೂರಿನ ಇತಿಹಾಸದ ಅನಾವರಣ, ಸರ್ಕಾರದ ಧೋರಣೆ ಮತ್ತು ನಡಾವಳಿಗಳನ್ನು ಒರೆಗೆ ಹಚ್ಚುವಂತಹ ಗೋಷ್ಠಿಗಳು, ಮಕ್ಕಳ ಕಲರವ...

ನಗರದ ದೊಮ್ಮಲೂರಿನಲ್ಲಿರುವ ‘ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್’ (ಬಿಐಸಿ) ಆಯೋಜಿಸಿರುವ ಐದನೇ ಆವೃತ್ತಿಯ ‘ಬಿಐಸಿ ಹಬ್ಬ’ದಲ್ಲಿನ ವೇದಿಕೆಗಳಲ್ಲಿ ಶನಿವಾರ ಕಂಡ ನೋಟಗಳಿವು.

ಐಶ್ವರ್ಯ ವಿದ್ಯಾ ರಘುನಾಥ್ ಮತ್ತು ಬೃಂದಾ ಮಾಣಿಕ್‌ವಾಸಕನ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ಸಂಗೀತ ಪ್ರೇಮಿಗಳ ಮನತಣಿಸಿತು. ಚಾರುಲತಾ ರಾಮಾನುಜನ್ ಅವರು ವಯಲಿನ್, ದೆಹಲಿ ಎಸ್. ಸಾಯಿರಾಮ್ ಅವರು ಮೃದಂಗ ಮತ್ತು ಚಂದ್ರಶೇಖರ್ ಶರ್ಮಾ ಅವರು ಘಟಂನಲ್ಲಿ ಸಾಥ್ ನೀಡಿದರು.

‘ನಮ್ಮ ಬೆಂಗಳೂರಿನ ಕಥೆಗಳು’ ವೇದಿಕೆಯು ಬೆಂಗಳೂರಿನ ಇತಿಹಾಸ ಮತ್ತು ಈಗಿನ ಸ್ಥಿತಿಗತಿಯನ್ನು ತೆರೆದಿಟ್ಟಿತು.

ಲೋಕೊಮೊಟಿವ್ ಎಂಜಿನ್ ರೈಲುಗಳ ಕಥೆಯನ್ನು ಬಿಚ್ಚಿಟ್ಟ ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್. ರಘುನಂದನ್, ‘ಬೆಂಗಳೂರಿನಲ್ಲಿ ಆರು ಲೋಕೊಮೊಟಿವ್ ಎಂಜಿನ್ ರೈಲುಗಳಿವೆ. ಈ ರೈಲುಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ’ ಎಂದು ವಿಷಾದ ವ್ಯಕ್ತಪಡಿಸಿದರು.

‘1888ರ ಲೋಕೊಮೊಟಿವ್ ಎಂಜಿನ್ ರೈಲು ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯದ ಆವರಣದಲ್ಲಿದೆ. ನಗರ ರೈಲು ನಿಲ್ದಾಣದಲ್ಲಿ 1931ರ ರೈಲು ಮತ್ತು ಯಲಹಂಕದ ರೈಲು ಗಾಲಿ ಕಾರ್ಖಾನೆ ಆವರಣದಲ್ಲಿ 1954ರ ರೈಲುಗಳನ್ನು ಪ್ರದರ್ಶನಕ್ಕಿರಿಸಲಾಗಿದೆ. ಇಂದಿರಾ ಗಾಂಧಿ ಸಂಗೀತ ಕಾರಂಜಿ ಉದ್ಯಾನದಲ್ಲಿ ಹಳೆಯ ಲೋಕೊಮೊಟಿವ್ ಎಂಜಿನ್ ರೈಲನ್ನು ಪ್ರದರ್ಶನಕ್ಕೆ ಇಡಲಾಗಿದೆ. ಜಾಫರ್ ಷರೀಫ್ ಅವರು ರೈಲ್ವೆ ಸಚಿವರಾಗಿದ್ದ ಸಂದರ್ಭದಲ್ಲಿ ಇದನ್ನು ತರಲಾಗಿತ್ತು. ಪ್ರತಿಯೊಂದು ಲೋಕೊಮೊಟಿವ್ ಎಂಜಿನ್ ವಿಶಿಷ್ಟವಾಗಿದೆ. ಈ ರೈಲುಗಳಿಗೆ ಹೊಸ ಸ್ಪರ್ಶ ನೀಡಿ ಸಂಚರಿಸುವಂತೆ ಮಾಡಲು ಸಾಧ್ಯವೇ ಎನ್ನುವ ಬಗ್ಗೆಯೂ ಯೋಚಿಸಬೇಕಾಗಿದೆ. ದಾರ್ಜಿಲಿಂಗ್‌ನಲ್ಲಿ ಲೋಕೊಮೊಟಿವ್ ಎಂಜಿನ್ ಸಂಚರಿಸುತ್ತಿದೆ. ಈ ಎಂಜಿನ್‌ಗಳಲ್ಲಿ ಬಾಯ್ಲರ್ ಪ್ರಮುಖ ಪಾತ್ರವಹಿಸುತ್ತದೆ’ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ಅಂದು ಹೇಗಿತ್ತು, ಈಗ ಏನಾಗುತ್ತಿದೆ ಎಂಬುದನ್ನು ತುಲನಾತ್ಮಕವಾಗಿ ವಿಶ್ಲೇಷಿಸುವ ಕಿರುಚಿತ್ರಗಳು ಸಹ ಗಮನಸೆಳೆದವು.

ಇತ್ತೀಚೆಗೆ ನಗರದಲ್ಲಿ ಸುರಿದ ಭಾರಿ ಮಳೆಯಿಂದ ಉಂಟಾದ ಪ್ರವಾಹ ಮತ್ತು ನಂತರ ಜನರು ಅನುಭವಿಸಿದ ಸಂಕಷ್ಟಗಳ ಕುರಿತಾದ ಕಿರುಚಿತ್ರವು ಅಭಿವೃದ್ಧಿಯ ಪಥ ಹೇಗಿರಬೇಕು ಎನ್ನುವುದನ್ನು ವಿಶ್ಲೇಷಣೆಗೆ ಒಳಪಡಿಸಿತ್ತು.

‘ಮನೆಯಲ್ಲಿ ಸೊಂಟದ ಮಟ್ಟ ನೀರು. ಆಹಾರ ಧಾನ್ಯಗಳು ಸಹ ನೀರಲ್ಲಿ ಮುಳುಗಿದ್ದವು. ವಾಷ್‌ರೂಮ್‌ನಲ್ಲಿಯೂ ನೀರು ಇರಲಿಲ್ಲ’ ಎಂದು ನಾಗರಿಕರು ಅಳಲು ತೋಡಿ ಕೊಂಡ ದೃಶ್ಯಗಳನ್ನು ಸೆರೆಹಿಡಿದು, ಅದನ್ನು ಕಿರುಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಈಗಿರುವ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ರೂಪಿಸದಿದ್ದರೆ ಮತ್ತೊಮ್ಮೆ ಸಂಕಷ್ಟಗಳು ಎದುರಾಗಲಿವೆ ಎನ್ನುವ ಸಂದೇಶವನ್ನು ಸಹ ಕಿರುಚಿತ್ರದ ಮೂಲಕ ನೀಡಲಾಯಿತು.

ವನ್ಯಜೀವಿ ಛಾಯಾಗ್ರಾಹಕ 16 ವರ್ಷದ ಆಹಾನ್ ದೇಸಾಯಿ ಪ್ರದರ್ಶಿಸಿದ ಕಿರುಚಿತ್ರ ಸಹ ವಿಭಿನ್ನವಾಗಿತ್ತು. ಜಕ್ಕೂರು, ತಿಮ್ಮಸಂದ್ರ ಸೇರಿ ನಗರದ ವಿವಿಧ ಕೆರೆಗಳ ಆವರಣದಲ್ಲಿ ಪಕ್ಷಿಗಳನ್ನು ಇವರು ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.

ಈ ಕಿರುಚಿತ್ರಗಳ ಪ್ರದರ್ಶನಕ್ಕೆ 60 ಅರ್ಜಿಗಳು ಬಂದಿದ್ದವು. ಇವುಗಳಲ್ಲಿ 20 ಅರ್ಜಿಗಳನ್ನು ಆಯ್ಕೆ ಮಾಡಲಾಗಿತ್ತು.

ಬಿಐಸಿ ಹಬ್ಬದಲ್ಲಿ ಪುಟಾಣಿಗಳ ಲೋಕವೂ ತೆರೆದುಕೊಂಡಿತ್ತು. ಮಕ್ಕಳ ಕೂಟ ಗ್ಯಾಲರಿಯಲ್ಲಿ ಮಣ್ಣಿನ ಮೂರ್ತಿಗಳ ತಯಾರಿ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಹಬ್ಬದಲ್ಲಿ ವೈವಿಧ್ಯಮಯ ವಿಷಯಗಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವೂ ನಡೆಯಿತು.

‘ಪೋಕ್ಸೊ: ತ್ವರಿತಗತಿಯಲ್ಲಿ ವಿಚಾರಣೆ ನಡೆಯಲಿ’

‘ಪೋಕ್ಸೊಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ದಾಖಲಾದ ಒಂದು ವರ್ಷದ ಒಳಗೆ ಪೂರ್ಣಗೊಳಿಸಬೇಕು ಎಂದು ಕಾಯ್ದೆ ರೂಪಿಸಲಾಗಿದ್ದು, ಇನ್ನೂ ಶೇಕಡ 92.6ರಷ್ಟು ಪ್ರಕರಣಗಳು ಬಾಕಿ ಉಳಿದಿವೆ’ ಎಂದು ಹಿರಿಯ ಕಾನೂನು ಸಂಶೋಧಕಿ ಶ್ರುತಿ ರಾಮಕೃಷ್ಣನ್ ತಿಳಿಸಿದರು.

ಬಿಐಸಿ ಹಬ್ಬದಲ್ಲಿ ನೀತಿಗಳ ಕುರಿತಾದ ಗೋಷ್ಠಿಯಲ್ಲಿ ‘ಮಕ್ಕಳ ಸ್ನೇಹಿಯಾಗಿ ಪೋಕ್ಸೊ ಕಾಯ್ದೆಯ ಅನುಷ್ಠಾನಗೊಳಿಸುವಲ್ಲಿ ನ್ಯಾಯಾಂಗದ ಪಾತ್ರ’ ಕುರಿತು ಮಾತನಾಡಿದ ಅವರು, ‘ಸಂತ್ರಸ್ತ ಮಕ್ಕಳಿಗೆ ಮತ್ತು ಕುಟುಂಬಕ್ಕೆ ನ್ಯಾಯಾಲಯ ವ್ಯವಸ್ಥೆಯ ಬಗ್ಗೆ ವಿಚಾರಣೆಗೂ ಮುನ್ನವೇ ಮಾರ್ಗದರ್ಶನ ನೀಡಬೇಕು. ಬಹುತೇಕ ಸಂದರ್ಭಗಳಲ್ಲಿ ಸಂತ್ರಸ್ತ ಮಕ್ಕಳು ನ್ಯಾಯಾಲಯದಲ್ಲೇ ಸಾಕ್ಷಿ ಹೇಳುವಾಗ ಸರ್ಕಾರಿ ವಕೀಲರನ್ನು ಮೊದಲ ಬಾರಿ ಭೇಟಿಯಾಗುತ್ತಾರೆ’ ಎಂದರು.

‘ಅಂಚೆಪೇಟೆ, ಅಂಚೆಪಾಳ್ಯ, ಅಂಚೆಕೆರೆ...’

ಬೆಂಗಳೂರು ಸೇರಿದಂತೆ ಕರ್ನಾಟಕದ ಅಂಚೆ ಇತಿಹಾಸವನ್ನು ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ತೆರೆದಿಟ್ಟರು.

‘ಚಿಕ್ಕಪೇಟೆಯಲ್ಲಿ ಅಂಚೆಪೇಟೆ ಇದೆ. ಕೆಂಗೇರಿಯಲ್ಲಿ ಅಂಚೆ ಕೆರೆ ಇದೆ. ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಅಂಚೆಬೆಟ್ಟನಹಳ್ಳಿ, ನೆಲಮಂಗಲದ ಬಳಿ ಅಂಚೆಪಾಳ್ಯ ಹೆಸರಿನ ಪ್ರದೇಶಗಳಿವೆ. ಇದೇ ರೀತಿ ಅಂಚೆ ಹೆಸರು ಹೊಂದಿರುವ 15 ಸ್ಥಳಗಳು ಕರ್ನಾಟಕದಲ್ಲಿವೆ’ ಎಂದು ವಿವರಿಸಿದರು.

‘ನಗರದ ಪ್ರಧಾನ ಅಂಚೆ ಕಚೇರಿ (ಜಿಪಿಒ) ಕಟ್ಟಡವನ್ನು 1831ರಲ್ಲಿ ನಿರ್ಮಿಸಲಾಗಿದೆ. ಬಳ್ಳಾರಿಯಲ್ಲಿ ವಿಭಾಗೀಯ ಕಚೇರಿಯನ್ನು 1870ರಲ್ಲಿ ನಿರ್ಮಿಸಿದ್ದು, ಈಗಲೂ ಸುಸಜ್ಜಿತವಾಗಿದೆ. ಈ ಕಟ್ಟಡದಲ್ಲಿ 30 ಕಮಾನುಗಳಿವೆ. ಮೂಲ ಸ್ವರೂಪದಲ್ಲೇ ಈ ಕಟ್ಟಡವನ್ನು ಉಳಿಸಿಕೊಳ್ಳಲಾಗಿದ್ದು, ಅಲ್ಲಿ ಈಗಲೂ ಅಂಚೆ ಕಚೇರಿ ಕಾರ್ಯನಿರ್ವಹಿಸುತ್ತಿದೆ’ ಎಂದು ತಿಳಿಸಿದರು.

ಬಿಐಸಿ ಹಬ್ಬದಲ್ಲಿ ವಿದ್ಯಾರ್ಥಿಗಳು ಕಲಾಕೃತಿಗಳನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಬಿಐಸಿ ಹಬ್ಬದಲ್ಲಿ ಐಶ್ವರ್ಯ ವಿದ್ಯಾ ರಘುನಾಥ್ ಮತ್ತು ಬೃಂದಾ ಮಾಣಿಕ್‌ವಾಸಕನ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನೀಡಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ನಾಳೆಯಿಂದ ಪುಸ್ತಕ ಪ್ರದರ್ಶನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿರುವ ಗ್ರಂಥಾಲಯ ವತಿಯಿಂದ ಫೆ.27ರಿಂದ ಮಾರ್ಚ್ 1ರವರೆಗೆ ಪುಸ್ತಕ ಪ್ರದರ್ಶನ ಆಯೋಜಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯವು ಮೊದಲ ಬಾರಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಸಾರ್ವಜನಿಕರು ಸಹ ಭಾಗವಹಿಸಬಹುದಾಗಿದೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತರು ಗ್ರಂಥಾಲಯ ಮತ್ತು ಮಾಹಿತಿ ವಿಭಾಗದ ಪ್ರಾಧ್ಯಾಪಕ ಪ್ರೊ. ರಮೇಶ್ (ಮೊಬೈಲ್: 9481245961 ಅಥವಾ bbramesha@gmail.com) ಅವರನ್ನು ಸಂಪರ್ಕಿಸಬಹುದಾಗಿದೆ.

ತಂಬಾಕು ಉತ್ಪನ್ನ ಬಳಕೆ ಹೆಚ್ಚಳ

ಬೆಂಗಳೂರು: ‘ತಂಬಾಕು ಉತ್ಪನ್ನಗಳ ಬಳಕೆಯು ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ರಾಜ್ಯದಲ್ಲಿ ಶೇ 22.8ರಷ್ಟು ವಯಸ್ಕರು ತಂಬಾಕು ಉತ್ಪನ್ನ ಬಳಸುತ್ತಿದ್ದಾರೆ’ ಎಂದು ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕ ಕಳವಳ ವ್ಯಕ್ತಪಡಿಸಿದೆ.

ತಂಬಾಕು ಉತ್ಪನ್ನಗಳ ಬಳಕೆಯ ಅಪಾಯದ ಬಗ್ಗೆ ಜಾಗೃತಿ ಮೂಡಿಸಲು ಘಟಕವು ಇದೇ 28ರಂದು ಆರೋಗ್ಯಸೌಧದಲ್ಲಿ ಕಾರ್ಯಾಗಾರ ಹಮ್ಮಿಕೊಂಡಿದೆ. ತಜ್ಞರು ತಂಬಾಕು ಬಳಕೆಯಿಂದಾಗುವ ಅನಾರೋಗ್ಯ ಸಮಸ್ಯೆಗಳು ಹಾಗೂ ಅದರ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಿದ್ದಾರೆ.

‘ರಾಜ್ಯದ 7 ಕೋಟಿ ಜನರಲ್ಲಿ 3 ಕೋಟಿ ಮಂದಿ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಈ ಉತ್ಪನ್ನಗಳನ್ನು ಬಳಸುತ್ತಿರುವ ಶೇ 22.8ರಷ್ಟು ವಯಸ್ಕರಲ್ಲಿ ಶೇ 8.8ರಷ್ಟು ಮಂದಿ ಧೂಮಪಾನಿಗಳಾಗಿದ್ದಾರೆ. ಶೇ 16.3ರಷ್ಟು ಮಂದಿ ಧೂಮಪಾನರಹಿತ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ’ ಎಂದು ಘಟಕ ಹೇಳಿದೆ.

‘ತಂಬಾಕು ಉತ್ಪನ್ನ ಬಳಸುವ ಯುವಜನರಲ್ಲಿ ಹೆಚ್ಚಿನವರು 15 ವರ್ಷದವರಾಗಿದ್ದಾರೆ. ತಂಬಾಕಿನ ಅಪಾಯದ ಬಗ್ಗೆ ಅರಿವಿದ್ದರೂ, ಯುವಜನರಲ್ಲಿ ತಂಬಾಕಿನ ಬಗೆಗೆ ಅಲಕ್ಷ್ಯ ಪ್ರವೃತ್ತಿ ಹೆಚ್ಚಾಗಿದೆ’ ಎಂದು ಘಟಕ ಪ್ರಕಟಣೆಯಲ್ಲಿ ತಿಳಿಸಿದೆ.

ನಗರದ ಬಿಐಟಿ ಕಾಲೇಜಿನಲ್ಲಿ ಶನಿವಾರ ಆರ್‌.ವಿ.ದೇವರಾಜ್ ಸೇವಾ ಪ್ರತಿಷ್ಠಾನ ಆಯೋಜಿಸಿದ್ದ ಚಿಕ್ಕಪೇಟೆ ಜನೋತ್ಸವ ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ನಿವೃತ್ತ ನ್ಯಾಯಮೂರ್ತಿ ಎನ್‌.ಸಂತೋಷ್ ಹೆಗ್ಡೆ ನೇಮಕಾತಿ ಪತ್ರ ನೀಡಿದರು. ಆರ್‌.ವಿ.ದೇವರಾಜ್, ಸಪ್ತಮಿ ಗೌಡ ಇದ್ದಾರೆ

ಬಿಜೆಪಿಗೆ ಮತ ಕೊಟ್ಟರೆ ಪ್ರತಿ ವರ್ಷ ನಿವೇಶನ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ‘ಇನ್ನು ಮುಂದೆ ಬಿಜೆಪಿಗೆ ಮತ ಹಾಕುತ್ತಲೇ ಇರಿ. ನಾವು ಪ್ರತಿ ವರ್ಷವೂ ನಿವೇಶನ ನೀಡುತ್ತೇವೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಶನಿವಾರ ಹೇಳಿದರು.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಹಾಗೂ ಪುರಸಭೆ ಜಂಟಿಯಾಗಿ ಶನಿವಾರ ಹಮ್ಮಿಕೊಂಡಿದ್ದ ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಗುಂಡ್ಲುಪೇಟೆಯಲ್ಲಿ 30 ವರ್ಷಗಳಿಂದ ಯಾರಿಗೂ ನಿವೇಶನ ಹಂಚಿಕೆ ಮಾಡಿರಲಿಲ್ಲ. ಬಡತನಕ್ಕೆ ಜಾತಿ, ಕುಲ, ಪಕ್ಷ ಎಂಬುದಿಲ್ಲ. ಅರ್ಹ ಬಡವರಿಗೆಲ್ಲರಿಗೂ ನಿವೇಶನ ಹಂಚುತ್ತೇವೆ’ ಎಂದರು.

‘ಬೆಂಗಳೂರಿನಲ್ಲಿ ಒಂದು ಲಕ್ಷ ಮನೆ ನಿರ್ಮಿಸಲು ಪ್ರಧಾನಿ ನರೇಂದ್ರ ಮೋದಿ ₹ 600 ಕೋಟಿ ಕೊಟ್ಟಿದ್ದರು. ಆದರೆ, ಅಂದಿನ ಸರ್ಕಾರ ಜಾಗವನ್ನು ಹುಡುಕಲಿಲ್ಲ. ನಾನು ಸಚಿವನಾದ ಬಳಿಕ 52 ಸಾವಿರ ಮನೆ ನಿರ್ಮಿಸಿ, 5 ಸಾವಿರ ಫಲಾನುಭವಿಗಳಿಗೆ ಹಂಚಲಾಗಿದೆ’ ಎಂದರು.

‘ಎಲ್ಲರೂ ಒಂದು ದಿನ ವಿದಾಯ ಹೇಳಲೇಬೇಕಲ್ಲವೇ? ಬಿ.ಎಸ್. ಯಡಿಯೂರಪ್ಪ ತಮ್ಮ ವಯಸ್ಸಿನ ಇತಿಮಿತಿ ಅರ್ಥಮಾಡಿಕೊಂಡು ತೀರ್ಮಾನಿಸಿದ್ದಾರೆ. ಚುನಾವಣಾ ಕಣದಿಂದ ನಿವೃತ್ತಿ ಹೊಂದುವುದು ಒಳ್ಳೆಯದು ಅನಿಸಿರಬೇಕು. ದೇಶದಲ್ಲಿ ಬಹುತೇಕರು ಬಂದು ಹೋಗಿದ್ದಾರೆ. ನಾನೂ ಮುಂದೊಂದು ದಿನ ವಿದಾಯ ಹೇಳಲೇಬೇಕು’ ಎಂದರು.

ಪಿಐಎಲ್ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಅತ್ಯಾಚಾರ ಕಾನೂನು ಜಾರಿಗೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪಿಐಎಲ್ ಅನ್ನು ವಜಾಗೊಳಿಸಲು ಆಗ್ರಹಿಸಿ, ಸೇವ್ ಇಂಡಿಯನ್ ಫ್ಯಾಮಿಲಿ ಫೌಂಡೇಶನ್‌ನ ಪುರುಷ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿರುದ್ಧ ರಾಷ್ಟ್ರವ್ಯಾಪಿ ಉಪವಾಸ ಸತ್ಯಾಗ್ರಹ ನಡೆದಿದ್ದು, ಅದರ ಅಂಗವಾಗಿ ನಗರದಲ್ಲೂ ಪ್ರತಿಭಟನೆ ನಡೆಯಿತು.

‘ಈ ಕಾನೂನು ಜಾರಿಯಾದರೆ ಪತಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಸಾಧ್ಯತೆ ಇದೆ. ಅಮಾಯಕರು ಜೈಲು ಪಾಲಾಗುತ್ತಾರೆ. ಉದ್ಯೋಗ, ಆಸ್ತಿ ಹಾಗೂ ಸಾಮಾಜಿಕ ಖ್ಯಾತಿ ಕಳೆದುಕೊಳ್ಳುವ ಸಾಧ್ಯತೆಯಿದೆ. ಪುರುಷರು ಆಘಾತಕ್ಕೂ ಒಳಗಾಗಲಿದ್ದಾರೆ’ ಎಂದು ಪ್ರತಿಭಟನಕಾರರು ಹೇಳಿದರು.

ವೈವಾಹಿಕ ಅತ್ಯಾಚಾರ ಕಾನೂನಿನ ಮೇಲಿನ ಪಿಐಎಲ್ ವಜಾಗೊಳಿಸಬೇಕು. ಮದುವೆಯಲ್ಲಿ ಲೈಂಗಿಕ ದೌರ್ಜನ್ಯದ ವಿಷಯವನ್ನು ಸಂಸತ್ತು ಪರಿಶೀಲಿಸಬಹುದು. ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಪುರುಷ ಸಂತ್ರಸ್ತರಿಗೆ ನ್ಯಾಯಾಲಯದಿಂದ ರಕ್ಷಣೆ ನೀಡಬೇಕು. ತನಿಖೆಯ ಸಮಯದಲ್ಲಿ ಪೊಲೀಸ್ ಠಾಣೆಗಳಲ್ಲಿ ಸುಳ್ಳು ಆರೋಪಗಳನ್ನು ಪರಿಶೀಲಿಸಬೇಕು. ಪ್ರತಿ ಪೊಲೀಸ್ ಠಾಣೆಯಲ್ಲಿ ಸುಳ್ಳು ಪ್ರಕರಣಗಳ ಮುಕ್ತಾಯದ ಅಂಕಿಅಂಶ ಪ್ರಕಟಿಸಬೇಕು ಮತ್ತು ವಾರ್ಷಿಕ ಲೆಕ್ಕಪರಿಶೋಧನೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಅನಿಲ್‌ಕುಮಾರ್, ಸುಜಿತ್, ಶಿವಪ್ರಕಾಶ್, ನವೀನ್ ಕುಮಾರ್ ಇದ್ದರು.

ಸೇವ್ ಇಂಡಿಯನ್ ಫ್ಯಾಮಿಲಿ ಫೌಂಡೇಶನ್ ಪುರುಷರ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು

ಮೌಲ್ಯಗಳ ಪುನರ್ ಸ್ಥಾಪನೆ ಅಗತ್ಯ: ಸಂತೋಷ್ ಹೆಗ್ಡೆ

ಬೆಂಗಳೂರು: ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಜನರ ಮನಃಸ್ಥಿತಿ ಬದಲಿಸಲು, ಮಾನವೀಯ ಮೌಲ್ಯಗಳನ್ನು ಪುನರ್ ಸ್ಥಾಪಿಸಲು ಯುವಕರು ಕೈಜೋಡಿಸಬೇಕು ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ಬಿಐಟಿ ಕಾಲೇಜಿನಲ್ಲಿ ಶನಿವಾರ ಆರ್‌.ವಿ.ದೇವರಾಜ್ ಸೇವಾ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಚಿಕ್ಕಪೇಟೆ ಜನೋತ್ಸವ ಉದ್ಯೋಗ ಮೇಳದಲ್ಲಿ ಅವರು ಮಾತನಾಡಿದರು.

‘ಅಪರಾಧಗಳನ್ನು, ಭ್ರಷ್ಟಾಚಾರವನ್ನು ಹತ್ತಿರದಿಂದ ಕಂಡಿದ್ದೇನೆ. ಪ್ರಸ್ತುತ ಸನ್ನಿವೇಶಕ್ಕೆ ಸಮಾಜದ ಸ್ಥಿತಿಯೇ ಕಾರಣ. ಜೈಲಿಗೆ ಹೋಗಿಬಂದವರನ್ನು ಸ್ವಾಗತಿಸುವ, ಸತ್ಕರಿಸುವ ಮಟ್ಟಕ್ಕೆ ಜನರು ಬದಲಾಗಿದ್ದಾರೆ. ಶ್ರೀಮಂತರು, ಪ್ರಭಾವಿಗಳನ್ನು ಆರಾಧಿಸುತ್ತಿದ್ದಾರೆ. ದುರಾಸೆ, ಹಣದ ಪ್ರಭಾವ ಮಿತಿ ಮೀರಿದೆ ಎಂದರು.

ಮಾಜಿ ಶಾಸಕ ಆರ್‌.ವಿ.ದೇವರಾಜ್, ಬೆಂಗಳೂರು ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಅಶ್ವತ್ಥನಾರಾಯಣ, ನಟಿ ಸಪ್ತಮಿ ಗೌಡ, ಪ್ರಮುಖರಾದ ಮಮತಾ ದೇವರಾಜ್, ಆರ್.ವಿ.ಯುವರಾಜ್, ಗಂಡಸಿ ಸದಾನಂದಸ್ವಾಮಿ, ಮುರಳೀಧರ ಹಾಲಪ್ಪ ಮತ್ತಿತರರು ಉಪಸ್ಥಿತರಿದ್ದರು.

ಉದ್ಯೋಗ ಮೇಳದಲ್ಲಿ 127 ಕಂಪನಿಗಳು ಭಾಗವಹಿಸಿದ್ದವು. 20 ಅಂಗವಿಕಲರೂ ಸೇರಿ 500ಕ್ಕೂ ಹೆಚ್ಚು ಯುವಕ, ಯುವತಿಯರಿಗೆ ಉದ್ಯೋಗದ ಖಾತ್ರಿಪತ್ರ ನೀಡಲಾಯಿತು.

‘ದೇಶ ವಿಭಜಿಸಲು ಬಿಜೆಪಿ ಯತ್ನ’

ಪೂರ್ನಿಯಾ, ಬಿಹಾರ (ಪಿಟಿಐ): ‘ಬಿಜೆಪಿಯು ಜಾತಿ ಹಾಗೂ ಧಾರ್ಮಿಕ ಮಾರ್ಗಗಳ ಮೂಲಕ ದೇಶವನ್ನು ವಿಭಜಿಸಲು ಯತ್ನಿಸುತ್ತಿದೆ’ ಎಂದು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಶನಿವಾರ ಆರೋಪಿಸಿದ್ದಾರೆ.

ಜೆಡಿಯು ಮತ್ತು ಆರ್‌ಜೆಡಿ ಮೈತ್ರಿಕೂಟದ ರ‍್ಯಾಲಿಯಲ್ಲಿ ವರ್ಚುವಲ್ ಆಗಿ ಮಾತನಾಡಿದ ಅವರು, ‘ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದ ಅಲ್ಪಸಂಖ್ಯಾತರ ಮತ್ತು ದುರ್ಬಲ ವರ್ಗದವರ ವಿರುದ್ಧವಿದೆ’ ಎಂದಿದ್ದಾರೆ.

‘2024ರ ಲೋಕಸಭಾ ಚುನಾವಣೆಯಲ್ಲಿ ಮತ್ತು 2025ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಮೈತ್ರಿಕೂಟವು ಜಯಗಳಿಸಲಿದೆ’ ಎಂದೂ ಹೇಳಿದ್ದಾರೆ.

‘ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಮೀಸಲಾತಿಗೆ ವಿರುದ್ಧವಿದೆ ಮತ್ತು ಸಂವಿಧಾನವನ್ನು ಬದಲಾಯಿಸಲು ಪ್ರಯತ್ನಿಸುತ್ತಿದೆ’ ಎಂದೂ ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ವೀಕ್ಷಕ ಎನ್‌.ಶ್ರೀನಿವಾಸ್ ಮಾತನಾಡಿದರು. ಚಿತ್ರದಲ್ಲಿ ಮುಖಂಡ ರಂಗನಾಥ್, ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಸಿ.ಆರ್‌.ಗೌಡ, ಕೆಪಿಸಿಸಿ ಸದಸ್ಯ ಖಲಿಮುಲ್ಲಾ, ಸಾದತ್ ಉಲ್ಲಾಖಾನ್ ಇದ್ದಾರೆ

‘ಕುಟುಂಬದೊಳಗೇ ನಡೆಯುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಕ್ಷಮಿಸಲಾರದ ದ್ರೋಹ’

ನವದೆಹಲಿ (ಪಿಟಿಐ): ‘ಕುಟುಂಬದೊಳಗೇ ನಡೆಯುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವು ಕ್ಷಮಿಸಲಾರದಂತಹ ದ್ರೋಹ. ಅದು ಮಗುವಿನ ನಂಬಿಕೆಗೆ ಮಾಡಿದ ಅಪಚಾರ. ಅಂತಹ ಸಂತ್ರಸ್ತರು ಎಲ್ಲಾ ಬಗೆಯ ಬೆಂಬಲಕ್ಕೆ ಅರ್ಹರು’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹಿಮಾ ಕೊಹ್ಲಿ ತಿಳಿಸಿದ್ದಾರೆ.

ದೆಹಲಿಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಚಿಲ್ಡ್ರನ್ ಫಸ್ಟ್’ ನಿಯತಕಾಲಿಕೆಯ ಮೂರನೇ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಈ ಬಗೆಯ ದೌರ್ಜನ್ಯಗಳು ಸಂತ್ರಸ್ತೆಯ ಮೇಲೆ ದೀರ್ಘಕಾಲಿಕ ಪರಿಣಾಮ ಉಂಟುಮಾಡುತ್ತವೆ. ಅನೇಕ ಬಾರಿ ಕುಟುಂಬ ಗೌರವದ ಹೆಸರಿನಡಿ ಇಂತಹ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತದೆ. ಇದು ವಿಪರ್ಯಾಸಕರ ಸಂಗತಿ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಕುಟುಂಬದೊಳಗೇ ನಡೆಯುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವು ಬಹಳ ಸೂಕ್ಷ್ಮವಾದ ವಿಷಯ. ನಿಷೇಧದ ಭೀತಿ ಹಾಗೂ ಮೌನದಿಂದಾಗಿಯೇ ಇಂತಹ ಪ್ರಕರಣಗಳು ಆಗಾಗ್ಗೆ ಮುಚ್ಚಿಹೋಗುತ್ತವೆ. ನಿರಂತರವಾದ ಜಾಗೃತಿ, ಲೈಂಗಿಕ ಶಿಕ್ಷಣ, ಸಂತ್ರಸ್ತೆಗೆ ಅಗತ್ಯ ಬೆಂಬಲ ಒದಗಿಸುವುದು, ಕಾನೂನು ಮತ್ತು ನೀತಿಗಳನ್ನು ಬಲಪಡಿಸುವುದು, ಸಮುದಾಯಗಳೊಂದಿಗೆ ತೊಡಗಿಸಿಕೊಳ್ಳುವುದು ಹೀಗೆ ಹಲವು ಉಪಕ್ರಮಗಳ ಮೂಲಕ ಇದಕ್ಕೆ ಕಡಿವಾಣ ಹಾಕಬಹುದು’ ಎಂದೂ ಹೇಳಿದ್ದಾರೆ.

ಚಿತ್ರಾವಳಿ

ತೆಲುಗು ವಿಜ್ಞಾನ ಸಮಿತಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಂಗೀತ ಕಲಾವಿದರಾದ ಚಿಂತಲಪಲ್ಲಿ ಆರ್. ಮಂಜುನಾಥ್ ಹಾಗೂ ಚಿಂತಲಪಲ್ಲಿ ಆರ್. ಗುರುರಾಜ್ ಅವರಿಗೆ ಸನ್ಮಾನ ಮಾಡಲಾಯಿತು. ಸಮಿತಿಯ ಅಧ್ಯಕ್ಷ ಎ. ರಾಧಾಕೃಷ್ಣರಾಜು, ಚಿಂತಲಪಲ್ಲಿ ಜಲಜಾ ಪ್ರಸಾದ್ ಹಾಗೂ ಸಮಿತಿಯವರು ಇದ್ದಾರೆ



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮಾರುತಿ ಮಂದಿರ ವಾರ್ಡ್‌ನಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ವತಿಯಿಂದ ನಿರ್ಮಿಸಲಾದ ಅಂಗನವಾಡಿ ಕಟ್ಟಡವನ್ನು ವಸತಿ ಸಚಿವ ವಿ. ಸೋಮಣ್ಣ ಉದ್ಘಾಟಿಸಿದರು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು, ಸಾರ್ವಜನಿಕರು ಇದ್ದರು

‘ದುಡ್ಡಿನ ಅಭಿಷೇಕ: ಮುಸಲ್ಮಾನರ ಪದ್ಧತಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಈಚಗೆ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಪಿಸಿಸಿ ವೀಕ್ಷಕ ಎನ್‌.ಶ್ರೀನಿವಾಸ್ ಅವರ ತಲೆ ಮೇಲೆ ನೋಟುಗಳನ್ನು ಸುರಿದಿದ್ದ ದೃಶ್ಯ ಸಾಮಾಜಿಕ ಜಾಲತಾಣ ಹಾಗೂ ಕೆಲವು ವಾಹಿನಿಗಳಲ್ಲಿ ವೈರಲ್ ಆಗಿ, ಕೆಲವರು ಪ್ರತಿಕ್ರಿಯೆ ನೀಡಲು ಕಾರಣವಾಗಿತ್ತು. ಆದರೆ, ಅದು ಮುಸಲ್ಮಾನರ ಪದ್ಧತಿಯಷ್ಟೆ ಎಂದು ಕಾಂಗ್ರೆಸ್ ಪಕ್ಷದವರು ಸ್ಪಷ್ಟನೆ ನೀಡಿದ್ದಾರೆ.

ಇದಕ್ಕೆ ಸ್ಪಷ್ಟನೆ ನೀಡಲು ಕರೆದಿದ್ದ ಸಭೆಯಲ್ಲಿ ಕೆಪಿಸಿಸಿ ಸದಸ್ಯ ಖಲೀಮುಲ್ಲಾ ಮಾತನಾಡಿ, ‘ಕಾಂಗ್ರೆಸ್ ಮುಖಂಡ ಸಾದತ್ ಉಲ್ಲಾಖಾನ್ ಅವರು ಹಿಂದಿನಿಂದಲೂ ಅವರ ಪೂರ್ವಜರು ಹಜರತ್ ಇದಾಯತ್ ಉಲ್ಲಾ ಖಾದ್ರಿ ಅವರ ನೆನಪಿನಲ್ಲಿ ಪ್ರತಿ ವರ್ಷ ಕಾರ್ಯಕ್ರಮ ಆಯೋಜಿಸುತ್ತಾರೆ. ಈ ವರ್ಷವೂ ಅದಕ್ಕೆ ಎಲ್ಲ ಧರ್ಮದವರನ್ನು ಆಹ್ವಾನಿಸಿದ್ದರು. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎನ್. ಶ್ರೀನಿವಾಸ್ ಅವರೂ ಕಾರ್ಯಕ್ರಮದಲ್ಲಿ ಇದ್ದರು. ಅವರಿಗೆ ತಲೆಯ ಮೇಲೆ ಅಕ್ಷತೆ ಹಾಕುವ ರೀತಿಯಲ್ಲಿ ಹಣದ ನೋಟುಗಳನ್ನು ಸುರಿದು ಗೌರವ ಸೂಚಿಸಿದ್ದಾರಷ್ಟೆ. ಮುಸ್ಲಿಂ ಧರ್ಮದಲ್ಲಿ ಉರುಸ್ ಸಂದರ್ಭದಲ್ಲಿ ಖವಾಲಿ ನಡೆಸುವಾಗ ಉತ್ತೇಜನ ನೀಡಲು ನೋಟುಗಳನ್ನು ಹಾಕುವ ಪದ್ಧತಿ ಇದೆ’ ಎಂದು ತಿಳಿಸಿದರು.

ವೀಕ್ಷಕ ಎನ್‌.ಶ್ರೀನಿವಾಸ್ ಮಾತನಾಡಿ, ‘ನಾನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ನನ್ನ ಮೇಲೆ ನೋಟುಗಳನ್ನು ಸುರಿದರು. ನನಗೂ ಆಶ್ಚರ್ಯವಾಯಿತು. ಆಗ ಸಮುದಾಯದ ಮುಖಂಡರು ಅತಿಥಿಗಳಿಗೆ ಗೌರವಿಸುವ ಪದ್ಧತಿ ಎಂದು ವಿವರಿಸಿದರು’ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ.ಆರ್‌.ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಜ್ರಘಟ್ಟೆ ನಾಗರಾಜು, ಲಕ್ಕೂರು ಖಲಿಮುಲ್ಲ, ರಂಗನಾಥ್, ಯುವ ಕಾಂಗ್ರೆಸ್ ಅಧ್ಯಕ್ಷ ನಾರಾಯಣಗೌಡ ಅವರೂ ಇದ್ದರು.

‘ವೀರಶೈವ ಲಿಂಗಾಯತರಿಗೆ ಕೇಂದ್ರದಿಂದ ಅನ್ಯಾಯ’

ಬೇಲೂರು: ‘ವೀರಶೈವ-ಲಿಂಗಾಯಿತರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಒಬಿಸಿ ಮೀಸಲಾತಿ ನೀಡುವಲ್ಲಿ ಕೇಂದ್ರ ಸರ್ಕಾರ ಗಮನಹರಿಸದ ಕಾರಣ ಈ ಬಗ್ಗೆ ಹೋರಾಟ ಅನಿವಾರ್ಯವಾಗಿದೆ’ ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ರಾಷ್ಟ್ರೀಯ ಕಾರ್ಯದರ್ಶಿ ರೇಣುಕಾ ಪ್ರಸನ್ನ ಹೇಳಿದರು.

ವಿದ್ಯಾರ್ಥಿ ವೇತನ ವಿತರಣೆ

ನಗರದ ಗಾಯನ ಸಮಾಜದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಯನಗರದ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಮಳಿಗೆಯ ವತಿಯಿಂದ 17 ಕಾಲೇಜುಗಳ 701 ವಿದ್ಯಾರ್ಥಿನಿಯರಿಗೆ ₹ 60.66 ಲಕ್ಷದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಶಾಸಕ ಉದಯ್ ಬಿ. ಗರುಡಾಚಾರ್, ವೇದವ್ಯಾಸ ಭಟ್, ಸಂಸ್ಥೆಯ ಸದಸ್ಯರು ಇದ್ದರು

ಕುಡಿಯುವ ನೀರಿಗೆ ಆಗ್ರಹಿಸಿ ಬಿಎಸ್‌ಪಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಹಕ್ಕುಪತ್ರಕ್ಕೆ ಆಗ್ರಹಿಸಿ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನಲ್ಲಿ ಪ್ರತಿ ಮನೆಗೂ ಕುಡಿಯಲು ಕಾವೇರಿ ನೀರು ಹಾಗೂ 94‘ಸಿ’ ಅಡಿ ಬಡವರಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸಿ ಚಂದಾಪುರದಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ತನಕ ಬಹುಜನ ಸಮಾಜ ಪಕ್ಷದ ನೇತೃತ್ವದಲ್ಲಿ ಪಾದಯಾತ್ರೆ ನಡೆಯಿತು.

‘ತಾಲ್ಲೂಕಿನಲ್ಲಿ ಸಾವಿರಾರು ಮಂದಿ 94 ‘ಸಿ’ ಅಡಿಯಲ್ಲಿ ಅರ್ಜಿ ಹಾಕಿದ್ದು ಕೂಡಲೇ ಹಕ್ಕುಪತ್ರಗಳನ್ನು ನೀಡಬೇಕು, ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕು. ದಿನದ 24 ಗಂಟೆಯೂ ವೈದ್ಯರ ಕರ್ತವ್ಯ ನಿರ್ವಹಿಸಬೇಕು. ತಾಲ್ಲೂಕಿನಲ್ಲಿ ಕಾನೂನು ಕಾಲೇಜು, ನರ್ಸಿಂಗ್ ಕಾಲೇಜು ತೆರೆಯಬೇಕು’ ಎಂದು ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಡಾ.ಚಿನ್ನಪ್ಪ ವೈ. ಚಿಕ್ಕಹಾಗಡೆ ಹೇಳಿದರು.

ಜಿಲ್ಲಾ ಅಧ್ಯಕ್ಷ ಸಿ.ಎಲ್‌.ಮುನಿಯಲ್ಲಪ್ಪ, ಉಪಾಧ್ಯಕ್ಷ ಗೌರಿಶಂಕರ್, ಎಚ್‌.ಎನ್. ಆರ್‌.ಯಲ್ಲಾರೆಡ್ಡಿ, ತಾಲ್ಲೂಕು ಉಸ್ತುವಾರಿ ಸಂಪಂಗಿ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಟಿ.ಎಸ್‌.ಕುಮಾರಾಚಾರಿ, ತಾಲ್ಲೂಕು ಕಾರ್ಯದರ್ಶಿ ಸರ್ಜಾಪುರ ಲೋಕೇಶ್, ಮಹಿಳಾ ಘಟಕದ ವರಲಕ್ಷ್ಮಿರೆಡ್ಡಿ, ಗಾಯತ್ರಿ, ನೇತ್ರಾವತಿ, ಪುಷ್ಪಲತಾ, ಕೃಷ್ಣನಾಗರಾಜ್, ಕಿರಣ್ ಪ್ರಸನ್ನ ಇದ್ದರು.

ಉದ್ದೇಶಿತ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಬಿಡಿಎ ಅಧಿಕಾರಿಗಳು, ಮನೆಗಳನ್ನು ತೆರವುಗೊಳಿಸಲು ಮುಂದಾದಾಗ ರೊಚ್ಚಿಗೆದ್ದ ನೂರಾರು ರೈತರು ವೀರಸಾಗರ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು (ಎಡಚಿತ್ರ). ರೈತರು ತಮ್ಮ ತೋಟಗಳಲ್ಲಿ ಬೆಳೆದಿದ್ದ ಬೆಳೆಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು

ವೀರಸಾಗರ ಗ್ರಾಮದಲ್ಲಿ ಪ್ರತಿಭಟನೆ • ಬಿಡಿಎ ವಿರುದ್ಧ ಭುಗಿಲೆದ್ದ ಆಕ್ರೋಶ

ತೆರವಿಗೆ ಅಡ್ಡಿಪಡಿಸಿದ ರೈತರ ಬಂಧನ

ಪ್ರಜಾವಾಣಿ ವಾರ್ತೆ

ಯಲಹಂಕ: ಉದ್ದೇಶಿತ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಿಸಲು ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಬಿಡಿಎ ಅಧಿಕಾರಿಗಳು ಮನೆಗಳನ್ನು ತೆರವುಗೊಳಿಸಲು ಮುಂದಾದಾಗ, ರೊಚ್ಚಿಗೆದ್ದ ನೂರಾರು ರೈತರು ವೀರಸಾಗರ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ಬಿಡಿಎ ಹಾಗೂ ಸರ್ಕಾರ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸರು ಗುಂಪನ್ನು ಚದುರಿಸಿದರು. ಈ ವೇಳೆ ಹಲವು ರೈತಮುಖಂಡರನ್ನು ಪೊಲೀಸರು ಬಂಧಿಸಿದರು. ಜೆಡಿಎಸ್ ಮುಖಂಡ ಮುನೇಗೌಡ ಅವರನ್ನು ಪೊಲೀಸರು ಬಲವಂತವಾಗಿ ಬಂಧಿಸಲು ಮುಂದಾದರು. ಈ ವೇಳೆ ಪೊಲೀಸರು ಮತ್ತು ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ತಳ್ಳಾಟ-ನೂಕಾಟದಲ್ಲಿ ಮುನೇಗೌಡ ಅವರ ಅಂಗಿ ಹರಿದು ಹೋಯಿತು.

ನಂತರ ಮಾತನಾಡಿದ ಅವರು, ಬಿಡಿಎ ಸ್ವಾಧೀನಪಡಿಸಿಕೊಂಡಿರುವ ರೈತರ ಜಮೀನುಗಳಿಗೆ ಸೂಕ್ತ ಪರಿಹಾರ ಮತ್ತು ಮಾಹಿತಿ ನೀಡದೆ ಏಕಾಏಕಿ ಬೆಳ್ಳಂಬೆಳಗ್ಗೆ ಜೆಸಿಬಿಗಳ ಮೂಲಕ ತೆರವು ಕಾರ್ಯ ಆರಂಭಿಸಲಾಗಿದೆ. ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಶ್ನಿಸಿದರೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತಮುಖಂಡ ರಾಮಗೊಂಡನಹಳ್ಳಿ ಎಂ.ರಮೇಶ್ ಮಾತನಾಡಿ, ರೈತರನ್ನು ಹೊರಗಿಟ್ಟು ಯೋಜನೆಯನ್ನು ಆರಂಭಿಸುತ್ತಿರುವ ಬಿಡಿಎ ಕ್ರಮವು ರೈತ ವಿರೋಧಿ ಧೋರಣೆಯಾಗಿದೆ ಎಂದು ದೂರಿದರು.

ರೈತಮುಖಂಡ ಮಾವಳಿಪುರ ಬಿ. ಶ್ರೀನಿವಾಸ್ ಮಾತನಾಡಿ, ಏಕಾಏಕಿ ರೈತರನ್ನು ಒಕ್ಕಲೆಬ್ಬಿಸಿ, ಆಶ್ರಯ ಮನೆಯ ಕಾಂಪೌಂಡ್ ಒಡೆಯುವ ಜತೆಗೆ ರೈತರು ತಮ್ಮ ತೋಟಗಳಲ್ಲಿ ಬೆಳೆದಿದ್ದ ಹೂಕೋಸು, ಟೊಮ್ಯಾಟೊ ಮತ್ತಿತರ ಬೆಳೆಗಳನ್ನು ನಾಶಪಡಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣ ದಾಖಲು: ಪೊಲೀಸರು ವಶಕ್ಕೆ ಪಡೆದಿದ್ದ ರೈತಮುಖಂಡರ ಪೈಕಿ ಒಟ್ಟು 17 ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಇದರಲ್ಲಿ ರಾಮಗೊಂಡನಹಳ್ಳಿ ಎಂ.ರಮೇಶ್, ಬಸವರಾಜ ಪಾದಯಾತ್ರಿ, ಮುನಿರಾಜು, ಪಂಚಾಕ್ಷರಿ, ಸುರೇಶ್.ಕೆ, ಮುನಿಆಂಜಿನಪ್ಪ, ಪ್ರಸನ್ನ, ಆನಂದ್, ವಸಂತ್ ವೀರಸಾಗರ ಸೇರಿ 9 ಜನರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದ್ದು, ಉಳಿದ 6 ಜನರನ್ನು ಠಾಣಾ ಜಾಮೀನಿನ ಮೇರೆಗೆ ಬಿಡುಗಡೆಗೊಳಿಸಲಾಗಿದೆ.

'ರೈಸಿಂಗ್ ಬಿಯಾಂಡ್ ದಿ ಸೀಲಿಂಗ್' ಪುಸ್ತಕ ಬಿಡುಗಡೆ

ನೂರು ಮುಸ್ಲಿಂ ಮಹಿಳೆಯರ ಸಾಧನೆಯ ಕಥನ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 100 ಮುಸ್ಲಿಂ ಮಹಿಳೆಯರ ಕಥನಗಳನ್ನು ಒಳಗೊಂಡ ಪುಸ್ತಕ 'ರೈಸಿಂಗ್ ಬಿಯಾಂಡ್ ದಿ ಸೀಲಿಂಗ್ ಕರ್ನಾಟಕ' (ಆರ್‌ಬಿಟಿಸಿ) ಅನ್ನು ಅದೇ ಹೆಸರಿನ ಸಂಘಟನೆ ಹೊರತಂದಿದೆ.

ಕಾಂಗ್ರೆಸ್ ಮುಖಂಡರಾದ ಮಾರ್ಗರೇಟ್ ಆಳ್ವಾ ಅವರು ಕೃತಿಯನ್ನು ಬಿಡುಗಡೆ ಮಾಡಿದರು. ರಾಜಕೀಯ, ಕಲೆ ಮತ್ತು ಸಾಮಾಜಿಕ ಕಾರ್ಯಗಳೂ ಸೇರಿ ಹದಿನಾಲ್ಕು ವಿಭಾಗಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಮುಸ್ಲಿಂ ಮಹಿಳಾ ಸಾಧಕರ ಬದುಕನ್ನು ಈ ಪುಸ್ತಕ ಗೌರವಿಸಿದೆ.

ಆರ್‌ಬಿಟಿಸಿ ಸಂಯೋಜಕ ಜೋಯಾ ಫತೇಹಳ್ಳಿ ಮತ್ತು ಐಮನ್ ಅನ್ಸಾರಿ ಅವರು 18 ತಿಂಗಳ ಅವಧಿಯಲ್ಲಿ ಈ ಪುಸ್ತಕ ರಚಿಸಿದ್ದಾರೆ. 2022ರ ನವೆಂಬರ್ 1ರಂದು ಇ–ಪುಸ್ತಕ ಬಿಡುಗಡೆಯಾಗಿತ್ತು.

'ರಾಷ್ಟ್ರ ನಿರ್ಮಾಣಕ್ಕೆ ದೇಶದಲ್ಲಿ ಮುಸ್ಲಿಂ ಮಹಿಳೆಯರು ನೀಡುತ್ತಿರುವ ಕೊಡುಗೆ ಮತ್ತು ಮುಸ್ಲಿಂ ಮಹಿಳೆಯರ ಬದುಕಿನ ವೈವಿಧ್ಯವನ್ನು ಹೇಳುವುದು ಈ ಪುಸ್ತಕದ ಉದ್ದೇಶ' ಎಂದು ಆರ್‌ಬಿಟಿಸಿ ಸಂಸ್ಥಾಪಕಿ ಫರಾ ಉಸ್ಮಾನಿ ಹೇಳಿದರು.

ಪುಸ್ತಕವನ್ನು ಮಾರ್ಗರೇಟ್ ಆಳ್ವಾ ಬಿಡುಗಡೆ ಮಾಡಿದರು. ಫರಾ ಉಸ್ಮಾನಿ, ಜೋಯಾ ಫತೇಹಳ್ಳಿ, ಐಮನ್ ಅನ್ಸಾರಿ ಇದ್ದರು –ಪ್ರಜಾವಾಣಿ ಚಿತ್ರ

'ಭಾರತೀಯ ಮುಸ್ಲಿಂ ಮಹಿಳೆಯರು ಸಂಕುಚಿತ ದೃಷ್ಟಿಕೋನವನ್ನು ಮೀರಲು ಈ ಕೃತಿ ಸಹಾಯ ಮಾಡುತ್ತದೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಅದ್ಭುತವಾದ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಈ ಪುಸ್ತಕ ವಿವರಿಸುತ್ತದೆ' ಎಂದು ಐಎಎಫ್ ಮಾಜಿ ವಿಂಗ್ ಕಮಾಂಡರ್ ಫರಾಹ್ ಅಫ್ರಾಜ್ ಅವರು ಅಭಿಪ್ರಾಯಪಟ್ಟರು.

8 ಮಂದಿ ಅಂತರರಾಜ್ಯ ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಕ್ಕೂರು ಡಬ್ಬಲ್ ರಸ್ತೆಯಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಎಂಟು ಮಂದಿ ಅಂತರ ರಾಜ್ಯ ಡ್ರಗ್ಸ್ ಪೆಡ್ಲರ್‌ಗಳನ್ನು ಅಮೃತಹಳ್ಳಿ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ತ್ರಿಶೂರ್ ಹೈಂದೂರಿನ ಮಬಿನ್ (32), ಚಿರಕಲ್ ಗ್ರಾಮದ ಮನ್ಸೂರ್ (36), ಪಾರೇಗೌಡ ಹೌಸ್‌ನ ಅಭಿಷೇಕ್ (27), ಕನಮ್‌ಕೋಟ್ ಗ್ರಾಮದ ಅಕ್ಷಯ್ ಶಿವನ್ ಅಲಿಯಾಸ್ ಅಕ್ಕಿ (28), ಚೆಂಗಲ್ಲೂರಿನ ಅರ್ಜುನ್ (26), ಚೆಂಗಲ್ಲೂರು ಅಖಿಲ್ (26), ಕೊಟ್ಟಪುರಂನ ಜೋಯಲ್ ಜೋಶ್ (21), ಕಣ್ಣೂರಿನ ಪೃಥ್ವಿನ್ (23) ಬಂಧಿತರು.

ಕೇರಳದಿಂದ ಬೆಂಗಳೂರಿಗೆ ಬಂದು ಬೇರೆ ಬೇರೆ ವೃತ್ತಿ ನಡೆಸುತ್ತಿದ್ದರು. ಜತೆಗೆ ಡ್ರಗ್ಸ್ ಪೆಡ್ಲರ್ ಆಗಿ ಹಣ ಗಳಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳಿಂದ 740 ಗ್ರಾಂ ಮೆಥ ಕ್ಯೂಲನ್, 200 ಗ್ರಾಂ ಗಾಂಜಾ, 165 ಗ್ರಾಂ ಚರಸ್, 20 ಗ್ರಾಂ ಎಂಡಿಎಂಎ ಮಾದಕ ವಸ್ತು ಹಾಗೂ ದ್ವಿಚಕ್ರ ವಾಹನ, ಒಂದು ಕಾರು, 7 ಮೊಬೈಲ್, ಖಾಲಿ ಜಿಪ್‌ಲಾಕ್ ಪ್ಲಾಸ್ಟಿಕ್ ಕವರ್ ಸೇರಿದಂತೆ ₹ 50 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳಿಂದ ಮಾದಕ ದ್ರವ್ಯಗಳನ್ನು ಖರೀದಿಸಿ ಸೇವನೆ ಮಾಡುತ್ತಿದ್ದ ಗ್ರಾಹಕರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ. ಮಬಿನ್, ಮನ್ಸೂರ್ ಅವರು ಡಬ್ಬಲ್ ರಸ್ತೆಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಈ ಜಾಲ ಪತ್ತೆ ಆಯಿತು' ಎಂದು ಮೂಲಗಳು ತಿಳಿಸಿವೆ.

ಆನೆದಂತದಿಂದ ತಯಾರಿಸಿದ ಕಲಾಕೃತಿ ಜಪ್ತಿ: ಆರೋಪಿ ಬಂಧನ

ಬೆಂಗಳೂರು: ಬೆಂಗಳೂರು–ಹಾಸನ ಹೆದ್ದಾರಿಯ ಮಾಗಡಿ ತಾಲ್ಲೂಕು ತಾಳೆಕೆರೆ ಹ್ಯಾಂಡ್ ಪೋಸ್ಟ್ ಬಳಿ ಸಿಐಡಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ ನಡೆಸಿದ ಕಾರ್ಯಾಚರಣೆಯಲ್ಲಿ ಆನೆದಂತದಿಂದ ತಯಾರಿಸಿದ ಕಲಾಕೃತಿಗಳು, ಚಿರತೆ ಉಗುರು ವಶಕ್ಕೆ ಪಡೆದು ಆರೋಪಿಯನ್ನು ಬಂಧಿಸಿದ್ದಾರೆ.

ಹಾಸನ ಜಿಲ್ಲೆ ಅರಸೀಕೆರೆಯ ನವೀನ್‌ಕುಮಾರ್ (40) ಬಂಧಿತ ಆರೋಪಿ.

ಆರೋಪಿಯಿಂದ ಆನೆದಂತದಿಂದ ತಯಾರಿಸಿದ 8 ಬ್ರಾಸ್‌ಲೆಟ್ 8, ಒಂದು ಜ್ಯೂವೆಲರಿ ಬಾಕ್ಸ್, 2 ಸ್ಟಿಕ್, ರೋಸ್‌ವುಡ್‌ನಿಂದ ತಯಾರಿಸಿದ ಒಂದು ಸ್ಟಿಕ್ ಹಾಗೂ ಚಿರತೆ ಉಗುರುಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಐಡಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ ಜಪ್ತಿ ಮಾಡಿರುವ ಆನೆದಂತ ಕಲಾಕೃತಿಗಳು ಹಾಗೂ ಚಿರತೆ ಉಗುರುಗಳು

ಕಾರಿನ ಮೇಲೆ ಬಿದ್ದ ಕಬ್ಬಿಣದ ತುಂಡು

ಮೆಟ್ರೊ ಅವಘಡ ಎಂದು ದೂರು ನೀಡಿದ ಮಾಲೀಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಮೆಟ್ರೊ ನಿಲ್ದಾಣದ ಮೇಲಿಂದ ಕಬ್ಬಿಣದ ತುಂಡು ಬಿದ್ದು, ಕಾರಿನ ಮುಂಭಾಗಕ್ಕೆ ಹಾನಿಯಾಗಿದೆ ಎಂದು ಆರೋಪಿಸಿ ರಿತೇಶ್ ಎಂಬಾತ ಸುಬ್ರಹ್ಮಣ್ಯ ನಗರ ಪೊಲೀಸರಿಗೆ ದೂರು ನೀಡಿದ್ದಾರೆ.

ಕಾರಿನ ಬ್ಯಾನೆಟ್ ಹಾಗೂ ಗ್ಲಾಸ್ ಮೇಲೆ ಕಬ್ಬಿಣದ ತುಂಡು ಬಿದ್ದಿದೆ ಎಂದು ಅವರು ಆರೋಪಿಸಿದ್ದಾರೆ.

'ದೂರಿನ ಮೇರೆಗೆ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ಮಾತ್ರ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮೆಟ್ರೊ ನಿಲ್ದಾಣದ ಕೆಳಗಿನ ರಸ್ತೆಯಲ್ಲಿ ಶುಕ್ರವಾರ ಬರುತ್ತಿರುವಾಗ ಮೇಲಿಂದ ಕಬ್ಬಿಣದ ತುಂಡು ಬಿದ್ದಿದೆ. ಬಿ.ಎಂ.ಆರ್.ಸಿ.ಎಲ್ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಘಟನೆ ನಡೆದಿದೆ. ಅದೃಷ್ಟವಶಾತ್ ಅಪಾಯದಿಂದ ನಾನು ಪಾರಾಗಿದ್ದೇನೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ರಿತೇಶ್ ಅವರಿಗೆ ಕರೆ ಮಾಡಿ ಸ್ಥಳಕ್ಕೆ ಬಂದು, ಕಾರಿನ ಮೇಲೆ ಬಿದ್ದ ಕಬ್ಬಿಣ ತೋರಿಸುವಂತೆ ಹೇಳಲಾಗಿತ್ತು. ಆದರೆ, ಅವರು ಬಂದಿಲ್ಲ. ಬಿದ್ದಿದ್ದ ಕಬ್ಬಿಣವನ್ನೂ ತೋರಿಸಿಲ್ಲ. ಬಿದ್ದ ಕಬ್ಬಿಣದ ಗಾತ್ರ ಹಾಗೂ ಸ್ಥಳ ತೋರಿಸಿದರೆ ಮುಂದಿನ ತನಿಖೆ ನಡೆಸಲು ಸಾಧ್ಯವಾಗಲಿದೆ' ಎಂದು ಮೂಲಗಳು ಹೇಳಿವೆ.

'ಪೊಲೀಸರು ತನಿಖೆ ನಡೆಸಲಿ'

ಈ ನಿಲ್ದಾಣದಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ. ಹಳೇ ನಿಲ್ದಾಣ ಆಗಿರುವುದರಿಂದ ಯಾವುದೇ ವಸ್ತು ಬೀಳಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಕಾರಿನ ಮೇಲೆ ಬಿದ್ದಿರುವ ವಸ್ತು ಏನು ಮತ್ತು ಎಲ್ಲಿಂದ ಬಿದ್ದಿದೆ ಎಂಬುದರ ಕುರಿತು ಪೊಲೀಸರು ತನಿಖೆ ನಡೆಸಲಿ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರು ತಿಳಿಸಿದರು.

ಹೆಣ್ಣು ಕೊಟ್ಟ ಅಕ್ಕನ ಕೊಂದ ತಮ್ಮ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೊಮ್ಮಗಳನ್ನು ಊರಿಗೆ ಕರೆದೊಯ್ಯಲು ಬಂದಿದ್ದ ವೇಳೆ ನಡೆದ ಗಲಾಟೆಯಲ್ಲಿ ಅಕ್ಕನನ್ನು ತಮ್ಮ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಪ್ರಕರಣವು ಕೆಂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೆಜಿಎಫ್‌ನ ಕೋರಮಂಡಲ ಬಡಾವಣೆಯ ಏಳನ್ ಅರಸಿ (48) ಕೊಲೆಯಾದ ಮಹಿಳೆ. ಕೊಲೆ ಆರೋಪಿ ದಿವಾಕರ್‌ಗೆ(29) ಪೊಲೀಸರು ಶೋಧ ಮುಂದುವರಿಸಿದ್ದಾರೆ.

ಏಳನ್ ಅರಸಿ ಅವರಿಗೆ ಐವರು ಮಕ್ಕಳಿದ್ದಾರೆ. ಅವರಲ್ಲಿ ಹಿರಿಯ ಪುತ್ರಿ ಸಿಂಧೂ ಅರಸಿಯನ್ನು ತಮ್ಮನಿಗೇ ಕೊಟ್ಟು ಮದುವೆ ಮಾಡಿದ್ದರು. ಈ ದಂಪತಿಗೆ ಹೆಣ್ಣುಮಗುವಿದೆ.

ದಿವಾಕರ್ ಹಾಗೂ ಸಿಂಧೂ ನಡುವೆ ಮನಸ್ತಾಪ ಉಂಟಾಗಿ ತಾಯಿ ಮನೆಯಲ್ಲಿ ಸಿಂಧೂ ಮಗುವಿನೊಂದಿಗೆ ವಾಸಿಸುತ್ತಿದ್ದರು. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮಗುವನ್ನು ದಿವಾಕರ್ ಕರೆದೊಯ್ದಿದ್ದ. ನಾಗದೇವನ ಬನದ ಬೃಂದಾವನ ಲೇಔಟ್‌ನ ತಂಗಿಯ ಮನೆಯಲ್ಲಿ ಮಗುವನ್ನು ದಿವಾಕರ್ ಬಿಟ್ಟಿದ್ದ. ಈ ಮಾಹಿತಿ ತಿಳಿದು ಏಳನ್ ಅರಸಿ, ಸಿಂಧೂ ಅವರ ತಂಗಿ ಸುಷ್ಮಾ, ಆಕೆಯ ಪತಿ ಕಾರ್ತಿಕ್ ಅವರು ಮಗುವನ್ನು ಕರೆದೊಯ್ಯಲು ಬಂದಿದ್ದಾರೆ. ಆಗ ಗಲಾಟೆ ನಡೆದಿದೆ. ಮನೆಯಲ್ಲಿದ್ದ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಜತೆಯಲ್ಲಿದ್ದ ಮತ್ತಿಬ್ಬರಿಗೂ ಗಾಯವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳು ಪದಕಗಳೊಂದಿಗೆ ಸಂಭ್ರಮಿಸಿದರು. ಪ್ರಶಾಂತ್ ದೊರೆಸ್ವಾಮಿ, ಎ.ಆರ್.ಕೃಷ್ಣಮೂರ್ತಿ ಮತ್ತಿತರರು ಇದ್ದಾರೆ.

248 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಅಂಬೇಡ್ಕರ್ ತಾಂತ್ರಿಕ ಕಾಲೇಜು ಪದವಿ ಪ್ರದಾನ ಕಾರ್ಯಕ್ರಮದಲ್ಲಿ 248 ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ 98 ಸ್ನಾತಕ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಂಟಿನೆಂಟಲ್ ಇಂಡಿಯ ಸಂಸ್ಥೆ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರಶಾಂತ್ ದೊರೆಸ್ವಾಮಿ ಮಾತನಾಡಿ, 'ಮೌಲ್ಯಗಳೊಂದಿಗೆ ರಾಜಿ ಮಾಡಿಕೊಂಡು ಬದುಕು ಕಟ್ಟಿಕೊಳ್ಳುವ ಅಗತ್ಯತೆ ಇಲ್ಲ. ಸದುದ್ದೇಶದಿಂದ ಕೂಡಿದ ನಿರಂತರ ಪ್ರಯತ್ನ ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ' ಎಂದು ಹೇಳಿದರು.

'ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಸಾಧ್ಯತೆಗಳಿರುತ್ತದೆ. ನಮಗಿರುವ ಸೌಕರ್ಯ, ಅರ್ಹತೆ ಹಾಗೂ ಶಕ್ತಿಯನ್ನು ಬಳಸಿಕೊಂಡು ಮುನ್ನಡೆ ಸಾಧಿಸಬೇಕು' ಎಂದರು.

ಸ್ನಾತಕೋತ್ತರ ವಿಭಾಗದಲ್ಲಿ ಗೀತಾ ಜಿ., ಮಾನವಿ, ಎನ್.ಜಿ, ಆಫ್ರೀನ್ ತಬಸ್ಸುಮ್, ನಿಕಿಲ್‌ಎನ್, ಧನ್ಯ ಕೆ.ಎನ್., ಕಾವ್ಯಶ್ರೀ ಕೆ.ಎಸ್, ಕಾರ್ತಿಕ್ ವಿ.ಎಂ., ಮತ್ತು ಡಿ.ಕೆ. ಕರುಣಶ್ರೀ ರ‍್ಯಾಂಕ್ ಪಡೆದು ಸಂಭ್ರಮಿಸಿದರು.

ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎ.ಆರ್.ಕೃಷ್ಣಮೂರ್ತಿ, ಖಜಾಂಚಿ ಉಮೇಶ್, ಟ್ರಸ್ಟಿ ಶಿವಮಲ್ಲು, ಪ್ರಾಂಶುಪಾಲೆ ಪ್ರೊ. ನಾಗರತ್ನ, ಮತ್ತು ಡೀನ್ ಪ್ರೊ.ಅನುರಾಧಾ ಮತ್ತಿತರರು ಉಪಸ್ಥಿತರಿದ್ದರು

'₹40 ಕೋಟಿ, ಮಂತ್ರಿಗಿರಿ ಆಮಿಷ: ಆದರೂ ಬಿಜೆಪಿಗೆ ಹೋಗಲಿಲ್ಲ'

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): 'ನಾನು ಹಣ, ಅಧಿಕಾರದ ಹಿಂದೆ ಹೋದವನಲ್ಲ. ಅದಕ್ಕೆ ಆಸೆ ಪಟ್ಟಿದ್ದರೆ, ಶಾಸಕನಾಗಿ ಆಯ್ಕೆಯಾದ ತಕ್ಷಣ ಬಿಜೆಪಿಯವರು ₹40 ಕೋಟಿ ಹಣ ಮತ್ತು ಮಂತ್ರಿಗಿರಿ ಕೊಡುವುದಾಗಿ ಆಮಿಷ ಒಡ್ಡಿದಾಗಲೇ ಹೋಗಬಹುದಿತ್ತು. ಆದರೆ, ಆ ಕೆಲಸವನ್ನು ಮಾಡಲಿಲ್ಲ' ಎಂದು ಜೆಡಿಎಸ್ ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲ್ಲೂಕಿನ ಕಂಪಲಾಪುರದಲ್ಲಿ ಶನಿವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಹಣದ ಆಸೆಗಾಗಿ ರಾಮಕೃಷ್ಣ ಹೆಗಡೆ ಅವರೊಂದಿಗೆ ಹೋಗಿ ಎಚ್.ಡಿ. ದೇವೇಗೌಡ ಅವರಿಗೆ ಅನ್ಯಾಯ ಮಾಡಿದ್ದ ಕೆ.ವೆಂಕಟೇಶ್ ಈಗ ಭ್ರಷ್ಟಾಚಾರದ ವಿಚಾರದಲ್ಲಿ ಎಲ್ಲರಿಗೂ ಪಾಠ ಮಾಡುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ದೇವೇಗೌಡ ಅವರ ತ್ಯಾಗ, ಕಾರ್ಯಕರ್ತರ ಹಿತ ನನಗೆ ಮುಖ್ಯ ಎಂದು ಶಾಸಕನಾಗಿಯೇ ಉಳಿದೆ. ಮಂತ್ರಿ ಮಾಡಲಿಲ್ಲ ಎಂದು ಕೆ. ವೆಂಕಟೇಶ್ ಅವರು ಜೆಡಿಎಸ್‌ಗೆ ದ್ರೋಹ ಬಗೆದು ಸಿದ್ದರಾಮಯ್ಯ ಹಿಂದೆ ಹೋದರು. ಅವರು ನನ್ನ ನೈತಿಕತೆ ಬಗ್ಗೆ ಪ್ರಶ್ನೆ ಮಾಡುವುದು ಹಾಸ್ಯಾಸ್ಪದ' ಎಂದು ಹೇಳಿದರು.

ಅಜೀಂ ಪ್ರೇಮ್‌ಜೀ ವಿ.ವಿ: ಕುಸಿದು ಬಿದ್ದು ವಿದ್ಯಾರ್ಥಿ ಸಾವು

ಬೆಂಗಳೂರು: ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ಡೆವಲಪ್‌ಮೆಂಟ್ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿ, ಮಹಾರಾಷ್ಟ್ರದ ಅಭಿಜಿತ್ (26) ಎಂಬುವವರು ಕಾಲೇಜು ಆವರಣದಲ್ಲಿ ಶುಕ್ರವಾರ ಕುಸಿದು ಬಿದ್ದು ಮೃತಪಟ್ಟಿದ್ದಾ ರೆ.

ವಿದ್ಯಾರ್ಥಿಗಳ ಆಕ್ರೋಶ: 'ಹಾಸ್ಟೆಲ್‌ನಿಂದ ಕಾಲೇಜಿಗೆ ಬರಲು ಕಲ್ಪಿಸಿದ್ದ ಬಸ್ ಶುಲ್ಕ ಹೆಚ್ಚಳವನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದೇವೆ. ವಿ.ವಿಯ ಆಡಳಿತ ಮಂಡಳಿ ಶುಲ್ಕ ಇಳಿಸದ ಕಾರಣಕ್ಕೆ ಪ್ರತಿಭಟನೆ ತೀವ್ರಗೊಳಿಸಿದ್ದೆವು. ಮೂರು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದೆವು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಅಭಿಜಿತ್ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅಭಿಜಿತ್ ಸಾವಿಗೆ ವಿ.ವಿ ಆಡಳಿತ ಮಂಡಳಿ ನಿರ್ಲಕ್ಷ್ಯವೇ ಕಾರಣ' ಎಂದು ಪ್ರತಿಭಟನ ನಿರತ ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ವಿ.ವಿ ಸ್ಪಷ್ಟನೆ: 'ವಿದ್ಯಾರ್ಥಿ ಸಾವು ಪ್ರಕರಣ ದುರದೃಷ್ಟಕರ. ಘಟನೆಯಿಂದ ನಾವೂ ಆಘಾತಕ್ಕೆ ಒಳಗಾಗಿದ್ದೇವೆ. ಶುಕ್ರವಾರ ನಡೆಯುತ್ತಿದ್ದ ವಾರ್ಷಿಕೋತ್ಸವದಲ್ಲಿ ಇತರೆ ವಿದ್ಯಾರ್ಥಿಗಳ ಜತೆಗೆ ಅಭಿಜಿತ್ ನೃತ್ಯ ಪ್ರದರ್ಶಿಸುತ್ತಿದ್ದರು. ಆ ವೇಳೆ ಅಲ್ಲಿಯೇ ಕುಸಿದುಬಿದ್ದಿರು. ತಕ್ಷಣವೇ ವೈದ್ಯಕೀಯ ಚಿಕಿತ್ಸೆ ಕೊಡಿಸಿದರೂ ಅವರು ಬದುಕುಳಿಯಲಿಲ್ಲ. ಈ ವಿದ್ಯಾರ್ಥಿ ಗುರುವಾರ ಹಾಗೂ ಶುಕ್ರವಾರ ಯಾವುದೇ ಪ್ರತಿಭಟನೆಯಲ್ಲಿ ಪಾಲ್ಗೊಂಡಿರಲಿಲ್ಲ' ಎಂದು ವಿ.ವಿ ಆಡಳಿತ ಮಂಡಳಿ ಸ್ಪಷ್ಟನೆ ನೀಡಿದೆ.

'ಬುಧವಾರ ಸಂಜೆಯೇ ಅಭಿಜಿತ್ ಪ್ರತಿಭಟನಾ ಸ್ಥಳದಿಂದ ವಾಪಸ್ ಆಗಿದ್ದರು' ಎಂದು ತಿಳಿಸಿದೆ.

'ಕುಸಿದು ಬಿದ್ದ ಬಳಿಕವೇ ಕಾಲೇಜು ವೈದ್ಯರು ಚಿಕಿತ್ಸೆ ನೀಡಿದರು. ಬಳಿಕ ಆಂಬುಲೆನ್ಸ್‌ನಲ್ಲಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿನ ವೈದ್ಯರೂ ಸಾಕಷ್ಟು ಪ್ರಯತ್ನ ಹಾಕಿದರು. ಈ ಘಟನೆಗೂ ಪ್ರತಿಭಟನೆಗೂ ಸಂಬಂಧ ಇಲ್ಲ. ಅಸಮಂಜಸ ಕಾರಣಕ್ಕೆ ಪ್ರತಿಭಟನೆ ನಡೆಯುತ್ತಿದೆ' ಎಂದು ಸ್ಪಷ್ಟನೆ ನೀಡಿದೆ.

ನಗರದಲ್ಲಿ ಇಂದು

ಕರ್ನಾಟಕ ಕರುಣೀಕ ಸಂಘದ ಸುವರ್ಣ ಮಹೋತ್ಸವ: ಉದ್ಘಾಟನೆ: ಮಧುಸೂದನಾನಂದಪುರಿ ಸ್ವಾಮೀಜಿ, ಮಕ್ಕಳ ಕ್ರೀಡೆಗಳು, ವಧು–ವರರ ಅನ್ವೇಷಣೆ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕರುಣೀಕರ ಸಂಘದ ಆವರಣ, ಮಹಾಲಕ್ಷ್ಮಿಪುರ, ಬೆಳಿಗ್ಗೆ 7ರಿಂದ

ವಾರ್ಷಿಕೋತ್ಸವ ಮತ್ತು 'ಸುರ್‌ಸಂಗೀತ್ ಸಾಧಕ್' ಪ್ರಶಸ್ತಿ ಪ್ರದಾನ: ಪದ್ಮಾ ಅಡಿಗ, ಅತಿಥಿ: ಉದಯ ಕುಮಾರ್, ಪ್ರಶಸ್ತಿ ಪುರಸ್ಕೃತರು: ರವೀಂದ್ರ ಕಾಟೋಟಿ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ: ಅನಂತ ಭಾಗವತ್, ಶ್ರಿನಿವಾಸ ಭಾಗವತ್, ಆಯೋಜನೆ: ಸುರ್‌ಸಂಗೀತ್ ಮ್ಯೂಸಿಕ್ ಅಕಾಡೆಮಿ, ಸ್ಥಳ: ವಾದಶ್ರೀ ಆರ್ಟ್‌ಸ್ಪೇಸ್, ರಘುವನಹಳ್ಳಿ, ಬಸಿಎಂಸಿ ಬಡಾವಣೆ, ಬೆಳಿಗ್ಗೆ 9ರಿಂದ

ಕೆ.ಎನ್. ಮಹಾಬಲ, ಬೆಂ ಶ್ರೀ. ರವೀಂದ್ರ ಸಂಪಾದಿಸಿದ 'ಪಲ್ಲಟ' ಖೋ ಕಾದಂಬರಿ ಬಿಡುಗಡೆ: ಜಯಶ್ರೀ ದೇಶಪಾಂಡೆ, ಪುಸ್ತಕದ ಕುರಿತು: ಎನ್. ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ: ಬೆ ಶ್ರೀ. ರವೀಂದ್ರ, ಉಪಸ್ಥಿತಿ: ಪರಶಿವಪ್ಪ, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ವಿ. ವಿಶ್ವನಾಥನ್, ಉಪಸ್ಥಿತಿ: ಕೋ.ಲ. ರಂಗನಾಥರಾವ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯುಎಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ಪ್ರಶಸ್ತಿ ವಿತರಣೆ ಮತ್ತು ಪುಸ್ತಕ ಲೋಕಾರ್ಪಣೆ: ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ್, ರವೀಂದ್ರ ಭಟ್ಟ, ಬಾಬು ಹಿರಣ್ಣಯ್ಯ, ಅನಿಲ ಕುಮಾರ್, ಸಿ.ಎನ್. ಕೃಷ್ಣಮೂರ್ತಿ, ಎಂ.ಎಲ್.ಆರ್. ಮಧುರ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು: ಕೆ.ಎಂ. ರಶ್ಮಿ, ಸಂಜೆ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು: ಶೈಲಜಾ ಹಾಸನ, ಶೈಲಜಾ ಹಾಸನ ಅವರ 'ನಿಲ್ಲು ನಿಲ್ಲೆ ಪತಂಗ' ಪುಸ್ತಕ ಬಿಡುಗಡೆ, ಸ್ಥಳ: ಅಕ್ಕ ಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ನಿರ್ವಾಣಿ ಭಗವತಿ ನಗರದೇವತೆ ಅಣ್ಣಮ್ಮದೇವಿಯನ್ನು ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ, ಆರತಿ–ಪ್ರಸಾದ ವಿನಿಯೋಗ, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ಬೆಳಿಗ್ಗೆ 10 ರಿಂದ

'ಕರ್ನಾಟಕ ಸಿ.ಎಂ.ಎ ಸಮ್ಮೇಳನ': ಅತಿಥಿಗಳು: ಡಾ. ಅದ್ವೈತ್ ಕುಲಕರ್ಣಿ, ಡಾ. ರುಜುತಾ ಕುಲಕರ್ಣಿ, ಶ್ರೀಕಾಂತ್, ಕೆ. ಗಿರಿಪ್ರಕಾಶ್, ಮೋಹನ್ ಕುಮಾರ್ ಬಿ.ಎನ್., ರೂಪಾ ಡಿ., ವೆಂಕಟರಾಮನ್ ಜಿ.ಎನ್., ಆಯೋಜನೆ: ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆ, ಸ್ಥಳ: ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 10ರಿಂದ

ಧರ್ಮಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಮತ್ತು ಹಿರಿಯ ವಿದ್ಯಾರ್ಥಿಗಳ ಸಮಾವೇಶ: ಸಾನ್ನಿಧ್ಯ: ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ವಿ. ಸೋಮಣ್ಣ, 'ತಂತ್ರಜ್ಞಾನದಲ್ಲಿ ಬದಲಾವಣೆ ಹಂತ ವಿಷಯದ ಕುರಿತು ಸಂಸ್ಥಾಪನಾ ಉಪನ್ಯಾಸ: ವಾಸುದೇವ ಕೆ. ಅತ್ರೆ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಆಯೋಜನೆ ಮತ್ತು ಸ್ಥಳ: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆಯ ಶತಮಾನೋತ್ಸವ ಸ್ಮಾರಕ ಭವನ, ಕೇಂದ್ರ ರೈಲ್ವೆ ನಿಲ್ದಾಣದ ಬಳಿ, ಗುಬ್ಬಿ ತೋಟದಪ್ಪ ರಸ್ತೆ, ಬೆಳಿಗ್ಗೆ 10.30

'ಎತ್ತ ಸಾಗುತ್ತಿದೆ ರಾಜಕೀಯ ಮೀಸಲು?' ದುಂಡು ಮೇಜಿನ ಸಭೆ: ಭಾಗವಹಿಸುವವರು: ಚಿ.ನಾ. ರಾಮು, ನಾಗರಾಜ್ ಬಳ್ಳೇಕೆರೆ, ವಿಶ್ವನಾಥ್, ಆಯೋಜನೆ: ಅಖಿಲ ಭಾರತ ದಲಿತ ಕ್ರಿಯಾ ಸಮಿತಿ, ಸ್ಥಳ: ಶಾಸಕರ ಭವನ ಸಭಾಂಗಣ, ಬೆಳಿಗ್ಗೆ 10.30

ದಲಿತರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಿ ಮತ್ತು ಅವರ ಹಕ್ಕುಗಳಿಗಾಗಿ ಒತ್ತಾಯಿಸಿ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ಸುಭಾಷಿಣಿ ಅಲಿ, ಪ್ರಸ್ತಾವನೆ: ಗೋಪಾಲಕೃಷ್ಣ ಹರಳಹಳ್ಳಿ, ಮುಖ್ಯ ಭಾಷಣಕಾರರು: ಬಾಲಸುಂದರಂ, ನಿತ್ಯಾನಂದ ಸ್ವಾಮಿ, ಮಹೇಶ್ ಕುಮಾರ್ ರಾಠೋಡ, ಮಾವಳ್ಳಿ ಶಂಕರ್, ಮೋಹನ್ ರಾಜ್, ಡಿ. ಶಿವಶಂಕರ್, ಎಸ್.ವೈ. ಗುರುಶಾಂತ್, ಸ್ಥಳ: ಗಾಂಧಿಭವನ, ಬೆಳಿಗ್ಗೆ 11

ನಾಡೋಜ ಕೋ. ಚೆನ್ನಬಸಪ್ಪ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭ: ಸಾನ್ನಿಧ್ಯ: ಗುರು ಮಹಾಂತ ಸ್ವಾಮೀಜಿ, ಅಧ್ಯಕ್ಷತೆ: ಗೊ.ರು. ಚೆನ್ನಬಸಪ್ಪ, ಉದ್ಘಾಟನೆ: ವಿ. ಗೋಪಾಲಗೌಡ, 'ಕೋಚೆ ನೂರರ ನೆನಪು' ಕೋಚೆ ಸ್ಮರಣ ಗ್ರಂಥ ಬಿಡುಗಡೆ: ವಿಜಯಾ, ಸಮಾರೋಪ ಭಾಷಣ: ಬಿ.ಎಲ್. ಶಂಕರ್, ಅತಿಥಿ: ಮಹೇಶ್ ಕರ್ಜಗಿ, ಉಪಸ್ಥಿತಿ: ಅಶೋಕ್ ಎನ್. ಚಲವಾದಿ, ಕೆ.ಬಿ. ಕಿರಣ್ ಸಿಂಗ್, ಕೆ.ಸಿ. ಗುರುದೇವ್, ಆಯೋಜನೆ: ನಾಡೋಜ ಕೋ. ಚೆನ್ನಬಸಪ್ಪ ಜನ್ಮ ಶತಮಾನೋತ್ಸವ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮಹಾತಾಯಿ ರಮಾಬಾಯಿ ಅಂಬೇಡ್ಕರ್ ಅವರ ಜನ್ಮದಿನಾಚರಣೆ, ದಲಿತ ಮಹಿಳಾ ಒಕ್ಕೂಟದ ಸರ್ವ ಸದಸ್ಯರ ಮಹಾಸಭೆ: ಚಾಲನೆ: ಮಾವಳ್ಳಿ ಶಂಕರ್, 'ಮಹಾತಾಯಿ ರಮಾಬಾಯಿ ಅಂಬೇಡ್ಕರ್' ಕಿರು ಹೊತ್ತಿಗೆ ಬಿಡುಗಡೆ: ಇಂದಿರಾ ಕೃಷ್ಣಪ್ಪ, ಅಧ್ಯಕ್ಷತೆ: ನಿರ್ಮಲ, ಅತಿಥಿಗಳು: ವಿಜಯಶಾಂತಿಮೂರ್ತಿ, ಅಖಿಲ ವಿದ್ಯಾಸಂದ್ರ, ರುದ್ರಮ್ಮ ಶಿವಮೊಗ್ಗ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರವಾದ), ಸ್ಥಳ: ಜೈಭೀಮ ಭವನ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 11

ಮಡಿವಾಳ ಮಾಚಿದೇವರ ಜಯಂತಿ: ಸಾನ್ನಿಧ್ಯ: ಮುಕ್ತಾನಂದ ಸ್ವಾಮೀಜಿ, ವಿನಯ್ ಗುರೂಜಿ, ಉದ್ಘಾಟನೆ: ವಿ. ಸೋಮಣ್ಣ, ಅತಿಥಿಗಳು: ನಂಜಪ್ಪ, ಅಶ್ವತ್ಥನಾರಾಯಣ, ಅರುಣ್ ಸೋಮಣ್ಣ, ಸವಿತಾ ಕೃಷ್ಣ, ಆಯೋಜನೆ: ಮಡಿವಾಳರ ಜಾಗೃತಿ ವೇದಿಕೆ ಟ್ರಸ್ಟ್, ಸ್ಥಳ: ಜ್ಞಾನಸೌಧ, ಅನಂತ್ ಕುಮಾರ್ ಸಭಾಂಗಣ, ಕಲ್ಯಾಣ ನಗರ, ಮೂಡಲಪಾಳ್ಯ, ಬೆಳಿಗ್ಗೆ 11

ಕ್ಯಾನ್ಸರ್ ರೋಗಿಗಳ ನೆರವಿಗೆ ಸಂಗೀತ ಕಾರ್ಯಕ್ರಮ: ಅಧ್ಯಕ್ಷತೆ: ಯೆನೆಪೋಯ ಅಬ್ದುಲ್ಲಾ ಕುನ್ಹಿ, ಅತಿಥಿಗಳು: ರಣದೀಪ್ ಡಿ., ಎಂ.ಕೆ. ರಮೇಶ್, ಪಿ.ಜಿ.ಆರ್. ಸಿಂಧ್ಯ, ಸಿ. ಸೋಮಶೇಖರ್, ಸ್ಟ್ಯಾಂಡ್‌ಅಪ್ ಕಾಮಿಡಿ: ನಾಗರಾಜ ಕೋಟೆ, ಗಾಯನ: ಜೈದೀಪ್ ವಾರಿಯರ್, ಅಮರ್ತ್ಯ ಚಟರ್ಜಿ ಘೋಷ್ (ಕಥಕ್), ಯಶೋಮತಿ ಮಿಶ್ರಾ (ಒಡಿಸ್ಸಿ), ರಕ್ಷಾ ಕಾರ್ತಿಕ್ (ಭರತನಾಟ್ಯ), ಕ್ಷೇಮಾವತಿ (ಮೋಹಿನಿ ಆಟ್ಟಂ), ಆಯೋಜನೆ: ಯೆನೆಪೋಯ ವಿಶ್ವವಿದ್ಯಾಲಯ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ ಭವನ, ಸಂಜೆ 4ರಿಂದ

ಹಿಂದೂಸ್ತಾನಿ ಸಂಗೀತೋತ್ಸವ: ಉದ್ಘಾಟನೆ: ಶ್ರೀನಾಥ್, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಉಪಸ್ಥಿತಿ: ವೈ.ವಿ. ಗುಂಡೂರಾವ್, ಮೃತ್ಯುಂಜಯ ದೊಡ್ಡವಾಡ, ವಾಣಿಶ್ರೀ ಆರ್.ಕೆ., ಆಯೋಜನೆ: ಗುರು ಸಮರ್ಥ ಸಂಗೀತ ವಿದ್ಯಾಲಯ, ಸ್ಥಳ: ಕೃಷ್ಣರಾಜ ಪರಿಷತ್ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4ರಿಂದ

ವಾಣಿ ಜಯರಾಂ ಸ್ಮರಣಾರ್ಥ 'ಗೀತಗಾಯನ': ಉಪಸ್ಥಿತಿ: ಎ.ಎಂ. ಚಂದ್ರಶೇಖರ್, ಕೆ.ಸಿ. ರಮೇಶ್, ಶ್ಲೋಕ: ಕುಮಾರ್ ಅಕ್ಷಯ್ ಎಂ. ಭಾರದ್ವಾಜ್, ಶ್ಲೋಕಾರ್ಥ: ನವ್ಯ ಪಿ., ವಾಚನ: ಕುಸುಮ ಎಸ್, ಗಾಯನ: ವಿನಿತ ನಾಗರಾಜ, ಕವಿಗಳು ಕಂಡಂತೆ: ಭ.ರಾ. ವಿಜಯಕುಮಾರ್, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯ ಆವರಣ, ಅಪೂರ್ವ ಮ್ಯಾನ್‌ಷನ್, ದೊಡ್ಡಬೊಮ್ಮಸಂದ್ರ, ಸಂಜೆ 5.30

ಸಿತಾರ ವಾದಕ ಉಸ್ತಾದ್ ಬಾಲೇ ಖಾನ್ ಅವರ ಸ್ಮರಣೆಯಲ್ಲಿ ಸಂಗೀತ ಕಾರ್ಯಕ್ರಮ: ಗಾಯನ: ಪ್ರವೀಣ್ ಕಾರಡಗಿ, ತಬಲಾ: ಶಶಿ ಭೂಷಣ್, ಗುರಜಾರ್, ಹಾರ್ಮೋನಿಯಂ: ಗೌರವ್ ಗಡಿಯಾರ್, ತಾನಪುರ: ಸುಧನ್ವ ಕುಲಕರ್ಣಿ, ಆಯೋಜನೆ ಮತ್ತು ಸ್ಥಳ: ಕಲಾಕ್ಷಿತಿ ಸ್ಕೂಲ್ ಆಫ್ ಫೈನ್ ಆರ್ಟ್‌ನ ಆವರಣ, ಸುಬ್ಬರಾಮ್ ಚೆಟ್ಟಿ ರಸ್ತೆ, ಬಸವನಗುಡಿ, ಸಂಜೆ 6

ನಾದಜ್ಯೋತಿ ಸಂಗೀತ ಸಂಭ್ರಮ: ಪ್ರಶಸ್ತಿ ಪ್ರದಾನ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎ. ರವೀಂದ್ರ, ಪ್ರಶಸ್ತಿ ಪುರಸ್ಕೃತರು: ಗಾಯನ: ಶಾಂತ ನರಸಿಂಹನ್, ಸಂಪಗೋಡು ವಿಘ್ನರಾಜ, ವೀಣಾ ವಾದನ: ಗೀತಾ ರಮಾನಂದ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.15

'ಸ್ವರ ಕಾವೇರಿ' ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ಗಾಯನ: ರಂಜನಿ ಗಾಯತ್ರಿ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಡೆಲ್ಲಿ ಸಾಯಿರಾಮ್, ಘಟ: ಓಂಕಾರ ರಾವ್, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ:ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.45ರಿಂದ

ಭರತನಾಟ್ಯ ರಂಗಪ್ರವೇಶ: ಯಶಸ್ವಿ ಜನ, ಆಯೋಜನೆ: ವೈಷ್ಣವಿ ನಾಟ್ಯಶಾಲಾ, ಸ್ಥಳ: ಎ.ಡಿ.ಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30



ಯಶಸ್ವಿ ಜನ

'ಅಪ್ಪು ಮಕ್ಕಳ ಚಲನಚಿತ್ರೋತ್ಸವ' ಸಮಾರೋಪ ಸಮಾರಂಭ: ಅತಿಥಿಗಳು: ಎಸ್. ನಾರಾಯಣ್, ರಾಕ್‌ಲೈನ್ ವೆಂಕಟೇಶ್, ಗಿರೀಶ್ ಕಾಸರವಳ್ಳಿ, ಸುಂದರ್ ರಾಜ್, ಆಯೋಜನೆ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಎಂಎಂಬಿ ಲೆಗಸಿ, ಜಿ.ಟಿ. ಮಾಲ್, ಮಧ್ಯಾಹ್ನ 12.30

ಗಿರೀಶ್ ಕಾಸರವಳ್ಳಿ

ವಿಜಯಪುರ ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಶನಿವಾರ ನಡೆದ ಬ್ರಾಹ್ಮಣ ಶಕ್ತಿಸಂಗಮ ಕಾರ್ಯಕ್ರಮದಲ್ಲಿ ಪರಶುರಾಮನ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು

'ಕಾಶ್ಮೀರದಲ್ಲಿ ಪುನಃ ನೆಲೆ ಕಾಣಲಿರುವ ಬ್ರಾಹ್ಮಣರು'

ವಿಜಯಪುರ: 'ನಮ್ಮ ಹಿರಿಯರು ಕಾಶ್ಮೀರ ಬಿಟ್ಟು ಬರಬೇಕಾಯಿತು. ಇನ್ನೂ ಕೆಲವು ವರ್ಷಗಳಲ್ಲಿ ನಾವು (ಬ್ರಾಹ್ಮಣ) ಮತ್ತೆ ಕಾಶ್ಮೀರದಲ್ಲಿ ನೆಲೆ ಕಲ್ಪಿಸಿಕೊಳ್ಳುತ್ತೇವೆ' ಎಂದು ಮೈಸೂರಿನ ಸ್ವರ್ಣ ನರಸಿಂಹ ದತ್ತ ಪೀಠದ ಅರ್ಜುನ ಅವಧೂತ ಗುರು ಮಹಾರಾಜರು ಹೇಳಿದರು.

ನಗರದ ಕಂದಗಲ್ ಹಣಮಂತರಾಯ ರಂಗಮಂದಿರದ ಭಾಸ್ಕರಾಚಾರ್ಯ ವೇದಿಕೆಯಲ್ಲಿ ಶನಿವಾರ ನಡೆದ ಬ್ರಾಹ್ಮಣ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಲವರಲ್ಲಿ ಏತಕ್ಕೆ ನಾನು ಒಬ್ಬ ವಿಪ್ರನಾಗಿ ಹುಟ್ಟಬೇಕು ಎನ್ನುವ ಪ್ರಶ್ನೆ ಇದೆ. 'ವಿಪ್ರ' ಎಂದರೆ ವಿವೇಕ ಮತ್ತು ಪ್ರಜ್ಞೆ ಇವೆರಡನ್ನು ಇಟ್ಟುಕೊಳ್ಳಬೇಕು. ಬ್ರಾಹ್ಮಣ್ಯ ಎಂದರೆ ವಿಶ್ವಕ್ಕೆ ಬೆಳಕನ್ನು ನೀಡುವವ. ಬ್ರಾಹ್ಮಣರು ಹುಟ್ಟು ಅದೊಂದು ಶಕ್ತಿ, ಚೈತನ್ಯ, ವಿಚಾರ, ಪ್ರೇಮ, ವಿಶ್ವಾಸ ಹಾಗೂ ಆದರ್ಶ, ಇಷ್ಟನ್ನು ಹೊಂದಿರುವ ನಾವು ಪುಣ್ಯವಂತರು' ಎಂದು ಹೇಳಿದರು.

'ಸ್ಥೈರ್ಯ, ಧೈರ್ಯ, ಸಾಹಸ ಮೂರನ್ನು ನಾವು ಪಡೆದುಕೊಂಡಿದ್ದೇವೆ. ನಾವು ಎಲ್ಲರನ್ನು ಒಂದುಗೂಡಿಸಿಕೊಂಡು ಸಂಸ್ಕಾರ ನೀಡುವುದೇ ಬ್ರಾಹ್ಮಣತ್ವ' ಎಂದರು.

ಹುಣಸಿಹೊಳೆ ಕಣ್ವ ಮಠದ ಪೀಠಾಧಿಪತಿ ವಿದ್ಯಾ ಕಣ್ವ ವಿರಾಜತೀರ್ಥ ಸ್ವಾಮೀಜಿ, 'ಬ್ರಾಹ್ಮಣರನ್ನು ಹುಟ್ಟಿಸಿದ ಭಗವಂತನೇ ಕಾಪಾಡುತ್ತಾನೆ. ನಾವು ನಮ್ಮ ಸಾಮರ್ಥ್ಯವನ್ನು ಕಾಪಾಡಿಕೊಂಡು ಇನ್ನೊಬ್ಬರಿಗೆ ಉಪದೇಶ ಮಾಡಬೇಕು' ಎಂದು ಹೇಳಿದರು.

ಈರುಳ್ಳಿ: ಮುಗಿಯದ ಕಣ್ಣೀರು

ಒಂದನೇ ಪುಟದಿಂದ

ಅಲ್ಲಿಂದ ಈರುಳ್ಳಿಯ ಬೆಲೆ ನಿರ್ಧಾರವಾಗುವುದು ಹರಾಜಿನಲ್ಲಿ. ರಾಜ್ಯದ ರೈತರು ಬೆಳೆದ ಈರುಳ್ಳಿ ಮಾರುಕಟ್ಟೆ ತಲುಪುವ ಹೊತ್ತಿಗೇ ಮಹಾರಾಷ್ಟ್ರದಿಂದಲೂ ದಾಳಿ ಇಟ್ಟಿರುತ್ತದೆ. ಹೀಗಾಗಿ ಹರಾಜಿನಲ್ಲಿ ಉತ್ತಮ ಗುಣಮಟ್ಟದ ಈರುಳ್ಳಿ ಉತ್ತಮ ಬೆಲೆಗೆ, ಮಳೆ ಬಿದ್ದು ಸರಿಯಾಗಿ ಒಣಗದೆ ಇರುವ ಈರುಳ್ಳಿ ಕಡಿಮೆ ಬೆಲೆಗೆ ಹರಾಜಾಗುತ್ತದೆ.

ದಾಸ್ತಾನಿಗೆ ಸೌಲಭ್ಯ ಇಲ್ಲ: ಈರುಳ್ಳಿ ಕೃಷಿಕರ ಬಳಿ ದಾಸ್ತಾನಿಗೆ ಸೌಲಭ್ಯ ಇಲ್ಲ. ಯಶವಂತಪುರದಂತಹ ದೊಡ್ಡ ಮಾರುಕಟ್ಟೆಗಳಲ್ಲೂ ದಾಸ್ತಾನಿಗೆ ವ್ಯವಸ್ಥೆ ಇಲ್ಲ. ಒಂದು ವೇಳೆ ದಾಸ್ತಾನು ವ್ಯವಸ್ಥೆ ಮಾಡಿದ್ದೇ ಆದರೆ ಅದಕ್ಕೆ ಬಹಳ ವೆಚ್ಚ ಬೀಳುತ್ತದೆ, ಆ ವೆಚ್ಚವನ್ನು ಸಹ ಈರುಳ್ಳಿ ಬೆಳೆಗಾರರು ಇಲ್ಲವೇ ಗ್ರಾಹಕರ ಮೇಲೆ ಹೊರಿಸುವ ಅಗತ್ಯ ಬೀಳುತ್ತದೆ. ಹೀಗಾಗಿ ಅಂತಹ ಅಪಾಯಕ್ಕೆ ಒಡ್ಡಿಕೊಳ್ಳಲು ಹೋಗದೇ, ಬಂದ ಮಾಲನ್ನು ಬಂದಷ್ಟೇ ವೇಗವಾಗಿ ವಿಲೇವಾರಿ ಮಾಡುವ ಹಳೆಯ ವ್ಯವಸ್ಥೆಯೇ ಚಾಲ್ತಿಯಲ್ಲಿದೆ.

ಕೃತಕ ಅಭಾವ ಸೃಷ್ಟಿ: ಈರುಳ್ಳಿ ಬೆಳೆಯಲ್ಲಿ ಆಗುವ ಸ್ವಾಭಾವಿಕ ಏರಿಳಿತದ ಪರಿಸ್ಥಿತಿ ನೋಡಿಕೊಂಡು ವ್ಯಾಪಾರಿಗಳು ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಾಗುವಂತೆ ನೋಡಿಕೊಳ್ಳುವುದೂ ಇದೆ. ಕೆ.ಜಿ ಈರುಳ್ಳಿಗೆ ₹ 200 ಆಗಿದ್ದ ಸಂದರ್ಭದಲ್ಲಿ ಲೋಕಾಯುಕ್ತರು ಎಪಿಎಂಸಿಗೆ ಭೇಟಿ ನೀಡಿ ಗೋದಾಮುಗಳನ್ನು ಪರಿಶೀಲಿಸಿದ್ದ ಉದಾಹರಣೆಯೂ ಇದೆ.

ಈ ಮೇಲಿನ ನಾಲ್ಕೂ ಕಾರಣಗಳನ್ನು ಗಮನಿಸಿದಾಗ ಅಂತಿಮವಾಗಿ ಕಣ್ಣೀರು ಸುರಿಸಬೇಕಾದವರು ಈರುಳ್ಳಿ ಕೃಷಿಕರು ಎಂಬುದು ಕಟು ವಾಸ್ತವ.

ಈರುಳ್ಳಿ ಕೃಷಿಕರನ್ನೇ ಈ ಬಗ್ಗೆ ಮಾತನಾಡಿಸಿದಾಗ ಅವರೂ ಒಂದಿಷ್ಟು ಬೇಡಿಕೆ, ಕೋರಿಕೆ, ಸಲಹೆ ನೀಡುತ್ತಾರೆ. ಅದರಲ್ಲಿ ಮುಖ್ಯವಾಗಿ ಕೇಳಿಬಂದುದು 1) ಸೂಕ್ತ ದಾಸ್ತಾನು ವ್ಯವಸ್ಥೆ ಕಲ್ಪಿಸಬೇಕು, ಜಿಲ್ಲೆಗೊಂದು ಬೃಹತ್ ದಾಸ್ತಾನು ವ್ಯವಸ್ಥೆ ಇರಬೇಕು 2) ಈರುಳ್ಳಿ ಬಿತ್ತನೆ ಬೀಜದ ಸರಿಯಾದ ತಳಿ ಆಯ್ಕೆ ಹಾಗೂ ಬಿತ್ತನೆ ಸಮಯದ ಬಗ್ಗೆ ಮಾಹಿತಿ ನೀಡಬೇಕು, 3) ಸರ್ಕಾರ ಬೆಂಬಲ ಬೆಲೆ ಪ್ರಕಟಿಸಿ ಕ್ವಿಂಟಲ್ ಈರುಳ್ಳಿಗೆ ನಿರಂತರವಾಗಿ ಕನಿಷ್ಠ 3,000 ದರ ಇರುವಂತೆ ನೋಡಿಕೊಳ್ಳಬೇಕು, 4) ಸ್ಥಳೀಯ ರೈತರ ಬೆಳೆಗಳನ್ನು ಸಗಟು ವ್ಯಾಪಾರಿಗಳು ಕಡ್ಡಾಯವಾಗಿ ಖರೀದಿಸುವಂತೆ ಆದೇಶಿಸಬೇಕು ಮತ್ತು 5) ಮಧ್ಯವರ್ತಿಗಳ ಹಾವಳಿಯಿಂದ ಕೃಷಿಕರನ್ನು ರಕ್ಷಿಸಬೇಕು.

ಇನ್ನಷ್ಟು ಸಮಸ್ಯೆಗಳು

- ಈರುಳ್ಳಿ ಕೃಷಿಕರಿಗೆ ಮಳೆ, ಮಾರುಕಟ್ಟೆಯ ಜತೆಗೆ ಬಿತ್ತನೆ ಬೀಜ, ಈರುಳ್ಳಿಗೆ ವಕ್ಕರಿಸುವ ರೋಗ ಬಾಧೆಯಂತಹ ಇತರ ಹಲವು ಸಮಸ್ಯೆಗಳೂ ಕಾಡುತ್ತಿವೆ. ಕಳೆದ ಎರಡು ವರ್ಷಗಳಿಂದ ಈರುಳ್ಳಿ ಬೆಳೆಗೆ ಹಾವು ಸುಳಿ ರೋಗ ಬಾಧೆ ಹೆಚ್ಚಿದೆ. ಇದರಿಂದ ರೈತರು ಈರುಳ್ಳಿ ಬೆಳೆ ಬೇಸಾಯದಿಂದ ವಿಮುಖರಾಗುತ್ತಿದ್ದಾರೆ.
- ಈರುಳ್ಳಿ ಬೆಳೆಯುವ ರೈತರಿಗೆ ಫಸಲು ತೆಗೆದ ಬಳಿಕ ಹೊಲದಲ್ಲಿ ಉಳಿಯುವ ಕಸವೇ ದೊಡ್ಡ ಹೊರೆ ಆಗಿದೆ. ಅದನ್ನು ಹೊಲದಿಂದ ತೆಗೆಸಲು ₹ 30 ಸಾವಿರದವರೆಗೂ ಖರ್ಚು ಬರುತ್ತಿದೆ ಎಂದು ರೈತರು ಅಳಲು ತೋಡಿಕೊಳ್ಳುತ್ತಾರೆ.
- ಈರುಳ್ಳಿ ಬಿತ್ತನೆ ಬೀಜದ ಸರಿಯಾದ ತಳಿ ಆಯ್ಕೆ ಹಾಗೂ ಬಿತ್ತನೆ ಸಮಯದ ಬಗ್ಗೆ ಮಾಹಿತಿ ಕೊರತೆ ಇದ್ದು, ಅದನ್ನು ಪರಿಹರಿಸುವ ಕೆಲಸ ಸರಿಯಾಗಿ ಆಗುತ್ತಿಲ್ಲ ಎಂಬುದು ರೈತರ ಕೊರಗು.
- ಕೆಲವೊಂದು ರೈತರು ಈರುಳ್ಳಿಯ ಸಂಗ್ರಹಣಾ ಘಟಕ ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ರಾತ್ರಿ ವೇಳೆ ಕಳ್ಳರ ಕಾಟ ಕಾಡುತ್ತಿದೆ. ಹೊಲದ ಸಮೀಪ ಇಂತಹ ಸಂಗ್ರಹಣಾ ಘಟಕ ಸ್ಥಾಪಿಸಿದರೆ ಅದನ್ನು ಕಾಯುವುದಕ್ಕೆ ಒಬ್ಬರು ಇರಬೇಕಾಗುತ್ತದೆ.

‘ರೈತರಿಗೆ ಈರುಳ್ಳಿ ಬಿತ್ತನೆ ಬೀಜದ ಸರಿಯಾದ ತಳಿ ಆಯ್ಕೆ ಹಾಗೂ ಬಿತ್ತನೆ ಸಮಯದ ಬಗ್ಗೆ ಮಾಹಿತಿ ಕೊರತೆ ಇದೆ. ಯಾವ ತಳಿ ಯಾವ ಹಂಗಾಮಿಗೆ ಬಿತ್ತನೆ ಮಾಡಬೇಕು, ರೋಗ ಹಾಗೂ ಕೀಟಬಾಧೆ ನಿಯಂತ್ರಣ ಮಾಡುವುದು, ಕೊಯ್ಲು ನಂತರ ಸಂಗ್ರಹಣೆ ಬಗ್ಗೆ ಮಾಹಿತಿ ಇಲ್ಲ’ ಎನ್ನುತ್ತಾರೆ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ತರಕಾರಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ವಸಂತ ಗಾಣಿಗೇರ.

ಬೆಂಗಳೂರು ಯಶವಂತಪುರದ ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿದಿನ ಇಂತಹ ದೃಶ್ಯ ಸಾಮಾನ್ಯ –ಪ್ರಜಾವಾಣಿ ಚಿತ್ರ

ಕರ್ನಾಟಕದಲ್ಲಿ ಈರುಳ್ಳಿ ಬೆಳೆಯುವ ಪ್ರಮುಖ ಜಿಲ್ಲೆಗಳು

ಜಿಲ್ಲೆ	ಬೆಳೆ ಪ್ರದೇಶ (ಹೆಕ್ಟೇರ್)	ಬೆಳೆ ಪಾಲು ಶೇ	ಉತ್ಪಾದನೆ (ಲಕ್ಷ ಟನ್)	ಉತ್ಪಾದನೆ ಪಾಲು ಶೇ	ಉತ್ಪಾದಕತೆ (ಹೆಕ್ಟೇರ್‌ಗೆ ಕೆ.ಜಿ)
ಚಿತ್ರದುರ್ಗ	33 ಸಾವಿರ	16.37	4.17	10.83	12,490
ಬಾಗಲಕೋಟೆ	30 ಸಾವಿರ	15.99	3.64	9.45	11,170
ವಿಜಯಪುರ	23 ಸಾವಿರ	11.30	2.75	7.13	11,920
ಗದಗ	29 ಸಾವಿರ	14.46	1.83	4.74	6,200
ಬಳ್ಳಾರಿ	14 ಸಾವಿರ	6.80	2.69	7.00	19,440
ಹಾವೇರಿ	6 ಸಾವಿರ	2.77	1.12	2.92	19,330
ಬೆಳಗಾವಿ	5 ಸಾವಿರ	2.52	1.06	2.74	20,560

ಡಾ.ವಸಂತ ಗಾಣಿಗೇರ

ಹವಾಮಾನ ವೈಪರೀತ್ಯ: ರಾಜ್ಯದಲ್ಲಿ ಕಳೆದ ಹತ್ತರಿಂದ 12 ವರ್ಷಗಳ ಹವಾಮಾನ್ಯ ಚಿತ್ರಣವನ್ನು ಕಂಡಾಗ ಭಾರಿ ಬದಲಾವಣೆ ಆಗಿರುವುದು ಕಂಡುಬರುತ್ತದೆ. ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದೆ. ಚಿತ್ರದುರ್ಗ ಜಿಲ್ಲೆ ಇದಕ್ಕೊಂದು ನಿದರ್ಶನ. ಈ ಹಿಂದೆ ಇಲ್ಲಿ ನಾಲ್ಕಾರು ವರ್ಷ ಮಳೆ ಕೊರತೆ, ಒಂದು ವರ್ಷ ಸಾಧಾರಣ ಮಳೆ ಎಂಬಂತಹ ಸ್ಥಿತಿ ಇತ್ತು. ಇತ್ತೀಚಿನ ವರ್ಷಗಳಲ್ಲಿ ಪ್ರತಿ ವರ್ಷ ಎಂಬಂತೆ ಮಳೆ ಸುರಿಯುತ್ತಿದೆ. ಕೆಲವೊಮ್ಮೆ ಭಾರಿ ಮಳೆಯೂ ಆಗುತ್ತಿದೆ. ಬದಲಾದ ಹವಾಮಾನಕ್ಕೆ ತಕ್ಕಂತೆ ಕೃಷಿಕರು ತಮ್ಮ ಬೆಳೆ ಪದ್ಧತಿಯನ್ನು ಬದಲಿಸಿಕೊಂಡಿಲ್ಲ. ಸರ್ಕಾರದ ಬಳಿಯೂ ಸೂಕ್ತ ಮಾರ್ಗದರ್ಶನ ಇಲ್ಲ. ಇದರಿಂದಾಗಿ ಈರುಳ್ಳಿಯ ಬದಲಿಗೆ ಪರ್ಯಾಯ ಬೆಳೆ ಬೆಳೆಯುವ ಅವಕಾಶವನ್ನು ಕೃಷಿಕರು ಕಂಡುಕೊಳ್ಳದಂತಾಗಿದೆ.

ಕಳೆದ ವರ್ಷ ಅಕ್ಟೋಬರ್ ಮೊದಲ ವಾರ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಯರದಕಟ್ಟೆ ಗ್ರಾಮದ ಡಿ.ಕೆ.ಲೋಕೇಶ್ ಅವರು ತಮ್ಮ ಮೂರು ಎಕರೆ ಜಮೀನಿನಲ್ಲಿ ಬೆಳೆದ ಈರುಳ್ಳಿಯನ್ನು ಟ್ರ್ಯಾಕ್ಟರ್ ಹರಿಸಿ ನಾಶಪಡಿಸಿದ್ದು ದೊಡ್ಡ ಸುದ್ದಿಯಾಯಿತು. ಸತತ ಮಳೆ, ಕೊಳೆತ ಈರುಳ್ಳಿ ಗೆಡ್ಡೆಯನ್ನು ಕಂಡ ಅವರಿಗೆ ಈ ದಾರಿಯ ಹೊರತು ಅನ್ಯಮಾರ್ಗವಿರಲಿಲ್ಲ.

ಈ ವರ್ಷ ಎಷ್ಟು ಈರುಳ್ಳಿಯ ಅಗತ್ಯ ಇದೆ, ಎಷ್ಟು ಪೂರೈಕೆ ಆಗಬೇಕು ಎಂಬ ಲೆಕ್ಕಾಚಾರವೂ ಯಾರ ಬಳಿಯಲ್ಲೂ ಇಲ್ಲ. ಇದರಿಂದಾಗಿಯೇ ಅಧಿಕ ಬೆಳೆ ಬೆಳೆದಾಗ ಬೆಲೆ ಕುಸಿಯುವುದು, ಇಳುವರಿ ಕಡಿಮೆಯಾದಾಗ ಬೆಲೆ ವಿಪರೀತ ಮಟ್ಟಕ್ಕೆ ಏರುವುದು ನಡೆಯುತ್ತದೆ.

ಯಶವಂತಪುರದ ಮಾರುಕಟ್ಟೆಯ ಮಹತ್ವ: ವಿಸ್ತಾರವಾಗಿ ಬೆಳೆದಿರುವ ಈರುಳ್ಳಿ ಮಾರುಕಟ್ಟೆಯ ವಹಿವಾಟಿನ ಮೇಲೆ ಯಶವಂತಪುರ ಮಾರುಕಟ್ಟೆ ವರ್ತಕರು ಬಹುತೇಕ ಸಂಪೂರ್ಣ ಹಿಡಿದ ಹೊಂದಿದ್ದಾರೆ. ಸುತ್ತಮುತ್ತಲ ಜಿಲ್ಲೆಗಳಲ್ಲಿ ಈರುಳ್ಳಿ ಬೆಳೆಯದಿದ್ದರೂ, ಇದು ದೇಶದ ಪ್ರಮುಖ ಈರುಳ್ಳಿ ವ್ಯಾಪಾರ ಕೇಂದ್ರ ಎನಿಸಿಬಿಟ್ಟಿದೆ.

ಎಪಿಎಂಸಿಗಳಿಗೆ ನೇರವಾಗಿ ರೈತರೇ ಈರುಳ್ಳಿ ತಂದು ಮಾರಾಟ ಮಾಡುವುದು ಕಡಿಮೆ. ಹೊಲದಲ್ಲೇ ಸ್ಥಳೀಯ ವರ್ತಕರಿಗೆ ಮಾರಾಟ ಮಾಡುವುದು ಅವರ ರೂಢಿ. ಹೊಲದಿಂದ ಖರೀದಿಸಿ ತರುವ ವ್ಯಾಪಾರಿಗಳು ಯಶವಂತಪುರದಲ್ಲಿ ಪ್ರತಿನಿತ್ಯ ಹರಾಜಿಗಿಡುತ್ತಾರೆ. ಹರಾಜಿನಲ್ಲಿ ಖರೀದಿಸುವ ಯಶವಂತಪುರದ ವರ್ತಕರು, ಬೇರೆ ಬೇರೆ ರಾಜ್ಯಗಳಿಗೆ ರವಾನಿಸುತ್ತಾರೆ.

ದಾಸ್ತಾನಿಟ್ಟು ಬೆಲೆ ಬಂದಾಗ ಮಾರಾಟ ಮಾಡುವ ಪದಾರ್ಥ ಅಲ್ಲದ ಕಾರಣ ಬೆಲೆಯಲ್ಲಿ ದಿಢೀರ್ ಏರಿಳಿತ ಉಂಟಾಗುತ್ತದೆ ಎಂದು ವರ್ತಕರು ಮತ್ತು ಅಧಿಕಾರಿಗಳು ಹೇಳುತ್ತಾರೆ. ಹೊಲದಿಂದ ಲಾರಿಗಳಲ್ಲಿ ತಂದು ಎಪಿಎಂಸಿ ಮಾರುಕಟ್ಟೆಯಲ್ಲಿ ಹರಾಜಿಗಿಟ್ಟು ಅಲ್ಲಿಂದ ಬೇರೆಡೆಗೆ ಸಾಗಿಸಿ ಗ್ರಾಹಕರನ್ನು ತಲುಪುವಷ್ಟರಲ್ಲಿ ಕನಿಷ್ಠ ಐದಾರು ಕೈಗಳನ್ನು ದಾಟಿರುತ್ತದೆ. ಆಗ ಈರುಳ್ಳಿಯಲ್ಲಿ ಶೇ 30ರಿಂದ ಶೇ 40ರಷ್ಟು ಕೊಳೆಯುವ ಸಾಧ್ಯತೆಯೂ ಇರುತ್ತದೆ.

ಯಶವಂತಪುರ ಮಾರುಕಟ್ಟೆಗೆ ರಾಜ್ಯ ಮಾತ್ರವಲ್ಲದೇ ಮಹಾರಾಷ್ಟ್ರದ ನಾಸಿಕ್ ಸುತ್ತಮುತ್ತಲ ಪ್ರದೇಶದಿಂದ ಈರುಳ್ಳಿ ಬಂದು ಸೇರುತ್ತದೆ. ಪ್ರತಿನಿತ್ಯ 1 ಸಾವಿರದಿಂದ 1,600 ಲಾರಿಗಳು ಈ ಮಾರುಕಟ್ಟೆಗೆ ಬಂದು ಹೋಗುತ್ತವೆ. ವರ್ಷಕ್ಕೆ 60 ಲಕ್ಷದಿಂದ 70 ಲಕ್ಷ ಕ್ವಿಂಟಲ್ ಈರುಳ್ಳಿ ವಹಿವಾಟು ಇಲ್ಲಿ ನಡೆಯುತ್ತದೆ. 2018-19ರಲ್ಲಿ 86 ಲಕ್ಷ ಕ್ವಿಂಟಲ್‌ಗೆ ಏರಿಕೆಯಾಗಿದ್ದ ಉದಾಹರಣೆಯೂ ಇದೆ. ಬೆಂಗಳೂರು ನಗರದಲ್ಲೇ ಪ್ರತಿನಿತ್ಯ 20 ಸಾವಿರ ಚೀಲ ಈರುಳ್ಳಿ ಖರ್ಚಾಗುತ್ತಿದೆ. ಜತೆಗೆ ತಮಿಳುನಾಡಿಗೆ ವರ್ಷದ 365 ದಿನವೂ ಯಶವಂತಪುರದಿಂದ ಈರುಳ್ಳಿ ಹೋಗುತ್ತದೆ. ಚೆನ್ನೈನಿಂದ ಹಡಗಿನಲ್ಲಿ ನೆರೆ ರಾಜ್ಯ, ಈಶಾನ್ಯ ರಾಜ್ಯಗಳು ಮತ್ತು ಹೊರ ದೇಶಕ್ಕೂ ಈರುಳ್ಳಿ ರಫ್ತಾಗುತ್ತದೆ. ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಅಸ್ಸಾಂ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಾಂಗ್ಲಾದೇಶಕ್ಕೆ ಈರುಳ್ಳಿ ರಫ್ತಾಗುತ್ತದೆ. ಇಷ್ಟೆಲ್ಲ ವಹಿವಾಟಿನ ಕೇಂದ್ರಸ್ಥಳವಾದ ಯಶವಂತಪುರವೇ ಈರುಳ್ಳಿಯ ಬೆಲೆ ನಿರ್ಧಾರದ ಕೇಂದ್ರ ಬಿಂದು. ಇಲ್ಲಿಗೇ ನೇರವಾಗಿ ಈರುಳ್ಳಿ ತಂದು, ಮನೆಗೆ ಬರಿಗೈಲಿ ಹೋದ ಅದೆಷ್ಟೋ ರೈತರೂ ಇದ್ದಾರೆ. ಹೀಗಾಗಿ ಈರುಳ್ಳಿ ಮಾರುಕಟ್ಟೆ ಒಂದು ರೀತಿಯಲ್ಲಿ ಬೆಲೆ ನಿರ್ಧಾರದ ಜೂಜುಕಟ್ಟೆ ಎಂಬುದೂ ಸತ್ಯ.

ಪರಿಹಾರ ಅತ್ಯಲ್ಪ, ವಿಮೆಯೂ ಇಲ್ಲ: ಈ ವರ್ಷ ಮುಂಗಾರಿನಲ್ಲಿ ಭಾರಿ ಮಳೆಗೆ ರೈತರು ಬೆಳೆದ ಈರುಳ್ಳಿ ಬೆಳೆ ನಾಶವಾಯಿತು. ಕೃಷಿ ಇಲಾಖೆ ಬೆಳೆಹಾನಿ ಸಮೀಕ್ಷೆ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿತ್ತು. ಅರ್ಜಿ ಸಲ್ಲಿಸಿದವರಿಗೆ ಕಂದಾಯ ಇಲಾಖೆಯಿಂದ ಪ್ರತಿ ಎಕರೆಗೆ ₹13,068 ಮಧ್ಯಂತರ ಪರಿಹಾರ ಸಿಕ್ಕಿದೆ ಎಂದು ಗದಗ ತೋಟಗಾರಿಕೆ ಇಲಾಖೆಯ ಹಿರಿಯ ಅಧಿಕಾರಿ ಶೈಲೇಂದ್ರ ಬಿರಾದಾರ ಹೇಳಿದರು. ಈರುಳ್ಳಿಯ ಕಣ್ಣೀರಿಗೆ ಸರ್ಕಾರದಿಂದ ದೊರೆತ ಪರಿಹಾರ ಇಷ್ಟೇ.

ನಷ್ಟ ಭರಿಸುವ ನಿಟ್ಟಿನಲ್ಲಿ ವಿಮೆಯಾದರೂ ದೊರೆಯಿತೇ ಎಂದು ಕೇಳಿದರೆ ಅದೂ ಇಲ್ಲ. ಈಗಾಗಲೇ ಹಲವು ರೈತರು ಪ್ರತಿ ಹೆಕ್ಟೇರ್‌ಗೆ ₹3,600ರಂತೆ ಬೆಳೆ ವಿಮೆ ಕಂತು ತುಂಬಿದ್ದಾರೆ. ವಿಮೆ ಪರಿಹಾರಕ್ಕಾಗಿಯೂ ಕಾಯುತ್ತಿದ್ದಾರೆ. ಅವರಿಗೆ ಆಘಾತ ನೀಡುವ ಸುದ್ದಿಯೊಂದು ದೊರೆತಿದ್ದು, ಈರುಳ್ಳಿ ಬೆಳೆಯನ್ನು ಬೆಳೆವಿಮೆಗೆ ಇನ್ನೂ ಗುರುತಿಸಿಲ್ಲ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹವಾಮಾನ ಬದಲಾವಣೆಯ ಮಹತ್ವವನ್ನು ಅರಿತುಕೊಂಡು ಬೆಳೆ ವಿಧಾನವನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಈಗ ಎದುರಾಗಿದೆ. ಈರುಳ್ಳಿಗೆ ಅಧಿಕ ಬೇಡಿಕೆ ಬಂದಾಗ ರೈತರೇ ನೇರವಾಗಿ ಈರುಳ್ಳಿ ಮಾರಾಟ ಮಾಡುವ ವ್ಯವಸ್ಥೆಯೊಂದು ರೂಪುಗೊಂಡಾಗ ಮಾತ್ರ ಸದಾ ಕಣ್ಣೀರು ಹಾಕಿಸುವ ಈರುಳ್ಳಿ ಆನಂದಭಾಷ್ಪ ಸುರಿಸುವಂತೆ ಮಾಡೀತು.

ಪೂರಕ ಮಾಹಿತಿ: ಬಸವರಾಜ ಸಂಪಳ್ಳಿ, ವಿಜಯಕುಮಾರ್ ಎಸ್.ಕೆ., ಇ.ಎಸ್.ಸುಧೀಂದ್ರ ಪ್ರಸಾದ್, ಸತೀಶ್ ಬೆಳ್ಳಕ್ಕಿ, ಡಿ.ಬಿ.ನಾಗರಾಜ, ನಾಗರಾಜ ಚಿನಗುಂಡಿ, ಚಂದ್ರಕಾಂತ ಮಸಾನಿ, ಪ್ರಮೋದ್

ಬೆಲೆ ಕುಸಿತ ತಡೆಗೆ ‘ಮೌಲ್ಯವರ್ಧನೆ’ ಪರಿಹಾರ

● ಗಾಣಧಾಳು ಶ್ರೀಕಂಠ

ಈರುಳ್ಳಿ ಉತ್ಪಾದನೆ ಹೆಚ್ಚಾಗಿ, ಬೆಲೆ ಕುಸಿದು ಬೆಳೆದವರು ನಷ್ಟ ಅನುಭವಿಸುವ ಸಂದರ್ಭದಲ್ಲಿ, ವ್ಯರ್ಥವಾಗುವ ಈರುಳ್ಳಿಯನ್ನು ಒಣಗಿಸಿ ಪ್ಯಾಕ್ ಮಾಡಿ ಮಾರಾಟ ಮಾಡಬಹುದು.

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಓಝರ್ ಎಂಬಲ್ಲಿರುವ ಶ್ರೀಸಂತ ಸೇವಾ ಶೇತ್ಕರಿ ಗಟ್ ಎಂಬ ರೈತ ಉತ್ಪಾದಕ ಸಂಸ್ಥೆಯಲ್ಲಿ ಒಣಗಿಸಿದ ತರಕಾರಿಗಳ ಜೊತೆಗೆ ಒಣ ಈರುಳ್ಳಿಯನ್ನೂ ಪ್ಯಾಕ್ ಮಾಡಿ ಮಾರಾಟ ಮಾಡಲಾಗುತ್ತಿದೆ. ಅಲ್ಲಿನ ಕೃಷಿಕರು ಈರುಳ್ಳಿಯನ್ನು ಸೋಲಾರ್ ಡ್ರೈಯರ್‌ನಲ್ಲಿ ಒಣಗಿಸಿ, ಕೆ.ಜಿ ಒಣ ಈರುಳ್ಳಿಗೆ ₹120 ದರ ನಿಗದಿಪಡಿಸಿ ಮಾರಾಟ ಮಾಡಿದ್ದಾರೆ. ಈರುಳ್ಳಿ ಬೆಲೆ ಕುಸಿದಾಗ, ಹೀಗೆ ಒಣಗಿಸಿ ಮಾರಾಟ ಮಾಡಿ, ನಷ್ಟವನ್ನು ತಪ್ಪಿಸಿಕೊಳ್ಳುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ತಾಂತ್ರಿಕ ಮಹಾ ವಿದ್ಯಾಲಯದ ಸಂಸ್ಕರಣಾ ಮತ್ತು ಆಹಾರ ತಂತ್ರಜ್ಞಾನ ವಿಭಾಗ ಈರುಳ್ಳಿ ಒಣಗಿಸುವ (ನಿರ್ಜಲೀಕರಿಸುವ) ತಂತ್ರಜ್ಞಾನ ಮತ್ತು ಯಂತ್ರಗಳನ್ನು ಅಭಿವೃದ್ಧಿಪಡಿಸಿದೆ. ಆಸಕ್ತರು ಮುಂದೆ ಬಂದರೆ, ತಂತ್ರಜ್ಞಾನ ನೀಡುವ ಜೊತೆಗೆ, ಸಬ್ಸಿಡಿ ದರದಲ್ಲಿ ಯಂತ್ರಗಳನ್ನು ಕೊಡುವುದಾಗಿಯೂ ಹೇಳಿದೆ.

ಮೌಲ್ಯವರ್ಧನೆ ಸೂಕ್ತ : ‘ಈರುಳ್ಳಿ ಉತ್ಪಾದನೆ ಹೆಚ್ಚಾಗಿ, ಬೆಲೆ ಕುಸಿದಾಗ ಬೆಳೆಗಾರರು, ಅದನ್ನು ಒಣಗಿಸಿ ಮಾರಾಟ ಮಾಡುವುದು ಸರಿಯಾದ ಕ್ರಮ. ಇದರಿಂದ ಬೆಳೆ ನಷ್ಟವನ್ನು ತಪ್ಪಿಸಬಹುದು’ ಎನ್ನುತ್ತಾರೆ ರಾಯಚೂರು ಕೃಷಿ ವಿವಿಯ ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಉದಯಕುಮಾರ್ ನಿಡೋಣಿ.

10 ರಿಂದ 11 ಕೆ.ಜಿ ಹಸಿ ಈರುಳ್ಳಿ ಒಣಗಿಸಿದರೆ, 1 ಕೆ.ಜಿ ಒಣ ಈರುಳ್ಳಿ ಸಿಗುತ್ತದೆ. ಈರುಳ್ಳಿ ಬೆಲೆ ಕಡಿಮೆ ಇದ್ದಾಗ ಮಾತ್ರ ಅದನ್ನು ಮೌಲ್ಯವರ್ಧಿಸಿ ಮಾರಾಟ ಮಾಡಿದರೆ ಲಾಭವಾಗುತ್ತದೆ. ಇಲ್ಲದಿದ್ದರೆ, ನಿಗದಿತ ಮಾರುಕಟ್ಟೆ ಕಂಡುಕೊಂಡವರು, ಯಾವುದೇ ಸಮಯದಲ್ಲೂ ಈರುಳ್ಳಿ ಒಣಗಿಸಿ ಪ್ಯಾಕ್ ಮಾಡಿ ಮಾರಾಟ ಮಾಡಬಹುದು’ ಎಂದು ಅವರು ಅಭಿಪ್ರಾಯಪಡುತ್ತಾರೆ.

ಒಂದು ಕೆ.ಜಿ ಕೆಂಪು ಮತ್ತು ಗುಲಾಬಿ ಬಣ್ಣದ ಡಿಹೈಡ್ರೇಟೆಡ್ ಈರುಳ್ಳಿಗೆ ಸ್ಥಳೀಯ ಮಾರುಕಟ್ಟೆಯಲ್ಲಿ ₹300 ರಿಂದ ₹400 ಬೆಲೆ ಇದೆ. ಬಿಳಿ ಈರುಳ್ಳಿ ಕೆ.ಜಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹150, ₹180 ರಿಂದ ₹200 ವರೆಗೂ ಇದೆ.

ಇನ್ನಷ್ಟು ಉತ್ಪನ್ನಗಳು: ಈರುಳ್ಳಿಯನ್ನು ಕೇವಲ ಒಣಗಿಸುವುದಷ್ಟೇ ಅಲ್ಲ, ಇದನ್ನು ಪುಡಿ ಮಾಡಿ, ಪೇಸ್ಟ್ ಮಾಡಿಯೂ ಮಾರುಕಟ್ಟೆ ಮಾಡಲಾಗುತ್ತಿದೆ. ಇತ್ತೀಚೆಗೆ ಫಾಸ್ಟ್‌ಫುಡ್ ರೆಸ್ಟೋರೆಂಟ್‌ಗಳು, ಸ್ಟಾರ್‌ಹೋಟೆಲ್‌ಗಳು, ಚಾಟ್ ಸೆಂಟರ್ ಸೇರಿದಂತೆ ಹಲವು ಕಡೆಗಳಲ್ಲಿ ಈ ಡೀಹೈಡ್ರೇಟೆಡ್ ಈರುಳ್ಳಿಗೆ ಬೇಡಿಕೆ ಇದೆ. ಈರುಳ್ಳಿಯ ರಸದಿಂದ ಸೌಂದರ್ಯವರ್ಧಕ ಉತ್ಪನ್ನಗಳು, ಶ್ಯಾಂಪುವಿನಂತಹ ವಸ್ತುಗಳಲ್ಲಿ ಪೂರಕ ಸಾಮಗ್ರಿಯಾಗಿ ಬಳಸಲಾಗುತ್ತಿದೆ.

ಈಗ ರೈತ ಉತ್ಪಾದಕ ಸಂಸ್ಥೆಗಳ ಕಾಲ. ಈರುಳ್ಳಿ ಬೆಳೆಗಾರರು ಇಂಥದ್ದೊಂದು ಸಂಸ್ಥೆ ಮಾಡಿಕೊಂಡು, ನಬಾರ್ಡ್ ಅಥವಾ ಸರ್ಕಾರದ ಯಾವುದೇ ಏಜೆನ್ಸಿಯ ಆರ್ಥಿಕ ನೆರವಿನೊಂದಿಗೆ ಯಂತ್ರಗಳನ್ನು ಖರೀದಿಸಿ ಈರುಳ್ಳಿ ಮೌಲ್ಯವರ್ಧನೆ ಮಾಡಿ, ಪ್ಯಾಕ್ ಮಾಡಿ, ತಮ್ಮದೇ ಬ್ರ್ಯಾಂಡ್‌ನಡಿ ಮಾರಾಟ ಮಾಡಬಹುದು.

ಒಣ ಈರುಳ್ಳಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ, ಉತ್ತಮ ಬೆಲೆಯೂ ಇದೆ. ಮಹಾರಾಷ್ಟ್ರ, ಗುಜರಾತ್ ಮತ್ತಿತರ ರಾಜ್ಯಗಳಲ್ಲಿ ಈರುಳ್ಳಿ ಒಣಗಿಸಿ ಮಾಡುವ ದೊಡ್ಡ ಕಂಪನಿಗಳಿವೆ. ಇವು ವಿದೇಶಕ್ಕೂ ಒಣ ಈರುಳ್ಳಿ ರಫ್ತು ಮಾಡುತ್ತವೆ.

‘ವರ್ಷದಿಂದ ವರ್ಷಕ್ಕೆ ಕಸ ಹೆಚ್ಚಾಗುತ್ತಿದೆ. ಇದನ್ನು ಹೊಲದಿಂದ ತೆಗೆಸಲು ಮೊದಲು ₹ 10 ರಿಂದ ₹ 15 ಸಾವಿರ ಖರ್ಚು ಆಗುತ್ತಿತ್ತು. ಈಗ ₹ 30 ಸಾವಿರಕ್ಕೆ ಏರಿಕೆಯಾಗಿದೆ. ಕಾರ್ಮಿಕರ ಕೂಲಿ ಕೂಡ ಹೆಚ್ಚಾಗಿದೆ’

ಶಿವಕುಮಾರ್ ಆದಾಪುರ, ಕೊಪ್ಪಳ ಜಿಲ್ಲೆಯ ತಳಕಲ್ ಗ್ರಾಮದ ರೈತ

‘ಸಗಟು ವ್ಯಾಪಾರಿಗಳು ಕಡ್ಡಾಯವಾಗಿ ಸ್ಥಳೀಯ ರೈತರ ಬೆಳೆಗಳನ್ನು ಖರೀದಿಸುವಂತೆ ಆದೇಶಿಸಬೇಕು. ಈರುಳ್ಳಿಗೆ ಬೆಂಬಲ ಬೆಲೆ ಕೊಡಬೇಕು. ಇದರಿಂದ ಮಾತ್ರ ರೈತನಿಗೆ ಉಳಿತಾಯ ಸಾಧ್ಯ’

ಶಿವರಾಜ, ರಾಯಚೂರು ತಾಲ್ಲೂಕು ಕಡಗಂದೊಡ್ಡಿ ರೈತ

‘ಈರುಳ್ಳಿ ಬೆಳೆಗಾರರಿಗೆ ಕೈತುಂಬ ಆದಾಯ ತಂದುಕೊಡಬೇಕು ಎಂದಾದರೆ ಈರುಳ್ಳಿ ದರ ಸ್ಥಿರವಾಗಿರಬೇಕು, ಮಹಾರಾಷ್ಟ್ರದಲ್ಲಿ ಇರುವಂತೆ ಪ್ರತಿ ಜಿಲ್ಲೆಯಲ್ಲಿ ಈರುಳ್ಳಿ ಘಟಕಗಳು (ಗೋಡೌನ್) ಆರಂಭವಾಗಬೇಕು, ಸರ್ಕಾರದಿಂದ ವೈಜ್ಞಾನಿಕ ದರ ಅಥವಾ ಬೆಂಬಲ ಬೆಲೆ ಈರುಳ್ಳಿ ಬೆಳೆಗಾರರಿಗೆ ಲಭಿಸುವಂತಾಗಬೇಕು’

ನಂದ ಬಸಪ್ಪ ಚೌದರಿ ವಿಜಯಪುರ ಜಿಲ್ಲೆ ಬಳೂತಿ ಗ್ರಾಮದ ರೈತ

ಕಳೆದ ಐದು ವರ್ಷಗಳಲ್ಲಿ ಯಶವಂತಪುರ ಮಾರುಕಟ್ಟೆಯಲ್ಲಿ ನಡೆದಿರುವ ಈರುಳ್ಳಿ ವಹಿವಾಟು

(ಕ್ವಿಂಟಲ್‌ಗಳಲ್ಲಿ)



ಸುರುಳಿ ರೋಗ ಬಾಧೆಯಿಂದ ಮುಕ್ತಿ ಇಲ್ಲ

ಕಳೆದ ಕೆಲ ವರ್ಷಗಳಲ್ಲಿ ಮುಂಗಾರಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಈರುಳ್ಳಿ ಬೆಳೆಯಲ್ಲಿ ಕಂಡುಬರುವ ಸುರುಳಿ ರೋಗಕ್ಕೆ ಕನಿಷ್ಠ ಕಾರಣ ತಿಳಿಯದೇ ಇರುವುದು ಮತ್ತು ಈ ರೋಗಕ್ಕೆ ನಿರೋಧಕ ಶಕ್ತಿ ಹೊಂದಿರುವ ತಳಿಗಳು ಇಲ್ಲದಿರುವುದು ಈ ಬೆಳೆ ಬೆಳೆಯುವ ಬಗ್ಗೆ ಚಿಂತೆಗೀಡುಮಾಡಿದೆ.

ಸುರುಳಿ ರೋಗ ಬಾಧಿತ ಗಿಡಗಳಲ್ಲಿ ಗಡ್ಡೆ ಕಟ್ಟುವ ಪ್ರಮಾಣ ಕ್ಷೀಣಿಸುವುದರಿಂದ ರೈತರು ತೀವ್ರ ನಷ್ಟ ಅನುಭವಿಸುತ್ತಿದ್ದಾರೆ. ರೋಗ ನಿರೋಧಕ ಶಕ್ತಿ ಹೊಂದಿರುವ ತಳಿಯ ಲಭ್ಯ ಇಲ್ಲದಿರುವುದು, ನಿರ್ದಿಷ್ಟ ಬೆಲೆ ಸಿಗದಿರುವುದು ಹಾಗೂ ಈರುಳ್ಳಿ ಶೇಖರಣೆಗೆ ಅಗತ್ಯವಿರುವ ಶೀಥಲೀಕರಣ ಘಟಕ ಇಲ್ಲದಿರುವುದು ರೈತರ ಪಾಲಿಗೆ ದೊಡ್ಡ ಕೊರತೆ.

ಆದರೆ ನೆರೆಯ ಮಹಾರಾಷ್ಟ್ರ ಈರುಳ್ಳಿ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ಇಲ್ಲಿ ಮುಂಗಾರು ಮತ್ತು ಹಿಂಗಾರಿನಲ್ಲಿ ಉತ್ತಮವಾದ ಈರುಳ್ಳಿ ಬೆಳೆಯುತ್ತಾರೆ. ಅಲ್ಲಿ ಬೆಳೆದ ಈರುಳ್ಳಿ ಶೇಖರಣೆಗೆ ಸಾಕಷ್ಟು ಶೀಥಲೀಕರಣ ಘಟಕಗಳಿವೆ. ಹೀಗಾಗಿ ಮಾರುಕಟ್ಟೆಯಲ್ಲಿ ಕೊರತೆ ಉಂಟುಮಾಡಿ, ನಂತರ ಬೆಲೆ ಬಂದಾಗ ತಾವು ಶೇಖರಿಸಿದ ಈರುಳ್ಳಿ ಮಾರುಕಟ್ಟೆಗೆ ತರುವ ಸಾಧ್ಯತೆ ಇದೆ.

ಅತಿಯಾದ ಮಳೆ ತಡೆದುಕೊಳ್ಳಬಲ್ಲ ಅರ್ಕಾ ಕಲ್ಯಾಣ ತಳಿ ಇದೆಯಾದರೂ, ಅದೂ ಸುರುಳಿ ರೋಗಕ್ಕೆ ತುತ್ತಾದ ಉದಾಹರಣೆಗಳಿವೆ. ಹಾಗೆಯೇ ನಮ್ಮ ರಾಜ್ಯದಲ್ಲೂ ಅಲ್ಲಲ್ಲಿ ಕೆಲ ರೈತರು ಸಣ್ಣ ಪ್ರಮಾಣದಲ್ಲಿ ಖಾಸಗಿಯಾಗಿ ಶೀಥಲೀಕರಣ ಘಟಕಗಳನ್ನು ಮಾಡಿಕೊಂಡಿದ್ದಾರೆ. ಹಾಗೆಯೇ ಈರುಳ್ಳಿ ಬೀಜಗಳನ್ನು ಕೃಷಿ ವಿಶ್ವವಿದ್ಯಾಲಯ, ಖಾಸಗಿ ಕಂಪನಿಗಳು ಹಾಗೂ ರೈತರು ಪ್ರತಿ ವರ್ಷ ಉತ್ಪಾದಿಸುತ್ತಾರೆ. ಸಾಮಾನ್ಯವಾಗಿ ಬೀಜದ ಕೊರತೆ ಉಂಟಾಗುವುದಿಲ್ಲ. ಆದರೆ ಕೆಲವು ಬಾರಿ ಮಾರುಕಟ್ಟೆಯಲ್ಲಿ ಕಳಪೆ ಬೀಜ ಹಾಗೂ ಅವಧಿ ಮುಗಿದ ಬೀಜಗಳು ಮಾರಾಟವಾಗುವ ಸಾಧ್ಯತೆ ಇದೆ.

ಡಾ. ಟಿ.ಆರ್.ಶಶಿಧರ, ಪ್ರಾಧ್ಯಾಪಕರು, ಮುಖ್ಯ ಸಂಶೋಧನಾ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 26-2-1998

● **ಶಾಸಕರ ಖರೀದಿ: ಕಲ್ಯಾಣ್ ವಿರುದ್ಧ ಪಾಲ್ ಆರೋಪ**

ಲಖನೌ, ಫೆ. 25 (ಯುಎನ್ಐ)– ವಿಧಾನಸಭೆಯಲ್ಲಿ ನಾಳೆ ಬಹುಮತ ಸಾಬೀತುಪಡಿಸಲು ಉತ್ತರಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರು ಹತಾಶರಾಗಿ ಶಾಸಕರ ಖರೀದಿ ಹಾಗೂ ಅಪಹರಣದಲ್ಲಿ ತೊಡಗಿದ್ದಾರೆ ಎಂದು ಲೋಕತಾಂತ್ರಿಕ ಕಾಂಗ್ರೆಸ್ ನಾಯಕ ಜಗದಾಂಬಿಕಾ ಪಾಲ್ ಇಂದು ಇಲ್ಲಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ‘ಅಗತ್ಯವಿರುವ ಬಹುಮತ ಸಂಪಾದಿಸಲು ಭಾರತೀಯ ಜನತಾ ಪಕ್ಷವು ಎಲ್ಲಾ ಅವ್ಯವಹಾರಗಳಲ್ಲೂ ತೊಡಗಿದೆ’ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 26-2-1973

● **ಮಹಾಜನ್ ವರದಿ ಜಾರಿ ಪ್ರಧಾನಿ ಹೊಣೆ: ವೀರೇಂದ್ರ**

ಮೈಸೂರು, ಫೆ. 25– ಮಹಾಜನ್ ಆಯೋಗದ ವರದಿ ಸಂಸತ್ತಿನ ಮುಂದೆ ಇರುವುದರಿಂದ ಆ ಬಗ್ಗೆ ಸಂಸತ್ತೇ ಅಂತಿಮ ತೀರ್ಮಾನ ಕೈಗೊಳ್ಳುವುದಾದರೂ ಪ್ರಚಂಡ ಬಹುಮತದ ಬೆಂಬಬಲವುಳ್ಳ ಪ್ರಧಾನಿ ಇಂದಿರಾ ಗಾಂಧಿ ಅವರು ಹಿಂದಿನ ಆಶ್ವಾಸನೆಯಂತೆ ಸದಸ್ಯರ ಮನವೊಲಿಸಿ ವರದಿಯ ಅಂಗೀಕಾರ ಮತ್ತು ಕಾರ್ಯಗತ ಮಾಡಬೇಕಾದ ‘ನೈತಿಕ ಹೊಣೆಗಾರಿಕೆ’ಯನ್ನು ಹೊಂದಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 26, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ಸಪ್ತಮಿ ಗಂ. 24-59 ನಕ್ಷತ್ರ: ಕೃತ್ತಿಕಾ ಗಂ. 29-19 ಯೋಗ: ಐಂದ್ರ ಗಂ. 16-26, ಕರಣ: ಗರಜೆ ಗಂ. 12-34, ಕುಂಭ ಮಾಸದ 13 ನೇ ದಿನ.
ರಾಹುಕಾಲ : ಸಂಜೆ 04-30 -06-00
ಸೂರ್ಯೋದಯ : 06-52 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 05 ಶಬನ್
ಅದೃಷ್ಟ ಸಂಖ್ಯೆ : 6, 12

ಮೇಷ: ಈ ದಿನ ಹೆಚ್ಚಿನ ಆತ್ಮಸ್ಥೈರ್ಯದಿಂದ ಯೋಚಿಸಿದ ಎಲ್ಲಾ ಕೆಲಸದಲ್ಲಿಯೂ ಜಯ ಕಾಣುವಿರಿ. ಇಂದಿನ ನಿಮ್ಮ ಕಾರ್ಯವೈಖರಿ ಕಾರ್ಯಕ್ಷೇತ್ರದಲ್ಲಿ ಮೆಚ್ಚುವ ಮಾತಾಗುವುದು. ಸಾಧ್ಯವಾದಲ್ಲಿ ದೇವಾಲಯಕ್ಕೆ ಭೇಟಿ ನೀಡಿ.

ವೃಷಭ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಎಷ್ಟೇ ಪರಿಶ್ರಮವಿದ್ದರೂ, ಅನುಭವವಿದ್ದರೂ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗುತ್ತದೆ.

ಮಿಥುನ: ಸತತ ಪ್ರಯತದಿಂದ ಸದ್ಯದಲ್ಲೇ ಕೆಲಸ ಕಾರ್ಯವನ್ನು ಆರಂಭಿಸುವಿರಿ. ಮನೆಯ ಹಿರಿಯರ ಆರೋಗ್ಯದಲ್ಲಿ ಏರಿಳಿತ ಕಾಣುವಂತಾಗಲಿದೆ. ಶ್ರೀ ವಿಷ್ಣು ಸಹಸ್ರನಾಮದ ಪಠನೆಯು ಹೆಚ್ಚಿನ ಏಳಿಗೆ ಹಾಗೂ ನೆಮ್ಮದಿಯನ್ನು ತರುವುದು.

ಕರ್ಕಾಟಕ: ನಿಮ್ಮ ವೃತ್ತಿ ಜೀವನಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ. ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ. ವೈದ್ಯ ವೃತ್ತಿಯವರಿಗೆ ವಿಶೇಷ ಅನುಭವ ಸಿಗಲಿದೆ.

ಸಿಂಹ: ಅಕ್ಕ-ತಂಗಿಯರಲ್ಲಿ ಭಿನ್ನಾಭಿಪ್ರಾಯವಿದ್ದರೆ, ಸ್ವ-ಪ್ರಯತ್ನದಿಂದ ಸಂಬಂಧ ಉತ್ತಮ ಪಡಿಸಿಕೊಳ್ಳುವ ಪ್ರಯತ್ನ ಈ ದಿನ ನಡೆಸಿ. ಮಹಿಳೆಯರಿಗೆ ಆದರ–ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಕನ್ಯಾ: ತಾವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ. ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಹಂತಹಂತವಾಗಿ ಚೇತರಿಕೆ ಮೆಟ್ಟಲನ್ನು ನೋಡಲಿದೆ. ಬೂದು ಬಣ್ಣ ಶುಭಪ್ರದ.

ತುಲಾ: ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನ ಪಡಬಹುದು. ಹಿರಿಯರೊಂದಿಗೆ ಯಾತ್ರೆ ಕೈಗೊಳ್ಳುವುದರ ಪುಣ್ಯದಿಂದ ಕಾರ್ಯಾನುಕೂಲವಾಗುವುದು. ಮಂಗಳ ಕಾರ್ಯದ ಶುಭ ಸುದ್ದಿ ಕೇಳುವಿರಿ.

ವೃಶ್ಚಿಕ: ವಾಯು ಸಂಬಂಧವಾಗಿ ಆರೋಗ್ಯ ತೊಂದರೆಗಳು ಕಾಣಿಸಿಕೊಳ್ಳಬಹುದು. ವಾಹನ ಮಾರಾಟದಿಂದ ಉತ್ತಮ ಆದಾಯ ಪಡೆದುಕೊಳ್ಳುವಿರಿ. ರಾಜಕೀಯದಲ್ಲಿ ಯಾವುದೇ ರೀತಿಯ ಬದಲಾವಣೆ ಈ ದಿನದಲ್ಲಿ ಸರಿಯಲ್ಲ.

ಧನು: ರಸ್ತೆ ಗುತ್ತಿಗೆದಾರರು, ಮರ-ಮುಟ್ಟುಗಳ ಮತ್ತು ಕಲ್ಲಿನ ವ್ಯಾಪಾರಿಗಳು ತಮ್ಮ ಶ್ರಮದ ದುಪ್ಪಟ್ಟು ಸಂಪಾದನೆಯನ್ನು ಅಪೇಕ್ಷಿಸಬಹುದು. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿದೆ.

ಮಕರ: ದೈವಬಲ ಮತ್ತು ಹಿರಿಯರ ಆಶೀರ್ವಾದ ನಿಮ್ಮ ಪಾಲಿಗಿದೆ. ದಿನದ ಮೊದಲಲ್ಲಿ ಪ್ರಾರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ಮಕ್ಕಳ ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

ಕುಂಭ: ನಿಮ್ಮಲ್ಲಿ ಇದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿ ಕೊಳ್ಳುವ ನಿರ್ಧಾರವನ್ನು ಮಾಡುವಿರಿ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ. ಕೆಂಪು ಉಡುಪು ಶುಭದಾಯಕ.

ಮೀನ: ನಿಮ್ಮ ಈಗಿನ ವ್ಯವಹಾರ ಕ್ಷೇತ್ರ ವಿಸ್ತರಿಸಲು ಈ ದಿನ ಸೂಕ್ತ. ಬಂಧು ಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳಲಿದ್ದೀರಿ. ಮಂದಗತಿಯಲ್ಲಿ ಕೆಲಸ ಕಾರ್ಯಗಳು ನಡೆದು ಸಮಯದ ಕೊರತೆ ಎದುರಾಗಲಿದೆ.

ಪದಬಂಧ 5242

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ರಾಜ ಕುಳಿತುಕೊಳ್ಳುವ ಆಸನ (4)
3.ಉಳಿಕೆಯನ್ನು ನಿಲ್ಲಿಸಿಕೊಂಡಿರುವವನು (4)
5.ಸ್ಫುಟವಾಗಿ ಗೋಚರಿಸದೆ ಅಸ್ಪಷ್ಟವಾಗಿರುವುದು (3)
7.ಬಿಡುವಿನ ದಿನ (2)
9.ತಾರಾಗಣದಲ್ಲಿರುವ ನೆಲೆ ಗೊತ್ತಾಯಿತೇ? (2)
10.ಹೊಟ್ಟೆಕಿಚ್ಚಿಗೊಂದು ಪರ್ಯಾಯ ಪದ (3)
11.ಹುಲ್ಲು ಸೊಪ್ಪು ಮೊದಲಾದವುಗಳ ಕಟ್ಟು (2)
12.ಪುಣ್ಯಕ್ಷೇತ್ರದಲ್ಲಿರುವ ಮಗ ತಿರುಗಿದ್ದಾನಲ್ಲಾ? (2)
14.ವನದ ಬಗ್ಗೆ ಬರೆದಿರುವ ಪದ್ಯ (3)
16.ಈತ ಅತೀ ಬುದ್ಧಿವಂತ (4)
17.ತರಹೇವಾರಿ ಕಾಯಿಪಲ್ಯೆ (4)

ಮೇಲಿಂದ ಕೆಳಕ್ಕೆ
1.ಅಡಿಕೆ ಹೂವಿನ ಗೊಂಚಲು (3)
2. ಚಿತ್ತವಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (2)
3.ತಂಬಾಕು ಕತ್ತರಿಸಲು ಬಳಸಿದ ಕಿರುಗತ್ತಿ (2)
4.ಮಣ ಭಾರ ಹೊತ್ತಿರುವ ನಲ್ಲ! (3)
6.ಚಿನ್ನದ ಹಬ್ಬವಿದು (7)
8.ಮೈಮರೆಯದೆ ಎಚ್ಚರವಾಗಿರುವಿಕೆ (5)
9.ಮೋಕ್ಷದಾಯಕ ಮಂತ್ರ (5)
11.ಕಂದನ ಹತ್ತಿರವಿರುವ ಕುಣಿ (3)
13.ರಾಜಕೀಯ ವ್ಯಕ್ತಿ (3)
14.ಕರಣದಲ್ಲಿರುವ ಅತ್ಯಂತ ಚಿಕ್ಕ ಚೂರು (2)
15.ನಗುತಲಿದ್ದವ ಹೀಗೆ ಶರಣಾದ (2)



5241ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 3.ಪ್ರವಾಸ
5.ವ್ಯಕ್ತಿ 6.ಸಮಸ್ತ
7.ಕಸ 9.ನಗ
11.ಹೂದಾನಿ 13.ಜನ
14.ಸುಗುಣ 15.ನರ್ತನ

ಮೇಲಿಂದ ಕೆಳಕ್ಕೆ:
1.ವಿಮುಕ್ತಿ 2.ದವಸ
3.ಪ್ರಶಸ್ತ 4.ಸರೀಕ
5.ವ್ಯವಕಲನ 8.ಸಮುದ್ರಯಾನ
10.ಗವಸು 11.ಹೂಬಾಣ
12.ನಿಧಾನ 13.ಜವಾನ

ಸುಡೊಕು 5628

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5627 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯಡಿಯೂರಪ್ಪ ಹೆಸರು ಹೇಳದಿದ್ದರೆ ಮತಗಳು ಕೈತಪ್ಪುವ ಭೀತಿ: ಎಚ್‌ಡಿ.ಕುಮಾರಸ್ವಾಮಿ ಲೇವಡಿ

‘ವೋಟಿಗಾಗಿ ಬಿಜೆಪಿಯಿಂದ ಬಿಎಸ್‌ವೈ ಧ್ಯಾನ’

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ‘ನರೇಂದ್ರ ಮೋದಿ ಮತ್ತು ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ರಾಜ್ಯದಲ್ಲಿ ಚುನಾವಣೆ ಎದುರಿಸುತ್ತೇವೆ ಎಂದು ಅಮಿತ್ ಶಾ ಹೇಳಿದ್ದಾರೆ. ಬಿಎಸ್‌ವೈ ಹೆಸರು ಹೇಳದಿದ್ದರೆ ವೋಟುಗಳು ಕೈತಪ್ಪುತ್ತವೆ ಎಂದು ಅವರ ಧ್ಯಾನ ಮಾಡಲು ಶುರು ಮಾಡಿದ್ದಾರೆ. ಈಗಾಲಾದರೂ ಬಿಎಸ್‌ವೈ ಧ್ಯಾನ ಮಾಡುತ್ತಿರುವುದಕ್ಕೆ ಮೆಚ್ಚಿಕೊಳ್ಳಬೇಕು’ ಎಂದು ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಶನಿವಾರ ಕುಟುಕಿದರು.

‘ಬಿಜೆಪಿಗೆ ಬೆಂಬಲಿಸಿದರೆ ಭ್ರಷ್ಟಾಚಾರ ಮುಕ್ತ ರಾಜ್ಯ ಮಾಡುತ್ತೇವೆ ಎಂದು ಅಮಿತ್ ಶಾ ಹೇಳಿದ್ದಾರೆ. ಮೂರೂವರೆ ವರ್ಷಗಳ ಬಿಜೆಪಿ ಆಡಳಿತ ಭ್ರಷ್ಟಾಚಾರದಿಂದ ಕೂಡಿದೆಯೇ ಎಂಬುದನ್ನು ಬಿಡಿಸಿ ಹೇಳಬೇಕು’ ಎಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಸ್ವಾಮೀಜಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ ನಿದರ್ಶನಗಳು ಇವೆ. ಕರ್ನಾಟಕದಲ್ಲೂ ಕೆಲ ಸ್ವಾಮೀಜಿಗಳು, ಧಾರ್ಮಿಕ ಭಾವನೆಗಳನ್ನು ಜನರ ಮುಂದಿಟ್ಟು ಚುನಾವಣೆ ತಂತ್ರ ಹೆಣೆಯಲು ಬಿಜೆಪಿಯವರು ಮುಂದಾಗಿದ್ದಾರೆ ಎಂಬುದನ್ನು ಟಿವಿಯಲ್ಲಿ ನೋಡಿದ್ದೇನೆ. ಯಾರನ್ನಾದರೂ ಕಣಕ್ಕಿಳಿಸಲಿ ಆದರೆ, ಅವರನ್ನು ಸ್ವಾರ್ಥಕ್ಕಾಗಿ ಬಿಜೆಪಿ ನಾಯಕರು ಬಳಸಿಕೊಳ್ಳಬಾರದು. ಧಾರ್ಮಿಕ ಕ್ಷೇತ್ರ, ಗುರು ಭಕ್ತಿ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯ ಮೂಡುವುದಕ್ಕೆ ಅವಕಾಶ ನೀಡಬಾರದು’ ಎಂದರು.

‘ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜನಾರ್ದನ ರೆಡ್ಡಿ ಅವರನ್ನು ತಾನು ನೋಡಿಕೊಳ್ಳುತ್ತೇನೆ ಎಂದು ಅಮಿತ್ ಶಾ ಅವರು ಕಾರ್ಯಕರ್ತರಿಗೆ ಹೇಳಿದ್ದಾರೆ. ನೋಡಿಕೊಳ್ಳುತ್ತೇನೆ ಎಂದರೆ ಅರ್ಥ ಏನು? ಆದಾಯ ತೆರಿಗೆ (ಐಟಿ), ಜಾರಿ ನಿರ್ದೇಶನಾಲಯ (ಇ.ಡಿ) ಅಥವಾ ಇನ್ನಾವುದನ್ನು ಬಿಟ್ಟು ನೋಡಿಕೊಳ್ಳುತ್ತೀರಿ? ಎಂದೂ ಕೇಳಿದರು.

ಹಾಸನದಲ್ಲಿ ಸಾಮಾನ್ಯ ಕಾರ್ಯಕರ್ತನನ್ನು ಕಣಕ್ಕಿಳಿಸುವೆ–ಎಚ್‌ಡಿಕೆ

‘ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾನ್ಯ ಕಾರ್ಯಕರ್ತರೊಬ್ಬರನ್ನು ಕಣಕ್ಕಿಳಿಸುತ್ತೇನೆ ಎಂದು ಎರಡು ವರ್ಷದ ಹಿಂದೆಯೇ ಹೇಳಿದ್ದೆ, ಈಗಲೂ ಅದಕ್ಕೆ ಬದ್ಧನಾಗಿದ್ದೇನೆ’ ಎಂದು ಎಚ್‌.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ಶೃಂಗೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಟಿ–20’ ಕ್ರಿಕೆಟ್‌ನಲ್ಲಿ ಕೊನೆಯ ಓವರ್‌ವರೆಗೂ ಇರುವಂಥ ಕುತೂಹಲ ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್ ವಿಚಾರದಲ್ಲೂ ಮೂಡಿದೆ. ಟಿಕೆಟ್, ಕಾರ್ಯಕರ್ತನಿಗೋ ಅಥವಾ ಎಚ್‌.ಡಿ.ದೇವೇಗೌಡ ಅವರ ಕುಟುಂಬದವರಿಗೋ ಎಂಬ ಕುತೂಹಲ ಇದೆ. ಇದೇ 26ರಂದು ಬೆಂಗಳೂರಿನಲ್ಲಿ ಸಭೆ ನಡೆಸುತ್ತೇನೆ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ನಗರಸಭೆ, ಗ್ರಾಮ ಪಂಚಾಯಿತಿ ಸದಸ್ಯರು ಸಹಿತ ಪಕ್ಷದ 300 ಮಂದಿಯನ್ನು ಆಹ್ವಾನಿಸಿದ್ದೇನೆ. ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ನಿರ್ಧರಿಸುತ್ತೇವೆ’ ಎಂದರು.

ಬಿಎಸ್‌ವೈ ರೀತಿಯಲ್ಲಿ ಮುಂದಿನ 45 ವರ್ಷ ಪಕ್ಷ ಸಂಘಟನೆ: ವಿಜಯೇಂದ್ರ

ದಾವಣಗೆರೆ: ‘ರಾಜ್ಯದ ಆಧುನಿಕ ಭಗೀರಥರಾಗಿರುವ ಬಿ.ಎಸ್. ಯಡಿಯೂರಪ್ಪ ಅವರು 45 ವರ್ಷಗಳ ಕಾಲ ಪಕ್ಷವನ್ನು ಸಂಘಟಿಸಿದ್ದಾರೆ. ಇನ್ನು ಮುಂದಿನ 40–45 ವರ್ಷಗಳ ಕಾಲ ನಾನು ರಾಜ್ಯ ಸುತ್ತಿ ಪಕ್ಷ ಸಂಘಟಿಸುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ದಾವಣಗೆರೆಯಲ್ಲಿ ಶನಿವಾರ ನಡೆದ ಬಿಜೆಪಿ ಯುವ ಮೋರ್ಚಾದ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಬಿಜೆಪಿಯನ್ನು ಸಂಘಟಿಸಿ ಅಧಿಕಾರಕ್ಕೆ ತಂದು ನಾಲ್ಕು ಬಾರಿ ಯಡಿಯೂರಪ್ಪ ಮುಖ್ಯಮಂತ್ರಿಯಾದರು. ರೈತ ಬಜೆಟ್ ಮಂಡನೆ, ನೀರಾವರಿಗೆ ಪ್ರೋತ್ಸಾಹ, ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಹೀಗೆ ಅನೇಕ ಯೋಜನೆಗಳ ಮೂಲಕ ನೆರವಾದರು’ ಎಂದು ನೆನಪು ಮಾಡಿಕೊಂಡರು.

‘ಹಿಂದೂಗಳ ಹತ್ಯೆಯಾದಾಗ ಮಾತನಾಡದ ಕಾಂಗ್ರೆಸ್‌ನ ನಾಯಕರಿಗೆ ಈಗ ನಾನೂ ಹಿಂದೂ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಅಧಿಕಾರ ಇದ್ದಾಗ ವೀರಶೈವ–ಲಿಂಗಾಯತರನ್ನು ಒಡೆಯುವ ಪ್ರಯತ್ನ ಮಾಡಿದರು. ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಯೊಳಗೆ ಬೆಂಕಿ ಹಚ್ಚಿದಾಗ ಅಲ್ಪಸಂಖ್ಯಾತರ ಮತ ತಪ್ಪುತ್ತೆ ಎಂಬ ಕಾರಣಕ್ಕೆ ದಲಿತ ಶಾಸಕನ ನೆರವಿಗೆ ಕಾಂಗ್ರೆಸ್ ಬರಲಿಲ್ಲ’ ಎಂದು ಟೀಕಿಸಿದರು. ಯಡಿಯೂರಪ್ಪ ಅವರನ್ನು ನೆನಪಿಸಿಕೊಂಡು ಗದ್ಗದಿತರಾದ ಜಗಳೂರು ಶಾಸಕ ಎಸ್‌.ವಿ. ರಾಮಚಂದ್ರ, ‘ಯಡಿಯೂರಪ್ಪ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂಬುದು ನೋವಿನ ಸಂಗತಿ. ಆದರೆ, ಅವರ ಮಗ ಬಿ.ವೈ. ವಿಜಯೇಂದ್ರ ನಮ್ಮ ನಾಯಕರಾಗಿರುತ್ತಾರೆ ಎಂಬುದು ಸಂತಸದ ಸಂಗತಿ’ ಎಂದರು.

ಹಾಸನ ಟಿಕೆಟ್ ಕಗ್ಗಂಟು

ಹಾಸನ: ‘ಟಿಕೆಟ್ ಆಕಾಂಕ್ಷಿ ಭವಾನಿ–ಎಚ್‌.ಡಿ.ರೇವಣ್ಣ ದಂಪತಿ ಹಾಗೂ ಸಂಸದ ಪ್ರಜ್ವಲ್ ರೇವಣ್ಣ ಪಕ್ಷದ ಪರ ಪ್ರಚಾರ ನಡೆಸಲಿದ್ದಾರೆ ಎಂದು ಹೇಳಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಶನಿವಾರ ಶೃಂಗೇರಿಯಲ್ಲಿ ‘ಹಾಸನದಲ್ಲಿ ಸಾಮಾನ್ಯ ಕಾರ್ಯಕರ್ತರೊಬ್ಬರನ್ನು ನಿಲ್ಲಿಸಿ ಗೆಲ್ಲಿಸುವುದಾಗಿ’ ಹೇಳಿರುವುದು ಗೊಂದಲ ಮೂಡಿಸಿದೆ.

ಈ ಮಧ್ಯೆ, ‘ಬೆಂಗಳೂರಿನಲ್ಲಿ ಭಾನು ವಾರ ಕರೆದಿದ್ದ ಸಭೆಯೂ ರದ್ದಾಗಿದೆ’ ಎಂದು ತಿಳಿದು ಬಂದಿದೆ. ಇದರಿಂದಾಗಿ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ವಿಷಯ ಮತ್ತಷ್ಟು ಕಗ್ಗಂಟಾಗಿದೆ.

ರೇವಣ್ಣ ಹಾಗೂ ಟಿಕೆಟ್ ಆಕಾಂಕ್ಷಿ ಸ್ವರೂಪ್ ಅವರನ್ನು ಹೊರಗಿಟ್ಟು, ಕ್ಷೇತ್ರದ 300ಕ್ಕೂ ಹೆಚ್ಚು ಮುಖಂಡರೊಂದಿಗೆ ಭಾನುವಾರ ಬೆಂಗಳೂರಿನಲ್ಲಿ ಸಭೆ ನಡೆಸುವುದಾಗಿಯೂ ಕುಮಾರಸ್ವಾಮಿ ತಿಳಿಸಿದ್ದರು. ಅದರ ಬೆನ್ನಲ್ಲೆ, ಶನಿವಾರ ರಾತ್ರಿ ನಗರದಲ್ಲಿ ಕ್ಷೇತ್ರದ ಜೆಡಿಎಸ್ ಮುಖಂಡರೊಂದಿಗೆ ರೇವಣ್ಣ ತುರ್ತು ಸಭೆ ನಡೆಸಿದರು. ಆದರೆ ಯಾವುದೇ ತೀರ್ಮಾನ ಕೈಗೊಳ್ಳಲಿಲ್ಲ. ‘ಬೆಂಗಳೂರಿನ ಸಭೆ ರದ್ದುಪಡಿಸುವ ಬಗ್ಗೆ ದೇವೇಗೌಡರೇ ಪ್ರಕಟಣೆ ನೀಡಲಿದ್ದಾರೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಿಜಯ ಸಂಕಲ್ಪ ಯಾತ್ರೆ: ಮಾ. 3ಕ್ಕೆ ಅಮಿತ್ ಶಾ ಚಾಲನೆ

ದೇವನಹಳ್ಳಿ: ಬಿಜೆಪಿಯ ವಿಜಯ ಸಂಕಲ್ಪ ರಥಯಾತ್ರೆಗೆ ಮಾರ್ಚ್ 3ರಂದು ದೇವನಹಳ್ಳಿಯ ಆವತಿ ಗ್ರಾಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚಾಲನೆ ನೀಡಲಿದ್ದಾರೆ.

‘ಆವತಿ ಗ್ರಾಮ ನಾಡಪ್ರಭು ಕೆಂಪೇಗೌಡ ಅವರ ಪೂರ್ವಜರ ನಾಡು. ಹಾಗಾಗಿ ಈ ಗ್ರಾಮದಿಂದ ರಥಯಾತ್ರೆಗೆ ಚಾಲನೆ ನೀಡಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಪಟ್ಟಣದಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತಿಳಿಸಿದರು. ಸಂಗೊಳ್ಳಿ ರಾಯಣ್ಣ ಬೀಡು ಬೆಳಗಾವಿ, ಚಾಮರಾಜನಗರದ ಮಹದೇಶ್ವರ ಬೆಟ್ಟ, ಅನುಭವ ಮಂಟಪ ಹೀಗೆ ರಾಜ್ಯದ ವಿವಿಧ ಐತಿಹಾಸಿಕ ಸ್ಥಳಗಳಿಂದ ರಥಯಾತ್ರೆ ಸಾಗಲಿವೆ ಎಂದು ತಿಳಿಸಿದರು.

‘ಬಿಜೆಪಿ ಅಭ್ಯರ್ಥಿ ಆಯ್ಕೆಗೆ ಸಮೀಕ್ಷೆ’

ಲಿಂಗಸುಗೂರು (ರಾಯಚೂರು ಜಿಲ್ಲೆ): ‘ವಿಧಾನಸಭಾ ಕ್ಷೇತ್ರದಲ್ಲಿ ಆಂತರಿಕ ಸಮೀಕ್ಷೆ ನಡೆಸಿ, ಗೆಲ್ಲುವ ಅಭ್ಯರ್ಥಿಗಳ ಹೆಸರುಗಳನ್ನು ಹೈಕಮಾಂಡ್‌ಗೆ ಶಿಫಾರಸು ಮಾಡಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ಬಲಿಗೆ ಗ್ರಾಮದಲ್ಲಿ ಮತದಾನ ಬಹಿಷ್ಕಾರದ ಫಲಕಗಳ ಜೊತೆ ಗ್ರಾಮಸ್ಥರು

‘ಒಟಿಪಿ ಬಾರದೇ ವೋಟ್ ಇಲ್ಲ’

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಲಿಗೆ ಗ್ರಾಮದಲ್ಲಿ ಈಗ ‘ಒಟಿಪಿ ಬಾರದೇ ವೋಟ್ ಇಲ್ಲ’ ಎಂಬ ಘೋಷಣೆ. ಮೊಬೈಲ್ ನೆಟ್‌ವರ್ಕ್ ಸಮರ್ಪಕ ಇಲ್ಲದ ಕಾರಣ ಗ್ರಾಮಸ್ಥರು ಚುನಾವಣೆ ಬಹಿಷ್ಕರಿಸುವುದಾಗಿ ಎಚ್ಚರಿಸಿದ್ದಾರೆ.

ಬಲಿಗೆ ಹಾಗೂ ಹೊನ್ನೆಕಾಡು ಗ್ರಾಮದ ಜನರು ಮೊಬೈಲ್ ಫೋನ್ ನೆಟ್‌ವರ್ಕ್‌ಗಾಗಿ ಗುಡ್ಡ ಏರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ‘ಮೊಬೈಲ್ ಫೋನ್ ಬಂದ ನಂತರ ಲ್ಯಾಂಡ್‌ಲೈನ್ ನಿರ್ವಹಣೆಯಲ್ಲೂ ಸಮಸ್ಯೆ ಕಂಡುಬಂತು. ಹೀಗಾಗಿ ಒಂದು ದಶಕದಿಂದ ಲ್ಯಾಂಡ್ ಫೋನ್ ಕೂಡ ಇಲ್ಲ’ ಎಂದು ಗ್ರಾಮದ ದಿಲೀಪ್ ಹೇಳಿದರು. ‘ಸರ್ಕಾರದ ಯೋಜನೆಗಳು, ಹಣಕಾಸು, ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಒಟಿಪಿ ಮೊಬೈಲ್ ಫೋನ್‌ಗೆ ಬರುತ್ತದೆ. ಬಲಿಗೆ ಗ್ರಾಮದ ಜನರು ಒಟಿಪಿಯಿಂದ ವಂಚಿತರಾಗಿದ್ದಾರೆ. ಹೀಗಾಗಿ ‘ಒಟಿಪಿ ಇಲ್ಲದೆ ವೋಟ್ ಇಲ್ಲ’ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮೊಬೈಲ್ ಟವರ್ ಸ್ಥಾಪನೆ ಮಾಡಿದರೆ ಮಾತ್ರ ಈ ಬಾರಿ ಮತದಾನ ಮಾಡಲಾಗುವುದು’ ಎಂದು ರೈತ ಸಂಘದ ಸಂಚಾಲಕ ಸವಿಂಜಯ ತಿಳಿಸಿದರು.

ತುಮಕೂರು: ಕಾಂಗ್ರೆಸ್‌ನಿಂದ ‘ಪೇ ಎಂಎಲ್‌ಎ’ ಅಭಿಯಾನ

ತುಮಕೂರು: ‘ಪೇ ಸಿಎಂ’ ಅಭಿಯಾನ ಮಾದರಿಯಲ್ಲಿಯೇ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ‘ಪೇ ಎಂಎಲ್‌ಎ’ ಅಭಿಯಾನ ಆರಂಭಿಸಿದ್ದಾರೆ.

ನಗರದ ಬಿಜಿಎಸ್ ವೃತ್ತ, ಬಿ.ಎಚ್. ರಸ್ತೆ, ಹೊರಪೇಟೆ ಸೇರಿದಂತೆ ವಿವಿಧೆಡೆ ಗೋಡೆಗಳ ಮೇಲೆ ಶುಕ್ರವಾರ ರಾತ್ರಿ ‘ಪೇ ಎಂಎಲ್‌ಎ’ ಎಂಬ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ.

ಪೋಸ್ಟರ್‌ನಲ್ಲಿ ಶಾಸಕ ಜಿ.ಬಿ. ಜ್ಯೋತಿಗಣೇಶ್ ಭಾವಚಿತ್ರವಿದೆ. ‘ನಿಮ್ಮ ಕೆಲಸ ಆಗಬೇಕೆ? ನನಗೆ ಪೇ ಮಾಡಿ. ಭ್ರಷ್ಟಾಚಾರವೇ ನನ್ನ ಮೊದಲ ಆದ್ಯತೆ’ ಎಂದು ಪೋಸ್ಟರ್‌ನಲ್ಲಿ ನಮೂದಿಸಲಾಗಿದೆ. ಈ ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು, ಪೊಲೀಸರು ಪೋಸ್ಟರ್‌ಗಳನ್ನು ಕಿತ್ತು ಹಾಕಿದರು.

ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಶಾಸಕರು ಕಮಿಷನ್ ಪಡೆದಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ಸಿಗರು ಈ ಅಭಿಯಾನ ಆರಂಭಿಸಿದ್ದಾರೆ.

ಬಿಜೆಪಿ ಖಂಡನೆ: ಶಾಸಕ ಜ್ಯೋತಿಗಣೇಶ್ ಅವರ ಯಶಸ್ಸು ಸಹಿಸದವರು ಪೋಸ್ಟರ್ ಅಂಟಿಸಿ ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ ಎಂದು ಬಿಜೆಪಿ ಜಿಲ್ಲಾ ಯುವ ಮೋರ್ಚಾ ಖಂಡಿಸಿದೆ.

‘ಕಿಡಿಗೇಡಿಗಳು ಬಾಡಿಗೆ ವ್ಯಕ್ತಿಗಳನ್ನು ಕರೆತಂದು ರಾತ್ರೋರಾತ್ರಿ ಕಳ್ಳರಂತೆ ಭಿತ್ತಿಪತ್ರ ಅಂಟಿಸಿ ಜಿಲ್ಲೆಯ ರಾಜಕಾರಣ ಕಲುಷಿತಗೊಳಿಸಲು ಮುಂದಾಗಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೇಡಿ ಕೃತ್ಯಕ್ಕೆ ಕೈ ಹಾಕಿದ್ದಾರೆ’ ಎಂದು ಮೋರ್ಚಾ ಅಧ್ಯಕ್ಷ ಟಿ.ವೈ.ಯಶಸ್ ಟೀಕಿಸಿದ್ದಾರೆ.

‘ಐದು ವರ್ಷಗಳಲ್ಲಿ ನಗರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆದಿವೆ. ಜನರು ಪ್ರಬುದ್ಧರಾಗಿದ್ದು, ಬದಲಾವಣೆ ಗಮನಿಸಿದ್ದಾರೆ. ಶಾಸಕರು ಜನರ ಮಧ್ಯೆ ಇದ್ದು ಕೆಲಸ ಮಾಡಿದ್ದಾರೆ’ ಎಂದು ಹೇಳಿದ್ದಾರೆ.

ತುಮಕೂರು ನಗರದ ಗೋಡೆ ಮೇಲೆ ‘ಪೇ ಎಂಎಲ್‌ಎ’ ಪೋಸ್ಟರ್ ಅಂಟಿಸಿರುವುದು

ವಿವಿಧ ಯೋಜನೆಗಳಿಗೆ ಚಾಲನೆ • ಶಿವಮೊಗ್ಗ, ಬೆಳಗಾವಿಯಲ್ಲಿ ಕಾರ್ಯಕ್ರಮ

ನಾಳೆ ರಾಜ್ಯಕ್ಕೆ ಮತ್ತೆ ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ, ಹಲವು ಯೋಜನೆಗಳಿಗೆ ಚಾಲನೆ ನೀಡುವ ನೆಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಇದೇ 27ರಂದು ಮತ್ತೊಮ್ಮೆ ರಾಜ್ಯಕ್ಕೆ ಬರಲಿದ್ದು, ಶಿವಮೊಗ್ಗ ಮತ್ತು ಬೆಳಗಾವಿಯಲ್ಲಿ ಮಿಂಚಿನ ಸಂಚಾರ ನಡೆಸಲಿದ್ದಾರೆ. ‘ಪಿಎಂ–ಕಿಸಾನ್ ಸಮ್ಮಾನ್’ ಯೋಜನೆಯ 13ನೇ ಕಂತಿನ ಹಣವನ್ನು ಅವರು ಬೆಳಗಾವಿಯಲ್ಲಿ ಬಿಡುಗಡೆ ಮಾಡಲಿದ್ದಾರೆ.

ಈ ಎರಡೂ ಜಿಲ್ಲೆಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳು, ರೈಲ್ವೆ, ರಸ್ತೆ ಯೋಜನೆಗಳು, ‘ಜಲಜೀವನ್ ಮಿಷನ್’ನಡಿ ಗ್ರಾಮೀಣ ನೀರು ಸಂಪರ್ಕ ಯೋಜನೆಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ತಮ್ಮ ಒಂದು ದಿನದ ಈ ಪ್ರವಾಸದ ಸಂದರ್ಭದಲ್ಲಿ ಪ್ರಧಾನಿ ಚಾಲನೆ ನೀಡಲಿದ್ದಾರೆ.

ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಶಿವಮೊಗ್ಗಕ್ಕೆ ಬರಲಿ ರುವ ಮೋದಿ, ಸುಮಾರು ₹ 450 ಕೋಟಿ ವೆಚ್ಚದಲ್ಲಿ ಹೊಸದಾಗಿ ನಿರ್ಮಿ ಸಿರುವ ವಿಮಾನ ನಿಲ್ದಾಣವನ್ನು ಉದ್ಘಾಟಿಸುವರು. ಬಳಿಕ, ₹990 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗಲಿ ರುವ ಶಿವಮೊಗ್ಗ–ಶಿಕಾರಿಪುರ– ರಾಣೆ ಬೆನ್ನೂರು ಹೊಸ ರೈಲು ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಅಲ್ಲದೆ, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಹಲವು ಇಲಾಖೆಗಳ ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಬೆಳಗಾವಿಯಲ್ಲಿ ಕಿಸಾನ್ ಸಮ್ಮಾನ್ ಯೋಜನೆಯ 13ನೇ ಕಂತಿನ ಅನುದಾನವನ್ನು ದೇಶದ ಸುಮಾರು 9 ಕೋಟಿ ಅರ್ಹ ರೈತರಿಗೆ ತಲಾ ₹ 2 ಸಾವಿರದಂತೆ ₹ 18 ಸಾವಿರ ಕೋಟಿಯನ್ನು ಡಿಬಿಟಿ ಮೂಲಕ ನೇರವಾಗಿ ಅವರು ಬಿಡುಗಡೆ ಮಾಡಲಿದ್ದಾರೆ. ಅಲ್ಲದೆ, ₹ 190 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಬೆಳಗಾವಿ ರೈಲು ನಿಲ್ದಾಣವನ್ನು ಲೋಕಾರ್ಪಣೆ ಮಾಡಲಿರುವ ಮೋದಿ, ಆರು ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೂ ಶಿಲಾನ್ಯಾಸ ಮಾಡಲಿದ್ದಾರೆ.

‘ಬೆಂಗಳೂರಿನಲ್ಲಿ ಮನೆ ಮಾಡಲಿದ್ದಾರೆ ಅಮಿತ್ ಶಾ, ಧರ್ಮೇಂದ್ರ ಪ್ರಧಾನ್’

ಬಾಗಲಕೋಟೆ: ರಾಜ್ಯದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಬೆಂಗಳೂರಿನಲ್ಲಿ ಮನೆ ಮಾಡಲಿದ್ದಾರೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಶನಿವಾರ ಕಲಾದಗಿಯಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಬ್ಬರೂ ನಾಯಕರಿಗೆ ಮನೆ ಹುಡುಕುವ ಕಾರ್ಯ ಈಗಾಗಲೇ ನಡೆಸಲಾಗುತ್ತಿದೆ. ವಿಧಾನಸಭಾ ಚುನಾವಣೆ ಮುಗಿಯುವವರೆಗೆ ಇಲ್ಲಿಯೇ ಇರಲಿದ್ದಾರೆ ಎಂದರು.

‘ನಮ್ಮದು ನಾಳೆ ಬಾ ಎನ್ನುವ ಪಕ್ಷ ಅಲ್ಲ. ಸದಾ ಜನರೊಂದಿಗೆ ಇರುವ ಪಕ್ಷ. ಕಾಂಗ್ರೆಸ್ ನಾಯಕರ ತರಹ ಬಂದು, ಓಡಿ ಹೋಗಲ್ಲ. ಭಾಷಣ ಮಾಡಿ ಓಡಿ ಹೋಗುವುದಲ್ಲ. ಇಲ್ಲಿ ಇರಬೇಕು’ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಡಬಲ್ ಎಂಜಿನ್ ಸರ್ಕಾರ ಮುಂದುವರೆಯಲಿದೆ. ಬಿಜೆಪಿ ಗೆಲುವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸೂರ್ಯ, ಚಂದ್ರ ಇರುವುದು ಎಷ್ಟು ಸತ್ಯವೋ, ಬಿಜೆಪಿ ಸರ್ಕಾರ ಬರುವುದು ಅಷ್ಟೇ ಸತ್ಯ ಎಂದರು.

ಒಪಿಎಸ್ ಜಾರಿಗೆ ಆಗ್ರಹಿಸಿ ಶಿಕ್ಷಕರಿಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಸುದ್ದಿಗಾರರು ಕೇಳಿದ ಪಶ್ನೆಗೆ, ಶಿಕ್ಷಣ ಇಲಾಖೆ ಸಚಿವರ ಜತೆಗೆ ಮಾತನಾಡುತ್ತೇನೆ. ಎಲ್ಲರಿಗೂ ನ್ಯಾಯ ಸಿಗುವಂತೆ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

MAHARSHI VEDVYAS OUTSOURCING TEACHERS RECRUITMENT
REGIONAL OFFICE : PLOT NO.-1380 , PAHAL, CUTTACK BHUBANESWAR ROAD, BHUBANESWAR - 752101

RECRUITMENT FOR OUTSOURCED TEACHING & NON TEACHING POSTS IN AIDED MINORITY SCHOOLS.

Three One Nine (319) aided minority schools are functioning in Karnataka state which are funded by Ministry of Minority Affairs, Govt. of India. It has been decided to engage teaching faculty on contract basis to teach CBSE syllabus in aided schools.

SL.No	POST	VACANCIES	REMUNERATION
1.	YOGA TEACHERS	319	Rs. 32000/-
2.	ARTS TEACHERS	319	Rs. 32000/-
3.	MUSIC TEACHERS	319	Rs. 32000/-
4.	HINDI	319	Rs. 35000/-
5.	ENGLISH	319	Rs. 35000/-
6.	MATHEMATICS	319	Rs. 35000/-
7.	GENERAL SCIENCE	319	Rs. 35000/-
8.	SOCIAL STUDIES	319	Rs. 35000/-
9.	COMPUTER SCIENCE	319	Rs. 35000/-
10.	LIBRALIAN	319	Rs. 30000/-
11.	TECHNICAL ASST.	319	Rs. 30000/-
12.	OFFICE SUBORDININATE	319	Rs.20000/-

Application Submission Last date extended till 10th March 2023
Website : www.tsvc.in , Email - helpdesk@tsvc.in
Note: Candidates are request to apply strictly from official new website www.tsvc.in only. Application submitted through our any other website will be rejected and management will be not responsible for any loss.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೇಂದ್ರೀಯ ವಿದ್ಯಾಲಯ, ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು - 560 064.
केन्द्रीय विद्यालय, रेल पहिया कारखाना, यलहंका, बेंगलुरू - 560 064.
KENDRIYA VIDYALAYA, RAIL WHEEL FACTORY, YELAHANKA, BENGALUGU - 560 064.
Phone : 080-28460979 (O), Fax No.: 080-28566968,
E-Mail : kvrwf123@gmail.com, Website : https://wapyelahanka.kvs.ac.in

WALK-IN-INTERVIEW

Walk-in interview for the following Posts on purely Part Time / Contractual basis for the academic Year 2023-24.
Reporting Time : 09.00 a.m.

DATE	POST
28.02.2023	PGT (Hindi), PGT (Chem.), PGT (Eng.), PGT (Phy.), PGT (Maths), PGT (Bio), PGT (CS), TGT (Hindi), TGT (Eng.), TGT (SST), TGT (Maths.), TGT (Sc), TGT (Sanskrit)
01.03.2023	PRTs, Yoga Instr, Sports Coaches, Staff Nurse, Kannada Teacher, Computer Instructor (Senior & Junior) Education Counsellor and Special Educator.

For detail of eligibility, educational qualifications and application form, kindly log on to the website of Kendriya Vidyalaya, Rail Wheel Factory at https://wapyelahanka.kvs.ac.in. Candidates should report to the venue at 9.00 a.m. for the interview with original and a set of photocopy of all necessary documents.
No.: TA/DA will be paid by the Vidyalaya for Walk-in-Interview
Sd/- Principal

ಪ್ರಜಾವಾಣಿ
ನೇಮಕಾತಿ ಕಾರ್ಯಕ್ರಮ
04-03-2023 ಶನಿವಾರ | 10:00 am – 4:00 pm

ಉದ್ಯೋಗ ಶೀರ್ಷಿಕೆ 1 – ಫೀಲ್ಡ್ ಸೇಲ್ಸ್ (ಬೆಂಗಳೂರು)
ಅರ್ಹತೆ: ಕನಿಷ್ಠ ಪದವೀಧರ.
ಮಾರಾಟದಲ್ಲಿ 1+ ವರ್ಷದ ಅನುಭವ
ದ್ವಿಚಕ್ರ ವಾಹನ ಕಡ್ಡಾಯ
ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಭಾಷಾ ಪರಿಣತಿ

ಉದ್ಯೋಗ ಶೀರ್ಷಿಕೆ 2 – ಪ್ರೊಡಕ್ಷನ್ ಟ್ರೈನಿಗಳು (ಕುಂಬಳಗೋಡು ಮುದ್ರಣ ಘಟಕ, ಬೆಂಗಳೂರು)
ಅರ್ಹತೆ: ಡಿಪ್ಲೊಮಾ (ಮೆಕ್ಯಾನಿಕಲ್ / ಎಲೆಕ್ಟ್ರಿಕಲ್)
2021 ರಿಂದ 2023 ರೊಳಗೆ ಉತ್ತೀರ್ಣರಾಗಿ
ಹೊಸಬರು ಮಾತ್ರ ಅನ್ವಯಿಸುತ್ತಾರೆ
ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಭಾಷಾ ಪರಿಣತಿ

ವಾಕ್–ಇನ್–ಇಂಟರ್‌ವ್ಯೂ
#75, ಎಂಜಿ ರಸ್ತೆ, ಬೆಂಗಳೂರು 01

ಮಾರ್ಚ್ 2023
ಮಯೂರ
ಕೊಂಡು ಓದಿ, ಓದಿಸಿ
ಮಯೂರ ವಿಶೇಷ
ಭಾರ್ತಿ ಭಾರ್ತಿ
ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರಕ್ಕೆ ಪಾತ್ರರಾದ ಏಳು ಬರಹಗಾರ್ತಿಯರ ಸಂದರ್ಶನಗಳು

ಮಲಯಾಳಂ ಕಾವ್ಯಮಂಜರಿ
ಸಂಧ್ಯಾ ಇ. | ಬಿಂದು ಕೃಷ್ಣನ್
ಕವಿತೆಗಳನ್ನು ಕನ್ನಡಕ್ಕೆ ತಂದಿದ್ದಾರೆ
ತೇರ್‌ಳಿ ಎನ್. ಶೇಖರ್

ಅಂಕಣಗಳು
ಪುರಾಣ ಕುತೂಹಲ
ಎಂ.ಎಸ್. ಶ್ರೀರಾಮ್
ಕಾಡಿಗೆ ಕಣ್ಣು
ಕಲೀಮ್ ಉಲ್ಲಾ

ಲಂಕೇಶರ ನೆಪದಲ್ಲಿ ಕನ್ನಡ ಕಥನ
ಸುರೇಶ್ ನಾಗಲಮಡಿಕೆ ಬರಹ

ಹೊತ್ತು ಕಂತಿದ ಮೇಲೆ
ಸಾರಾ ಅಬೂಬಕ್ಕರ್ ನೆನಪು
ಬಿ.ಎಂ. ರೋಹಿಣಿ

ಕಥೆಗಳ ಕಣಜ
● ಮೈತ್ರೇಯಿಣಿ ಗದಿಗೆಪ್ಪಗೌಡರ
● ಶ್ರುತಿ ಬಿ.ಆರ್.
● ಅನೀಬಾಲ್ ಮೊಂತೆರೊ
● ಅನುಪಮಾ ಪ್ರಸಾದ್
● ಬಿ. ಜನಾರ್ದನ ಭಟ್
● ಸಪ್ನಾ ಕೋಟೇಶ್ವರ ಕಟ್ಟೆ

ಪ್ರಬಂಧ
ಪಾದುಕಾ ಪಟ್ಟಾಭಿಷೇಕ
ನಿರ್ಮಲಾ ಶೆಟ್ಟರ್
ಚಿತ್ತ ಕೆತ್ತಿದ ಚಿತ್ರ
ಧೀರೆ ಓಬವ್ವ
ನಾಗತಿ
ಭಾರತಿ ಹಾದಿಗೆ

ಕವಿತೆಗಳ ಕನ್ನಡಿಯಲ್ಲಿ
ರೂಪ ಹಾಸನ
ರೇಣುಕಾ ರಮಾನಂದ
ಅಕ್ಷತಾ ಹುಂಚದಕಟ್ಟೆ
ಭುವನಾ ಹಿರೇಮಠ
ಆರತಿ ಎಚ್‌.ಎನ್.
ಲಲಿತಾ ಸಿದ್ಧಬಸವಯ್ಯ
ಎಚ್‌.ಸಿ. ಭವ್ಯ ನವೀನ್
ಪಿ. ಭಾರತಿ ದೇವಿ

₹15
editormy@mayura.co.in
mayuraezine.com
/mayuramonthly
080-45557333/264

sebamed clinically pH 5.5 tested

FOR HAIR LOSS, DANDRUFF AND PIMPLES
NOT HOPE BUT TRUTH

Hope. Umeed. Asha.
Most of the times you fall for claims and may not be happy with the results.
That's why Sebamed, with the **science of pH 5.5.** It gives results.

What does ideal pH 5.5 do?
• Maintains healthy scalp barrier and reduces hair loss[1]
• Reduces multiplication of dandruff causing microorganisms[2]
• Reduces multiplication of acne causing bacteria[3]

1 – Int J Cosmet Sci. 2021;43(Suppl.1):1–8. 2- Indian Journal of Dermatology. April 2006. 3- Lukacs 1992. 4- Ref for pH 5.5: . Test report based on an independent lab accredited by NABL. 5- All pictures are for illustration purpose only.

Available at leading nearby stores and E-Comm:
amazon | NYKAA | Apollo PHARMACY | MyWellnessKart
Marketed by USV

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು	
ಸ್ಟಾಂಡರ್ಡ್ ಚಿನ್ನ 10ಗ್ರಾಂ	₹57,500
ಒಡವೆ ಚಿನ್ನ 1ಗ್ರಾಂ	₹5290
ಬೆಳ್ಳಿ ಕೆ.ಜಿ	₹65,700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ಸಂಸ್ಕರಿತ)	₹1690 (1690)
ಸೋಯಾ (ಸಂಸ್ಕರಿತ)	₹1135 (1135)
ಸೂರ್ಯಕಾಂತಿ (ಸಂಸ್ಕರಿತ)	₹1165 (1165)
ಪಾಮೋಲಿನ್	₹968 (970)

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)	
ಕನಿಷ್ಠ	₹8600
ಗರಿಷ್ಠ	₹10000
ಮಾದರಿ	₹9800
ಒಟ್ಟು ಆವಕ (ಚೀಲ)	4857

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹455-629
ದ್ವಿತಳಿ (ಕೆ.ಜಿ)	₹415-720

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

With deep regret we announce the passing of
A Krishnamurthy (Babu)
on 24.02.2023
CREMATION -10:30am at Hebbal Crematorium
Grieving Family - Gayathri, Divya, Deven
Annayappa and Suguna Ramaiah Family
Contact - +91 6364416756

ಮುಂಬೈ ಧಾರಣೆ

ಶೇಂಗಾ

25-02-2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	1050 (1045)
ಪಾಮ್ ವಾರದ ಡೆಲಿವರಿ	966 (972)
ಸೂರ್ಯಕಾಂತಿ ಎಣ್ಣೆ ಕಚ್ಚಾ	1040 (1040)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	55,555 (55,750)
ಬೆಳ್ಳಿ ಕೆ.ಜಿ	63,650 (64,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿರಿ

ಕೇರಳ ಬ್ಲಾಸ್ಟರ್ಸ್‌ನಿಂದ ಬಾಳೆಕಾಯಿ ಚಿಪ್ಸ್

ಕೊಚ್ಚಿ (ಪಿಟಿಐ): ಕೇರಳ ಬ್ಲಾಸ್ಟರ್ಸ್ ಫುಟ್‌ಬಾಲ್ ಕ್ಲಬ್ ಬಾಳೆಕಾಯಿ ಚಿಪ್ಸ್ ತಯಾರಿಸುವ 'ಕ್ರಾವಿನ್' ಎನ್ನುವ ಬ್ರ್ಯಾಂಡ್ ಬಿಡುಗಡೆ ಮಾಡಿದೆ. ಈ ಮೂಲಕ ಎಫ್‌ಎಂಸಿಜಿ ವಿಭಾಗವನ್ನು ಅದು ಪ್ರವೇಶಿಸಿದೆ.

'ಕ್ರಾವಿನ್' ಕೇವಲ ಒಂದು ಬ್ರ್ಯಾಂಡ್ ಅಲ್ಲ, ನಮ್ಮ ಸಮುದಾಯವನ್ನು ಬಲಗೊಳಿಸುವ ಕ್ಲಬ್‌ನ ಮೌಲ್ಯ ಮತ್ತು ಬದ್ಧತೆಯ ಪ್ರತಿಬಿಂಬಿಸುತ್ತದೆ ಎಂದು ಕೆಬಿಎಫ್‌ಸಿ ನಿರ್ದೇಶಕ ನಿಖಿಲ್ ಭರದ್ವಾಜ್ ತಿಳಿಸಿದ್ದಾರೆ.

ಸಾಂಪ್ರದಾಯಿಕ ವಿಧಾನಗಳ ಮೂಲಕ ಸ್ಥಳೀಯವಾದ ಪದಾರ್ಥಗಳನ್ನು ಬಳಸಿಕೊಂಡು ಚಿಪ್ಸ್ ತಯಾರಿಸಲಾಗುವುದು. ಆರಂಭದಲ್ಲಿ ತಿರುವನಂತಪುರ, ಕೊಚ್ಚಿ ಮತ್ತು ಕೋಜಿಕೋಡದಲ್ಲಿ ಈ ಉತ್ಪನ್ನವನ್ನು ಮಾರಾಟ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ

ಕ್ರಿಪ್ಟೊ ಸ್ವತ್ತು: ಸಮಗ್ರ ನೀತಿ ರೂಪಿಸಲು ಭಾರತ ಒತ್ತಾಯ

ಬೆಂಗಳೂರು (ಪಿಟಿಐ): ಕ್ರಿಪ್ಟೊ ಸ್ವತ್ತುಗಳನ್ನು ನಿಯಂತ್ರಿಸಲು ಸಮಗ್ರವಾದ ನೀತಿಯೊಂದನ್ನು ರೂಪಿಸುವಂತೆ ಜಿ20 ಅಧ್ಯಕ್ಷತೆ ವಹಿಸಿಕೊಂಡಿರುವ ಭಾರತವು ಅಂತರರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಹಣಕಾಸು ಸ್ಥಿರತೆ ಮಂಡಳಿಗೆ (ಎಫ್‌ಎಸ್‌ಬಿ) ಕೇಳಿದೆ.

ಅಕ್ಟೋಬರ್‌ನಲ್ಲಿ ನಡೆಯಲಿರುವ ಹಣಕಾಸು ಸಚಿವರು ಮತ್ತು ಕೇಂದ್ರೀಯ ಬ್ಯಾಂಕ್ ಗವರ್ನರ್‌ಗಳ ಸಭೆಯಲ್ಲಿ ನಿಯಂತ್ರಣ ವಿಧಾನಗಳನ್ನು ಮಂಡಿಸುವ ನಿರೀಕ್ಷೆ ಇದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರಿಪ್ಟೊಕರೆನ್ಸಿಗಳ ವಹಿವಾಟು ಎಲ್ಲೆಡೆ ತೀವ್ರವಾಗಿ ವ್ಯಾಪಿಸುತ್ತಿದ್ದರೂ ಕ್ರಿಪ್ಟೊ ಸ್ವತ್ತುಗಳಿಗೆ ಸಮಗ್ರವಾದ ರೂಪುರೇಷೆ ಇಲ್ಲ. ಕ್ರಿಪ್ಟೊ ಸ್ವತ್ತುಗಳು ಮತ್ತು ಸಾಂಪ್ರದಾಯಿಕ ಹಣಕಾಸು ವಲಯದ ನಡುವಿನ ಪರಸ್ಪರ ಸಂಪರ್ಕ ಇರುವುದರಿಂದ ಹಾಗೂ ಕ್ರಿಪ್ಟೊ ಸ್ವತ್ತುಗಳ ಸಂಕೀರ್ಣತೆ ಮತ್ತು ಅಸ್ಥಿರತೆಯಿಂದಾಗಿ ಕಠಿಣವಾದ ನಿಯಂತ್ರಣ ವ್ಯವಸ್ಥೆ ರೂಪಿಸುವಂತೆ ನೀತಿ ನಿರೂಪಕರು ಹೇಳುತ್ತಿದ್ದಾರೆ ಎಂದು ಸಚಿವಾಲಯ ಹೇಳಿದೆ.

'ಸಂಕಷ್ಟದಲ್ಲಿರುವ ದೇಶಗಳ ನೆರವಿಗೆ ಸಂಘಟಿತ ಯತ್ನ ಅಗತ್ಯ'

ಒಂದನೇ ಪುಟದಿಂದ

ಬಡರಾಷ್ಟ್ರಗಳ ಸಾಲದ ಸಮಸ್ಯೆ ಬಗೆಹರಿಸುವುದು ಸೇರಿದಂತೆ, ಡಿಜಿಟಲ್ ಕರೆನ್ಸಿ, ಹವಾಮಾನ ಬದಲಾವಣೆ ಮತ್ತು ವಿತ್ತೀಯ ಒಳಗೊಳ್ಳುವಿಕೆ ವಿಷಯಗಳ ಮೇಲೆ ಎವಿಸ್ತೃತವಾದ ಚರ್ಚೆ ನಡೆಯಿತು ಎಂದರು.

ಜಾಂಬಿಯಾ, ಈಥೋಪಿಯಾ, ಘಾನಾ ಮತ್ತು ಶ್ರೀಲಂಕಾದಲ್ಲಿ ಸಾಲ ಮರುಹೊಂದಾಣಿಕೆ ಮಾಡುತ್ತಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಿದ ಅವರು, ಕಡಿಮೆ ಮತ್ತು ಮಧ್ಯಮ ಆದಾಯ ಇರುವ ದೇಶಗಳು ಎದುರಿಸುತ್ತಿರುವ ಸಾಲದ ಸಮಸ್ಯೆಗಳನ್ನು ಬಗೆಹರಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

ಗೋಧ್ರೋತ್ತರ ಗಲಭೆ: ಐವರು ಆರೋಪಿಗಳ ಖುಲಾಸೆ

ಅಹಮದಾಬಾದ್: ಗುಜರಾತ್‌ನಲ್ಲಿ ನಡೆದಿದ್ದ ಗೋಧ್ರೋತ್ತರ ಗಲಭೆ ಪ್ರಕರಣದ ಐವರು ಆರೋಪಿಗಳನ್ನು ಇಲ್ಲಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಶನಿವಾರ ಖುಲಾಸೆಗೊಳಿಸಿದೆ.

'2002ರಲ್ಲಿ ನಡೆದಿದ್ದ ಕೋಮು ಗಲಭೆಯಲ್ಲಿ ಆರು ಮಂದಿ ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಆರೋಪಿಗಳ ಪಾತ್ರ ಇರುವುದನ್ನು ದೃಢಪಡಿಸಲು ಅಗತ್ಯ ಸಾಕ್ಷ್ಯಾಧಾರಗಳು ಲಭ್ಯವಿಲ್ಲ. ಹೀಗಾಗಿ ಮಹೇಂದ್ರ ನಾಯಕ್, ದೇವೇಂದ್ರ ಝಾಲಾ, ದೇವೇಂದ್ರ ನಾಯಕ್, ಭರತ್ ಗೋಹಿಲ್ ಹಾಗೂ ಸಾಜಿ ಮನ್ಸೂರಿ ಎಂಬುವರನ್ನು ದೋಷ ಮುಕ್ತಗೊಳಿಸಲಾಗುತ್ತಿದೆ. ಆರೋಪಿ ಅತುಲ್ ಶಾ ಎಂಬುವರು ವಿಚಾರಣೆ ಬಾಕಿ ಇರುವಾಗಲೇ ಮೃತಪಟ್ಟಿದ್ದರು. ಹೀಗಾಗಿ ಅವರ ವಿರುದ್ಧದ ಪ್ರಕರಣವನ್ನು ರದ್ದುಪಡಿಸಲಾಗಿದೆ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಮುಷ್ತಾಕ್ ಎ ಭಟ್ಟಿ ಶುಕ್ರವಾರ ನೀಡಿದ ತೀರ್ಪಿನಲ್ಲಿ ತಿಳಿಸಿದ್ದಾರೆ.

'ಆರೋಪಿಗಳನ್ನು ಬೇರೆ ಬೇರೆ ಅವಧಿಯಲ್ಲಿ ಬಂಧಿಸಲಾಗಿತ್ತು. ಅವರ ವಿರುದ್ಧ ಪ್ರತ್ಯೇಕ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು. ಗಲಭೆಯಲ್ಲಿ ಆರೋಪಿಗಳ ಕೈವಾಡ ಇರುವುದನ್ನು ನಿರೂಪಿಸುವಂತಹ ಯಾವ ಅಂಶವೂ ನ್ಯಾಯಾಲಕ್ಕೆ ಒದಗಿಸಿರುವ ಸಾಕ್ಷ್ಯಗಳಲ್ಲಿ ಉಲ್ಲೇಖಿಸಿಲ್ಲ' ಎಂದಿದ್ದಾರೆ.

'ಶ್ರೀಶೈಲ ದೇವಸ್ಥಾನಕ್ಕೆ 4,700 ಎಕರೆ ಅರಣ್ಯ ಭೂಮಿ'

ಅಮರಾವತಿ (ಪಿಟಿಐ): 'ಶ್ರೀಶೈಲ ದೇವಸ್ಥಾನಕ್ಕೆ 4,700 ಎಕರೆ ವಿವಾದಿತ ಅರಣ್ಯ ಭೂಮಿ ಮಂಜೂರು ಮಾಡುವ ವಿಚಾರದಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ' ಎಂದು ಆಂಧ್ರಪ್ರದೇಶದ ಮುಜರಾಯಿ ಸಚಿವ ಕೊಟ್ಟು ಸತ್ಯನಾರಾಯಣ ಅವರು ಶನಿವಾರ ತಿಳಿಸಿದ್ದಾರೆ.

'ದೇವಸ್ಥಾನದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಅರಣ್ಯ ಹಾಗೂ ಕಂದಾಯ ಸಚಿವರು ಭೂ ವ್ಯಾಜ್ಯದ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿದ್ದಾರೆ. ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಭೂಮಿಯ ಗಡಿ ಗುರುತಿಸುವಿಕೆ ಕಾರ್ಯ ನಡೆದಿದೆ. ಈಗಾಗಲೇ ಬಸ್ ನಿಲ್ದಾಣ ಸ್ಥಾಪನೆಗೆ ನಾಲ್ಕು ಎಕರೆ ಭೂಮಿ ಮಂಜೂರು ಮಾಡಲಾಗಿದೆ' ಎಂದಿದ್ದಾರೆ.

'ದೇವಸ್ಥಾನಕ್ಕೆ ಭೂಮಿ ಮಂಜೂರು ಮಾಡುವುದರಿಂದ ನಿರೀಕ್ಷಿಸಿದಷ್ಟು ಆದಾಯ ದೊರೆಯುವುದಿಲ್ಲ. ಇದಕ್ಕಾಗಿ ಹೊಸ ನೀತಿಯೊಂದನ್ನು ಜಾರಿಗೊಳಿಸುವ ಅಗತ್ಯವಿದೆ' ಎಂದು ತಿಳಿಸಿದ್ದಾರೆ.

ಪಾಕ್‌ಗೆ ಚೀನಾ ಸಾಲ: ಅಮೆರಿಕ ಕಳವಳ

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನ ಸಹಿತ ನೆರೆಹೊರೆಯ ರಾಷ್ಟ್ರಗಳಿಗೆ ಚೀನಾ ನೀಡಿರುವ ಸಾಲದ ಬಗ್ಗೆ ಅಮೆರಿಕ ತೀವ್ರ ಕಳವಳ ವ್ಯಕ್ತಪಡಿಸಿದೆ. ಇದು ಸಾಲ ನೀಡಿದ ರಾಷ್ಟ್ರಗಳನ್ನು ಬಲವಂತವಾಗಿ ಹತೋಟಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಎಂದು ಅದು ಹೇಳಿದೆ.

ಅಮೆರಿಕದ ಹಣಕಾಸು ಸಚಿವೆ ಜಾನೆಟ್ ಯೆಲೆನ್

ಪೂರೈಕೆ ವ್ಯವಸ್ಥೆ ಸುಧಾರಣೆ: 'ಫ್ರೆಂಡ್‌ಶೋರಿಂಗ್'ಗೆ ಒತ್ತು

ಬೆಂಗಳೂರು (ಪಿಟಿಐ): ಭಾರತವು ಅಮೆರಿಕದ ಅತಿದೊಡ್ಡ ವ್ಯಾಪಾರ ಪಾಲುದಾರ ಎಂದು ಅಮೆರಿಕದ ಹಣಕಾಸು ಸಚಿವೆ ಜಾನೆಟ್ ಯೆಲನ್ ಹೇಳಿದ್ದು, ಪೂರೈಕೆ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಲು 'ಫ್ರೆಂಡ್‌ಶೋರಿಂಗ್' ನೀತಿಗೆ ಹೆಚ್ಚಿನ ಒತ್ತು ನೀಡುವಂತೆ ಸಲಹೆ ನೀಡಿದ್ದಾರೆ.

ಜಿ20 ಹಣಕಾಸು ಸಚಿವರು ಮತ್ತು ಕೇಂದ್ರ ಬ್ಯಾಂಕ್‌ಗಳ ಗವರ್ನರ್‌ಗಳ ಸಭೆಯ ಹಿನ್ನೆಲೆಯಲ್ಲಿ ಅಮೆರಿಕ ಮತ್ತು ಭಾರತದ ತಂತ್ರಜ್ಞಾನ ಉದ್ದಿಮೆಗಳ ಪ್ರಮುಖರನ್ನು ಉದ್ದೇಶಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ವಲಯದಲ್ಲಿ ನಮ್ಮ ಒಪ್ಪಂದವನ್ನು ಬಲಪಡಿಸಲು ನಾನು ಉತ್ಸುಕಳಾಗಿದ್ದೇನೆ. ನಮ್ಮ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಲು 'ಫ್ರೆಂಡ್ ಶೋರಿಂಗ್' ನೀತಿಗೆ ಹೆಚ್ಚಿನ ಒತ್ತು ನೀಡಬೇಕಿದೆ. ಇದಕ್ಕಾಗಿ ಭಾರತದಂತಹ ನಮ್ಮ ನಂಬಿಕಸ್ಥ ವ್ಯಾಪಾರ ಪಾಲುದಾರರೊಂದಿಗಿನ ಸಂಘಟನೆಯನ್ನು ಬಲಗೊಳಿಸಲಾಗುತ್ತಿದೆ. ಇದು ಪ್ರಗತಿಯಲ್ಲಿದೆ. ಆ್ಯಪಲ್ ಮತ್ತು ಗೂಗಲ್ ಕಂಪನಿಗಳು ತಮ್ಮ ಫೋನ್ ತಯಾರಿಕೆಯನ್ನು ಭಾರತದಲ್ಲಿ ವಿಸ್ತರಣೆ ಮಾಡುತ್ತಿರುವುದು ಒಂದು ಉದಾಹರಣೆಯಷ್ಟೆ ಎಂದು ಮಾಹಿತಿ ನೀಡಿದ್ದಾರೆ.

ಸಮಾಲೋಚನಾ ಸಭೆಗೂ ಮುನ್ನು ಅಮೆರಿಕದ ಹಣಕಾಸು ಸಚಿವೆ ಜಾನೆಟ್ ಯೆಲನ್ ಮತ್ತು ವಿಪ್ರೊ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಅವರು ಪರಸ್ಪರ ಹಸ್ತಲಾಘವ ಮಾಡಿದರು –ಎಎಫ್‌ಪಿ ಚಿತ್ರ

ಸಮಾನ ಮನಸ್ಕ ದೇಶಗಳ ನಡುವೆ ಕಚ್ಚಾ ವಸ್ತುಗಳು ಮತ್ತು ಉತ್ಪನ್ನಗಳ ಕೊಡು–ಕೊಳ್ಳುವಿಕೆ ಹಾಗೂ ಅವುಗಳನ್ನು ಜಾಗತಿಕ ಮಾರುಕಟ್ಟೆಗೆ ವಿಸ್ತರಿಸುವುದನ್ನು 'ಫ್ರೆಂಡ್‌ಶೋರಿಂಗ್' ಎಂದು ಅಮೆರಿಕದ ಕರೆದಿದೆ.

ಭಾರತ ಮತ್ತು ಅಮೆರಿಕವು ಪರಸ್ಪರ ಅವಲಂಬಿತವಾಗಿವೆ. ಸಂವಹನ ನಡೆಸಲು ಭಾರತೀಯರು ವಾಟ್ಸ್‌ಆ್ಯಪ್ ಬಳಸುತ್ತಿದ್ದರೆ, ಅಮೆರಿಕದ ಕಂಪನಿಗಳು ಇನ್ಫೊಸಿಸ್ ಮೇಲೆ ಅವಲಂಬಿತವಾಗಿವೆ ಎಂದು ಯೆಲನ್ ತಿಳಿಸಿದ್ದಾರೆ.

ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ, ಐಬಿಎಂ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಪಟೇಲ್, ಇಂಟೆಲ್ ಇಂಡಿಯಾದ ಮುಖ್ಯಸ್ಥೆ ನಿವೃತಿ ರಾಯ್, ಫಾಕ್ಸ್‌ಕಾನ್ ಇಂಡಿಯಾದ ಮುಖ್ಯಸ್ಥ ಜೋಶ್ ಪೌಲ್ಗರ್ ಅವರು ಸಂವಾದದಲ್ಲಿ ಭಾಗವಹಿಸಿದ್ದರು.

ಸಂಕಷ್ಟದಿಂದ ಪಾರಾಗಲು ಪಾಕ್‌ಗೆ ಮೋದಿ ನೆರವು: ದುಲತ್ ವಿಶ್ವಾಸ

ಕೋಲ್ಕತ್ತ (ಪಿಟಿಐ): 'ಸಂಕಷ್ಟದಿಂದ ಪಾರಾಗಲು ಪಾಕಿಸ್ತಾನಕ್ಕೆ ಪ್ರಧಾನಿ ನರೇಂದ್ರ ಮೋದಿ ನೆರವಾಗಲಿದ್ದಾರೆ ಎಂಬ ಬಲವಾದ ಭಾವನೆ ನನ್ನದು' ಎಂದು 'ರಾ' (ಆರ್‌ಎಡಬ್ಲ್ಯು) ಮಾಜಿ ಮುಖ್ಯಸ್ಥ ಅಮರಜಿತ್ ಸಿಂಗ್ ದುಲತ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಕಳೆದ ಹಲವು ತಿಂಗಳಿನಿಂದ ರಾಜಕೀಯ ಅಸ್ಥಿರತೆಯಿಂದಾಗಿ ಪಾಕಿಸ್ತಾನ ನಲುಗಿದೆ. ಇಂಥ ಸಮಯದಲ್ಲಿ ಆ ರಾಷ್ಟ್ರದ ಬಗ್ಗೆ ಮೋದಿ ಅವರು ಹೊಂದಿರುವ ಮುನಿಸು ಕೂಡ ತಣಿಯಲಿದೆ. ಈ ವರ್ಷವೇ ಅವರು ಪಾಕಿಸ್ತಾನಕ್ಕೆ ಸಹಾಯಹಸ್ತ ಚಾಚುವರು ಎಂಬ ವಿಶ್ವಾಸವನ್ನೂ ಹೊಂದಿರುವೆ' ಎಂದು ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, 'ಈ ಕುರಿತು ನನಗೆ ಯಾರೂ ಮಾಹಿತಿ ನೀಡಿಲ್ಲ. ನನ್ನ ಮನದಾಳದ ಮಾತುಗಳಿವು' ಎಂದಿದ್ದಾರೆ.

ಅಮರಜಿತ್ ಸಿಂಗ್ ದುಲತ್

'ಪ್ರತಿಯೊಂದು ಸಂದರ್ಭವೂ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಲು ಉತ್ತಮ ಸಮಯವೇ ಆಗಿದೆ. ನಮ್ಮ ನೆರೆ ರಾಷ್ಟ್ರಗಳೊಂದಿಗೆ ನಾವು ಮಾತುಕತೆ ನಡೆಸುತ್ತಲೇ ಇರಬೇಕು' ಎಂದು ಅವರು ಪ್ರತಿಪಾದಿಸಿದ್ದಾರೆ.

'ಪಾಕಿಸ್ತಾನದೊಂದಿಗಿನ ಸಂಬಂಧ ಸುಧಾರಣೆಗೆ ನಡೆಸುವ ಮಾತುಕತೆ ಕೇವಲ ರಾಜತಾಂತ್ರಿಕ ಮಟ್ಟದಲ್ಲಿ ಇದ್ದರೆ ಸಾಲದು. ವಿವಿಧ ಸ್ತರದ ಜನರ ಭಾಗವಹಿಸುವಿಕೆಯೂ ಮುಖ್ಯ' ಎಂದು ಹೇಳಿದ್ದಾರೆ.

'ಇರಾನ್, ರಷ್ಯಾ ಹಾಗೂ ಚೀನಾ ನಡುವಿನ ಬಾಂಧವ್ಯ ಗಟ್ಟಿಗೊಳ್ಳುತ್ತಿರುವುದು ಅಪಾಯಕಾರಿ. ಹೀಗಾಗಿ ನೆರೆ ದೇಶಗಳೊಂದಿಗಿನ ನಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳಬೇಕು' ಎಂದು ದುಲತ್ ಹೇಳಿದ್ದಾರೆ.

'ಆರ್‌ಆರ್‌ಆರ್'ಗೆ ಹಾಲಿವುಡ್ ಕ್ರಿಟಿಕ್ಸ್ ಅವಾರ್ಡ್

ಲಾಸ್ ಏಂಜಲೀಸ್ (ಪಿಟಿಐ): ಗೋಲ್ಡನ್ ಗ್ಲೋಬ್ ಪ್ರಶಸ್ತಿ ಖುಷಿಯಲ್ಲಿರುವ ರಾಜಮೌಳಿ ಅವರ 'ಆರ್‌ಆರ್‌ಆರ್' ಸಿನಿಮಾಕ್ಕೀಗ ಮತ್ತೊಂದು ಪ್ರಶಸ್ತಿ ದೊರೆತಿದೆ. ಆರ್‌ಆರ್‌ಆರ್ ಚಿತ್ರ ಹಾಲಿವುಡ್ ಕ್ರಿಟಿಕ್ ಅವಾರ್ಡ್ಸ್‌ನಲ್ಲಿ ಸದ್ದು ಮಾಡಿದೆ.

ಹಾಲಿವುಡ್ ಕ್ರಿಟಿಕ್ ಅವಾರ್ಡ್ಸ್‌ನ ಐದು ವಿಭಾಗಗಳಲ್ಲಿ ಆರ್‌ಆರ್‌ಆರ್ ಚಿತ್ರ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದು, ಶುಕ್ರವಾರ ಲಾಸ್ ಏಂಜಲೀಸ್‌ನಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಚಿತ್ರ ನಿರ್ದೇಶಕ ಎಸ್.ಎಸ್ ರಾಜಮೌಳಿ ಹಾಗೂ ನಟ ರಾಮಚರಣ್ ಅವರು ಪ್ರಶಸ್ತಿ ಸ್ವೀಕರಿಸಿದರು.

ಅತ್ಯುತ್ತಮ ಆ್ಯಕ್ಷನ್ ಸಿನಿಮಾ, ಅತ್ಯುತ್ತಮ ಇಂಟರನ್ಯಾಷನಲ್ ಫೀಚರ್, ಅತ್ಯುತ್ತಮ ಮೂಲ ಗೀತೆ (ಒರಿಜಿನಲ್) ಹಾಗೂ ಬೆಸ್ಟ್ ಸ್ಟಂಟ್ ವಿಭಾಗದಲ್ಲಿ ಹಾಲಿವುಡ್ ಕ್ರಿಟಿಕ್ ಅವಾರ್ಡ್ಸ್ ಲಭಿಸಿದೆ.

ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಹಳೆಯ ವಿದ್ಯಾರ್ಥಿ: ಪ್ರಾಂಶುಪಾಲೆ ಸಾವು

ಇಂದೋರ್ (ಪಿಟಿಐ): ಅಂಕಪಟ್ಟಿ ನೀಡಲು ವಿಳಂಬವಾಗಿದ್ದಕ್ಕೆ ಹಳೆಯ ವಿದ್ಯಾರ್ಥಿಯೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ ಘಟನೆಯಲ್ಲಿ ಗಾಯಗೊಂಡಿದ್ದ ಇಲ್ಲಿನ ಬಿ.ಎಂ. ಫಾರ್ಮಸಿ ಕಾಲೇಜಿನ ಪ್ರಾಂಶುಪಾಲೆ ಡಾ. ವಿಮುಕ್ತ ಶರ್ಮಾ ಅವರು ಶನಿವಾರ ಬೆಳಿಗ್ಗೆ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶುತೋಷ್ ಶ್ರೀವಾಸ್ತವ (24) ಎಂಬ ವಿದ್ಯಾರ್ಥಿ ವಿಮುಕ್ತ ಅವರ ಮೇಲೆ ಇದೇ 20ರಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ. ಇದರಿಂದ ಶೇ 80ರಷ್ಟು ಸುಟ್ಟ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆರೋಪಿಯನ್ನು ಬಂಧಿಸಲಾಗಿದ್ದು, ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಭಾಗವತ್ ಸಿಂಗ್ ವಿರ್ದೆ ಮಾಹಿತಿ ನೀಡಿದ್ದಾರೆ.

ವಿಚಾರಣೆ ವೇಳೆ ವಿದ್ಯಾರ್ಥಿ, 2022ರ ಜುಲೈನಲ್ಲಿ ಉತ್ತೀರ್ಣರಾದ ಬಿ.ಫಾರ್ಮಾ ಪರೀಕ್ಷೆಯ ಅಂಕಪಟ್ಟಿಯನ್ನು ಕಾಲೇಜು ಅಧಿಕಾರಿಗಳು ಹಸ್ತಾಂತರಿಸಲಿಲ್ಲ ಎಂದಿದ್ದಾನೆ. ಆದರೆ, ಕಾಲೇಜು ಆಡಳಿತ ಮಂಡಳಿಯು ಈ ಹೇಳಿಕೆಯನ್ನು ಸುಳ್ಳು ಎಂದಿದ್ದು, ಆತ ಕ್ರಿಮಿನಲ್ ಹಿನ್ನೆಲೆಯನ್ನು ಹೊಂದಿದ್ದಾನೆ. ಅಲ್ಲದೆ ಅಂಕಪಟ್ಟಿ ಸಂಗ್ರಹಿಸಲು ಪದೇ ಪದೇ ತಿಳಿಸಿದ್ದರೂ ಆತ ಅದನ್ನು ಸಂಗ್ರಹಿಸಿಕೊಳ್ಳಲಿಲ್ಲ ಎಂದು ಹೇಳಿದೆ.

ಮೋದಿ ಹೊಗಳಿದ ಪಾಕ್ ಪ್ರಜೆ!

'ಮೋದಿ ಅವರಂಥ ನಾಯಕ ಬೇಕೆಂದು ಪ್ರಾರ್ಥಿಸುತ್ತೇನೆ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಜೆಯೊಬ್ಬರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ್ದು, ಈ ವಿಡಿಯೊ ಉಭಯ ದೇಶಗಳ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜನಪ್ರಿಯ ಯುಟ್ಯೂಬರ್ ಸನಾ ಅಮ್ಜಾದ್ ಅವರ ಚಾನೆಲ್‌ನೊಂದಿಗೆ ಮಾತನಾಡಿರುವ ಅವರು, 'ನರೇಂದ್ರ ಮೋದಿ ಅವರಂಥ ನಾಯಕರನ್ನು ನಮ್ಮ ದೇಶವೂ ಪಡೆಯಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಹೇಳಿದ್ದಾರೆ.

ಯುಟ್ಯೂಬರ್‌ನೊಂದಿಗಿನ ಮತ್ತೊಂದು ಸಂದರ್ಶನದಲ್ಲಿ ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದ್ದು, 'ಮೋದಿ ಅವರೊಂದಿಗಿನ ಸ್ನೇಹವು ಪಾಕಿಸ್ತಾನದ ಪರಿಸ್ಥಿತಿಗಳನ್ನು ಸುಧಾರಿಸಲಿದೆ' ಎಂದಿದ್ದಾರೆ.

'ಮೋದಿ ಎಂಟು ವರ್ಷಗಳಲ್ಲಿ ಭಾರತವನ್ನು ಮಗದೊಂದು ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಮೊದಲಿಗೆ ಭಾರತ–ಪಾಕಿಸ್ತಾನವನ್ನು ಹೋಲಿಕೆ ಮಾಡಲಾಗುತ್ತಿತ್ತು. ಈಗ ಹೋಲಿಕೆ ಮಾಡುತ್ತಿಲ್ಲ. ಭಾರತೀಯರು ವಿದೇಶಗಳಲ್ಲೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ' ಎಂದು ಹೊಗಳಿದ್ದಾರೆ.

'ಮೋದಿ ದೇಶಕ್ಕಾಗಿ ದುಡಿಯುತ್ತಿದ್ದಾರೆ. ಅಮೆರಿಕದ ಆಕ್ರೋಶಕ್ಕೂ ಮಣೆ ಹಾಕದೆ ಅವರು ರಷ್ಯಾದಿಂದ ತೈಲ ಖರೀದಿಸುತ್ತಿದ್ದಾರೆ. ಸ್ವಾತಂತ್ರ್ಯಾನಂತರ ಭಾರತ– ಪಾಕಿಸ್ತಾನ ವಿಭಜನೆಯಾಗದಿದ್ದರೆ ಚೆನ್ನಾಗಿರುತ್ತಿತ್ತು. ಆಹಾರ ಮತ್ತು ಇಂಧನ ಕಡಿಮೆ ದರಕ್ಕೆ ಲಭ್ಯವಾಗುತ್ತಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ.

'ನನಗೆ ಮೋದಿ ಅವರೆಂದರೆ ಇಷ್ಟ. ಅವರನ್ನು ನಾನು ಪ್ರೀತಿಸುತ್ತೇನೆ. ಪಾಕಿಸ್ತಾನಕ್ಕೆ ನವಾಜ್ ಷರೀಫ್, ಬೆನಜೀರ್ ಭುಟ್ಟೊ ಮತ್ತು ಪರ್ವೇಜ್ ಮುಷರಫ್ ಬೇಡ. ಮೋದಿ ಅವರಂಥ ನಾಯಕರು ಬೇಕು. ಪಾಕಿಸ್ತಾನವೂ ಭಾರತದಂತಾಗಬೇಕು' ಎಂದು ಹೇಳಿದ್ದಾರೆ.

ಮೊದಲ ವಿಡಿಯೊ ಹೆಚ್ಚು ವೀಕ್ಷಣೆ ಕಂಡ ನಂತರ ಯುಟ್ಯೂಬರ್ ಶನಿವಾರ ಅವರ ಮತ್ತೊಂದು ಸಂದರ್ಶನ ಮಾಡಿದ್ದು, ಈ ವಿಡಿಯೊ ಸಹ 5 ಗಂಟೆಯಲ್ಲಿ 50,000ಕ್ಕೂ ಹೆಚ್ಚಿನ ವೀಕ್ಷಣೆ ಕಂಡಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕದ ಶ್ರೀಮಂತ ಉದ್ಯಮಿ ಆತ್ಮಹತ್ಯೆ

ನ್ಯೂಯಾರ್ಕ್: ಖಾಸಗಿ ಇಕ್ವಿಟಿ ಹೂಡಿಕೆ ಮತ್ತು ಖರೀದಿ ಪ್ರವರ್ತಕ ಎಂದೇ ಹೆಸರಾಗಿದ್ದ ಅಮೆರಿಕದ ಕೋಟ್ಯಧಿಪತಿ ಥಾಮಸ್ ಎಚ್. ಲೀ (78) ಅವರು ಗುರುವಾರ ನ್ಯೂಯಾರ್ಕ್ ನಗರದ ಮ್ಯಾನ್‌ಹ್ಯಾಟನ್ ಕಚೇರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಲೀ ಅವರು ಪಿಸ್ತೂಲಿನಿಂದ ಗುಂಡು ಹಾರಿಸಿಕೊಂಡು ಮೃತಪಟ್ಟಿದ್ದಾರೆ ಎಂದು ನಗರದ ವೈದ್ಯಕೀಯ ಪರೀಕ್ಷಕ ತಿಳಿಸಿದ್ದಾರೆ. ಆದರೆ ಲೀ ಕುಟುಂಬದ ವಕ್ತಾರರು ಈ ಬಗ್ಗೆ ಯಾವುದೇ ವಿವರ ನೀಡಿಲ್ಲ. ಲೀ ಅವರಿಗೆ ಪತ್ನಿ, ಐವರು ಮಕ್ಕಳು ಮತ್ತು ಇಬ್ಬರು ಮೊಮ್ಮಕ್ಕಳಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಚೀನಾ, ರಷ್ಯಾ ಪರವಾಗಿದೆ ಎನ್ನಲು ಸಾಕ್ಷಿ ಇಲ್ಲ: ಬೈಡನ್

ವಾಷಿಂಗ್ಟನ್ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧದಲ್ಲಿ ಚೀನಾವು ರಷ್ಯಾ ಪರವಾಗಿದೆ ಎಂದು ಹೇಳಲು ಯಾವುದೇ ಸಾಕ್ಷಿ ಇಲ್ಲ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಷಯವಾಗಿ ಚೀನಾ ಅಧ್ಯಕ್ಷ ಷಿ–ಜಿನ್‌ಪಿಂಗ್ ಅವರೊಂದಿಗೆ ಮಾತುಕತೆ ನಡೆಸಿದ್ದಾಗಿ ತಿಳಿಸಿದರು.

ರಷ್ಯಾಗೆ ಚೀನಾ ಮಾರಕಾಸ್ತ್ರಗಳನ್ನು ಪೂರೈಕೆ ಮಾಡಿದ್ದನ್ನು ನೋಡಿಲ್ಲ ಎಂದು ಪೆಂಟಗನ್ ತಿಳಿಸಿದೆ.

ಟ್ರಂಪ್ ವಿರುದ್ಧ ಪ್ರತಿಕಾರ: ಇರಾನ್ ಪುನರುಚ್ಚಾರ

ದುಬೈ (ರಾಯಿಟರ್ಸ್): ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಕೋರ್‌ನ ಕಮಾಂಡರ್ ಮೇಜರ್ ಜನರಲ್ ಖಾಸಿಂ ಸುಲೇಮಾನಿ ಅವರನ್ನು 2020ರಲ್ಲಿ ಬಾಗ್ದಾದ್ ವಿಮಾನ ನಿಲ್ದಾಣದ ಹೊರಭಾಗದಲ್ಲಿ ಕ್ಷಿಪಣಿ ದಾಳಿ ಮೂಲಕ ಹತ್ಯೆ ಮಾಡಿದ ಅಮೆರಿಕ ವಿರುದ್ಧ ಪ್ರತಿಕಾರ ತೀರಿಸಿಕೊಳ್ಳುವ ಮಾತನ್ನು ಇರಾನ್ ಪುನರುಚ್ಚರಿಸಿದೆ.

1,650 ಕಿ.ಮೀ (1,025 ಮೈಲುಗಳು) ವ್ಯಾಪ್ತಿಯಲ್ಲಿನ ಗುರಿಯ ಮೇಲೆ ದಾಳಿ ಮಾಡಬಲ್ಲ ದೂರಗಾಮಿ ಕ್ರೂಸ್ ಕ್ಷಿಪಣಿಯನ್ನು ಇರಾನ್ ಅಭಿವೃದ್ಧಿಪಡಿಸಿದೆ. ಈ ವಿಷಯವನ್ನು ಮಾಧ್ಯಮಗಳಿಗೆ ತಿಳಿಸುವ ವೇಳೆ, 'ರೆವಲ್ಯೂಷನರಿ ಗಾರ್ಡ್ಸ್ ಏರೋಸ್ಪೇಸ್ ಫೋರ್ಸ್'ನ ಮುಖ್ಯಸ್ಥ ಅಮೀರಲಿ ಹಾಜಿಝಾದೆಹ್ ಪ್ರತಿಕಾರದ ಮಾತುಗಳನ್ನಾಡಿದ್ದಾರೆ. 'ನಾವು ಡೊನಾಲ್ಡ್ ಟ್ರಂಪ್ ಅವರನ್ನು ಕೊಲ್ಲಲು ಕಾತುರದಿಂದ ಇದ್ದೇವೆ' ಎಂದು ಅವರು ಹೇಳಿದರು.

ಈ ಕ್ರೂಸ್ ಕ್ಷಿಪಣಿಯನ್ನು 'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್‌ನ ಕ್ಷಿಪಣಿ ಶಸ್ತ್ರಾಗಾರ'ಕ್ಕೆ ಸೇರ್ಪಡೆ ಮಾಡಿಕೊಂಡಿದ್ದೇವೆ ಎಂದು ಹಾಜಿಝಾದೆಹ್ ಅವರು ಮಾಧ್ಯಮಗಳಿಗೆ ತಿಳಿಸಿದರು.

ಬುರ್ಕಿನಾ ಫಾಸೊ: 70ಕ್ಕೂ ಹೆಚ್ಚಿನ ಸೈನಿಕರ ಹತ್ಯೆ

ಔಗಾಡೌಗು (ಬುರ್ಕಿನಾ ಫಾಸೊ): ಉತ್ತರ ಬುರ್ಕಿನಾ ಫಾಸೊದಲ್ಲಿ ಮಿಲಿಟರಿ ಬೆಂಗಾವಲು ಪಡೆಯ ಮೇಲೆ ಇಸ್ಲಾಮಿಕ್ ಸ್ಟೇಟ್ ಸಂಘಟನೆಯು (ಐಎಸ್) ನಡೆಸಿದ ದಾಳಿಯಲ್ಲಿ 70ಕ್ಕೂ ಹೆಚ್ಚಿನ ಸೈನಿಕರು ಮೃತಪಟ್ಟಿದ್ದಾರೆ.

'ದಾಳಿಯ ವೇಳೆ ಅನೇಕ ಸೈನಿಕರು ಗಾಯಗೊಂಡಿದ್ದಾರೆ. ಐವರನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಳ್ಳಲಾಗಿದ್ದು, ಶಸ್ತ್ರಾಸ್ತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ' ಎಂದು ಐಎಸ್‌ನ ಸುದ್ದಿಸಂಸ್ಥೆ ಅಮಾಕ್ ಶುಕ್ರವಾರ ತನ್ನ ವರದಿಯಲ್ಲಿ ಹೇಳಿದೆ.

ಮಿಲಿಟರಿ ಸಮವಸ್ತ್ರದಲ್ಲಿ ಮೃತಪಟ್ಟ 54 ಸೈನಿಕರ ರಕ್ತಸಿಕ್ತ ದೇಹಗಳು, 50ಕ್ಕೂ ಹೆಚ್ಚು ರೈಫಲ್‌ಗಳು ಮತ್ತು ಒತ್ತೆಯಾಳಾಗಿ ಇರಿಸಿಕೊಂಡ ಐವರು ಸೈನಿಕರ ಚಿತ್ರಗಳನ್ನು ಐಎಸ್ ಬಿಡುಗಡೆ ಮಾಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ
ಕೃಷಿ ಕೆಲಸಗಳಿಗಾಗಿ ಅನುಭವಿ ಫಾರ್ಮ್ ಕೆಲಸಗಾರರು
ಬೆಂಗಳೂರು (ಗ್ರಾ) ನೆಲಮಂಗಲದಲ್ಲಿರುವ ಕೃಷಿ ಫಾರ್ಮ್‌ನಲ್ಲಿ ಎಲ್ಲಾ ಫಾರ್ಮ್ ಕೆಲಸಗಳನ್ನು ಹಾಗೂ ಹಸು ಪ್ರಾಣಿಗಳ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ನಿರ್ವಹಿಸುವುದು. ಉಚಿತವಾಗಿ ವಸತಿ ಸೌಲಭ್ಯ ಒದಗಿಸಲಾಗುವುದು.
ಸಂಪರ್ಕಿಸಿ 7022380985

WANTED CONTENT WRITER
Leading Educational Publishers in Kerala Demands For
+1 , +2
Science Subjects (Karnataka State Syllabus)
070253 70254

Call Centre

FEMALE TELECALLERS REQUIRED @HALASURU
FULL TIME: 09.30 AM TO 05.30 PM
SALARY + GOOD INCENTIVE ₹18,000
PART TIME: 09.30 AM TO 02.30 PM
SALARY + GOOD INCENTIVE ₹12,000
NEAR HALASURU METRO, BANGALORE - 560 008
(Lankmark: Murphy Town Market)
90873 15528

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 080-47106868

Wanted

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ.ವಸತಿ ಉಚಿತ. ಸಂಪರ್ಕಿಸಿ: 9845026475

WANTED
VGS Elite International School
New ICSCE School
Nagaruru Extention, Nelamangala, Bengalruru
WANTED STAFF FOR ACADEMIC YEAR 2023-2024
1. Talented efficient experienced Principal
2. Teachers qualified with UG/PG with B.Ed / D.Ed PCM, PCB, Computer, Kannada, English, Hindi, Librarian, Office Clerk & Accountant
Preference to teachers worked in CBSE, ICSCE syllabus
Interested Candidates send your resume with documents to bjputtaswamy1@gmail.com.
Contact M: 9448359762 / 7204806011

ಡೊಮಿನೋಸ್ ಪಿಜ್ಜಾ ನೇಮಕಾತಿ. ಪಿಜ್ಜಾ ಮೇಕರ್, ಆರ್ಡರ್ ಟೇಕರ್. ಪ್ರತಿ ಗಂಟೆಗೆ ಸಂಬಳ (CTC ರೂ .92 ಪ್ರತಿ ಗಂಟೆಗೆ) ಇಎಸ್‌ಐ, ಪಿಎಫ್, ಬೋನಸ್, ಅಪಘಾತ ವಿಮೆ. ಡೆಲಿವರಿ ಹುಡುಗರು-20,000 ವರೆಗೆ ಸಂಬಳ ಗಳಿಸುತ್ತಾರೆ. T&C ಅನ್ವಯಿಸುತ್ತದೆ. ಅಪಘಾತ ವಿಮೆ. ಸಂಪರ್ಕಕ್ಕೆ:7019460722 / 9738089466 ಅಥವಾ ಹತ್ತಿರದ ಡೊಮಿನೋಸ್ ಸ್ಟೋರ್‌ಗಳಿಗೆ ಹೋಗಿ

Office Boys/ Peon

ಆಫೀಸ್‌ಬಾಯ್ ಬೇಕಾಗಿದ್ದಾರೆ. ಕೆ.ಆರ್.ಪುರಂ ರೈಲ್ವೆ ಸ್ಟೇಷನ್ ಹತ್ತಿರವಿರುವ ಫ್ಯಾಕ್ಟರಿಯಲ್ಲಿ ಕೆಲಸಮಾಡಲು, ದ್ವಿಚಕ್ರ ವಾಹನ ಹೊಂದಿರಬೇಕು, ಸಂಬಳ 15000/. ಸಂಪರ್ಕಿಸಿ: 9845058243

Marketing & Sales

REQUIRED EXPERIENCED /Fresher Sales Executives for Construction Machinery for Tumkur, Hassan Bangalore and Shimoga. Send your Resume to sales.hq@asrial.com. Call 9019783290.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

General

ಪಂಡಿತರತ್ನ ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ್(ರಿ), ಬೆಂಗಳೂರು. ಶೇಕಡಾ 50ರ ವಿಶೇಷ ರಿಯಾಯಿತಿ ದರದಲ್ಲಿ 20,000 ಶ್ಲೋಕ ಪರಿಮಿತಿಯ ಜ್ಞಾನಭಂಡಾರ ಮಹಾಪುರಾಣ ಈಗ ಕನ್ನಡ/ಇಂಗ್ಲಿಷ್ ಭಾಷೆಯಲ್ಲಿ ಲಭ್ಯ! ಸಾಹಿತ್ಯಾಭಿಮಾನಿಗಳಿಗೆ ಇದೊಂದು ಸುವರ್ಣಾವಕಾಶ!! ತ್ವರೆಮಾಡಿ!!! ಸಂಪರ್ಕಿಸಿ: 9845074331/ 9343094443.

ಶಿಕ್ಷಣ

Training

ಹಿರಿಯ ನಾಗರೀಕರ ಆರೈಕೆ GERIATRIC CARE GIVERS ಭಾರತ ಸರ್ಕಾರದ ಮೂರು ತಿಂಗಳ ಸರ್ಟಿಫಿಕೇಟ್ ಉಚಿತತರಬೇತಿಗೆ ಎಸ್ ಎಸ್ ಎಲ್ ಸಿ ಉತ್ತೀರ್ಣರಾದ 18 ವರ್ಷ ಮೇಲ್ಪಟ್ಟವರಿಂದ ಅರ್ಜಿ ಆಹ್ವಾನಿಸಲಾಗಿದೆ. ಉಚಿತ ಊಟ ವಾಸ್ತವ್ಯ ಕಲ್ಪಿಸಲಾಗುವುದು, ಮಾರ್ಚ್ 1 ಕಡೆ ದಿನಾಂಕ ಸಂಪರ್ಕಿಸಿ: ಶ್ರೀ ಶತಶೃಂಗ ವಿದ್ಯಾಸಂಸ್ಥೆ(ರಿ). ಮೇಟಿಪಾಳ್ಯ, ಬೆಂಗಳೂರು. 9945250111. www.saissvs.org

ವೈವಾಹಿಕ

Grooms Wanted

Telugu

ALLIANCE INVITED from qualified, employed, unmarried bangalore settled boy for telugu yadava bangalore girl 42 yrs/ 5'4' MCA unmarried, nw, nv. whatsapp 9380397152.

Brahmin

ಬ್ರಾಹ್ಮಣ ವಧು, ವಯಸ್ಸು 27, SSLC/ವಯಸ್ಸು 30, PUC/ ವಯಸ್ಸು 34, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. 9035730677

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 06.03.2023,08.04.2023 11ದಿನಗಳು ಕಾಶಿನೇಪಾಳ ರಾಷ್ಟ್ರ (ಮುಕ್ತಿನಾಥಸಹಿತ)ಪ್ರವಾಸ, 14.03.2023,05.05.2023 08ದಿನಗಳು ಕಾಶಿ,ನೈಮಿಷಾರಣ್ಯ ಅಯೋದ್ಯಾ,ಪ್ರಯಾಗ,ಗಯಾ. 25.03.2023,05.04.2023, 06.05.2023, 21/16/13ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ ಅರುಣಾಚಲ,ಮೇಘಾಲಯ ಮಣಿಪುರ,ತ್ರಿಪುರ,ನಾಗಲ್ಯಾಂಡ್. ಮಿಝೋರಾಂ,21.04.2023 11ದಿನಗಳು ಉಜ್ಜಯಿನಿ. ಓಂಕಾರ್ ಗುಜರಾತ್ ರಾಜ್ಯಪ್ರವಾಸ. 8073824856, 6366322639, 9538676065

ಮಾರುತಿ ಟ್ರಾವೆಲ್ಸ್ ಆಂಧ್ರ ತೆಲಂಗಾಣ-4ದಿನ -25.03.23 ತಮಿಳುನಾಡು -ರಾಮೇಶ್ವರಂ -ಕೇರಳ-5ದಿನ -02.04.23 ಗುಜರಾತ್-ಮಹಾರಾಷ್ಟ್ರ-7ದಿನ 09.04.23 ಕಾಶಿ ಯಾತ್ರಾ-ನೇಪಾಳ -16ದಿನ-01.05.23 ವೈಷ್ಣೋದೇವಿ ಪ್ರವಾಸ 15ದಿನ -21.05.23 ಸಂಪರ್ಕಿಸಿ: 9916688569, 9019744707

★11.04.2023 9ದಿನಗಳು★ ಕಾಶಿ,ಗಯಾ ಪ್ರಯಾಗಾ ಪ್ರವಾಸ., 27.04.2023 16/13ದಿನಗಳು ಕಾಶಿ,ನೇಪಾಳ,ಮುಕ್ತಿನಾಥ, ಗಜೇಂದ್ರಮೋಕ್ಷಾ,ಜನಕಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

11/3/23ರಿಂದ ಅಸ್ಸಾಂ ಮೇಘಾಲಯ 38,500/–, 30/4/23ರಿಂದ ಪುರಿ ಜಗನ್ನಾಥ್ ಜಾರ್ಖಂಡ್ ವೈದ್ಯನಾಥ ನೇಪಾಳ ಮುಕ್ತಿನಾಥ ಜನಕಪುರ, ಶ್ರೀರಾಮ್ ಟೂರ್ ಬೆಂಗಳೂರು. 9108933383.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
JOB CORNER

BOOK DOUBLE COLUMN JOB ADS ON WEEKDAY + SUNDAY
@Rs. 750/-* pscm
conditions apply*
For More Details Contact:
9731810277 | 9901641752 |
9845114560 | 9886213331
080- 45557163 | 45557164

ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣೆ ಕಾಯ್ದೆ ಅನುಷ್ಠಾನಕ್ಕೆ ತೊಡಕು • ಸುಪ್ರೀಂ ಕೋರ್ಟ್ ಸೂಚನೆ

‘ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ’

ನವದೆಹಲಿ (ಪಿಟಿಐ): ‘2005ರ ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದಕ್ಕೆ ಎದುರಾಗಿರುವ ತೊಡಕುಗಳ ಕುರಿತು ಚರ್ಚಿಸಲು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳ ಜೊತೆ ಸಭೆ ನಡೆಸಿ’ ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ನೊಂದ ಮಹಿಳೆಯರಿಗೆ ಈ ಕಾಯ್ದೆಯ ಅಡಿಯಲ್ಲಿ ಅಗತ್ಯ ಕಾನೂನಿನ ನೆರವು ಒದಗಿಸಬೇಕು. ಪತಿ ಹಾಗೂ ಇತರರ ವಿರುದ್ಧ ದೂರು ನೀಡಿದ ಮಹಿಳೆಯರಿಗೆ ಉಳಿದುಕೊಳ್ಳುವುದಕ್ಕಾಗಿ ಆಶ್ರಯ ಮನೆಗಳನ್ನು ಸ್ಥಾಪಿಸಬೇಕು ಎಂದು ಕೋರಿ ‘ವಿ ದಿ ವಿಮೆನ್ ಆಫ್ ಇಂಡಿಯಾ’ ಹೆಸರಿನ ಸಂಸ್ಥೆಯೊಂದು ಅರ್ಜಿ ಸಲ್ಲಿಸಿತ್ತು.

ಶುಕ್ರವಾರ ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಹಾಗೂ ದೀಪಾಂಕರ್ ದತ್ತ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ‘ಕೌಟುಂಬಿಕ ದೌರ್ಜನ್ಯ ತಡೆ ವಿಚಾರವಾಗಿ ತನಗೆ ಸಲ್ಲಿಸಲಾಗಿರುವ ವರದಿಯು ನಿರಾಶಾದಾಯಕವಾಗಿದೆ. ಕಾಯ್ದೆಯ ಅಡಿಯಲ್ಲಿ ಎಲ್ಲಾ ಜಿಲ್ಲೆಗಳಿಗೂ ಒಬ್ಬೊಬ್ಬ ರಕ್ಷಣಾ ಅಧಿಕಾರಿಯನ್ನು ನೇಮಿಸಲಾಗಿದೆ. ಅಂತಹ ಅಧಿಕಾರಿಗಳು ಸುಮಾರು 500 ರಿಂದ 600 ಪ್ರಕರಣಗಳನ್ನು ನಿರ್ವಹಿಸುವುದು ಕಷ್ಟ’ ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ಸೂಚನೆ ಮೇರೆಗೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು (ಎನ್‌ಎಎಲ್‌ಎಸ್‌ಎ) ಅಧ್ಯಯನವೊಂದು ಕೈಗೊಂಡಿತ್ತು. 2022ರ ಜುಲೈ 1ರವರೆಗೆ ಈ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳ ಪೈಕಿ 4.71 ಲಕ್ಷಕ್ಕೂ ಅಧಿಕ ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿರುವುದಾಗಿ ಅಧ್ಯಯನ ವರದಿಯಲ್ಲಿ ತಿಳಿಸಲಾಗಿತ್ತು.

‘ಕೇಂದ್ರ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಕುರಿತು ಚರ್ಚಿಸಲು ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳೊಂದಿಗೆ ಮೂರು ವಾರಗಳ ಒಳಗೆ ಸಭೆ ನಡೆಸಬೇಕು. ಹಣಕಾಸು, ಸಾಮಾಜಿಕ ನ್ಯಾಯ ಮತ್ತು ಗೃಹ ಸಚಿವಾಲಯಗಳ ಕಾರ್ಯದರ್ಶಿಗಳೂ ಸಭೆಯಲ್ಲಿ ಭಾಗವಹಿಸಬೇಕು’ ಎಂದು ನ್ಯಾಯಪೀಠವು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗೆ ಸೂಚಿಸಿದೆ.

‘ಮಿಷನ್ ಶಕ್ತಿ’ ಯೋಜನೆಯ ಅನುಷ್ಠಾನದ ಕುರಿತಾದ ವರದಿಯನ್ನೂ ತನಗೆ ಸಲ್ಲಿಸುವಂತೆ ನಿರ್ದೇಶಿಸಿದ ನ್ಯಾಯಪೀಠವು ಎಂಟು ವಾರಗಳ ನಂತರ ಈ ಅರ್ಜಿಯ ವಿಚಾರಣೆ ನಡೆಸುವುದಾಗಿ ಹೇಳಿತು.

ಪ್ರಕರಣಗಳ ವಿಚಾರಣೆ ಬಾಕಿ: ನ್ಯಾಯಾಧೀಶರ ತಪ್ಪಲ್ಲ, ವ್ಯವಸ್ಥೆಯಲ್ಲಿ ದೋಷವಿದೆ–ಕಿರಣ್ ರಿಜಿಜು

ಉದಯಪುರ (ಪಿಟಿಐ): ನ್ಯಾಯಾಲಯಗಳಲ್ಲಿ ಪ್ರಕರಣಗಳ ವಿಚಾರಣೆ ಬಾಕಿ ಇರಲು ನ್ಯಾಯಾಧೀಶರು ಕಾರಣರಲ್ಲ, ವ್ಯವಸ್ಥೆಯಲ್ಲಿಯೇ ದೋಷವಿದೆ. ಇದನ್ನು ಸರಿಪಡಿಸಲು ಸರ್ಕಾರ ಹಲವು ಕ್ರಮ ಕೈಗೊಳ್ಳುತ್ತಿದೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ಭಾರತೀಯ ಕಾನೂನು ಆಯೋಗವು ಇಲ್ಲಿನ ಮೋಹನ್‌ಲಾಲ್ ಸುಖಾಡಿಯಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಅಪ್ರಸ್ತುತ ಮತ್ತು ಅನವಶ್ಯಕ ಕಾನೂನುಗಳನ್ನು ರದ್ದುಗೊಳಿಸುವ ಪ್ರಯತ್ನಗಳ ಬಗ್ಗೆ ಮಾತನಾಡಿದರು.

‘ನ್ಯಾಯಾಲಯಗಳ ಮೂಲಸೌಕರ್ಯವನ್ನು ಸುಧಾರಿಸಲು ಮತ್ತು ಹೆಚ್ಚು ತಂತ್ರಜ್ಞಾನ ಬಳಕೆ ಮಾಡಲು ಪ್ರಯತ್ನಿಸಲಾಗುತ್ತಿದೆ. ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಇರಲೇಬೇಕಾದ ವ್ಯವಸ್ಥೆಯತ್ತ ನಾವು ಸಾಗುತ್ತಿದ್ದೇವೆ’ ಎಂದು ಸಚಿವರು ಹೇಳಿದರು.

‘ಸದ್ಯ ದೇಶದಾದ್ಯಂತ ವಿಚಾರಣೆ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ 4.90 ಕೋಟಿ ದಾಟಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಒಬ್ಬ ನ್ಯಾಯಾಧೀಶರು ದಿನಕ್ಕೆ 50–60 ಪ್ರಕರಣಗಳ ವಿಚಾರಣೆ ನಡೆಸುತ್ತಿದ್ದಾರೆ. ಸಾಮಾನ್ಯ ಜನರು, ಏಕೆ ಇಷ್ಟೊಂದು ಪ್ರಕರಣಗಳ ವಿಚಾರಣೆ ಬಾಕಿ ಇದೆ ಎಂದು ಕೇಳುತ್ತಾರೆ. ನ್ಯಾಯಾಧೀಶರು ಎಷ್ಟು ಕೆಲಸ ಮಾಡುತ್ತಾರೆಂದು ಅವರಿಗೆ ಗೊತ್ತಿಲ್ಲ. ಇದು ವ್ಯವಸ್ಥೆಯ ದೋಷ’ ಎಂದು ಹೇಳಿದರು.

ಮುಟ್ಟಿನ ರಜೆ: ಪಿಐಎಲ್ ತಳ್ಳಿಹಾಕಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಮಹಿಳೆಯರಿಗೆ ಅವರ ಉದ್ಯೋಗ ಸ್ಥಳಗಳಲ್ಲಿ ಹಾಗೂ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಲು ನಿಯಮ ರೂಪಿಸುವಂತೆ ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

‘ಈ ವಿಷಯವು ನೀತಿ ನಿರೂಪಣೆಗೆ ಸಂಬಂಧಿಸಿದ್ದು ಹಾಗೂ ಸರ್ಕಾರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಹೇಳಿತು. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಈ ಪೀಠದಲ್ಲಿದ್ದರು.

‘ಈ ಅರ್ಜಿಯಲ್ಲಿ ಹಲವು ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಇದು ನೀತಿ ನಿರೂಪಣೆಗೆ ಸಂಬಂಧಪಟ್ಟ ವಿಷಯವಾದ್ದರಿಂದ, ಅರ್ಜಿದಾರರು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯಕ್ಕೆ ಅಹವಾಲು ಸಲ್ಲಿಸುವುದು ಸೂಕ್ತ’ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ಅರ್ಜಿಯನ್ನು ವಿಲೇವಾರಿ ಮಾಡಿತು.

ದೆಹಲಿ ನಿವಾಸಿ ಶೈಲೇಂದ್ರ ಮಣಿ ತ್ರಿಪಾಠಿ ಎಂಬುವವರು ವಕೀಲ ವಿಶಾಲ್ ತಿವಾರಿ ಅವರ ಮೂಲಕ ಈ ಪಿಐಎಲ್ ಸಲ್ಲಿಸಿದ್ದರು.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಸೆಲೆಬ್ರಿಟಿ PREMIERE
ಇಂದುಶ್ರೀ ರವೀಂದ್ರ
ಧ್ವನಿಮಾಯಾ ಕಲಾವಿದೆ
ಬೆಳಿಗ್ಗೆ 10 ಕ್ಕೆ
ಗೊಂಬೆ ಒಡತಿಯ ಮನದಾಳದ ಮಾತು
Prajavani.net Prajavani Prajavani
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಮೇಘಾಲಯ, ನಾಗಾಲ್ಯಾಂಡ್ ವಿಧಾನಸಭೆಗೆ ನಾಳೆ ಮತದಾನ

ಶಿಲ್ಲಾಂಗ್ (ಪಿಟಿಐ): ಮೇಘಾಲಯ ಮತ್ತು ನಾಗಾಲ್ಯಾಂಡ್‌ನಲ್ಲಿ ಸೋಮವಾರ ವಿಧಾನಸಭಾ ಚುನಾವಣೆ ನಡೆಯಲಿದ್ದು, ಮೇಘಾಲಯದ ಶಿಲ್ಲಾಂಗ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಮೃತಪಟ್ಟಿರುವ ಕಾರಣ ಈ ಕ್ಷೇತ್ರದ ಮತದಾನವನ್ನು ಚುನಾವಣಾ ಆಯೋಗವು ಮುಂದೂಡಿದೆ.

ಮೇಘಾಲಯದ ಮಾಜಿ ಗೃಹಸಚಿವ ಹಾಗೂ ಯುನೈಟೆಡ್ ಡೆಮಾಕ್ರೆಟಿಕ್ ಪಕ್ಷದ ಶಿಲ್ಲಾಂಗ್ ಕ್ಷೇತ್ರದ ಅಭ್ಯರ್ಥಿ ಎಚ್.ಡಿ.ಆರ್. ಲಿಂಗ್ಡೊ ಅವರು ಹೃದಯಾಘಾತದಿಂದ ಇದೇ 20 ರಂದು ಮೃತಪಟ್ಟಿದ್ದರು. ಈ ಮಧ್ಯೆ, ಎರಡೂ ರಾಜ್ಯಗಳಲ್ಲಿ ಮತದಾನಕ್ಕೆ ಭರದ ಸಿದ್ಧತೆ ನಡೆದಿದ್ದು, ಬಹಿರಂಗ ಪ್ರಚಾರ ಕಾರ್ಯ ಶನಿವಾರ ಸಂಜೆ ಕೊನೆಗೊಂಡಿದೆ. ಮಾರ್ಚ್ 2ರಂದು ಮತಎಣಿಕೆ ನಡೆಯಲಿದೆ.

‘ಬಿಜೆಪಿ ಅವಧಿಯಲ್ಲಿ ರಾಜ್ಯಕ್ಕೆ ಅಧಿಕ ಅನುದಾನ’

‘ಬಾರಿಸು ಕನ್ನಡ ಡಿಂಡಿಮ’ ಸಾಂಸ್ಕೃತಿಕ ಉತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಮ್ಮ ಸರ್ಕಾರದ ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದ್ದರೆ, ಹಿಂದಿನ ಸರ್ಕಾರಗಳು ಕರ್ನಾಟಕದ ಹಣವನ್ನು ಬೇರೆ ರಾಜ್ಯಗಳಿಗೆ ಬಳಸುತ್ತಿದ್ದವು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶನಿವಾರ ಇಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಹಾಗೂ ‘ಬಾರಿಸು ಕನ್ನಡ ಡಿಂಡಿಮ’ ಸಾಂಸ್ಕೃತಿಕ ಉತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ‘ಇಂದು ದೇಶದ ಹಣ ಹಾಗೂ ಸಂಪನ್ಮೂಲಗಳು ಪ್ರಾಮಾಣಿಕವಾಗಿ ಕರ್ನಾಟಕದ ಅಭಿವೃದ್ಧಿಯತ್ತ ಮುಖ ಮಾಡಿವೆ’ ಎಂದರು.

‘2009ರಿಂದ 2014ರ ಅವಧಿಯಲ್ಲಿ ಕರ್ನಾಟಕಕ್ಕೆ ಪ್ರತಿವರ್ಷ ₹13 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. 2014ರಿಂದ 2023ರ ಅವಧಿಯಲ್ಲಿ ಪ್ರತಿವರ್ಷ ₹30 ಸಾವಿರ ಕೋಟಿ ನೀಡಲಾಗಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕರ್ನಾಟಕದವರೇ ರೈಲ್ವೆ ಸಚಿವರು ಆಗಿದ್ದರು. ಆ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ₹4 ಸಾವಿರ ಕೋಟಿ ಖರ್ಚು ಮಾಡಲಾಗಿತ್ತು. ಈ ವರ್ಷದ ಕೇಂದ್ರ ಬಜೆಟ್‌ನಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ₹7 ಸಾವಿರ ಕೋಟಿ ಮೀಸಲಿಡಲಾಗಿದೆ’ ಎಂದರು.

‘ಕಾಂಗ್ರೆಸ್ ಅವಧಿಯಲ್ಲಿ ಐದು ವರ್ಷಗಳಲ್ಲಿ ಕರ್ನಾಟಕದ ಹೆದ್ದಾರಿಗಳ ಅಭಿವೃದ್ಧಿಗೆ ಒಟ್ಟು ₹6 ಸಾವಿರ ಕೋಟಿ ನೀಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಪ್ರತಿವರ್ಷ ₹5 ಸಾವಿರ ಕೋಟಿ ನೀಡುತ್ತಿದ್ದೇವೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ನೆರವು ನೀಡುವ ಮೂಲಕ ಮಧ್ಯ ಕರ್ನಾಟಕದ ರೈತರಿಗೆ ಅನುಕೂಲ ಮಾಡಿ ಕೊಡಲಾಗಿದೆ’ ಎಂದರು.

ಕುವೆಂಪು, ಬಸವಣ್ಣ, ದೇವರ ದಾಸಿಮಯ್ಯ, ಮಾದಾರ ಚೆನ್ನಯ್ಯ, ರಾಣಿ ಅಬ್ಬಕ್ಕ, ಒನಕೆ ಓಬವ್ವ, ಸಂಗೊಳ್ಳಿ ರಾಯಣ್ಣ, ಸರ್.ಎಂ. ವಿಶ್ವೇಶ್ವರಯ್ಯ, ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಕರ್ನಾಟಕದ ಸಾಧಕ ಮಹನೀಯರ ಸಾಧನೆಗಳನ್ನು ಅವರು ಸ್ಮರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಕರ್ನಾಟಕವನ್ನು ಮುನ್ನಡೆಸುವ ಸಂಕಲ್ಪದಿಂದ ಮುನ್ನಡೆಯುತ್ತಿದ್ದೇನೆ. ನವ ಕರ್ನಾಟಕದಿಂದ ನವಭಾರತ ನಿರ್ಮಾಣ ಸಂಕಲ್ಪ ಯಶಸ್ವಿಯಾಗುತ್ತದೆ’ ಎಂದರು.

‘ನನಗೆ ದೂರದ ದಿಲ್ಲಿಯಲ್ಲಿ ಕನ್ನಡದ ಕಂಪು ಬಹಳ ಅದ್ಭುತವಾಗಿ ಕಾಣಿಸುತ್ತಿದೆ. ಕನ್ನಡ ನಾಡಿನಲ್ಲಿ ಹುಟ್ಟುವುದೇ ಸೌಭಾಗ್ಯ. ಕನ್ನಡ ನಾಡಿನಲ್ಲಿ ಬೆಳೆಯುವುದೇ ನಮ್ಮ ಭಾಗ್ಯ. ಅಂತಹ ಸೌಭಾಗ್ಯ, ಭಾಗ್ಯ ಪಡೆದಿರುವ ನಾವೆಲ್ಲರೂ ಪೂರ್ವ ಜನ್ಮದ ಪುಣ್ಯವಂತರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಭಾರತದ ಆರ್ಥಿಕತೆಯ ಐದು ಟ್ರಿಲಿಯನ್ ಡಾಲರ್ ಕನಸಿಗೆ, ಕರ್ನಾಟಕವು ಬರುವ ವರ್ಷದಲ್ಲಿ ಒಂದು ಟ್ರಿಲಿಯನ್ ಡಾಲರ್ ನೀಡಲಿದೆ’ ಎಂದರು.

ಮುಂದಿನ ವರ್ಷ ದಾವಣಗೆರೆಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕೆ ಬರುವಂತೆ ಪ್ರಧಾನಿ ಅವರನ್ನು ಆಹ್ವಾನಿಸಿದರು.

ಕಸಾಪ ಅಧ್ಯಕ್ಷರಿಂದ ಬಹಿಷ್ಕಾರ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆಗಿರುವ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರನ್ನು ಕಾರ್ಯಕ್ರಮದ ವೇದಿಕೆಗೆ ಆಹ್ವಾನಿಸಿಲ್ಲ ಎಂದು ಆರೋಪಿಸಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಅವರು ಕಾರ್ಯಕ್ರಮವನ್ನು ಬಹಿಷ್ಕರಿಸಿದರು.

ಗಾಳಿಪಟ

ಕಲಬುರಗಿಯ ಗುಲ್ಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವದ ಅಂಗವಾಗಿ ಶನಿವಾರ ನಡೆದ ಗಾಳಿಪಟ ಉತ್ಸವದಲ್ಲಿ ಶಾಲಾ ವಿದ್ಯಾರ್ಥಿಗಳು ಗಾಳಿಪಟ ಹಾರಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

‘ಸಾಮಾಜಿಕ ಬದಲಾವಣೆಯಲ್ಲಿ ನ್ಯಾಯಾಧೀಶರ ಪಾತ್ರ ನಿರ್ಣಾಯಕ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದುಳಿದ ಸಮುದಾಯಗಳ ವಿದ್ಯಾರ್ಥಿಗಳ ಆತ್ಮಹತ್ಯೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು, ಸಾಮಾಜಿಕ ಬದಲಾವಣೆಯಲ್ಲಿ ನ್ಯಾಯಾಧೀಶರ ಪಾತ್ರವು ನಿರ್ಣಾಯಕವಾದದ್ದು ಎಂದು ಶನಿವಾರ ಅಭಿಪ್ರಾಯಪಟ್ಟಿದ್ದಾರೆ.

ಹೈದರಾಬಾದ್‌ನ ರಾಷ್ಟ್ರೀಯ ಕಾನೂನು ಅಧ್ಯಯನ ಮತ್ತು ಸಂಶೋಧನಾ ವಿಶ್ವವಿದ್ಯಾಲಯದ (ಎನ್‌ಎಎಲ್‌ಎಸ್‌ಎಆರ್) 19ನೇ ವಾರ್ಷಿಕ ಘಟಿಕೋತ್ಸವದ ದಿಕ್ಸೂಚಿ ಭಾಷಣ ಮಾಡಿದ ಅವರು, ‘ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ದಲಿತ ಮತ್ತು ಆದಿವಾಸಿ ಸಮುದಾಯದವರು ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ’ ಎಂದರು.

‘ತಮ್ಮ ಮನೆ ತೊರೆದು ಓದಲು ಬರುವ ವಿದ್ಯಾರ್ಥಿಗಳೊಂದಿಗೆ ಸಾಂಸ್ಥಿಕ ರೂಪದ ಸ್ನೇಹದ ಬಂಧವನ್ನು ಸ್ಥಾಪಿಸುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ. ಒಬ್ಬೊಬ್ಬ ವಿದ್ಯಾರ್ಥಿಯು ಭಿನ್ನ ರೀತಿಯ ಸವಾಲುಗಳನ್ನು ಎದುರಿಸುತ್ತಾರೆ ಎಂಬುದನ್ನು ನಾವು ಅರಿಯಬೇಕು. ಈಚೆಗಷ್ಟೇ ಬಾಂಬೆ ಐಐಟಿಯಲ್ಲಿನ ದಲಿತ ವಿದ್ಯಾರ್ಥಿಯ ಆತ್ಮಹತ್ಯೆಯ ಬಗ್ಗೆ ನಾನು ಓದಿದ್ದೇನೆ. ಈ ಘಟನೆಯು ನನಗೆ ಕಳೆದ ವರ್ಷ ರಾಷ್ಟ್ರಮಟ್ಟದ ವಿಶ್ವವಿದ್ಯಾಲಯದಲ್ಲಿನ ಆದಿವಾಸಿ ವಿದ್ಯಾರ್ಥಿಯ ಆತ್ಮಹತ್ಯೆಯನ್ನು ನೆನಪಿಸಿತು’ ಎಂದರು.

ರಾಜ್ಯದ ದತ್ತಾಂಶದಲ್ಲಿ ಭಾರಿ ವ್ಯತ್ಯಾಸ

ಒಂದನೇ ಪುಟದಿಂದ...

ನಗರದಲ್ಲಿ ನಗರ ಫಲಿತಾಂಶ ಚೌಕಟ್ಟಿನ ಉಪಕ್ರಮಗಳ ಮೇಲ್ವಿಚಾರಣೆ ನೋಡಿಕೊಳ್ಳಲು ನೋಡಲ್ ಅಧಿಕಾರಿಗಳನ್ನು ನೇಮಿಸುವಂತೆ ಸಚಿವಾಲಯವು ಎಲ್ಲ ರಾಜ್ಯಗಳಿಗೆ 2022ರ ಜೂನ್‌ನಲ್ಲಿ ನಿರ್ದೇಶನ ನೀಡಿತ್ತು. ಕರ್ನಾಟಕ ರಾಜ್ಯದ ಎಂಟು ನಗರಗಳು ಕೇಂದ್ರಕ್ಕೆ ದತ್ತಾಂಶ ಕಳುಹಿಸಿವೆ. ಈ ದತ್ತಾಂಶಗಳನ್ನು ಸಚಿವಾಲಯದ ತಂಡವು ವಿಶ್ಲೇಷಣೆಗೆ ಒಳಪಡಿಸಿದೆ. 2020ಕ್ಕೆ ಹೋಲಿಸಿದರೆ ಆರು ನಗರಗಳ ಪ್ರಮುಖ ದತ್ತಾಂಶಗಳಲ್ಲಿ ಭಾರಿ ವ್ಯತ್ಯಾಸ ಆಗಿದೆ. ದತ್ತಾಂಶ ಒದಗಿಸುವ ವೇಳೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡಿರುವುದು ರ‍್ಯಾಂಕಿಂಗ್ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಜತೆಗೆ, ನಗರದ ಸುಲಲಿತ ವ್ಯವಹಾರ ಹಾಗೂ ನಾಗರಿಕರ ಗ್ರಹಿಕೆ ಮೇಲೂ ಪರಿಣಾಮ ಉಂಟು ಮಾಡಲಿದೆ ಎಂದೂ ಅವರು ಎಚ್ಚರಿಸಿದ್ದಾರೆ.

ಸೂಕ್ತ ದಾಖಲೆಗಳನ್ನು ಒದಗಿಸಿ ಈ ದತ್ತಾಂಶಗಳನ್ನು ಬದಲಿಸಲು ಅವಕಾಶ ಇದೆ. ಇದನ್ನು ಫೆಬ್ರುವರಿ 28ರೊಳಗೆ ಒದಗಿಸಬೇಕು. ಮುಖ್ಯ ಕಾರ್ಯದರ್ಶಿಯವರೇ ಮಧ್ಯಪ್ರವೇಶಿಸಿ ಸಂಬಂಧಿಸಿದ ನಗರ ಪಾಲಿಕೆಗಳ ಆಯುಕ್ತರಿಗೆ ಈ ಸಂಬಂಧ ನಿರ್ದೇಶನ ನೀಡಬೇಕು. ಇದರಿಂದ ನಗರಗಳ ರ‍್ಯಾಂಕಿಂಗ್‌ನಲ್ಲಿ ಸುಧಾರಣೆ ಮಾಡಿಕೊಳ್ಳಲು ಅವಕಾಶ ಇದೆ ಎಂದೂ ಅವರು ತಿಳಿಸಿದ್ದಾರೆ.

ಕೆಲವು ಎಡವಟ್ಟುಗಳು: ಬೆಳಗಾವಿಯಲ್ಲಿ ನಗರ ದತ್ತಾಂಶ ನೀತಿ ರೂಪಿಸಲಾಗಿದೆ ಎಂದು ಸರ್ಕಾರ 2020ರಲ್ಲಿ ತಿಳಿಸಿತ್ತು. ನೀತಿ ರೂಪಿಸಿಲ್ಲ ಎಂದು 2022ರಲ್ಲಿ ಸರ್ಕಾರ ಹೇಳಿಕೊಂಡಿದೆ. ಕರ್ನಾಟಕದ ದತ್ತಾಂಶದಲ್ಲಿನ ಲೋಪವನ್ನು ಪತ್ತೆ ಹಚ್ಚಿರುವ ಸಚಿವಾಲಯವು, ದತ್ತಾಂಶ ನೀತಿಗೆ ಅನುಮೋದನೆ ನೀಡಲಾಗಿದೆ ಎಂದು ಟಿಪ್ಪಣಿಯಲ್ಲಿ ಬರೆದಿದೆ. ಬೆಂಗಳೂರಿನಲ್ಲಿ 35,11,328 ಮನೆಗಳು ಎಲ್‌ಪಿಜಿ/ಪಿಎನ್‌ಜಿ ಸಂಪರ್ಕಗಳನ್ನು ಹೊಂದಿದೆ ಎಂದು ಕರ್ನಾಟಕ ಸರ್ಕಾರ 2020ರಲ್ಲಿ ತಿಳಿಸಿತ್ತು. ಎರಡೇ ವರ್ಷಗಳಲ್ಲಿ ಅವುಗಳ ಸಂಖ್ಯೆ ಸೊನ್ನೆಗೆ ಇಳಿದಿದೆ. ಬೆಂಗಳೂರಿನಲ್ಲಿ 2020ರಲ್ಲಿ 20,43,792 ಆಸ್ತಿಗಳು ಇದ್ದರೆ, 2022ರಲ್ಲಿ ಅವುಗಳ ಸಂಖ್ಯೆ 1,31,63,000 ಕ್ಕೆ ಜಿಗಿದಿದೆ. ಬೆಂಗಳೂರಿನಲ್ಲಿ 2,537 ಕಿ.ಮೀ ಇದ್ದ ರಸ್ತೆ ಜಾಲ ಎರಡೇ ವರ್ಷಗಳಲ್ಲಿ 13,873 ಕಿ.ಮೀಗೆ ಏರಿದೆ. ಇವುಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಆಗಿದೆ. ಈ ಅಂಕಿ ಅಂಶಗಳಲ್ಲಿ ಹೊಂದಾಣಿಕೆಯೇ ಆಗುತ್ತಿಲ್ಲ ಎಂದು ಕೇಂದ್ರ ವಸತಿ ಸಚಿವಾಲಯ ಹೇಳಿದೆ.

ಜೋಡಿ ಕೊಲೆ: ಬಾಲಕ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದೊಡ್ಡಬೆಳವಂಗಲದಲ್ಲಿ ಕಳೆದ ವಾರ ಕ್ರಿಕೆಟ್ ಪಂದ್ಯಾವಳಿ ವೇಳೆ ನಡೆದ ಜೋಡಿ ಕೊಲೆಗೆ ಸಂಬಂಧಿಸಿದಂತೆ ಬಾಲಕ ಸೇರಿದಂತೆ ಮೂವರನ್ನು ಶನಿವಾರ ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದ ಆರೋಪದ ಮೇಲೆ ಬೆಂಗಳೂರಿನ ಹಂದರಹಳ್ಳಿ ನಿವಾಸಿಗಳಾದ ಸೋಮಶೇಖರ್ ಅಲಿಯಾಸ್ ಸೋಮು, ಮುನ್ನಾ ಜೊತೆ ಬಾಲಕನೊಬ್ಬನನ್ನು ಪೊಲೀಸರು ಬಂಧಿಸಿ, ದೊಡ್ಡಬಳ್ಳಾಪುರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಆ ಪೈಕಿ ಇಬ್ಬರು ಆರೋಪಿಗಳನ್ನು ಹೆಚ್ಚಿನ ವಿಚಾರಣೆಗಾಗಿ ಮಾರ್ಚ್ 7ರವರೆಗೂ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

ಎಫ್‌ಐಆರ್‌ನಲ್ಲಿ ಹೆಸರಿಲ್ಲ: ಜೋಡಿ ಕೊಲೆ ಪ್ರಕರಣದ ಎಫ್‌ಐಆರ್‌ನಲ್ಲಿ ಈ ಮೂವರು ಆರೋಪಿಗಳ ಹೆಸರು ಇರಲಿಲ್ಲ. ಕೊಲೆ ನಡೆದ ಸಂದರ್ಭದಲ್ಲಿ ಪ್ರಮುಖ ಆರೋಪಿ ವಿನಯ್ ಹಾಗೂ ಇತರರ ಜೊತೆಗಿದ್ದರು. ಇವರಷ್ಟೇ ಅಲ್ಲದೆ ಇನ್ನೂ ಮೂರ್ನಾಲ್ಕು ಜನರು ಭಾಗಿಯಾಗಿರುವ ಬಗ್ಗೆ ಖಚಿತ ಮಾಹಿತಿ ಇದೆ. ಸದ್ಯದಲ್ಲೇ ಅವರನ್ನೂ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದೂರಿನಲ್ಲಿದ್ದ ಐವರು ಆರೋಪಿಗಳಲ್ಲಿ ಇಬ್ಬರು ಆರೋಪಿಗಳನ್ನು ಕಾಲಿಗೆ ಗುಂಡಿಟ್ಟು ಬಂಧಿಸಲಾಗಿದ್ದು, ಮತ್ತೊಬ್ಬ ಆರೋಪಿ ನ್ಯಾಯಾಲಯಕ್ಕೆ ಶರಣಾಗಿದ್ದಾನೆ. ಕೋರಿ, ದೀಪು ಎಂಬ ಆರೋಪಿಗಳು ಇನ್ನೂ ತಲೆಮರೆಸಿಕೊಂಡಿದ್ದಾರೆ.

ತರಾತುರಿಯಲ್ಲಿ 1,830 ಟೆಂಡರ್: ಎಎಪಿ ಆಕ್ಷೇಪ

ಬೆಂಗಳೂರು: ರಾಜ್ಯ ಸರ್ಕಾರ 24 ಗಂಟೆಗಳ ಅಂತರದಲ್ಲಿ 1,830 ಟೆಂಡರ್‌ಗಳನ್ನು ಕರೆದಿದೆ. ಇದು ಚುನಾವಣಾ ವೆಚ್ಚಕ್ಕಾಗಿ ಬಿಜೆಪಿ ರೂಪಿಸಿರುವ ಗುಪ್ತ ಯೋಜನೆ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಪೃಥ್ವಿ ರೆಡ್ಡಿ ಆರೋಪಿಸಿದರು.

ಇದೇ ತಿಂಗಳ 24 ಹಾಗೂ 25ರಂದು ₹ 6 ಸಾವಿರ ಕೋಟಿ ಮೊತ್ತದ ಅಲ್ಪಾವಧಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಮಾರ್ಚ್ 15ರ ಒಳಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸಿದ್ಧತೆ ನಡೆದಿದೆ. ತುರ್ತು ಸಮಯದಲ್ಲಿ ಮಾತ್ರ ಅಲ್ಪಾವಧಿ ಟೆಂಡರ್‌ಗಳನ್ನು ಕರೆಯಲಾಗುತ್ತದೆ. ಆದರೆ, ಚುನಾವಣೆ ಘೋಷಣೆಯಾಗುವ ಮೊದಲು ತರಾತುರಿಯಲ್ಲಿ ದೊಡ್ಡ ಮೊತ್ತದ ಕಾಮಗಾರಿಗಳ ಟೆಂಡರ್ ಕರೆದಿರುವುದರ ಹಿಂದೆ ಭ್ರಷ್ಟಾಚಾರದ ಅನುಮಾನ ಮೂಡುತ್ತಿದೆ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಅನುಮಾನ ವ್ಯಕ್ತಪಡಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯದಲ್ಲಿ ಶೇ 100ರಷ್ಟು ಭ್ರಷ್ಟಾಚಾರ ರಹಿತ ಆಡಳಿತ ನೀಡುವ ಭರವಸೆ ನೀಡಿದ್ದಾರೆ. ಬಹುಶಃ ಅದು ಶೇ 40ರ ಬದಲು ಶೇ 100ರಷ್ಟು ಕಮಿಷನ್ ಆಡಳಿತ ನೀಡುವುದಾಗಿ ಹೇಳಿದ್ದಿರಬೇಕು. ಶಿಕ್ಷಕರು, ಪೌರ ಕಾರ್ಮಿಕರು, ಆರೋಗ್ಯ ಸಿಬ್ಬಂದಿ ಸೇರಿದಂತೆ ಹಲವು ವರ್ಗಗಳು ಪ್ರತಿಭಟನೆ ನಡೆಸುತ್ತಿವೆ. ತನ್ನ ಬಳಿ ಹಣವಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಕಮಿಷನ್ ಸಿಗುವಲ್ಲಿ ಮಾತ್ರ ಹಣ ತೊಡಗಿಸುತ್ತಿದ್ದಾರೆ ಎಂದು ದೂರಿದರು.

‘ಹಣ ಕೊಟ್ಟರೆ ಬೇಡ ಎನ್ನಬೇಡಿ’

ಕೊಪ್ಪಳ: ‘ಚುನಾವಣೆ ವೇಳೆ ಜನರ ಓಲೈಕೆಗೆ ರಾಜಕೀಯ ಪಕ್ಷಗಳು ಹಣ ಕೊಟ್ಟರೆ, ಬೇಡ ಎನ್ನಬೇಡಿ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಜನಸಂಪರ್ಕ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹೇಳಿದರು.

‘ತೆರಿಗೆ ರೂಪದಲ್ಲಿ ನೀವು ಪಾವತಿಸಿದ ಹಣವನ್ನೇ ರಾಜಕಾರಣಿಗಳು ನಿಮಗೆ ನೀಡುತ್ತಾರೆ. ಆ ಹಣ ಐದು ವರ್ಷದವರೆಗೆ ನೆರವು ಆಗುವುದೇ ಎಂಬುದನ್ನು ಪ್ರಶ್ನಿಸಿಕೊಳ್ಳಿ. ಆದ್ದರಿಂದ ಸಮಸ್ಯೆಗೆ ಸ್ಪಂದಿಸುವವರಿಗೇ ನಿಮ್ಮ ಮತ ಹಾಕಿ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಸ್ಪರ್ಧಿಸುವರು. ಪಕ್ಷದ ಏಳ್ಗೆಗೆ ನಾನು ಶ್ರಮಿಸುವೆ ಹೊರತು ಸ್ಪರ್ಧಿಸುವುದಿಲ್ಲ. ರಾಮಮಂದಿರಕ್ಕಿಂತ ರಾಮರಾಜ್ಯ ನಿರ್ಮಿಸುವವರಿಗೆ ಆದ್ಯತೆ ನೀಡಿ’ ಎಂದು ಹೇಳಿದರು.

‘ಹೆಚ್ಚು ಸ್ಥಾನಗಳನ್ನು ಗಳಿಸಿ, ಮತ್ತೆ ಮುಖ್ಯಮಂತ್ರಿ ಆಗುವ ಆಸೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಲ್ಲಿದೆ. ಅದಕ್ಕೆ ಅವರ ಕುಟುಂಬದಲ್ಲೇ ವಿರೋಧವಿದೆ. ರೇವಣ್ಣ ಅವರನ್ನು ಮುಖ್ಯಮಂತ್ರಿ ಮಾಡುವ ಆಸೆ ಕುಟುಂಬಕ್ಕಿದೆ’ ಎಂದರು.

ಸಮಾನಮನಸ್ಕ ಒಕ್ಕೂಟ: ಇಂಗಿತ

ಒಂದನೇ ಪುಟದಿಂದ

ಪ್ರತಿಪಕ್ಷಗಳ ಒಕ್ಕೂಟವನ್ನು ರಚಿಸುವುದರ ಜೊತೆಗೆ ಕೃಷಿ ಕಾರ್ಮಿಕರು, ಯುವಕರು, ಮಹಿಳೆಯರಿಗೆ ಪಕ್ಷದಲ್ಲಿ ಇನ್ನಷ್ಟು ಆದ್ಯತೆ ನೀಡುವ, ಕಾರ್ಯಕರ್ತರ ಹಾಗೂ ಜನಬೆಂಬಲದ ಪಕ್ಷವನ್ನಾಗಿ ಮರುರೂಪಿಸುವ ಹಾಗೂ ಆ ಮೂಲಕ ಸಮೃದ್ಧ ಭಾರತವನ್ನು ಕಟ್ಟುವ ಉದ್ದೇಶವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎದುರಾಳಿಗಳೇ ಇಲ್ಲ ಎಂದು ಘೋಷಿಸುವ ಮೂಲಕ ಬಿಜೆಪಿ ಒಡ್ಡಿರುವ ಸವಾಲನ್ನು ಸ್ವೀಕರಿಸಲು ಪಕ್ಷ ನಿರ್ಧರಿಸಿದೆ. ಒಂಬತ್ತು ರಾಜ್ಯಗಳ ವಿಧಾನಸಭೆಗಳು ಹಾಗೂ ಲೋಕಸಭೆಗೆ ನಡೆಯಲಿರುವ ಚುನಾವಣೆ ದೇಶದ ಭವಿಷ್ಯದ ದೃಷ್ಟಿಯಿಂದ ಮಹತ್ವವಾದವುಗಳು ಎಂದು ಪಕ್ಷ ಪರಿಗಣಿಸಿದೆ. ಈಗ ಧ್ರುವೀಕರಣಗೊಂಡಿರುವ ರಾಜಕಾರಣದ ಕೇಂದ್ರ ಸ್ಥಾನವನ್ನು ಮತ್ತೆ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ರಾಜಕೀಯದ ಮರುವ್ಯಾಖ್ಯಾನ ಮಾಡುವ ಅಗತ್ಯವಿದೆ ಎಂದು ಪಕ್ಷ ಒತ್ತಿ ಹೇಳಿದೆ.

ನಾಯಕತ್ವದಲ್ಲಿ ಹೊಸ ರಕ್ತ ಹರಿಯಲಿದೆ ಎಂದಿರುವ ಕಾಂಗ್ರೆಸ್, ಪಕ್ಷದಲ್ಲಿ ಯುವಜನತೆ ಹಾಗೂ ಅನುಭವಿಗಳಿಗೆ ಸಮಾನ ಆದ್ಯತೆ ಸಿಗಲಿದೆ ಎಂಬ ಸುಳಿವನ್ನು ಪಕ್ಷ ನೀಡಿದೆ.

ಬಿಜೆಪಿಗೆ ಲಾಭ–ಎಚ್ಚರಿಕೆ: ತೃತೀಯರಂಗ ರಚನೆ ಯತ್ನದಿಂದ ಬಿಜೆಪಿಗೆ ಲಾಭ ಮಾಡಿಕೊಟ್ಟಂತಾಗುತ್ತದೆ ಎಂದು ಕಾಂಗ್ರೆಸ್ ಎಚ್ಚರಿಸಿದೆ. ತೃಣಮೂಲ ಕಾಂಗ್ರೆಸ್, ಎಎಪಿ ಹಾಗೂ ಬಿಆರ್‌ಎಸ್ ಪಕ್ಷಗಳು ಈ ದಿಸೆಯಲ್ಲಿ ನಡೆಸುತ್ತಿರುವ ಚಟುವಟಿಕೆಗಳನ್ನು ಕಾಂಗ್ರೆಸ್ ಪರೋಕ್ಷವಾಗಿ ಟೀಕಿಸಿದಂತೆ ತೋರುತ್ತದೆ.

ಅಧ್ಯಕ್ಷೀಯ ಭಾಷಣ ಮಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, ದೇಶಕ್ಕೆ ಕಠಿಣ ಸಮಯ ಎದುರಾಗಿದ್ದು, ಹೊಸ ಸತ್ಯಾಗ್ರಹದ ಅಗತ್ಯವಿದೆ ಎಂದರು. ‘ಸೇವೆ, ಸಂಘರ್ಷ, ಬಲಿದಾನ, ದೇಶ ಮೊದಲು’ ಎಂಬ ಹೊಸ ಘೋಷಣೆಯಡಿ ದಿಟ್ಟ ನಿಲುವು ತೆಗೆದುಕೊಳ್ಳಬೇಕಿದೆ ಎಂದು ಕರೆ ನೀಡಿದರು. ದೆಹಲಿಯಲ್ಲಿ ಕುಳಿತಿರುವ ನಾಯಕರ ಡಿಎನ್‌ಎಯಲ್ಲಿ ಬಡವರ ವಿರೋಧಿ ಗುಣವಿದೆ ಎಂದು ಆರೋಪಿಸಿದರು.

ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಪಕ್ಷಕ್ಕೆ ಮಹತ್ವದ ತಿರುವು ನೀಡಿದೆ ಎಂದು ಸೋನಿಯಾ ಗಾಂಧಿ ಅವರು ತಮ್ಮ ಭಾಷಣದಲ್ಲಿ ಹೇಳಿದರು. ಪಕ್ಷ ಮತ್ತು ದೇಶದ ಜನರ ನಡುವಿನ ಸಂವಾದ ಪರಂಪರೆಯನ್ನು ಈ ಯಾತ್ರೆ ಮರುಸ್ಥಾಪಿಸಿದೆ. ಜನರ ಜೊತೆಗೆ ಪಕ್ಷ ನಿಲ್ಲಲಿದೆ ಹಾಗೂ ಅವರಿಗಾಗಿ ಹೋರಾಟ ಮುಂದುವರಿಸಲಿದೆ ಎಂದರು.

ಮಹಾಧಿವೇಶನದ ನಿರ್ಣಯಗಳು:

- ಧರ್ಮ, ಜಾತಿ, ಭಾಷೆ ಆಧಾರದಲ್ಲಿ ನಡೆಯುತ್ತಿರುವ ತಾರತಮ್ಯ ಮತ್ತು ದ್ವೇಷಾಪರಾಧ ನಿಗ್ರಹಕ್ಕೆ ಕಾನೂನು
- ಸಾಮೂಹಿಕ ಪಕ್ಷಾಂತರ ತಡೆಯಲು ಸಂವಿಧಾನಕ್ಕೆ ತಿದ್ದುಪಡಿ
- ದೋಷಪೂರಿತ ಚುನಾವಣಾ ಬಾಂಡ್ ಬದಲಿಗೆ ರಾಷ್ಟ್ರೀಯ ಚುನಾವಣಾ ನಿಧಿ ಸ್ಥಾಪನೆ ಪ್ರಸ್ತಾವ
- ಇವಿಎಂ ವಿಚಾರವಲ್ಲಿ ಸಮಾನ ಮನಸ್ಕ ಪಕ್ಷಗಳ ಜತೆ ಸಮಗ್ರ ಮಾತುಕತೆ; ಚುನಾವಣಾ ಆಯೋಗದ ಜತೆ ಚರ್ಚೆ
- ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಕಾನೂನು ರದ್ದುಪಡಿಸಲು ಪರಿಶೀಲನೆ
- ಮೋದಿ ಸರ್ಕಾರದ ಆರ್ಥಿಕ ನೀತಿಗಳ ಪರಿಶೀಲನೆ

ಸಂಕ್ಷಿಪ್ತ ಸುದ್ದಿ

ಕೋಲ್ಕತ್ತ: ಕೇಂದ್ರ ಸಚಿವರ ಕಾರಿನ ಮೇಲೆ ದಾಳಿ– ಆರೋಪ

ಕೋಲ್ಕತ್ತ : ಪಶ್ಚಿಮ ಬಂಗಾಳದ ಕೂಚ್‌ಬಿಹಾರ್ ಜಿಲ್ಲೆಯ ದಿನ್ಹಾಟಾದಲ್ಲಿ ಆಡಳಿತ ಪಕ್ಷವಾದ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಬೆಂಬಲಿಗರು ತಮ್ಮ ಕಾರಿನ ಮೇಲೆ ದಾಳಿ ನಡೆಸಿದ್ದಾರೆ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿಶೀಥ್ ಪ್ರಾಮಾಣಿಕ್ ಅವರು ಶನಿವಾರ ಆರೋಪಿಸಿದ್ದಾರೆ.

ನಿಶೀಥ್ ಅವರನ್ನು ಹೊತ್ತೊಯ್ಯುತ್ತಿದ್ದ ಕಾರಿನತ್ತ ಕಲ್ಲು ತೂರಿರುವ ಟಿಎಂಸಿ ಬೆಂಬಲಿಗರು ಕಪ್ಪು ಬಟ್ಟೆ ಪ್ರದರ್ಶಿಸಿದ್ದಾರೆ ಎನ್ನಲಾಗಿದೆ. ಕಾರಿನ ಮುಂಭಾಗದ ಗಾಜಿಗೆ ಹಾನಿಯಾಗಿದೆ.

ಟಿಎಂಸಿ ಬೆಂಬಲಿಗರು ಪ್ರಾಮಾಣಿಕ್ ಅವರ ಮನೆಯ ಹತ್ತಿರದಲ್ಲಿ ಪ್ರತಿಭಟನೆ ನಡೆಸಿದ ಒಂದು ವಾರದ ನಂತರ, ರಾಜ್ಯ ಸರ್ಕಾರದ ಟಿಎಂಸಿ ನಾಯಕ ಮತ್ತು ಸಚಿವ ಉದಯನ್ ಗುಹಾ ಮತ್ತು ಇತರ ನಾಯಕರ ಸಮ್ಮುಖದಲ್ಲಿ ಕಲ್ಲು ತೂರಾಟ ಘಟನೆ ನಡೆದಿದೆ ಎನ್ನಲಾಗಿದೆ.

ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು, ಶನಿವಾರದ ಘಟನೆಗೆ ಬಿಜೆಪಿಯೇ ಜವಾಬ್ದಾರಿ. ತಮ್ಮ ಪಕ್ಷದ ಬೆಂಬಲಿಗರಲ್ಲ ಎಂದು ಹೇಳಿದ್ದಾರೆ.

ದಿನ್ಹಾಟಾದ ಬಿಜೆಪಿ ಕಾರ್ಯಕರ್ತರನ್ನು ಹಾಗೂ ಜನರನ್ನು ಭೇಟಿ ಮಾಡಲು ನಿಶೀಥ್ ಅವರು ತೆರಳಿದ್ದರು. ಈ ವೇಳೆ, ಟಿಎಂಸಿ ಬೆಂಬಲಿಗರು ನಿಶೀಥ್ ಅವರ ಬೆಂಗಾವಲು ಪಡೆಗೆ ಕಪ್ಪು-ಧ್ವಜ ತೋರಿಸಿದ್ದಾರೆ. ಇದರ ನಂತರ ಆಡಳಿತ ಪಕ್ಷದ ಬೆಂಬಲಿಗರು ಮತ್ತು ಬಿಜೆಪಿ ನಡುವೆ ಗಲಾಟೆ ನಡೆಯಿತು ಎಂದು ಸ್ಥಳೀಯ ಮೂಲಗಳು ಹೇಳಿವೆ.

ಎಂಸಿಡಿ ಸ್ಥಾಯಿ ಸಮಿತಿ: ಮರು ಚುನಾವಣೆಗೆ ಹೈಕೋರ್ಟ್ ತಡೆ

ನವದೆಹಲಿ (ಪಿಟಿಐ): ಇದೇ 27ರಂದು ನಿಗದಿಯಾಗಿದ್ದ ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಸ್ಥಾಯಿ ಸಮಿತಿಯ ಮರು ಚುನಾವಣೆಗೆ ದೆಹಲಿ ಹೈಕೋರ್ಟ್ ಶನಿವಾರ ತಡೆ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಗೌರಂಗ್ ಕಾಂತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಚುನಾವಣಾ ಅಧಿಕಾರಿಯೂ ಆಗಿರುವ ಪಾಲಿಕೆಯ ಮೇಯರ್ ಅವರು ಇದೇ 24ರಂದು ನಡೆದಿದ್ದ ಚುನಾವಣೆಯ ಫಲಿತಾಂಶ ಪ್ರಕಟಿಸದೆಯೇ ಇದೇ 27 ರಂದು ಮರು ಚುನಾವಣೆ ನಡೆಸುವುದಾಗಿ ಘೋಷಿಸಿದ್ದಾರೆ. ಆ ಮೂಲಕ ಅವರು ನಿಯಮಗಳನ್ನು ಉಲ್ಲಂಘಿಸಿದ್ದಾರೆ’ ಎಂದು ತಿಳಿಸಿದೆ.

‘ಚುನಾವಣಾಧಿಕಾರಿ ಹಾಗೂ ಇತರ ಇಬ್ಬರಿಗೆ ನೋಟಿಸ್ ನೀಡಲಾಗಿದೆ. ಮುಂದಿನ ವಿಚಾರಣೆವರೆಗೂ ಮರು ಚುನಾವಣೆಗೆ ತಡೆ ನೀಡಲಾಗಿದೆ’ ಎಂದು ನ್ಯಾಯಪೀಠ ಹೇಳಿದೆ. ‘ಮರು ಚುನಾವಣೆ- ಸಂವಿಧಾನ ವಿರೋಧಿ ನಡೆ’: ‘ಎಂಸಿಡಿ ಸ್ಥಾಯಿ ಸಮಿತಿಗೆ ಬಿಜೆಪಿ ಹಾಗೂ ಆಡಳಿತಾ ರೂಢ ಆಮ್ ಆದ್ಮಿ ಪಕ್ಷದ (ಎಎಪಿ) ತಲಾ ಮೂವರನ್ನು ಸದಸ್ಯರನ್ನಾಗಿ ನೇಮಿಸುವಂತೆ ತಾಂತ್ರಿಕ ಪರಿಣತರು ಸೂಚಿಸಿದ್ದಾರೆ. ಮೇಯರ್ ಶೆಲ್ಲಿ ಒಬೆರಾಯ್ ಅವರು ಇದಕ್ಕೆ ಸಮ್ಮತಿ ಸೂಚಿಸಬೇಕು. ಈ ಫಲಿತಾಂಶವನ್ನು ಅವರು ಪ್ರಕಟಿಸಬೇಕು’ ಎಂದು ಬಿಜೆಪಿ ದೆಹಲಿ ಘಟಕವು ಆಗ್ರಹಿಸಿದೆ.

‘ಶಾಂತಿ ಯತ್ನಕ್ಕೆ ಕೊಡುಗೆ ನೀಡಲು ಭಾರತ ಸಿದ್ಧ’

ನವದೆಹಲಿ (ಪಿಟಿಐ): ಉಕ್ರೇನ್ ಸಂಘರ್ಷವನ್ನು ರಾಜತಾಂತ್ರಿಕತೆ ಮತ್ತು ಮಾತುಕತೆಯ ಮೂಲಕ ಪರಿಹರಿಸಲು ಭಾರತವು ಒತ್ತಾಯಿಸುತ್ತಿದೆ ಹಾಗೂ ಯಾವುದೇ ಶಾಂತಿ ಸ್ಥಾಪಿಸುವ ಯತ್ನಕ್ಕೆ ಕೊಡುಗೆ ನೀಡಲು ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಹೇಳಿದ್ದಾರೆ.

ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಜೊತೆ ಮಾತುಕತೆ ನಡೆಸಿದ ಬಳಿಕ ಮೋದಿ ಅವರು ಈ ಹೇಳಿಕೆ ನೀಡಿದ್ದಾರೆ.

ದ್ವಿಪಕ್ಷೀಯ ಸಂಬಂಧ, ಉಕ್ರೇನ್ ಸಂಘರ್ಷ ಸೇರಿದಂತೆ ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳ ಕುರಿತು ಮೋದಿ ಮತ್ತು ಓಲಾಫ್ ಅವರು ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಉಕ್ರೇನ್ ಮೇಲಿನ ರಷ್ಯಾದ ಅತಿಕ್ರಮಣವು ಇಡೀ ಜಗತ್ತಿನ ಮೇಲೆ ಪರಿಣಾಮ ಬೀರಿದೆ. ಹಿಂಸೆಯ ಮೂಲಕ ಯಾರಿಗೂ ಗಡಿಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಓಲಾಫ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತಂದೆಯ ಕನಸು ಈಡೇರಿಸಿದ ಮಗ, ಶಿಕ್ಷಣ ಇಲಾಖೆಯೊಂದಿಗೆ ಒಡಂಬಡಿಕೆ

ಶಾಲಾ ಕೊಠಡಿ ನಿರ್ಮಾಣಕ್ಕೆ ₹ 50 ಲಕ್ಷ ಕೊಡುಗೆ

ಪ್ರಜಾವಾಣಿ ವಾರ್ತೆ

ಒಳ್ಳೆ ಸುದ್ದಿ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕತ್ತರಘಟ್ಟ ಗ್ರಾಮದ ದಿವಂಗತ ಪುಟ್ಟೇಗೌಡರ ಮಗ, ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಕೆ.ಪಿ. ಶಿವಕುಮಾರ್ ಅವರು ಅಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ₹ 50 ಲಕ್ಷ ವೆಚ್ಚದಲ್ಲಿ ಎರಡು ಅಂತಸ್ತಿನ 6 ಕೊಠಡಿ ನಿರ್ಮಿಸಿಕೊಡಲು ಮುಂದಾಗಿದ್ದಾರೆ.

ತಂದೆಯ ಕನಸು ನನಸು ಮಾಡುತ್ತಿರುವ ಅವರು, ತಾಯಿ ಜಯಮ್ಮ ಜೊತೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಜವರೇಗೌಡ, ಬಿಇಒ ಸೀತಾರಾಮು ಅವರೊಂದಿಗೆ ಶುಕ್ರವಾರ ಒಡಂಬಡಿಕೆ ಮಾಡಿಕೊಂಡರು.

ಶಾಲೆಯಲ್ಲಿ 1ನೇ ತರಗತಿಯಿಂದ 7ನೇ ತರಗತಿವರೆಗೆ 60 ವಿದ್ಯಾರ್ಥಿಗಳಿದ್ದಾರೆ. ಎಲ್‌ಕೆಜಿ, ಯುಕೆಜಿ ತರಗತಿಗಳೂ ನಡೆಯುತ್ತಿವೆ. ಹಲವು ದಿನಗಳಿಂದ ಮಕ್ಕಳಿಗೆ ಕೊಠಡಿ ಕೊರತೆ ಇದೆ. ಈಗಿನ ಕಟ್ಟಡದಲ್ಲಿ ಮೂರು ಕೊಠಡಿಗಳು ಶಿಥಿಲವಾಗಿದ್ದು, ಮಳೆಗಾಲದಲ್ಲಿ ನೀರು ನಿಂತು ಗೋಡೆ ಬಿರುಕು ಬಿಟ್ಟಿವೆ.

ಕಟ್ಟಡಗಳನ್ನು ವೀಕ್ಷಿಸಿದ ಶಿವಕುಮಾರ್, ‘ದುರಸ್ತಿ ಮಾಡಿದರೆ ಪ್ರಯೋಜನವಾಗುವುದಿಲ್ಲ; ಹೊಸದಾಗಿ ಕೊಠಡಿ ನಿರ್ಮಿಸಿಕೊಡುತ್ತೇವೆ’ ಎಂದು ಭರವಸೆ ನೀಡಿದ್ದರು. ಅದು ಈಗ ಸಾಕಾರಗೊಳ್ಳುತ್ತಿದ್ದು ಗ್ರಾಮಸ್ಥರು, ಇಲಾಖೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ತಂದೆ ಹುಟ್ಟೂರಿನ ಶಾಲೆಯನ್ನು ಅಭಿವೃದ್ಧಿಪಡಿಸುವ ಕನಸು ಕಂಡಿದ್ದರು. ಅವರ ಕನಸು ನನಸು ಮಾಡುವುದು ನನ್ನ ಜವಾಬ್ದಾರಿ. 6 ಕೊಠಡಿಗಳ ನಿರ್ಮಾಣಕ್ಕೆ ₹ 50 ಲಕ್ಷ ವೆಚ್ಚ ತಗಲುತ್ತದೆ. ಅಷ್ಟೂ ಹಣವನ್ನು ಭರಿಸಲು ಒಪ್ಪಿ ಒಡಂಬಡಿಕೆಗೆ ಸಹಿ ಮಾಡಿದ್ದೇವೆ’ ಎಂದು ಶಿವಕುಮಾರ್ ತಿಳಿಸಿದರು.

‘ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕುಟುಂಬವೊಂದು ₹ 50 ಲಕ್ಷ ನೀಡಿ 6 ಕೊಠಡಿ ನಿರ್ಮಿಸಿಕೊಡುತ್ತಿದೆ. ಸಮಾಜಕ್ಕೆ ಇದು ಸ್ಫೂರ್ತಿಯಾಗಲಿ’ ಎಂದು ಡಿಡಿಪಿಐ ಜವರೇಗೌಡ ಹೇಳಿದರು.

ಕೆ.ಆರ್.ಪೇಟೆ ತಾಲ್ಲೂಕಿನ ಕತ್ತರಘಟ್ಟ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಕೊಠಡಿಗಳ ನಿರ್ಮಾಣಕ್ಕೆ ₹ 50 ಲಕ್ಷ ನೀಡುವ ಒಡಂಬಡಿಕೆ ಪತ್ರವನ್ನು ದಿ.ಪುಟ್ಟೇಗೌಡರ ಪತ್ನಿ ಜಯಮ್ಮ ಅವರಿಗೆ ಡಿಡಿಪಿಐ ಜವರೇಗೌಡ ನೀಡಿದರು

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 26 ಫೆಬ್ರುವರಿ 2023

ಗಂಗಾವತಿ ಬಳಿಯಲ್ಲೊಂದು ಜಲ ಸುರಂಗ

ಗಂಗಾವತಿಯ ಬಳಿಯ ಮಲ್ಲಾಪುರ ಗುಡ್ಡ ಕೊರೆದು ನಿರ್ಮಿಸಿರುವ ಈ ಸುರಂಗ ಕಾಲುವೆ 70 ವರ್ಷಗಳ ಹಿಂದೆ ನಮ್ಮ ಎಂಜಿನಿಯರ್ ಕೌಶಲಕ್ಕೆ ಸಾಕ್ಷಿ. ಆದರೆ, ಈ ಜಲ ಸುರಂಗದ ಕುರಿತು ಹೆಚ್ಚಿನವರಿಗೆ ಗೊತ್ತಿರದಿರುವುದು ಆಶ್ಚರ್ಯ.

ಮಲ್ಲಿಕಾರ್ಜುನ ಹೊಸಪಾಳ್ಯ

ಗಂಗಾವತಿ ಬಳಿಯ ಮಲ್ಲಾಪುರದ ಗುಡ್ಡವನ್ನು ಅರ್ಧ ಹತ್ತಿದ್ದೆವು. ಮರ್ರೋರ್ ಎಂಬ ಶಬ್ದ. ಜೋರಾದ ಗಾಳಿಯೂ ಇಲ್ಲ, ಹತ್ತಿರದಲ್ಲಿ ದೊಡ್ಡ ಮರಗಳೂ ಇಲ್ಲ. ಸುಮ್ಮನೆ ಆಲಿಸಿದಾಗ ಶಬ್ದ ಬರುತ್ತಿದ್ದ ದಿಕ್ಕು ತಿಳಿಯಿತು. ಆ ಕಡೆ ನಡೆದಂತೆಲ್ಲಾ ತುಸುವೇ ದೂರದಲ್ಲಿ ಒಂದು ಚೌಕಾಕಾರದ ಕಲ್ಲಿನ ರಚನೆ. ಬಾವಿ ಇರಬಹುದಾ, ಈ ನಟ್ಟ ನಡುವಿನ ಗುಡ್ಡದಲ್ಲಿ ಬಾವಿ ಯಾಕೆ ತೋಡುತ್ತಾರೆ ಇತ್ಯಾದಿ ಹತ್ತಾರು ಪ್ರಶ್ನೆಗಳು. ಅದರೊಳಗಿಂದ ಸದ್ದು ಬರುತ್ತಿತ್ತು. ನೀರು ರಭಸವಾಗಿ ಹರಿಯುವ ಸದ್ದು. ಕಬ್ಬಿಣದ ಸರಳುಗಳಿಂದ ಮುಚ್ಚಿದ್ದರು. ಗಿಡ-ಗಂಟಿ ಬೆಳೆದಿದ್ದವು. ಇದೇನು ಸೋಜಿಗ ಎಂದು ನೋಡುತ್ತಾ ನಿಂತೆವು.

ಸ್ವಲ್ಪ ಹೊತ್ತಿಗೆ ಆ ದಾರಿಯಲ್ಲಿ ಬಂದ ಸ್ಥಳೀಯರೊಬ್ಬರು ಗುಡ್ಡದ ಆಳದಲ್ಲಿ ಸುರಂಗ ತೋಡಿ ನೀರಿನ ಕಾಲುವೆ ಮಾಡಿದ್ದಾರೆ ಎಂಬ ಮಾಹಿತಿ ನೀಡಿದರು. ಅರೆರೆ ಈ ಗುಡ್ಡದ ಅಡಿಯಲ್ಲಿ ಕಾಲುವೆ ಇದೆಯೇ ಎಂಬ ಆಶ್ಚರ್ಯ ನಮ್ಮದು. ಕಾಲುವೆಯು ಗುಡ್ಡದ ದಕ್ಷಿಣ ದಿಕ್ಕಿನಲ್ಲಿ ಆರಂಭವಾಗಿ ಉತ್ತರದಲ್ಲಿ ತೆರೆದುಕೊಳ್ಳುತ್ತದೆ ಎಂದು ಹೇಳಿದ ಅವರು ಹತ್ತಿರದಲ್ಲೇ ಇರುವ ವಾನಭದ್ರೇಶ್ವರ ದೇವಸ್ಥಾನಕ್ಕೆ ಹೋದರು.

ಕುತೂಹಲದಿಂದ ದಕ್ಷಿಣಕ್ಕೆ ಹೋಗಿ ಗುಡ್ಡದ ಮೇಲಿಂದ ನೋಡಿದರೆ ವಿಶಾಲವಾದ ತುಂಗಭದ್ರಾ ಎಡದಂಡೆ ಕಾಲುವೆಯ ನೋಟ. ಸಾವಧಾನದಿಂದ ಹರಿದು ಬರುವ ನೀರು. ಗುಡ್ಡ ಇಳಿಯುತ್ತಾ ಹೋದರೆ ಕಂಡಿದ್ದೇ 'ಪಾಪಯ್ಯ ಟನಲ್' ಎಂಬ ದೊಡ್ಡ ನಾಮಫಲಕ. ಅಲ್ಲಿಂದಲೇ ಜಲ ಸುರಂಗ ಆರಂಭ. ಸಾವಧಾನದಿಂದ ಹರಿದು ಬರುವ ಕಾಲುವೆ ನೀರು ಸುರಂಗಕ್ಕೆ ತುಸು ದೂರದಲ್ಲಿ ವೇಗ ಪಡೆದುಕೊಂಡು ಗುಡ್ಡದ ಒಡಲಿಗೆ ರಭಸವಾಗಿ ನುಗ್ಗುತ್ತಿತ್ತು. ಇಲ್ಲಿ ಮಾಯವಾದ ನೀರಿನ ರಾಶಿ 1.08 ಕಿಲೋ ಮೀಟರ್ ದೂರ ಗುಡ್ಡದೊಳಗೆ ಸಾಗಿ ಅಷ್ಟೇ ರಭಸವಾಗಿ ಹೊರ ಹೊಮ್ಮುತ್ತಿತ್ತು. ಒಂದು ಎಲೆಯನ್ನು ಹರಿಯುವ ನೀರಿನ ಮೇಲೆ ಎಸೆದರೆ ಕೆಲವೇ ಕ್ಷಣಗಳಲ್ಲಿ ತೇಲಿಕೊಂಡು ಮುಂದೆ ಹೋಗುತ್ತಿತ್ತು.

ಅಂದಹಾಗೆ ಈ ಜಲ ಸುರಂಗಕ್ಕೆ ಎಪ್ಪತ್ತು ವರ್ಷಗಳ ಇತಿಹಾಸವಿದೆ. 1956-60ರ ಅವಧಿಯಲ್ಲಿ ಇದನ್ನು ನಿರ್ಮಿಸಲಾಗಿದೆ. ತುಂಗಭದ್ರಾ ಜಲಾಶಯಕ್ಕೆ ನಿರ್ಮಿಸಿರುವ ಎಡದಂಡೆ ಮುಖ್ಯ ಕಾಲುವೆಯ 19ನೇ ಮೈಲಿಯ ಬಳಿ ಈ ಸುರಂಗ ತೋಡಲಾಗಿದ್ದು, ಒಟ್ಟು 226 ಕಿಲೋಮೀಟರ್ ಉದ್ದದ ಎಡದಂಡೆ ಕಾಲುವೆ ಹರಿವಿನಲ್ಲಿ ಬರುವ ಏಕೈಕ ಸುರಂಗ ಜಲ ಮಾರ್ಗ ಇದು. ಈಗಾಗಲೇ ಹೇಳಿದಂತೆ ಸುರಂಗದ ಉದ್ದ 1.08 ಕಿಲೋ ಮೀಟರ್, ಅಗಲ 22 ಅಡಿ ಹಾಗೂ ಆಳ 19 ಅಡಿಗಳಷ್ಟಿದೆ.

ಈ ಕಾಲುವೆ ಹಾಗೂ ಸುರಂಗ ನಿರ್ಮಾಣದ ಮೇಲ್ವಿಚಾರಣೆ ನಡೆಸುತ್ತಿದ್ದವರು ಆಗಿನ ಮುಖ್ಯ ಎಂಜಿನಿಯರ್ ಪಿ. ಪಾಪಯ್ಯ. ಯಾವುದೇ ಬೃಹತ್ ಯಂತ್ರಗಳು ಇಲ್ಲದಿದ್ದ 1950ರ ದಶಕದಲ್ಲಿ ಇದನ್ನು ನಿರ್ಮಿಸಿರುವುದು ಸಾಹಸವೇ ಸರಿ. ಗಟ್ಟಿ ಗ್ರಾನೈಟ್ ಹಾಗೂ ಸಿಸ್ಟ್ ಶಿಲಾವಲಯದಲ್ಲಿ ಕೊರೆಯಲಾಗಿರುವ ಈ ಜಲ ಸುರಂಗವನ್ನು ಕಾಲುವೆ ನೀರಾವರಿಯ ಅಚ್ಚರಿ ಎನ್ನಬಹುದು.

ಎಡದಂಡೆ ಕಾಲುವೆಯ ಶುರುವಿನಲ್ಲೇ ಎದುರಾದ ಈ ಗುಡ್ಡವನ್ನು ಹಾಯ್ದು ನೀರನ್ನು ರಾಯಚೂರುವರೆಗೂ ಸಾಗಿಸಬೇಕಿತ್ತು. ಸುರಂಗಕ್ಕೆ ಬದಲಾಗಿ ಗುಡ್ಡವನ್ನು ಬಳಸಿಕೊಂಡು ಭೂಮಿಯ ಮೇಲ್ಮೈನಲ್ಲೇ ಕಾಲುವೆ ಮಾಡಿದ್ದರೆ ಸೂಕ್ತ ಎಲಿವೇಶನ್ ದೊರೆಯುತ್ತಿರಲಿಲ್ಲ. ಅದಕ್ಕಾಗಿಯೇ ಪಾಪಯ್ಯ ಮತ್ತು ಅವರ ತಂಡವು ಸುರಂಗ ತೋಡುವ ತೀರ್ಮಾನಕ್ಕೆ ಬಂದಿರುವುದು ಸ್ಪಷ್ಟ. ಇಂತಹ ಕಠಿಣ ತೀರ್ಮಾನ ತೆಗೆದುಕೊಂಡಿರುವುದರಿಂದಲೇ ತುಂಗಭದ್ರಾ ಎಡದಂಡೆ ಕಾಲುವೆಯು ಕೊಪ್ಪಳ, ರಾಯಚೂರು ಜಿಲ್ಲೆಗಳ ಸುಮಾರು ಆರು ಲಕ್ಷ ಎಕರೆ ಪ್ರದೇಶಕ್ಕೆ ನೀರುಣಿಸುವಂತಾಗಿದೆ. ಪಾಪಯ್ಯನವರ ಸೇವೆಯನ್ನು ಪರಿಗಣಿಸಿ ಜಲ ಸುರಂಗ ಮಾರ್ಗಕ್ಕೆ ಅವರ ಹೆಸರನ್ನೇ ಇಟ್ಟಿರುವುದು ಅರ್ಥಪೂರ್ಣ.

ಸುರಂಗ ಮಾರ್ಗದ ಅರ್ಧ ದಾರಿಯಲ್ಲಿ ಗಾಳಿಯ ಒತ್ತಡ ಹೊರ ಹೋಗಲು ನಿರ್ಮಾಣದ ಸಮಯದಲ್ಲಿ ಬೃಹತ್ ಗವಾಕ್ಷಿ ತೆಗೆಯಲಾಗಿದೆ. ಲೇಖನದ ಶುರುವಿನಲ್ಲಿ ಪ್ರಸ್ತಾಪವಾಗಿರುವುದು ಇದೇ. ಸುರಂಗವನ್ನು ಕೊರೆದಿರುವ ವಾನಭದ್ರೇಶ್ವರ ಗುಡ್ಡವು ಪ್ರಾಗೈತಿಹಾಸ ಕಾಲದಿಂದಲೂ ಪ್ರಾಮುಖ್ಯ ಪಡೆದಿದೆ ಎಂದು ಇತಿಹಾಸದ ದಾಖಲೆಗಳಿಂದ ತಿಳಿದುಬರುತ್ತದೆ. ನವಶಿಲಾಯುಗದ ಹಲವು ಕುರುಹುಗಳು ಇಲ್ಲಿ ಉತ್ಖನನಗೊಂಡಿವೆ. ಆಧುನಿಕ ಯುಗದಲ್ಲಿ ಜಲಸುರಂಗವೂ ಜತೆಯಾಗಿ ಗುಡ್ಡದ ಪ್ರಾಮುಖ್ಯವನ್ನು ಹೆಚ್ಚಿಸಿದೆ.

ಇದಕ್ಕೆ ಗಂಗಾವತಿಯಿಂದ ಪಶ್ಚಿಮಕ್ಕೆ ಕೇವಲ ಆರು ಕಿಲೋಮೀಟರ್ ದೂರದಲ್ಲಿದ್ದರೂ ಹೆಚ್ಚಿನ ಪ್ರಚಾರ ದೊರಕಿಲ್ಲ. ಹಾಗಾಗಿ ಪ್ರವಾಸಿಗರ ಸಂಖ್ಯೆಯೂ ಕಡಿಮೆ. ಅಲ್ಲದೆ ಜಲ ಸುರಂಗದ ಬಳಿ ಅದರ ವಿವರಗಳನ್ನು ತಿಳಿಸುವ ನಾಮಫಲಕವಿಲ್ಲ. ಉತ್ತರ ದಿಕ್ಕಿನಲ್ಲಿ ತುಂಬಾ ಹಳೆಯ ನಾಮಫಲಕವಿದ್ದು ಸಂಪೂರ್ಣ ಶಿಥಿಲವಾಗಿದೆ. ಕಾಲುವೆಯ ನಿರ್ವಹಣೆ ಮಾಡುತ್ತಿರುವ ತುಂಗಭದ್ರಾ ಬೋರ್ಡ್ ಅಥವಾ ನೀರಾವರಿ ನಿಗಮ ಇತ್ತ ಗಮನಹರಿಸಬೇಕು.

ಕರ್ನಾಟಕದಲ್ಲಿ ಹಲವು ಜಲಸುರಂಗ ಮಾರ್ಗಗಳಿವೆ. ಮಂಡ್ಯ ಬಳಿಯ ಹುಲಿಕೆರೆ ಜಲ ಸುರಂಗವು 1930ರಲ್ಲಿಯೇ ನಿರ್ಮಾಣವಾಗಿದ್ದು ಮಧ್ಯ ಏಷ್ಯಾದ ಮೊದಲ ಸುರಂಗವೆಂಬ ಹೆಗ್ಗಳಿಕೆ ಪಡೆದಿದೆ. ಆ ಕಾಲದಲ್ಲಿಯೇ ಗುಡ್ಡ ಕೊರೆದು 2.8 ಕಿಲೋಮೀಟರ್ ಉದ್ದದ ಕಾಲುವೆ ನಿರ್ಮಾಣ ಮಾಡಿರುವುದು ವಿಶೇಷ. ಹಾಗೆಯೇ 1979-1990ರ ಅವಧಿಯಲ್ಲಿ ಹೇಮಾವತಿ ನಾಲೆಗೆ ನಿರ್ಮಿಸಿರುವ ಬಾಗೂರು-ನವಿಲೆ ಸುರಂಗವು ರಾಜ್ಯದ ಉದ್ದದ ಜಲ ಮಾರ್ಗವಾಗಿದ್ದು 9.7 ಕಿಲೋಮೀಟರ್ ಉದ್ದ ಇದೆ. ಭದ್ರಾ ಮೇಲ್ದಂಡೆ ಕಾಲುವೆಗೆ ತರೀಕೆರೆ ಬಳಿ ಏಳು ಕಿಲೋಮೀಟರ್ ಉದ್ದದ ಸುರಂಗವನ್ನು ಇತ್ತೀಚೆಗಷ್ಟೇ ನಿರ್ಮಿಸಲಾಗಿದೆ.

ಆಸ್ಕರ್ ಪ್ರಶಸ್ತಿಯ ಮೇಲೆ ಹದ್ದಿನ ಕಣ್ಣು

ಗಿರಿಧರ್ ಖಾಸನೀಸ್

'ಆಲ್ ದಟ್ ಬ್ರೀತ್ಸ್' (All That Breathes) ಚಿತ್ರ ಕಳೆದ ಒಂದು ವರ್ಷದಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಲ್ಲಿದೆ. ಜನವರಿ 2022ರಲ್ಲಿ ಸನ್‌ಡಾನ್ಸ್ ಫೆಸ್ಟಿವಲ್‌ನಲ್ಲಿ (Sundance Festival) ಗ್ರ್ಯಾಂಡ್ ಜ್ಯೂರಿ ಪ್ರಶಸ್ತಿಯನ್ನು ಗೆದ್ದ ನಂತರ ಕ್ಯಾನ್ ಚಿತ್ರೋತ್ಸವದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರಕ್ಕಾಗಿ ಪ್ರತಿಷ್ಠಿತ L'Oeil d'Or (ಗೋಲ್ಡನ್ ಐ)ಅನ್ನು ಪಡೆದುಕೊಳ್ಳಲು ಮುಂದಾಯಿತು. ಈಗ ಎಲ್ಲರ ಕಣ್ಣುಗಳು ಮಾರ್ಚ್ 12ರ ಮೇಲಿದೆ. ಅಂದು ಆಸ್ಕರ್ ಪ್ರಶಸ್ತಿಯ ಘೋಷಣೆಯಾಗಲಿದೆ. ಪ್ರಶಸ್ತಿ ಗೆಲ್ಲಲು 'ಆಲ್ ದಟ್ ಬ್ರೀತ್ಸ್' ಚಿತ್ರವು ಪ್ರಬಲ ಸ್ಪರ್ಧಿಯಾಗಿದೆ.

ಭವಿಷ್ಯದ ಫಲಿತಾಂಶಗಳು ಹೇಗಾದರೂ ಇರಲಿ, 91-ನಿಮಿಷಗಳ 'ಆಲ್ ದಟ್ ಬ್ರೀತ್ಸ್' ಈಗಾಗಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿ ಆಗಿದೆ. 'ಷಿಕಾಗೊ ರೀಡರ್' ದಿನಪತ್ರಿಕೆ ಚಿತ್ರವನ್ನು 'ಏರುತ್ತಿರುವ ದೃಶ್ಯ ಮೇರುಕೃತಿ' (A soaring visual masterpiece) ಎಂದು ಶ್ಲಾಘಿಸಿದರೆ, ಗಾರ್ಡಿಯನ್ ಪತ್ರಿಕೆ ಇದನ್ನು 'ದೆಹಲಿಯ ಕಲುಷಿತ ಆಕಾಶದಿಂದ ಬೀಳುವ ಬೇಟೆಯ ಪಕ್ಷಿಗಳನ್ನು ರಕ್ಷಿಸುವ ಇಬ್ಬರು ಸಹೋದರರ ಶ್ರಮದ ಬಗ್ಗೆ ಒಂದು ಪ್ರಕಾಶಮಾನವಾದ ಸಾಕ್ಷ್ಯಚಿತ್ರ' ಎಂದು ಕೊಂಡಾಡಿದೆ.

L'Oeil d'Or ತೀರ್ಪುಗಾರರ ಅಭಿಪ್ರಾಯ ಹೀಗಿದೆ: 'ವಿನಾಶದ ಜಗತ್ತಿನಲ್ಲಿ, ಪ್ರತಿ ಜೀವವು ಮುಖ್ಯ, ಪ್ರತಿಯೊಂದು ಸಣ್ಣ ಕ್ರಿಯೆಯೂ ಮುಖ್ಯ ಎಂದು 'ಆಲ್ ದಟ್ ಬ್ರೀತ್ಸ್' ಚಿತ್ರ ನಮಗೆ ನೆನಪಿಸುತ್ತದೆ... ಇದು ಮೂರು ಯುವಕರ ಸ್ಫೂರ್ತಿದಾಯಕ ಪ್ರಯಾಣವಾಗಿದೆ. ಅವರು ಸಂಪೂರ್ಣ ಜಗತ್ತನ್ನು ಉಳಿಸದಿರಬಹುದು; ಆದರೆ ತಮ್ಮ ಜಗತ್ತನ್ನು ಸಂರಕ್ಷಿಸಿಕೊಂಡಿದ್ದಾರೆ.'

'ಆಲ್ ದಟ್ ಬ್ರೀತ್ಸ್' ಚಿತ್ರದ ಮುಖ್ಯ ಪಾತ್ರಧಾರಿಗಳೆಂದರೆ ಸಹೋದರರಾದ ಮೊಹಮ್ಮದ್ ಸೌದ್ ಮತ್ತು ನದೀಮ್ ಶಹಜಾದಾಸ್ ಹಾಗೂ ಅವರ ಯುವ ಸಹಾಯಕ ಸಲಿಕ್ ರೆಹಮಾನ್. ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಈ ಮುಸ್ಲಿಂ ಸಹೋದರರು ದೆಹಲಿಯ ವಜೀರಾಬಾದ್ ಗ್ರಾಮದಲ್ಲಿ Wildlife Rescue ಎಂಬ ಸರ್ಕಾರೇತರ ಸಂಸ್ಥೆ ನಡೆಸುತ್ತಿದ್ದಾರೆ. ಅದರ ಮೂಲಕ ದೆಹಲಿಯಲ್ಲಿ ಸಾವಿರಾರು ಕಪ್ಪು ಹದ್ದುಗಳನ್ನು (kites) ರಕ್ಷಿಸಿದ್ದಾರೆ. ನಿರ್ದೇಶಕ ಶೌನಕ್ ಸೇನ್ (35) ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪಡೆದ ಚಲನಚಿತ್ರ ವಿದ್ವಾಂಸರು. ಬಳಲುತ್ತಿರುವ ಹದ್ದುಗಳು ಮತ್ತು ಸಂರಕ್ಷಕ ಸಹೋದರರ ನಡುವಿನ ದೈಹಿಕ ಮತ್ತು ಭಾವನಾತ್ಮಕ ಸಂಪರ್ಕವನ್ನು ದಾಖಲಿಸಿ ಸೆರೆಹಿಡಿಯಲು ಮೂರು ವರ್ಷ ಕಳೆದಿದ್ದಾರೆ. 'ಒಂದು ಬದಿಯಲ್ಲಿ ಕೈಗಾರಿಕಾ ಕೊಳಕು ಮತ್ತು ಇನ್ನೊಂದೆಡೆ ಸುಂದರವಾದ ರಾಜ ಪಕ್ಷಿಗಳಿರುವ ಸಣ್ಣ ತೇವ ನೆಲಮಾಳಿಗೆಯಲ್ಲಿ ನಾನು ಸಹೋದರರನ್ನು ಭೇಟಿಯಾದೆ. ಆ ಕ್ಷಣವೇ ಇದೊಂದು ಸಿನಿಮೀಯ ಸ್ಥಳ ಎಂದು ನನಗೆ ಅರ್ಥವಾಯಿತು' ಎಂದು ಸೇನ್ ನೆನಪಿಸಿಕೊಳ್ಳುತ್ತಾರೆ. 'ನಾನು ಅವರ ಬಗ್ಗೆ ಚಿತ್ರ ಮಾಡಲು ನಿರ್ಧರಿಸಿ, ಮುಂದಿನ ಮೂರು ವರ್ಷಗಳವರೆಗೆ ನಂಬಲಾಗದ ಆವೇಗದೊಂದಿಗೆ ಕೆಲಸ ಮಾಡಿದೆ' ಎಂದೂ ಅವರು ಹೇಳುತ್ತಾರೆ.

ಸೇನ್ ಅವರ ಪ್ರಯತ್ನಕ್ಕೆ ಉತ್ತಮ ಪ್ರತಿಫಲ ಸಿಕ್ಕಿದೆ. ಅಂತರರಾಷ್ಟ್ರೀಯ ಸರ್ಕ್ಯೂಟ್‌ಗಳಲ್ಲಿ 'ಆಲ್ ದಟ್ ಬ್ರೀತ್ಸ್' ಅನೇಕ ಪ್ರದರ್ಶನಗಳನ್ನು ಕಂಡಿದೆ. ಜೊತೆಗೆ, ನಿರ್ದೇಶಕರು ಮತ್ತು ಅದರ ಪ್ರಮುಖ ಪಾತ್ರಧಾರಿಗಳು ವ್ಯಾಪಕವಾಗಿ ದೇಶ ವಿದೇಶಗಳನ್ನು ಸುತ್ತಲೂ ಅವಕಾಶ ಸಿಕ್ಕಿದೆ... 'ಹನ್ನೊಂದು ದಿನಗಳಲ್ಲಿ ಐದು ಮಹಾನಗರಗಳನ್ನು - ಬರ್ಲಿನ್, ಕೋಪನ್ ಹೇಗನ್, ಜ್ಯೂರಿಚ್, ಲಂಡನ್ ಮತ್ತು ನ್ಯೂಯಾರ್ಕ್ – ಸುತ್ತಬೇಕಾಯಿತು' ಎನ್ನುತ್ತಾರೆ ಸೇನ್.

ಮೊದಲಿನಿಂದಲೂ ಚಿತ್ರ 'ಏನಾಗಬಾರದು' ಎಂಬುದರ ಬಗ್ಗೆ ನನಗೆ ಖಚಿತವಾಗಿತ್ತು ಎನ್ನುತ್ತಾರೆ ಸೇನ್. ನಮ್ಮ ಚಿತ್ರ ಒಂದು ಆತಂಕ ತರುವ ಅಥವಾ ಪ್ರಕ್ಷುಬ್ಧವಾದ ಚಿತ್ರವಾಗಿರಬಾರದು. ಅತೀ ಭಾವನಾತ್ಮಕತೆಯನ್ನು ಹೊಂದಿರಬಾರದು. ಎಲ್ಲಕ್ಕಿಂತ ಹೆಚ್ಚಾಗಿ, ಇದು ಒಳ್ಳೆಯ ಜನರು, ಒಳ್ಳೆಯ ಕೆಲಸಗಳನ್ನು ಮಾಡುವುದನ್ನಷ್ಟೇ ತೋರಿಸುವ ಸಿಹಿ ಚಿತ್ರವಾಗಿರಬಾರದು! ಬದಲಾಗಿ, ಚಿತ್ರವು ಕಾವ್ಯಾತ್ಮಕವಾಗಿರಬೇಕು ಹಾಗೂ ಚಿಂತನಶೀಲ ಗುಣವನ್ನು ಹೊಂದಿರಬೇಕು. ನಗರದಲ್ಲಿನ ನಡವಳಿಕೆಯ ಬದಲಾವಣೆಗಳು ಗೋಚರಿಸಬೇಕು. ನಗರದ ಜೀವನವನ್ನು ಒಂದು ದೊಡ್ಡದಾದ ಕ್ಯಾನ್‌ವಾಸ್‌ನಲ್ಲಿ ಬಿಚ್ಚಿಡಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು' ಎಂದು ಸೇನ್ ಹೇಳುತ್ತಾರೆ.

ಅಪರೂಪದ ವಿಷಯ, ಅದ್ಭುತ ನಿರೂಪಣೆಯನ್ನು ಹೊಂದಿರುವ 'ಆಲ್ ದಟ್ ಬ್ರೀತ್ಸ್' ಚಿತ್ರದಲ್ಲಿ ನಂಬಲು ಕಷ್ಟವಾಗುವ ಮತ್ತು ಅತಿವಾಸ್ತವಿಕ ಎನ್ನಬಹುದಾದ ಅನೇಕ ಕ್ಷಣಗಳಿವೆ. ರಟ್ಟಿನ ಪೆಟ್ಟಿಗೆಗಳಲ್ಲಿ ತರಲಾದ ಅನಾರೋಗ್ಯ ಪೀಡಿತ ಮತ್ತು ಗಾಯಗೊಂಡ ಪಕ್ಷಿಗಳ ಕ್ಲೋಸ್-ಅಪ್‌ಗಳು ಮನವನ್ನು ಕಲಕುತ್ತವೆ. 'ಪಕ್ಷಿಗಳ ನಡವಳಿಕೆ ವಿಶಿಷ್ಟ. ನಾವು ಹಾಕುವ ಲೆಕ್ಕಾಚಾರಗಳಿಗೆ ಅವು ಮಣೆ ಹಾಕುವುದಿಲ್ಲ. ಆದ್ದರಿಂದ ನಮಗೆ ಸತತವಾಗಿ ಆಶ್ಚರ್ಯವಾಗುವ ಸನ್ನಿವೇಶಗಳು ಎದುರಾಗುವ ಸಾಧ್ಯತೆಗಳು ಇದ್ದೇ ಇರುತ್ತವೆ. ಸರಿಯಾದ ಸ್ಥಳದಲ್ಲಿ, ಸರಿಯಾದ ಸಮಯದಲ್ಲಿ ನಾವು ಇದ್ದರೆ ಸಾಕು, ವಿಸ್ಮಯಗಳು ತಮಗೆ ತಾವೇ ನಮ್ಮ ಮುಂದೆ ನಿಲ್ಲುತ್ತವೆ' ಎಂದು ಸೇನ್ ವಿವರಿಸುತ್ತಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಅರ್ಬನ್ ಲೆನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಕಿಕ್ಕಿರಿದ ವೀಕ್ಷಕರ ಮುಂದೆ 'ಆಲ್ ದಟ್ ಬ್ರೀತ್ಸ್' ಚಿತ್ರವನ್ನು ಪ್ರದರ್ಶಿಸಲಾಯಿತು.



ರಂಜನಿ – ಗಾಯತ್ರಿ ಸಹೋದರಿಯರು

ರಂಜನೆಯ 'ರಾಗಾ' ಸ್ವರಯಾನ

ಉಮಾ ಅನಂತ್

ಕರ್ನಾಟಕ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿರುವ ರಂಜನಿ–ಗಾಯತ್ರಿ ಸಹೋದರಿಯರ ಕಛೇರಿ ಎಂದರೆ ಅದೊಂದು ರಸದೌತಣ. 'ಸಾಮಗಾನ ಮಾತಂಗ' ಗೌರವಕ್ಕೆ ಪಾತ್ರರಾದ ಈ ಸಹೋದರಿಯರ ಜೊತೆಗೊಂದು ಮಾತುಕತೆ...

ರಂಜನಿ–ಗಾಯತ್ರಿ... (RaGa sisters) ಕರ್ನಾಟಕ ಶಾಸ್ತ್ರೀಯ ಸಂಗೀತ ಕೇಳುಗರಿಗೆ ಈ ಸಿರಿಕಂಠದ ಜೋಡಿಯ ಹೆಸರು ಚಿರಪರಿಚಿತ. ಇವರ ಯುಗಳ ಗಾಯನ ಜಗತ್ಪ್ರಸಿದ್ಧ. ಇವರು ರಾಗಗಳ ಸ್ವರಮಾಲೆ ಪೋಣಿಸಿದರೆಂದರೆ ಕಛೇರಿ ಮುಗಿದರೂ ಮನದಲ್ಲಿ ರಾಗಗಳದ್ದೇ ಗುಂಗು. ರಾಗ–ತಾನ–ಪಲ್ಲವಿ ಹಾಡುವುದನ್ನು ಕೇಳುವುದೇ ಪರಮಾನಂದ. ಚೆನ್ನೈಯಲ್ಲಿ ನೆಲೆಸಿರುವ ಈ ಸಹೋದರಿಯರು, ಎಳೆಯ ವಯಸ್ಸಿನಲ್ಲೇ ಸಂಗೀತದಲ್ಲಿ ಪಕ್ವತೆ ಸಾಧಿಸಿದವರು.

ದೇಶ ವಿದೇಶಗಳಲ್ಲಿ ಸಂಗೀತದ ಕಂಪನ್ನು ಪಸರಿಸಿದ ಈ ಅಕ್ಕತಂಗಿಯರಿಗೆ ಇದೀಗ ಬೆಂಗಳೂರಿನ 'ಭಾರತೀಯ ಸಾಮಗಾನ ಸಂಗೀತ ಸಭಾ' ನೀಡುವ ಪ್ರತಿಷ್ಠಿತ 'ಸಾಮಗಾನ ಮಾತಂಗ' ಪ್ರಶಸ್ತಿಯ ಗರಿ. ಈ ಹಿನ್ನೆಲೆಯಲ್ಲಿ ರಂಜನಿ–ಗಾಯತ್ರಿ 'ಪ್ರಜಾವಾಣಿ'ಯೊಂದಿಗೆ ತಮ್ಮ ಸ್ವರಯಾನದ ಬಗ್ಗೆ ಮಾತುಕತೆ ನಡೆಸಿದರು.

ಈ ಯುಗಳ ಸಹೋದರಿಯರು ವಿಶ್ವವೇದಿಕೆವರೆಗೆ ಹೋದದ್ದು ಗಾಯಕಿಯರಾಗಿ. ಗಾಯನ ಕಲಿಕೆಗೂ ಮುನ್ನ ಇಬ್ಬರೂ ಪಿಟೀಲು ವಾದಕಿಯರಾಗಿದ್ದರು. ಹದಿಹರೆಯದಲ್ಲೇ ಘಟಾನುಘಟಿ ಕಲಾವಿದರಾಗಿದ್ದ ಡಿ.ಕೆ. ಪಟ್ಟಮ್ಮಾಳ್, ಬಾಲಮುರಳಿಕೃಷ್ಣ, ಟಿ. ವಿಶ್ವನಾಥನ್‌ನಂಥವರಿಗೆ ಪಿಟೀಲು ಪಕ್ಕವಾದ್ಯ ನುಡಿಸಿ ಸೈ ಎನಿಸಿಕೊಂಡವರು. ಹಾಗಾದರೆ ಈ ವಿದುಷಿಯರ ಸಂಗೀತ ಜೀವನ ಗಾಯಕಿಯರಾಗಿ ತಿರುವು ಪಡೆದುಕೊಂಡದ್ದು ಹೇಗೆ?

ರಂಜನಿ–ಗಾಯತ್ರಿ ಅವರ ಮಾತುಗಳಲ್ಲೇ ಕೇಳೋಣ.

ನಮ್ಮ ಮನೆಯಲ್ಲಿ ಚಿಕ್ಕ ವಯಸ್ಸಿನಲ್ಲೇ ಸಂಗೀತದ ವಾತಾವರಣ ಇತ್ತು. ಮುಂಬೈಯಲ್ಲಿ ಹುಟ್ಟಿ ಬೆಳೆದದ್ದು. ನಮ್ಮ ತಂದೆ ಎನ್. ಬಾಲಸುಬ್ರಹ್ಮಣ್ಯನ್, ತಾಯಿ ಮೀನಾಕ್ಷಿ ಇಬ್ಬರಿಗೂ ಸಂಗೀತದಲ್ಲಿ ಅಪರಿಮಿತ ಆಸಕ್ತಿ. ಆದರೆ, ಇವರಿಬ್ಬರೂ ಶಾಸ್ತ್ರೀಯವಾಗಿ ಸಂಗೀತ ಕಲಿತವರಲ್ಲ. ತಂದೆ ವಿಶ್ವಸಂಸ್ಥೆಯಲ್ಲಿ (United Nations) ವೃತ್ತಿಯಲ್ಲಿದ್ದರೆ, ತಾಯಿ ಅಧ್ಯಾಪಕಿ. ಮುಂಬೈಯಲ್ಲಿ ನಡೆಯುತ್ತಿದ್ದ ಎಲ್ಲ ಸಂಗೀತ ಕಛೇರಿಗಳಿಗೂ ಅಪ್ಪ ನಮ್ಮನ್ನು ಕರೆದುಕೊಂಡು ಹೋಗಿ ಸಂಗೀತದಲ್ಲಿ ಹೆಚ್ಚು ಆಸಕ್ತಿ ಬರುವಂತೆ ಮಾಡುತ್ತಿದ್ದರು. ಅವರಿಗೆ ಸಂಗೀತ ಎಂಬುದು 'ಪ್ಯಾಶನ್'. ಆಗ ಮುಂಬೈಯಲ್ಲಿ ಹಿಂದೂಸ್ತಾನಿ ಸಂಗೀತವೇ ಹೆಚ್ಚು ಪ್ರಚಲಿತದಲ್ಲಿತ್ತು. ಅಲ್ಲಲ್ಲಿ ಕರ್ನಾಟಕ ಸಂಗೀತವೂ ಇರುತ್ತಿತ್ತು.

ಮೊದಲು ಹನ್ನೆರಡು ವರ್ಷ ಪಿಟೀಲು ಕಲಿತೆವು. ಮುಂದೆ ಮುಂಬೈಯಿಂದ ಚೆನ್ನೈಗೆ ಬಂದು ನೆಲೆಸ ಬೇಕಾಯಿತು. ಆಗ ನಮ್ಮ ಗುರು ವಿದ್ವಾನ್ ಪಿ.ಎಸ್. ನಾರಾಯಣಸ್ವಾಮಿ ಅವರು ನಮಗೆ ಹಾಡುವಂತೆ ಹೇಳುತ್ತಿದ್ದರು. ಒಮ್ಮೆ ಚೆನ್ನೈಯಲ್ಲಿ ಒಂದು ಸಂಗೀತ ಕಛೇರಿ ಏರ್ಪಡಿಸಿ ನಮ್ಮನ್ನು ಹಾಡಲು ಹೇಳಿದರು. ಈ ಅನಿರೀಕ್ಷಿತ ಆಹ್ವಾನದಿಂದ ನಾವು ಮೊದಲು ತಬ್ಬಿಬ್ಬಾದರೂ ಸಿಕ್ಕಿದ ಅವಕಾಶ ಬಿಡಲಿಲ್ಲ. ಇಬ್ಬರೂ ಯುಗಳ ಕಛೇರಿ ನೀಡಿದೆವು. ಇದು ಎಲ್ಲರಿಗೂ ಇಷ್ಟವಾಯಿತು. ಇಲ್ಲಿಂದ ಮುಂದೆ ನಾವು ಗಾಯಕಿಯರಾಗಿಯೇ ಮುಂದುವರೆದೆವು. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಈ ಹಂತ ತಲುಪಲು ನಮ್ಮ ಗುರುಗಳೇ ಕಾರಣ.

ಸ್ಮರಣೀಯಂ...!: ಕಲಾವಿದರ ಬದುಕಿನಲ್ಲಿ ಅನೇಕ ಸ್ಮರಣೀಯ ಘಟನೆಗಳು ಜರುಗುತ್ತಲೇ ಇರುತ್ತವೆ. ನಮ್ಮ ಮೊದಲ ಪರಿಪೂರ್ಣ ಸಾರ್ವಜನಿಕ ಕಛೇರಿಯಲ್ಲಿ ಆದ ಅನುಭವ ನಮಗೆಂದಿಗೂ ಸ್ಮರಣೀಯ. ಇದು ನಮ್ಮೆಲ್ಲ ಕಛೇರಿಗಳಿಗೆ ದಾರಿದೀಪವೂ ಹೌದು. ಅದು 1986ನೇ ಇಸವಿ. ನನಗಾಗ (ರಂಜನಿ) ಹದಿಮೂರು ವರ್ಷ. ಗಾಯತ್ರಿಗೆ 10 ವರ್ಷ. ಚೆನ್ನೈಯ 'ಇಂಡಿಯನ್ ಮ್ಯೂಸಿಕ್ ಗ್ರೂಪ್' ಸಂಘಟಿಸಿದ ಯೂತ್ ಫೆಸ್ಟಿವಲ್‌ನಲ್ಲಿ ನಮಗೆ ಅವಕಾಶ ಸಿಕ್ಕಿತು. ಮೂರು ದಿನಗಳ ಸಂಗೀತೋತ್ಸವ ಅದು. ನಾವಿಬ್ಬರೂ ಪಿಟೀಲು ಕಛೇರಿ ನಡೆಸಿಕೊಟ್ಟೆವು. ಮರುದಿನ ಆಂಗ್ಲ ಪತ್ರಿಕೆಯೊಂದರಲ್ಲಿ ನಮ್ಮ ಕಛೇರಿಯ ಸುದ್ದಿ ಮುಖಪುಟದಲ್ಲೇ ಬಂತು.

12ನೇ ಪುಟಕ್ಕೆ...

ಕೇರಳದ ರಂಗ ಮೇಳ

ಜಗದ ಮಾನವೀಯತೆ ಹುಡುಕಾಟದ ಕುಂಭಮೇಳ

ಜಿ.ಎನ್. ಮೋಹನ್

'ವಯಸ್ಸಾದವರು ಮಕ್ಕಳು ಬರಬೇಡಿ, ಹೃದಯದ ಸಮಸ್ಯೆ ಇರುವವರು, ಹೆಚ್ಚಿನ ಬಿ.ಪಿ. ಇರುವವರು ದಯವಿಟ್ಟು ದೂರವಿರಿ, ಸ್ಟಂಟ್ ಹಾಕಿಸಿಕೊಂಡವರು ಬರುವುದು ಒಳ್ಳೆಯದಲ್ಲ' ಎನ್ನುವ ಘೋಷಣೆ ಮೇಲಿಂದ ಮೇಲೆ ಕೇಳಿ ಬರುತ್ತಿತ್ತು. ಅದೇ ವೇಳೆ ಆಂಬುಲೆನ್ಸ್‌ಗಳು ಆ ಘೋಷಣೆ ಮಾಡುತ್ತಿದ್ದ ಜಾಗಕ್ಕೆ ಬಂದು ಆಯಕಟ್ಟಿನ ಜಾಗದಲ್ಲಿ ನಿಂತವು. ಡಾಕ್ಟರ್‌ಗಳು ತಮ್ಮ ಕಿಟ್‌ಗಳ ಸಮೇತ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ಆರಂಭಿಸಿದರು.

ಖಂಡಿತಾ ಇದು ಯಾವುದೇ ಅವಘಡ ಸಂಭವಿಸಿದ ಜಾಗವಾಗಿರಲಿಲ್ಲ, ಭೂ ಕುಸಿತವೂ ಉಂಟಾಗಿರಲಿಲ್ಲ, ಅಪಾಯಕಾರಿ ಸಾಹಸಕ್ರೀಡೆಯ ಜಾಗವಂತೂ ಅಲ್ಲವೇ ಅಲ್ಲ. ಇದು ಕೇರಳ ಸಂಗೀತ ನಾಟಕ ಅಕಾಡೆಮಿಯ ಆವರಣದಲ್ಲಿ ಹಮ್ಮಿಕೊಂಡಿದ್ದ ನಾಟಕ ನೋಡಲು ಯಾರು ಬರಬಹುದು ಎಂದು ನೀಡುತ್ತಿದ್ದ ಸೂಚನೆಯಾಗಿತ್ತು.

ಆ ವೇಳೆಗಾಗಲೇ ಇಟಲಿಯಿಂದ ಬಂದಿಳಿದಿದ್ದ 'ಥರ್ಡ್ ರೀಚ್' ನಾಟಕ ನೋಡಲು ಸಾವಿರಾರು ಜನ ಉದ್ದೋ ಉದ್ದನೆಯ ಸರತಿ ಸಾಲಿನಲ್ಲಿ ನಿಂತಿದ್ದರು. ಹಾಗೆ ಒಂದು ಗಂಟೆಗೂ ಹೆಚ್ಚು ಕಾಲ ನಿಂತಿದ್ದ ನನಗೂ, ಹೊನ್ನಾವರದ ಕಿರಣ್ ಭಟ್‌ರಿಗೂ ಆಶ್ಚರ್ಯವೋ ಆಶ್ಚರ್ಯ. ನಾಟಕ ನೋಡಲು ಬನ್ನಿ ಎಂದು ಕರೆ ನೀಡಿದವರನ್ನಷ್ಟೇ ನೋಡಿದ್ದ ನಮಗೆ ನಾಟಕ ನೋಡಲು ಇಂತಿಂಥವರು ಬರಬೇಡಿ ಎಂದು ಕೇಳಿದ್ದು ಅದೇ ಮೊದಲು. ಸರತಿ ಸಾಲಿನಲ್ಲಿದ್ದ ಇತರರಿಗೂ ಅಂತಹದ್ದೇ ಆಶ್ಚರ್ಯವಾಗಿರಬಹುದು ಎಂದು ಅವರತ್ತ ತಿರುಗಿದರೆ ಇಲ್ಲ, ಬಿಲ್ ಕುಲ್ ಇಲ್ಲ.

ಯಾಕೆಂದರೆ ಅದು ಕೇರಳದಲ್ಲಿ ಜರುಗುತ್ತಿದ್ದ ಹತ್ತು ದಿನಗಳ ಅಂತರರಾಷ್ಟ್ರೀಯ ರಂಗ ಹಬ್ಬ. ನಾಟಕ ಎಂದರೆ ಹೀಗೇ ಎನ್ನುವ ಕಲ್ಪನೆಯನ್ನು ಒಂದೊಂದು ದೇಶವೂ ಬದಲಿಸಿ ಹಾಕುತ್ತಿತ್ತು. ಒಂದೊಂದು ನಾಟಕವೂ ತನ್ನದೇ ಆದ ಶೈಲಿಯೊಂದಿಗೆ ರಂಗಭೂಮಿಗೆ ಹೊಸದೇ ಭಾಷ್ಯ ಬರೆದಿತ್ತು. ಹಾಗಾಗಿಯೇ ಇಟಲಿಯ ರೋಮಿಯೋ ಕ್ಯಾಸ್ಟೆಲುಸ್ಸಿ ಅವರ 'ಥರ್ಡ್ ರೀಚ್' ನಾಟಕ ಎಂಬ ಹೆಸರಿನ ವಿಡಿಯೊ ಇನ್‌ಸ್ಟಾಲೇಷನ್ ಪ್ರಯೋಗ ಸಹ. ಕಳೆದ 12 ವರ್ಷಗಳಿಂದ ಇಂತಹ ಪ್ರಯೋಗಗಳಿಗೆ ಸಾಕ್ಷಿಯಾದ ಪ್ರೇಕ್ಷಕರಿಗೆ ಇದು ಮತ್ತೊಂದು ಹೊಸ ಅನುಭವಕ್ಕೆ ತೆರೆಯಲಿದ್ದ ಹೆಬ್ಬಾಗಿಲು ಆಗಿತ್ತಷ್ಟೆ.

> ಕೇರಳದಲ್ಲಿ ಜರುಗುವ ಹತ್ತು ದಿನಗಳ ರಂಗ ಉತ್ಸವಕ್ಕಾಗಿ ಇಡೀ ಜಗತ್ತು ಕಾತರದಿಂದ ಎದುರು ನೋಡುತ್ತದೆ. ದೇಶ ವಿದೇಶಗಳ ನಾಟಕಗಳ ಈ ಸಮ್ಮಿಲನ ಹಾಡು ಕುಣಿತಗಳ ಹಬ್ಬವಾಗಿಯೂ ಬದಲಾಗುತ್ತದೆ...

ಗೆದ್ದ 'ದಕ್ಲಕಥಾ ದೇವಿ ಕಾವ್ಯ'

ಅಂತರರಾಷ್ಟ್ರೀಯ ನಾಟಕ ಉತ್ಸವದಲ್ಲಿ ನಾಟಕ ಪ್ರದರ್ಶಿಸುವುದು ಯಾವುದೇ ತಂಡಕ್ಕೆ ಹೆಮ್ಮೆಯ ವಿಷಯ. ಈ ಬಾರಿ ಅಂತಹ ಹಿರಿಮೆಗೆ ಪಾತ್ರವಾಗಿದ್ದು ಜಂಗಮ ಕಲೆಕ್ಟಿವ್‌ನ 'ದಕ್ಲಕಥಾ ದೇವಿ ಕಾವ್ಯ'. ಈ ಹಿಂದೆ ಶರಣ್ಯ ರಾಂಪ್ರಕಾಶ್ ಅವರ ನಿರ್ದೇಶನದ 'ಅಕ್ಷಯಾಂಬರ' ನಾಟಕ ಪ್ರದರ್ಶನಗೊಂಡಿತ್ತು. ಕನ್ನಡ ನಾಟಕವಲ್ಲದಿದ್ದರೂ ಎಂ.ಡಿ. ಪಲ್ಲವಿ ಅಭಿನಯಿಸಿದ್ದ 'ಸಿ ಶಾರ್ಪ್ ಸಿ ಬ್ಲಂಟ್' ಪ್ರದರ್ಶನಗೊಂಡಿತ್ತು. ಪ್ರತೀ ವರ್ಷ ರಂಗಭೂಮಿಗೆ ನೀಡಿದ ಮಹತ್ವದ ಕೊಡುಗೆಗಾಗಿ ಉತ್ಸವ ಹಿರಿಯ ರಂಗಕರ್ಮಿಯನ್ನು ಗೌರವಿಸುತ್ತದೆ. ಅಂತಹ ಮಹತ್ವದ ಪ್ರಶಸ್ತಿ ಪ್ರಸನ್ನ ಅವರಿಗೆ ಸಂದಿತ್ತು.

ಈ ಬಾರಿ 'ದಕ್ಲಕಥಾ ದೇವಿ ಕಾವ್ಯ' ಬಹು ನಿರೀಕ್ಷೆಯನ್ನು ಹುಟ್ಟಿಸಿತ್ತು. ಕೆ.ಪಿ. ಲಕ್ಷ್ಮಣ್ ಈಗಾಗಲೇ 'ಕೋರ್ಟ್ ಮಾರ್ಷಲ್', 'ವೀ ದ ಪೀಪಲ್ ಆಫ್ ಇಂಡಿಯಾ', 'ದ್ವೀಪ' ನಾಟಕಗಳನ್ನು ನಿರ್ದೇಶಿಸಿ ನೋಡುಗರ ಮನ ಗೆದ್ದಿದ್ದಾರೆ. ರಂಗಭೂಮಿಗೆ ಹೊಸ ವ್ಯಾಕರಣ ನೀಡಲು ತುಡಿಯುತ್ತಿರುವ ಲಕ್ಷ್ಮಣ್ ತ್ರಿಶ್ಯೂರಿನಲ್ಲಿ ಸೇರಿದ್ದ ಭಾರೀ ಸಂಖ್ಯೆಯ ಪ್ರೇಕ್ಷಕರ ಮನ ಗೆದ್ದರು.

ಬೇರೆ ಭಾಷೆಗಳ ನಾಟಕವನ್ನು ರಂಗದ ಒಂದು ಬದಿಯಲ್ಲಿ ತೆರೆಯ ಮೇಲೆ ಬರುವ ಇಂಗ್ಲಿಷ್ ಹಾಗೂ ಮಲಯಾಳಂ ಅನುವಾದದ ಮೂಲಕವೇ ಅರ್ಥ ಮಾಡಿಕೊಳ್ಳಬೇಕಾದ ಸವಾಲು ಪ್ರೇಕ್ಷಕನಿಗಿರುತ್ತದೆ. ಆದರೆ ಭಾಷೆಯ ಗಡಿಯನ್ನೂ ಮೀರಿ ಲಕ್ಷ್ಮಣ್ ಕಟ್ಟಿಕೊಟ್ಟ ದೃಶ್ಯ, ಬೆಳಕು, ಸಂಗೀತದ ಈ ನಾಟಕ ಸಲೀಸಾಗಿ ಪ್ರೇಕ್ಷಕರ ಬಳಿಗೆ ನಡೆದುಕೊಂಡು ಬಂದುಬಿಟ್ಟಿತು. ಇಡೀ ಉತ್ಸವದ ಅತಿ ದೊಡ್ಡ ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರು ಪ್ರತೀ ದೃಶ್ಯಕ್ಕೂ, ಡೈಲಾಗ್‌ಗೂ ಸಿಳ್ಳೆ ಹಾಕುತ್ತ, ಚಪ್ಪಾಳೆ ತಟ್ಟುತ್ತಾ ನಾಟಕ ಗೆದ್ದಿತು ಎನ್ನುವುದನ್ನು ಸಾಬೀತು ಮಾಡಿದರು.

ಕಿರಣ್ ಭಟ್, ಬಿಎಸ್‌ಎನ್‌ಎಲ್‌ನಲ್ಲಿ ಹಿರಿಯ ಅಧಿಕಾರಿಯಾಗಿದ್ದರು. ಅವರಿಗೆ ಕೇರಳಕ್ಕೆ ವರ್ಗವಾಯಿತು. ಅಲ್ಲಿದ್ದ ಎರಡು ವರ್ಷಗಳಲ್ಲಿ ಬಹುತೇಕ ದಿನಕ್ಕೊಂದು ನಾಟಕ ನೋಡುತ್ತಾ ಹೋದರು. ಇದನ್ನು ಸಂಗ್ರಹಿಸಿ ಕಟ್ಟಿಕೊಟ್ಟ ಕೃತಿಯೇ 'ರಂಗ ಕೈರಳಿ'. ಈ ಕೃತಿ ಓದುತ್ತಾ ಹೋದ ನನಗೆ ಕೇರಳದಲ್ಲಿನ ರಂಗಭೂಮಿಯ ಹುಚ್ಚಿನ ಝಲಕ್ ಸಿಕ್ಕಿಹೋಯಿತು. ಹಾಗೆ ಬರೆಯುತ್ತಾ ಕಿರಣ್ ಭಟ್ ಅಲ್ಲಿ ಪ್ರತೀ ವರ್ಷ ಜರುಗುವ ಅಂತರರಾಷ್ಟ್ರೀಯ ರಂಗಭೂಮಿ ಉತ್ಸವದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅಲ್ಲಿಗೆ ಕೇರಳಕ್ಕೆ ಹೋಗಿ ಅಲ್ಲಿನ ರಂಗ ಹುಚ್ಚಿನ ಕೈಕುಲುಕಿ ನೋಡಿಯೇಬಿಡುವ ಹುಕಿ ನನ್ನೊಳಗೆ ಹೊಕ್ಕಿತು.

ಕೇರಳಕ್ಕೆ ಇದು 13ನೆಯ ವರ್ಷದ ರಂಗ ಉತ್ಸವ. 2008ರಲ್ಲಿ ಆರಂಭವಾದ ಈ ಉತ್ಸವ ಪ್ರತೀ ವರ್ಷ ತನ್ನನ್ನು ತಾನೇ ಇನ್ನಷ್ಟು ಪುನರ್ ರೂಪಿಸಿಕೊಳ್ಳುತ್ತಾ ಈಗ ಇಡೀ ಜಗತ್ತು ಈ ನಾಟಕೋತ್ಸವಕ್ಕೆ ಕಾಯುತ್ತಾ ಕೂರುವಷ್ಟರ ಮಟ್ಟಿಗೆ ಬೆಳೆದು ಬಿಟ್ಟಿದೆ.

ಉತ್ಸವದ ಮುಖ್ಯ ತಾಣವಾದ ಕೇರಳ ಸಂಗೀತ ನಾಟಕ ಅಕಾಡೆಮಿಯ ಆವರಣಕ್ಕೆ ಕಾಲಿಡುತ್ತಿದ್ದಂತೆಯೇ ನಮಗೆ ಕಂಡದ್ದು ಗಿರೀಶ ಕಾರ್ನಾಡ, ಸಫ್ದರ್ ಹಶ್ಮಿ, ಬಾದಲ್ ಸರ್ಕಾರ್, ಶೇಕ್ಸ್‌ಪಿಯರ್.. ಹೀಗೆ ಸಾಲು ಸಾಲು ರಂಗ ದಿಗ್ಗಜರು. ಅಲ್ಲಿದ್ದ ಎರಡು ಕಾಯಂ ರಂಗಮಂದಿರಗಳ ಜೊತೆಗೆ ಉತ್ಸವಕ್ಕಾಗಿಯೇ ಎದ್ದು ನಿಂತ ಸಾವಿರಕ್ಕೂ ಹೆಚ್ಚು ಜನ ಕೂರುವ ಸಾಮರ್ಥ್ಯವಿರುವ ತಾತ್ಕಾಲಿಕ ರಂಗಮಂದಿರಗಳು. ಎಲ್ಲೆಡೆಯೂ ನಾಟಕದ ಲೈಟ್‌ಗಳು, ಪರದೆಗಳು, ಮೈಕ್‌ಗಳನ್ನು ಹೊತ್ತವರ ಸರಬರ ಓಡಾಟ.

ಇಲ್ಲಿ ರಂಗ ಉತ್ಸವ ಎಂದರೆ ಅದು ಉತ್ಸವ ಸಂಘಟಿಸುವ ಸಂಗೀತ ನಾಟಕ ಅಕಾಡೆಮಿಯ ಕಾರ್ಯಕ್ರಮ ಮಾತ್ರವಲ್ಲ, ಲಲಿತಕಲಾ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಕೇರಳದಲ್ಲಿರುವ ಡ್ರಾಮಾ ಸ್ಕೂಲ್, ಯುವಜನ ಮತ್ತು ಕ್ರೀಡಾ ಕೇಂದ್ರ ಎಲ್ಲವೂ ತಮ್ಮದೇ ಉತ್ಸವವೇನೋ ಎನ್ನುವಂತೆ ಕೈ ಜೋಡಿಸುತ್ತವೆ.

ಕೇರಳದ ಕಲಾವಿದರು ತಿಂಗಳಿಗೂ ಮುಂಚೆಯೇ ಬೀದಿಗಿಳಿದು 'ಗೋಡೆ ಬರಹವೂ ಕಲೆಯೇ' ಎನ್ನುವ ಘೋಷಣೆಯೊಂದಿಗೆ ಚಂದದ ಚಿತ್ತಾರಗಳನ್ನು ಬಿಡಿಸುತ್ತಾರೆ. ಆಟೊಗಳನ್ನೇ ಮಿನಿ ವೇದಿಕೆಯಾಗಿ ಪರಿವರ್ತಿಸಿಕೊಂಡ ಬೀದಿ ನಾಟಕ ತಂಡಗಳು ತ್ರಿಶ್ಯೂರಿನ ಮೂಲೆ ಮೂಲೆಗೆ ಹೋಗಿ ಉತ್ಸವದ ಕುತೂಹಲ ಉಕ್ಕುವಂತೆ ಮಾಡುತ್ತವೆ. ಗುರುವಾಯೂರಿನಲ್ಲಿರುವ ಮ್ಯೂರಲ್ ಕಲಾವಿದರು ನಾಟಕ ಅಕಾಡೆಮಿಯ ರಂಗ ಮಂದಿರಗಳ ಗೋಡೆಗಳ ಮೇಲೆ ಚಿತ್ತಾರ ಮೂಡಿಸುತ್ತಾರೆ.

ಈ ವರ್ಷದ ನಾಟಕೋತ್ಸವಕ್ಕೆ ಯಾವ ವರ್ಷವೂ ಇಲ್ಲದಷ್ಟು ರಂಗು ಬಂದಿತ್ತು. ಇದಕ್ಕೆ ಕಾರಣವೂ ಇತ್ತು. ಕೋವಿಡ್, ಎರಡು ವರ್ಷದ ನಾಟಕೋತ್ಸವವನ್ನು ನುಂಗಿ ಹಾಕಿತ್ತು.

ಕಾರ್ನಾಡರ ನೆನಪು...

ಹಾಗಾಗಿಯೇ ಈ ಬಾರಿ ಎಲ್ಲಿ ನೋಡಿದರೂ ಜನ. ಕೋವಿಡ್ ಮಾನವೀಯತೆಯನ್ನೇ ಕಿತ್ತು ತಿಂದಿತ್ತು. ಅಲ್ಲಿಯವರೆಗೆ ಇದ್ದ ವಲಸೆ, ಬಡತನಕ್ಕೆ ಇನ್ನಷ್ಟು ಬೇಗೆಯನ್ನು ಸೇರಿಸಿತ್ತು. ಆ ಕಾರಣಕ್ಕಾಗಿಯೇ 'ಮಾನವೀಯತೆ ಒಗ್ಗೂಡಬೇಕು' ಎನ್ನುವುದು ಈ ಬಾರಿಯ ರಂಗ ಉತ್ಸವದ ಮೂಲ ಆಶಯ ಹಾಗೂ ಘೋಷಣೆಯಾಗಿತ್ತು.

ಹಾಗಾಗಿಯೇ ಇಡೀ ನಾಟಕಗಳು ಈ ಮಾನವೀಯತೆಯ ಸುತ್ತಲೇ ಇರುವಂತೆ ನೋಡಿಕೊಳ್ಳಲಾಗಿತ್ತು. 'ಸಾಂಸ್ಕೃತಿಕ ಅಭಿವ್ಯಕ್ತಿ ಎನ್ನುವುದು ಸಮಾಜದ ಬೆನ್ನೆಲುಬು. ದುರಿತ ಕಾಲದಲ್ಲಿ ಪರಸ್ಪರ ವಿಶ್ವಾಸ ತುಂಬಲು, ಜೊತೆಗಿದ್ದೇವೆ ಎನ್ನುವ ಭಾವ ತುಂಬಲು ಇಂತಹ ಉತ್ಸವ ಅತಿ ಮುಖ್ಯ' ಎಂದಿದ್ದು ಕೇರಳದ ಸಂಸ್ಕೃತಿ ಸಚಿವ ಸಾಜಿ ಚೆರಿಯನ್.

ಮಾನವೀಯತೆ ಎನ್ನುವ ಗುಪ್ತಗಾಮಿನಿಯನ್ನು ಅರಸುತ್ತಿದ್ದ ಅನೇಕ ದೇಶಗಳು ಅಲ್ಲಿದ್ದವು. ಅನೇಕ ರಂಗತಂಡಗಳು, ಅಸಂಖ್ಯಾತ ಪ್ರೇಕ್ಷಕರೂ ಇದ್ದರು. ಹೀಗಾಗಿಯೇ ಉತ್ಸವದ ಹತ್ತೂ ದಿನ ಎಲ್ಲೆಂದರಲ್ಲಿ ವಾದ್ಯಗಳು ಮೊಳಗುತ್ತಿದ್ದವು, ಇನ್ನೆಲ್ಲೋ ಹಾಡಿಗೆ ಅನೇಕರು ಹೆಜ್ಜೆ ಹಾಕುತ್ತಿದ್ದರು, ಟೀ ಅಂಗಡಿಯ ಬದಿಯಲ್ಲಿ ಮಿನಿ ವಿಚಾರ ಸಂಕಿರಣವೇ ಜರುಗಿ ಹೋಗುತ್ತಿತ್ತು. ಈ ಮಧ್ಯೆ ಕೆಂಪು ಕೋಳಿ ವೇಷ ಧರಿಸಿದ ಬೀದಿ ರಂಗ ಕಲಾವಿದರು ಎಲ್ಲರ ಮುಖದಲ್ಲಿ ನಗೆ ಅರಳಿಸಿ ಹೋಗುತ್ತಿದ್ದರು. ಎಷ್ಟು ಸೆಲ್ಫಿಗಳು ಕ್ಲಿಕ್ಕಿಸಲ್ಪಟ್ಟವೋ ಲೆಕ್ಕ ಇಟ್ಟವರಾರು?

ದಕ್ಷಿಣ ಆಫ್ರಿಕಾ, ಲೆಬನಾನ್, ಇಟಲಿ, ಫ್ರಾನ್ಸ್, ಇಂಗ್ಲೆಂಡ್, ಪ್ಯಾಲೆಸ್ಟೀನ್, ಡೆನ್ಮಾರ್ಕ್, ಇಸ್ರೇಲ್ ದೇಶಗಳ ಜೊತೆಗೆ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಬಿಹಾರ್, ದೆಹಲಿ, ತಮಿಳುನಾಡು, ಪುದುಚೇರಿ, ಅಸ್ಸಾಂ ರಾಜ್ಯಗಳ ನಾಟಕಗಳೂ ಬೆಸಗೊಂಡವು. ಮಾರನೆಯ ದಿನ ನಾಟಕ ತಂಡದೊಡನೆ ಕೂತು ನಾಟಕವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಯಿತು.

ಇದೇ ಮೊದಲ ಬಾರಿಗೆ ಮಹಿಳೆಯರಿಗಾಗಿಯೇ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಇಲ್ಲಿನ ನಾಟಕ ಶಾಲೆ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ನಾಟಕ ಶಾಲೆಗಳ ಉತ್ಸವವನ್ನೂ ನಡೆಸಿತು. ಉತ್ಸವದ ಪೂರ್ವಭಾವಿಯಾಗಿ ಅನೇಕ ಸಂಕಿರಣಗಳೂ ರಂಗ ಗಣ್ಯರ ಉಪನ್ಯಾಸಗಳೂ ಜರುಗಿದವು. ನಾಟಕದ ಅಂಗಳದಲ್ಲಿ ಹಾಡಿನ ಹೊಳೆಯೂ ಹರಿಯಲಿ ಎಂಬಂತೆ ದೇಶದ ನಾನಾ ಕಡೆಯ ಮ್ಯೂಸಿಕ್ ಬ್ಯಾಂಡ್‌ಗಳನ್ನೂ ಕರೆಸಲಾಗಿತ್ತು.

ಲೆಬನಾನ್‌ನ 'ಟೋಲ್ಡ್ ಬೈ ಮೈ ಮದರ್'ಗೆ ರಂಗಮಂದಿರದ ಸಾಮರ್ಥ್ಯದ ಎರಡು ಪಟ್ಟು ಪ್ರೇಕ್ಷಕರಿದ್ದರು. ಗಾಳಿ ಆಡಲೂ ಜಾಗ ಇರಲಿಲ್ಲ. ಪ್ರೇಕ್ಷಕರೊಬ್ಬರು ಇದೇನು 'ತ್ರಿಶ್ಯೂರ್ ಮಹಾಪೂರಮ್' ಏನು? ಎಂದು ಜೋರಾಗಿ ಬೊಬ್ಬೆ ಹಾಕಿದರು. ಅಲ್ಲಿಯವರೆಗೂ ಅಷ್ಟೂ ದಿನ ಈ ರಂಗ ಉತ್ಸಾಹಕ್ಕೆ ಮಾತು ಕೊಡಲು ತಿಣುಕುತ್ತಿದ್ದ ನನಗೆ ಉತ್ತರ ಸಿಕ್ಕಿ ಹೋಯಿತು. ಪಕ್ಕಾ ತ್ರಿಶ್ಯೂರಿನ ಮಹಾಪೂರಮ್‌ನಂತೆಯೇ ಪ್ರೇಕ್ಷಕರು ಹಗಲೂ ರಾತ್ರಿ ನಾಟಕದಲ್ಲಿ ಮಿಂದೆದ್ದರು. ಕುಣಿದು ಕುಪ್ಪಳಿಸಿದರು.

ಈ ಸಂಭ್ರಮ ಅನುಭವಿಸಿ ಹಿಂದಿರುಗಿದ ಮೇಲೂ ಲೆಬನಾನ್‌ನ ನಾಟಕದ ತಾಯಿಯ ಆರ್ತನಾದ, ದಕ್ಲಾಕಥಾ ದೇವಿ ಕಾವ್ಯದ ಆಳದ ನೋವು, ಅಸ್ಸಾಮಿನ ಆ ಗಿಳಿಯ ಪೀ, ಪೀ ದನಿ ನನ್ನನ್ನು ಹಿಂಬಾಲಿಸುತ್ತಲೇ ಇದೆ.

ನಾಟಕವೊಂದರ ನೋಟ

ಚಿತ್ರಗಳು: ಕಿರಣ್ ಭಟ್

ಅಬ್ಬಾ, ಹಟ್ಟಿಮಾರಿ ಹಬ್ಬ!

ಗುರುಪ್ರಸಾದ್ ಕಂಟಲಗೆರೆ

ಶೂನ್ಯ ಮಾಸ ಕಳೆಯುತ್ತಲೆ ಮದುವೆ, ಗೃಹಪ್ರವೇಶ ಇತ್ಯಾದಿ ಶುಭಕಾರ್ಯಗಳು ಗರಿಬಿಚ್ಚಿಕೊಳ್ಳುತ್ತವೆ. ಡಲ್ ಹೊಡೆಯುತ್ತಿದ್ದ ಚೌಲ್ಟ್ರಿ, ಪಾರ್ಟಿ ಹಾಲ್‌ಗಳು, ಬ್ಯೂಟಿ ಪಾರ್ಲರ್‌ಗಳು ಚೇತರಿಸಿಕೊಳ್ಳುತ್ತವೆ. ಇದರ ಬೆನ್ನಲ್ಲೆ ಗ್ರಾಮೀಣ ಪ್ರದೇಶದಲ್ಲಿ ಹಟ್ಟಿ ಹಬ್ಬದ ನೆಪದಲ್ಲಿ ಬಡಿಯುವ ಜೋರಾದ ತಮಟೆಯ ಸದ್ದು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದರೂ ನಗರದ ಭೂಷಣದ ಮುಂದೆ ಕೇಳಿಸುವುದೂ ಇಲ್ಲ, ಕಾಣಿಸುವುದೂ ಇಲ್ಲ.

ತುಮಕೂರು ಸೀಮೆಯಲ್ಲಿ ಶಿವರಾತ್ರಿ ಆಸುಪಾಸಿನಲ್ಲಿ ಆಚರಣೆಗೆ ಬರುವ ಮಾರಿಹಬ್ಬ ಸಾಂಸ್ಕೃತಿಕವಾಗಿ ವಿಶಿಷ್ಟವಾದುದು. 'ಊರಮಾರಿ' ಮತ್ತು 'ಹಟ್ಟಿಮಾರಿ' ಎಂದು ಎರಡು ವಿಧದಲ್ಲಿ 'ಮಾರಿಹಬ್ಬ' ಆಚರಿಸಲ್ಪಡುತ್ತದೆ. ಗ್ರಾಮದ ಎಲ್ಲ ಜಾತಿಯವರೂ ಸೇರಿ ಆಚರಿಸುವುದು ಊರಮಾರಿಯಾದರೆ ದಲಿತರು ಮಾತ್ರವೇ ಆಚರಿಸುವುದು ಹಟ್ಟಿಮಾರಿಯಾಗಿದೆ. ಊರಮಾರಿಗೆ 'ಉಳ್ಳಿಕಾಳು ಮಾರಿ' ಅಂತ ಇನ್ನೊಂದು ಹೆಸರಿದೆ. ಒಂದು ಕಾಲದ ಬಡವರ ಕನಿಷ್ಠ ಆಹಾರದಂತಿದ್ದ ಉಳ್ಳಿಕಾಳಿನಿಂದ ತಯಾರಿಸಿದ ಹಿಂಡಿ, ಕಾಯಾಲು ಊರಮಾರಿಯ ವಿಶೇಷವಾದರೆ, ಬಲಿಮಾಂಸದೂಟ ಹಟ್ಟಿಮಾರಿಯ ವಿಶೇಷ. ಆಹಾರಭ್ಯಾಸವನ್ನು ಬದಿಗಿಟ್ಟು ನೋಡುವುದಾದರೆ ಹಟ್ಟಿಮಾರಿ ಒಂದು ಆಚರಣೆಯಾಗಿ ಗಮನಿಸಲೇಬೇಕಾದ ಹಬ್ಬ.

ನಾಳೆ ನಾಡಿದ್ದರಲ್ಲಿ ಊರಮಾರಿ ಎನ್ನುವಾಗ ಆ ಊರಿನ ದಲಿತರು ಊರೆಲ್ಲ ಆಡಿಕೊಂಡು ದವಸ ಧಾನ್ಯಗಳನ್ನು ಎತ್ತುತ್ತಾರೆ. ಆ ಜಾತಿ ಈ ಜಾತಿ ಎನ್ನದೆ ಎಲ್ಲ ಜಾತಿಯವರೂ ತಮ್ಮ ಮನೆಮುಂದೆ ತಮಟೆ ಬಡಿದುಕೊಂಡು ಬರುವ ಕುಲ್ವಾಡಿಯವರಿಗೆ (ಊರಚಾಕರಿ ಮಾಡುವವರು) ಕಾಯಿ, ಬೇಳೆ, ಅಕ್ಕಿ, ರಾಗಿ, ಖಾರ, ಸಂಬಾರ ಇತ್ಯಾದಿಯನ್ನು ಉದಾರವಾಗಿ ನೀಡುತ್ತಾರೆ. ಊರಮಾರಿಯಾಗಲಿ ಹಟ್ಟಿಮಾರಿಯಾಗಲಿ ಸರಿ ದಿನಗಳಾದ ಶುಕ್ರವಾರ, ಭಾನುವಾರ ಇಲ್ಲವೆ ಮಂಗಳವಾರದಂದೆ ಬರುವುದು. ದಲಿತರ ಮನೆ ಎಣಿಸಿ ತಮ್ಮ ಶಕ್ತಾನುಸಾರ ದುಡ್ಡು ಹಾಕಿಕೊಂಡು ಬಲಿ ಪ್ರಾಣಿಯನ್ನು ತಂದು ಕಟ್ಟಿಕೊಳ್ಳುತ್ತಾರೆ. ಹಟ್ಟಿಯ ಮಧ್ಯಭಾಗದಲ್ಲಿ ಹಸಿಚಪ್ಪರ ಹಾಕಿ, ಅದರೊಳಗೆ ಮಣ್ಣಿನ ಇಲ್ಲವೆ ರಾಗಿಮುದ್ದೆಯ ಇಲ್ಲವೆ ಹುಣಸೆ ಹಣ್ಣಿನಿಂದ ಮಾರಿ ಆಕೃತಿಯನ್ನು ತಿದ್ದುತ್ತಾರೆ.

ಹೊಸ ಕುಂಬದಲ್ಲಿ (ಮಣ್ಣಿನ ಮಡಕೆ) ಅರಿಶಿನ ಕುಂಕುಮ ಒಣಗಿಸಿ ಅದರ ಮೇಲೆ ಮಾರಿ ಆಕೃತಿಯನ್ನು ಪ್ರತಿಷ್ಠಾಪಿಸಿ ಬತ್ತಿಯಿಂದ ಹೊಸೆದ ಮಾರಿ ದೀಪ ಉರಿಸುತ್ತಾರೆ. ಮಾರಿ ದೀಪ ಆರುವಂತಿಲ್ಲ. ರಾತ್ರಿಯಾಗುತ್ತಲೆ ಮಾರಿಗೆ ಎದುರಾಗಿ ಗಟೆಯನ್ನು ಹುಕ್ಕಿಸುತ್ತಾರೆ. ಗಟೆ ಎಂದರೆ ಒಂದು ಕುಂಬದಲ್ಲಿ ಮದ್ಯವನ್ನು ತುಂಬಿ ಅದಕ್ಕೆ ಬೇವಿನ ಸೊಪ್ಪನ್ನು ಇಟ್ಟಿರುತ್ತಾರೆ. ಮಾರಿಗೆ ಬಲಿ ಒಡೆದು, ಊರೆಲ್ಲ ಎತ್ತಿ ತಂದಿದ್ದ ದವಸ ಧಾನ್ಯಗಳನ್ನು ಬೆರೆಸಿ ಸಾಮೂಹಿಕವಾಗಿ ಅಡುಗೆ ತಯಾರಿಸುತ್ತಾರೆ. ಬಂದ ನೆಂಟರಿಷ್ಟರೆಲ್ಲ ಒಂದೆಡೆ ಸೇರಿ ಮಾಂಸ ಮದ್ಯ ಸೇವಿಸುತ್ತಾರೆ. ಆದರೆ ಕುಲ್ವಾಡಿ ಮನೆತನದ ಆರು ಮಂದಿ ಮಾತ್ರ ಉಪವಾಸ ಇರುತ್ತಾರೆ.

ಊಟ ಸೇವಿಸಿ ಎಲ್ಲ ಮಲಗಿದ ನಂತರ ಮಧ್ಯರಾತ್ರಿ ಈ ಆರು ಮಂದಿಯಲ್ಲಿ ಇಬ್ಬರು ತಮಟೆ ಬಡಿಯುವವರಾದರೆ, ಇನ್ನಿಬ್ಬರು ಬೆಂಕಿ ಕಿಡಿ ಹಿಡಿದಿರುತ್ತಾರೆ. ಇನ್ನಿಬ್ಬರು ತಾವು ಬಲಿಕೊಟ್ಟ ಪ್ರಾಣಿಯ ಕರ್ಚನ್ನೆಲ್ಲ (ಕಳ್ಳು ಪಚಿಡಿ) ಒಂದು ಕುಡುಕೆಯಲ್ಲಿ ತುಂಬಿಕೊಂಡು ಅದಕ್ಕೆ ಬಲಿ ಅನ್ನ ಇತ್ಯಾದಿ ಬೆರೆಸಿ ಭುಜದ ಮೇಲೆ ಹೊತ್ತುಕೊಂಡು ಇಡೀ ಗ್ರಾಮದ ಸುತ್ತ 'ಊರೆಚ್ಲಿ ಊರೆಚ್ಲಿ' (ಊರು ಹೆಚ್ಚಲಿ) ಅಂತ ಕೂಗಿಕೊಂಡು ಚರಗ (ಪ್ರಾಣಿಯ ಕಳ್ಳು ಪಚಿಡಿ) ಚೆಲ್ಲಿಕೊಂಡು ಬರುತ್ತಾರೆ. ಚರಗ ಚಲ್ಲುವ ವೇಳೆಯಲ್ಲಿ ಗ್ರಾಮವೆಲ್ಲ ಬಾಗಿಲು ದೂಡಿಕೊಂಡು ಮಲಗಿರಬೇಕು, ಯಾರೂ ಇದನ್ನು ನೋಡಕೂಡದು ಎಂಬ ಪ್ರತೀತಿ ಕೂಡ ಇದೆ. ಚರಗದ ನಂತರವೇ ಕುಲ್ವಾಡಿಗಳ ಗಟೆ ಮತ್ತು ಊಟ.

ಆ ಊರಿನಲ್ಲಿ ಅದೆಷ್ಟೇ ಮರ್ಯಾದೆ ಹತ್ಯೆ ಆಗಿರಲಿ, ಅಸ್ಪೃಶ್ಯತೆ ಇರಲಿ, ಮೇಲ್ಜಾತಿಗರು ಹಟ್ಟಿಗರನ್ನು ಹೇಗೆಲ್ಲ ನಡೆಸಿಕೊಂಡಿದ್ದರೂ ಹಟ್ಟಿಮಾರಿಯಲ್ಲಿ ಹಟ್ಟಿಗರು ದ್ವೇಷಾಸೂಯೆಗಳನ್ನು ಬಿಟ್ಟು ಊರು ಹೆಚ್ಚಲಿ, ಸಮೃದ್ಧಿಯಾಗಲಿ ಎಂದು ಉಪವಾಸ ಇದ್ದು ಕೋರುವುದು ದಲಿತರ ಉದಾತ್ತ ನಡೆಗೆ ನಿದರ್ಶನವಾಗಿದೆ.

ಈ ವಿಶಿಷ್ಟ ಆಚರಣೆಯ ಹಟ್ಟಿಮಾರಿ ಹಬ್ಬ ಹಿಂದೆ ಸಾಂಕ್ರಾಮಿಕ ರೋಗಗಳಿಂದ ತತ್ತರಿಸಿದ ಜನತೆ ತಮ್ಮ ಜನವಸತಿಗೆ ಯಾವುದೇ ಮಾರಿಗಳು ತಗುಲದೆ ಇರಲಿ ಎಂಬ ಸದಾಶಯದಿಂದ ಆಚರಣೆಗೆ ಬಂದಿತೆನ್ನಲಾಗಿದೆ. ಚರಗ ಚೆಲ್ಲುವ ಆಚರಣೆ ಅಸ್ಪೃಶ್ಯರ ಪುರಾಣ ಸ್ಮೃತಿಯಾದ ಆದಿಜಾಂಬವ ಮುನಿ ಹರಿದಾಡುತ್ತಿದ್ದ ಭೂಮಿಗೆ ತನ್ನ ಮಗ ಹೆಪ್ಪುಮುನಿಯನ್ನು ಬಲಿಕೊಟ್ಟು, ಆತನ ರಕ್ತವನ್ನು ಚಿಮ್ಮಿ ಭೂಮಿಯನ್ನು ಹೆಪ್ಪುಗೊಳಿಸಿ ಸಕಲ ಜೀವರಾಶಿಗಳ ಸೃಷ್ಟಿಗೆ ಕಾರಣನಾದನೆಂಬ ಪುರಾಣವನ್ನು ಜೀವಂತವಾಗಿಸುತ್ತದೆ.

ಮುನ್ನೋಟ 26-02-2023 ರಿಂದ 04-03-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ವೃತ್ತಿಯಲ್ಲಿ ಹೊಸ ಸಂಕಷ್ಟಗಳು ಎದುರಾಗಬಹುದು. ಪರರನ್ನು ಟೀಕಿಸುವ ಬದಲು ನಿಮ್ಮ ಏಳಿಗೆ ಬಗ್ಗೆ ಚಿಂತಿಸಿರಿ. ಹಣದ ಒಳಹರಿವು ಕಡಿಮೆ ಇರುತ್ತದೆ. ವ್ಯಾಪಾರಿಗಳು ಗ್ರಾಹಕರನ್ನು ವಿಶ್ವಾಸದಿಂದ ಕಾಣುವುದು ಒಳ್ಳೆಯದು. ಕೆಲವು ವ್ಯಾಪಾರಿಗಳಿಗೆ ವಿದೇಶಿ ವ್ಯಾಪಾರದ ಸಂಬಂಧ ಕುದುರುತ್ತದೆ. ಕೆಲವು ಸಂಶೋಧಕರಿಗೆ ಹೊಸ ರೀತಿಯ ಆವಿಷ್ಕಾರದಿಂದ ಹೆಸರು ಬರುತ್ತದೆ. ಕೃಷಿಯಿಂದ ಆದಾಯ ಬರುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ವೃತ್ತಿಯಲ್ಲಿ ಸತತ ಜವಾಬ್ದಾರಿಯುತ ನಡವಳಿಕೆಗಳನ್ನು ಪ್ರದರ್ಶಿಸುವ ನಿಮಗೆ ಹಿರಿಯ ಅಧಿಕಾರಿಗಳ ಬೆಂಬಲ ದೊರೆಯುತ್ತದೆ. ರೇಷ್ಮೆ ಬಟ್ಟೆ ವ್ಯವಹಾರ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ಉದ್ದಿಮೆದಾರರಿಗೆ ಕಾರ್ಮಿಕರು ಕೊಡುವ ಸಲಹೆಗಳು ಬಹಳ ಅಮೂಲ್ಯವಾಗಿರುತ್ತದೆ. ಲೇವಾದೇವಿ ವ್ಯವಹಾರ ಆದಷ್ಟು ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು. ಧನಸಹಾಯ ದೊರೆಯುವ ಸಾಧ್ಯತೆ ಇದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ರಾಸಾಯನಿಕ ವಸ್ತುಗಳನ್ನು ಬಳಕೆ ಮಾಡುವವರು ಹೆಚ್ಚು ಜಾಗ್ರತೆವಹಿಸಿರಿ. ಕಂಪನಿಯ ಕೆಲಸಕ್ಕಾಗಿ ಈಗ ತುರ್ತು ಪ್ರಯಾಣ ಮಾಡುವ ಸಂದರ್ಭವಿದೆ. ಅಬಕಾರಿ ಗುತ್ತಿಗೆದಾರರಿಗೆ ಉತ್ತಮ ವ್ಯವಹಾರವಿರುತ್ತದೆ. ಪರಿಸ್ಥಿತಿಗೆ ಹೊಂದಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳುವುದು ನಿಮಗೆ ಒಳಿತು. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಕೃಷಿಕರಿಗೆ ಅಷ್ಟು ಆದಾಯವಿರುವುದಿಲ್ಲ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಹಣಕಾಸು ಸಂಸ್ಥೆಯ ಜವಾಬ್ದಾರಿ ಸ್ಥಾನದಲ್ಲಿರುವವರಿಗೆ ಆತಂಕಗಳು ಎದುರಾಗಬಹುದು. ಚಿನ್ನಾಭರಣಗಳ ಮೇಲಿನ ಹೂಡಿಕೆ ಲಾಭ ತರುತ್ತದೆ. ನಾಟಕರಂಗದವರಿಗೆ ಹೆಚ್ಚಿನ ಪ್ರೋತ್ಸಾಹಗಳು ದೊರೆಯುತ್ತವೆ. ಕೆಲವರಿಗೆ ಸಮಾಜದಲ್ಲಿ ಸ್ಥಾನ ಸಿಗುವ ಯೋಗವಿದೆ. ಇನ್ನೊಬ್ಬರನ್ನು ಅವಹೇಳನ ಮಾಡಲು ಹೋಗಬೇಡಿರಿ. ಹಣ್ಣು ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ನಡೆದು ಲಾಭ ಬರುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಮಕ್ಕಳ ಸಂತಸ ಮತ್ತು ಸಡಗರಕ್ಕಾಗಿ ಹೆಚ್ಚು ಖರ್ಚು ಮಾಡುವಿರಿ. ವೃತ್ತಿಯಲ್ಲಿ ಸ್ವಲ್ಪ ಮಟ್ಟಿನ ನಕಾರಾತ್ಮಕ ಬೆಳವಣಿಗೆಯನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಮಧ್ಯಮ ಫಲಿತಾಂಶವಿರುತ್ತದೆ. ಉಳಿತಾಯಕ್ಕಿಂತ ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಧನ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಹೆಚ್ಚು ಸಾಲ ಮಾಡುವುದು ಸರಿಯಲ್ಲ. ಕೃಷಿಕರಿಗೆ ಹೆಚ್ಚಿನ ಆದಾಯ ಬರುವ ಸಂದರ್ಭವಿದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಉದ್ಯೋಗದ ಹುಡುಕಾಟದಲ್ಲಿರುವವರಿಗೆ ಉತ್ತಮ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಕೈಗೊಂಡ ನಿಮ್ಮ ಕೆಲಸಗಳು ಆರ್ಥಿಕ ಹಿನ್ನಡೆಯಿಂದ ಅಲ್ಲಿಯೇ ನಿಲ್ಲುತ್ತವೆ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಉತ್ತಮ ವ್ಯವಹಾರವಿರುತ್ತದೆ. ಮನೆಯಲ್ಲಿ ಮಂಗಳಕಾರ್ಯ ನಡೆಯುವ ಸೂಚನೆ ಇದೆ. ಹಣ್ಣು ಮತ್ತು ತರಕಾರಿ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ. ರೈತರ ಆದಾಯದಲ್ಲಿ ಸ್ವಲ್ಪ ಏರಿಕೆ ಕಾಣಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಗ್ರಾಹಕರಿಗೆ ಮೋಸ ಮಾಡಬೇಕಾಗಬಹುದು. ಹೈನುಗಾರಿಕೆಯನ್ನು ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಹೋಟೆಲ್ ಉದ್ಯಮಿಗಳಿಗೆ ಅವರ ವ್ಯವಹಾರದಲ್ಲಿ ಲಾಭ ಹೆಚ್ಚುತ್ತದೆ. ಜವಳಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಆಗುವ ಸಂದರ್ಭವಿದೆ. ಪದೇ ಪದೇ ಕೆಲಸಕಾರ್ಯಗಳಲ್ಲಿ ಅಡ್ಡಿ ಆತಂಕಗಳು ಎದುರಾಗಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ಉತ್ತಮ ಫಲಿತಾಂಶಕ್ಕಾಗಿ ಹೆಚ್ಚು ಶ್ರಮಪಡಬೇಕು. ಕಾಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಹಳ ಉತ್ತಮ. ವ್ಯವಹಾರದಲ್ಲಿ ಜಾಣ್ಮೆಯಿಂದ ವ್ಯವಹರಿಸಿ ಲಾಭಗಳಿಸುವಿರಿ. ಮಾತಿನ ಮೋಡಿಗೆ ಪಾಲುದಾರರು ಒಪ್ಪಿ ನಿಮಗೆ ಪ್ರಮುಖ ಸ್ಥಾನ ನೀಡುವರು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಆಸ್ತಿ ಖರೀದಿಯ ಬಗ್ಗೆ ಗಮನಹರಿಸಬಹುದು ಹಾಗೂ ಇದಕ್ಕೆ ಬೇಕಾದ ಆರ್ಥಿಕ ನೆರವುಗಳು ದೊರೆಯುತ್ತವೆ. ಹವ್ಯಾಸಿ ಛಾಯಾಗ್ರಾಹಕರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಸಾಂಸ್ಕೃತಿಕ ರಂಗದಲ್ಲಿರುವವರಿಗೆ ಸಾಧನೆ ಮಾಡುವ ಅವಕಾಶ ದೊರೆಯುತ್ತದೆ. ರಾಜಕೀಯಪಟುಗಳು ಎಚ್ಚರಿಕೆಯಿಂದಲೇ ನಡೆಯಿರಿ, ಕೆಲವರು ಮೋಸ ಮಾಡಲು ಕಾಯುತ್ತಿರುತ್ತಾರೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ವ್ಯವಹಾರದಲ್ಲಿ ಎಲ್ಲರನ್ನೂ ಅತಿಯಾಗಿ ನಂಬುವುದು ಬೇಡ. ನಿಮ್ಮ ವ್ಯವಹಾರಗಳ ಬಗ್ಗೆ ಹೆಚ್ಚಿನ ಗಮನಕೊಡಿರಿ. ತರಕಾರಿ ಕಮಿಷನ್ ಏಜೆಂಟರುಗಳಿಗೆ ಹೆಚ್ಚಿನ ಆದಾಯವಿರುತ್ತದೆ. ಉನ್ನತ ವ್ಯಾಸಂಗದಲ್ಲಿರುವವರಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಪ್ರಸಿದ್ಧ ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳುವ ಪ್ರಯತ್ನ ಸಫಲವಾಗುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಆತ್ಮಗೌರವ ಹೆಚ್ಚುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಒಡಹುಟ್ಟಿದವರು ನಿಮಗೆ ಮೋಸ ಮಾಡಲೆತ್ನಿಸುವರು. ಆಸ್ತಿ ವಿಚಾರದಲ್ಲಿ ಸ್ವಲ್ಪ ಮುನ್ನಡೆ ಕಾಣುವಿರಿ. ಕೆಲವರಿಗೆ ಶೀತಬಾಧೆ ಹೆಚ್ಚಾಗಿ ಬಾಧಿಸಬಹುದು. ಸಂಗಾತಿಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಸಂಗಾತಿ ಮಾಡುವ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ಅದಿರು ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ವಾಹನ ಮಾರಾಟಗಾರರಿಗೆ ವ್ಯವಹಾರ ಹೆಚ್ಚುತ್ತದೆ. ಕಾನೂನು ಪಂಡಿತರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಆಗಬಹುದು. ಮಕ್ಕಳ ಭವಿಷ್ಯದ ಬಗ್ಗೆ ಸಾಕಷ್ಟು ಚಿಂತೆ ಇರುತ್ತದೆ. ಅವರ ಭವಿಷ್ಯಕ್ಕಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ನಿಮ್ಮ ಶತ್ರುಗಳ ವಿರುದ್ಧ ಜಾಗರೂಕರಾಗಿರಿ. ಹಿರಿಯರಿಂದ ನಿರೀಕ್ಷಿತ ಉಡುಗೊರೆ ದೊರೆಯಬಹುದು. ನೋವು ನಿವಾರಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಲಾಭವಿರುತ್ತದೆ.

ಪದಬಂಧ 2778



ಮೇಲಿನಿಂದ ಕೆಳಕ್ಕೆ

1. ಕನ್ನಡದ ಸ್ವರವ್ಯಂಜನಗಳನ್ನು ಪೋಣಿಸಿರುವ ಹಾರ 5
2. ಅರಸನ ಕಾರುಬಾರಿನ ಆಸ್ಥಾನ 3
4. ಸಾಮೀಪ್ಯಕ್ಕೆ ಬಹಳ ಹತ್ತಿರ 3
5. ಶ್ರೇಷ್ಠನಾದ ಬೆಟ್ಟದೊಡೆಯನಿಗೆ ಮಾಡಿಸುವ ಮಹಾಸ್ನಾನ 5
7. ಸೂರ್ಯ ಚಂದ್ರರು ಗ್ರಸ್ಥರಾಗುವ ಸಮಯ 5
9. ಜಾತಕನಿಗೆ ಬರುವ ಆನೆ ಸಿಂಹಗಳಂತೆ ಬದುಕುವ ಯೋಗ 5
10. ತೆಗೆದುಕೋ ದಂಡ ಎನ್ನುವ ದಶರಥಾತ್ಮಜ 5
11. ಶ್ರೇಷ್ಠವಾದ ಮಹೋನ್ನತ ನಿಜ, ಇದನ್ನು ಒಪ್ಪಿಕೊಳ್ಳಲೇಬೇಕು 5
14. ಹಣ ಬಂಗಾರ ಒಟ್ಟಾದ ಐಶ್ವರ್ಯ 5
16. ಶ್ಯಾಮ ವರ್ಣದ ವೃಷಭ 5
19. ಕೆಂಡವನ್ನು ಆರಿಸಿ ಪಡೆದ ಭಸ್ಮ 3
20. ಮೂಲ ಪ್ರತಿಯ ಅಚ್ಚು 3

ಎಡದಿಂದ ಬಲಕ್ಕೆ

1. ತರುಣ ರವಿಯ ಮುಂಜಾನೆಯ ಬೆಳಗು 5
3. ತಿಂಗಳಿಗೊಮ್ಮೆ ಸೂರ್ಯನ ಸ್ಥಾನ ಬದಲಾವಣೆಯಿಂದ ಆಗುವ ಕ್ರಾಂತಿ 5
6. ಒಪ್ಪಿಗೆಗೆ ಹಾಕುವ ಸಹಿಯ ಒಟ್ಟಿಲು 5
8. ಮನಸಾ ಸ್ಮರಾಮಿ ಎನ್ನಬಹುದಾದ ಕನ್ಯೆಯ ತಂದೆ ಚಂಡಾಲ ಋಷಿ 3
10. ಕೋಲು ಹಿಡಿದ ಅಜ್ಜನ ಅಜ್ಜ 3
11. ಬಾಳಿನ ಯಾತ್ರೆ 3
12. ಹಿಮಾಲಯದ ಮೇಲೆ ಸೂತ್ರ ಹಿಡಿದಿರುವ ಈಶ್ವರ ಕ್ಷೇತ್ರ 3
13. ಕನ್ನಡಕ್ಕೆ ಹತ್ತಿರವಿರುವ ಹಿಂದೂಸ್ಥಾನಿ ರಾಗ 3
15. ಮರುಗಿದಾಗ ಸಿಗುವ ಮಲತಾಯಿಯ ಪದ 3
17. ಹಳೆಗನ್ನಡದ ನಗರ ಗರಿಗೆದರಿದೆ 3
18. ಕೆಲಸಕ್ಕೆ ಕೊಡುವ ಕೂಲಿ ಮರಿಯೊಳಗೆ ಸೇರಿದೆ 3
19. ಕಡೆಯದಾಗಿ ಪಡೆವ ನೋಟದ ಭಾಗ್ಯ 5
21. ಹಂಪಿಯ ಕಥೆಯನ್ನು ಹೇಳುವ ಶಿಲಾ ತೇರು 5
22. ಒತ್ತು ಕಳೆದುಕೊಂಡ ತೃಣಕ್ಕೆ ಸಮಾನಾದ ಮನುಷ್ಯ 5

ಪದಬಂಧ ಉತ್ತರ -2777

ಮೇಲಿಂದ ಕೆಳಕ್ಕೆ

1.ಸುಮನಾ 2.ರಮಣ 3.ಸೋಮಾರಿ 4.ರಮ್ಮೀಹ 7.ಷಡ್ರಸ 9.ಪುರಾಣ 10.ಹಾರಿಕೆ 11.ರುವಾರಿ 12.ಪ್ರಾರ್ಥನ 13.ರುದ್ರಾಣಿ 16.ದಾಸೋಹ 18.ವರದ 19.ಸುಮಾರು 20.ರಸಿಕ 21.ನಾಯಿಕಾ 22.ಗಡಿಗೆ

ಎಡದಿಂದ ಬಲಕ್ಕೆ

1.ಸುಖಸಾಗರ 3.ಸೋಮಸುಂದರ 5.ಮಹಿಮಾ 6.ನಾಗಭೂಷಣ 8.ರಪುಸನ್ನಾಹ 10.ಹಾಲುಮೊಸರು 12.ಪ್ರಾಣದೇವರು 14.ವಾಗರ್ಥ 15.ಕೆಸರುದಾರಿ 17.ನವತರುಣಿ 19.ಸುಮನೋಹರ 21.ನಾದತರಂಗ 23.ಸಿಪಾಯಿ 24.ರುದ್ರಾಭಿಷೇಕ 25.ಕಾಡುಮಲ್ಲಿಗೆ

ನ್ಯಾಯ ನಿಷ್ಠುರಿಯ ಶತಕದ ಹಾದಿ



ಮೃತ್ಯುಂಜಯ ರುಮಾಲೆ

[ವಕೀಲರಾಗಿ, ನ್ಯಾಯಾಧೀಶರಾಗಿ, ಲೇಖಕರಾಗಿ ನಾಡು, ನುಡಿಯ ಸೇವೆಯನ್ನು ಪರಿಪರಿಯಾಗಿ ಮಾಡಿದವರು ಕೋ. ಚೆನ್ನಬಸಪ್ಪ. ಅವರ ಜನ್ಮಶತಾಬ್ದಿಯ ಸಂದರ್ಭ ಇದು. ಬೆಂಗಳೂರಿನಲ್ಲಿ ಇಂದು ಆ ನೆಪದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿದೆ.]

ತನಗೆ ಬೇಡವಾಗಿದ್ದ ಮದ್ರಾಸ್ ಪ್ರಾಂತದಲ್ಲಿ ಸೇರಿದ್ದ ಬಳ್ಳಾರಿಯು ಅನುಭವಿಸುತ್ತಿದ್ದ ದಿವ್ಯ ನಿರ್ಲಕ್ಷ್ಯದ ವಿದ್ಯಮಾನಗಳಿಗೂ, ಕೋ. ಚೆನ್ನಬಸಪ್ಪನವರು ಕಾನೂನು ಶಿಕ್ಷಣ ಅಭ್ಯಾಸ ಮಾಡಲು ನಿರ್ಧರಿಸಿದ್ದಕ್ಕೂ ಪ್ರಜ್ಞಾಪೂರ್ವಕ ಸಂಬಂಧವಿದೆ. ಏಕೀಕರಣ ಮತ್ತು ಸ್ವಾತಂತ್ರ್ಯಪೂರ್ವದ ಬಳ್ಳಾರಿ ತನ್ನ ಹೆಗಲ ಮೇಲಿದ್ದ ಹಲವು ಭಾರಗಳನ್ನು ಇಳಿಸಿಕೊಳ್ಳಲು ತನ್ನ ಕುಡಿಗಳಲ್ಲಿ ಹಲವರನ್ನು ರಾಜ್ಯಮಟ್ಟದ, ಇನ್ನೂ ಕೆಲವರನ್ನು ಪ್ರಾಂತ ಮಟ್ಟದ ವ್ಯಕ್ತಿತ್ವಗಳಾಗಿ ರೂಪಿಸುವ ಅನಿವಾರ್ಯತೆಗೆ ಸಿಲುಕಿತ್ತು. ರಾಜಕೀಯ ಸ್ಥಿತ್ಯಂತರ, ಅನಿಯಮಿತ ಆಡಳಿತ ಪದ್ಧತಿ, ಅವೈಜ್ಞಾನಿಕ ತಾಲ್ಲೂಕು ವಿಂಗಡಣೆ, ಪರಿಮಿತ ಶೈಕ್ಷಣಿಕ ವ್ಯವಸ್ಥೆ ಮತ್ತು ಮುಖ್ಯವಾಗಿ ಆಡಳಿತ ಕೇಂದ್ರವಾದ ಮದ್ರಾಸ್‌ನಿಂದ ದೂರವಿದ್ದ ಕಾರಣದಿಂದ ಉಂಟಾಗಿದ್ದ ಉಪೇಕ್ಷೆ – ಇಂತಹ ಹಲವು ಗೊಂದಲಗಳಿಂದ ಬಳ್ಳಾರಿ ಅಕ್ಷರಶಃ ಹಿಂದುಳಿದ ಜಿಲ್ಲೆಯಾಗಿತ್ತು.

ಕೇಳ್ಕರ್ ವರದಿಯ ಪರಿಣಾಮವಾಗಿ ಬಳ್ಳಾರಿಯು ತನ್ನ ಕನ್ನಡ ಅಸ್ಮಿತೆ, ಅಸ್ತಿತ್ವಕ್ಕಾಗಿ ಪರದಾಡುತ್ತಿದ್ದ ಉದ್ವಿಗ್ನ ಸಂದರ್ಭದಲ್ಲಿ ಕೋ. ಚೆನ್ನಬಸಪ್ಪನವರು 1935ರಿಂದ 1965ರವರೆಗೆ ಮೂರು ದಶಕಗಳ ಕಾಲ ಬಳ್ಳಾರಿಯಲ್ಲಿ ವಿದ್ಯಾರ್ಥಿಯಾಗಿ, ವಕೀಲರಾಗಿ, ನೆಲದ ರಚನಾತ್ಮಕ ಘಟಕವಾಗಿ ಕಾರ್ಯ ನಿರ್ವಹಿಸಿದರು. ಕಾನೂನು ಪದವೀಧರರಾಗಿ ಅವರು ವೈಯಕ್ತಿಕವಾಗಿ ಪಡೆದದ್ದಕ್ಕಿಂತ ಬಳ್ಳಾರಿಗೆ, ಆ ಮೂಲಕ ಕನ್ನಡ ನಾಡಿಗೆ ನೀಡಿದ್ದು ಘನ ಪ್ರಮಾಣದಲ್ಲಿದೆ. ಚೆನ್ನಬಸಪ್ಪನವರು ನೌಕರಿ ಮಾಡಬೇಕೆಂಬ ಸಂಕುಚಿತ ಉದ್ದೇಶದಿಂದ ಕಾನೂನು ಶಿಕ್ಷಣ ಪಡೆದವರಲ್ಲ. ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ, ತಮಿಳು ಕೇಂದ್ರದ ನಿಯಂತ್ರಣದಲ್ಲಿ ತೆಲುಗು ಶೈಕ್ಷಣಿಕ ಪದ್ಧತಿಯಲ್ಲಿ, ಅಪ್ಪಟ ಕನ್ನಡ ಸಂಸ್ಕೃತಿಯ ನಿರ್ಭೀತ, ಮುಕ್ತ ಚಿಂತನೆಯ ಕೇಂದ್ರವಾಗಿದ್ದ ಬಳ್ಳಾರಿಯ ಪರಂಪರೆಯನ್ನು ಉಳಿಸುವ ಕೈಂಕರ್ಯವನ್ನೂ ಅವರು ತೊಟ್ಟಿದ್ದರು. ಪ್ರಶ್ನೆ ಮಾಡಿ ಉತ್ತರ ಕಂಡುಕೊಳ್ಳುವ, ಸತ್ಯವನ್ನು ಸಾಬೀತುಪಡಿಸುವ ಚೆನ್ನಬಸಪ್ಪನವರ ಜೀವನಧರ್ಮಕ್ಕೆ ಕಾನೂನು ಕ್ಷೇತ್ರ ಯಥೋಚಿತ ಹೊಂದಿಕೆಯಾಗಿತ್ತು.

ಸ್ವಾತಂತ್ರ್ಯಪೂರ್ವದಲ್ಲಿ, ಅಂದರೆ 1944ರಲ್ಲಿ, ಚೆನ್ನಬಸಪ್ಪನವರು ‘ಯಾರಿಗಾಗಿ?’ ಎಂಬ ಕಥೆಯನ್ನು ಬರೆದು ಪ್ರಕಟಣೆಗೆಂದು ಕಳುಹಿಸಿದಾಗ, ಈ ಕಥೆ ‘ಅಂದಿನ’ ಆಳರಸರ ವಿರುದ್ಧವಾಗಿದೆ ಎಂಬ ಕಾರಣದಿಂದ ಬೆಳಗಾವಿಯ ಕಥಾ ಸಂಕಲನದ ಪ್ರಕಾಶಕರು ಪ್ರಕಟಿಸಲು ಹೆದರಿ ಹಿಂಜರಿದಿದ್ದರು. 1951ರಲ್ಲಿ (ಸ್ವಾತಂತ್ರ್ಯ ನಂತರ) ಬರೆದ ‘ಮುಕ್ಕಣ್ಣನ ಮುಕ್ತಿ’ ಎಂಬ ಕಥೆ ಸರ್ಕಾರವನ್ನು ಟೀಕಿಸುವುದೆಂಬ ಕಾರಣದಿಂದ ಧಾರವಾಡ ಆಕಾಶವಾಣಿ ಕೇಂದ್ರವು ಅದನ್ನು ಬಿತ್ತರಿಸಲು ನಿರಾಕರಿಸಿತ್ತು. ಚೆನ್ನಬಸಪ್ಪನವರಿಗೆ ಸಂಪ್ರದಾಯಬದ್ಧ, ಸ್ಥಾಪಿತ ವ್ಯವಸ್ಥೆಯಲ್ಲಿ ‘ನನಗೆ ಆದರವಿಲ್ಲ’ ಎಂಬ ತಿಳಿವಳಿಕೆ ಬಂದಿತಾದರೂ ‘ಸಾಹಿತ್ಯ ಮತ್ತು ಸತ್ಯಕ್ಕೆ ರಾಜ, ರಾಜತ್ವ ಕೂಡ ಹೆದರುತ್ತದೆ’ ಎಂಬ ಧೋರಣೆಯನ್ನು ತಮ್ಮ ಪ್ರತಿಪಾದನೆಗೆ ಅವರು ಧೈರ್ಯವಾಗಿ ಪರಿವರ್ತಿಸಿಕೊಂಡರು. ಸಾಹಿತ್ಯ ಕ್ಷೇತ್ರದಲ್ಲಿ ಸಂಪ್ರದಾಯ ಪದ್ಧತಿಗೆ ವಿರುದ್ಧವಾದ ಪ್ರಗತಿಶೀಲ ಸಾಹಿತ್ಯ ಪಂಥಕ್ಕೆ ಸೇರಿದ ಅವರನ್ನು ಸ್ಥಾಪಿತ ವ್ಯವಸ್ಥೆಯ ಸಂಪ್ರದಾಯಪ್ರಿಯರು ಅಷ್ಟೇನೂ ಆದರದಿಂದ ನೋಡಲಿಲ್ಲ.

ಕೋ (ಕೋಣನ – ಅವರ ಹಿರಿಯರು ಕೋಣಗಳ ಮೇಲೆ ದಿನಸಿ, ದವಸಗಳನ್ನು ಹೇರಿಕೊಂಡು ವ್ಯಾಪಾರ ಮಾಡುತ್ತಿದ್ದುದರಿಂದ ಈ ಉಪನಾಮ ರೂಢವಾಗಿತ್ತು.) ಚೆನ್ನಬಸಪ್ಪನವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಆಲೂರು ಮಜರಾ ಗ್ರಾಮ ಕಾನಾಮಡುವಿನಲ್ಲಿ ಜನಿಸಿದರು. ತಂದೆ ಕೋ. ವೀರಣ್ಣ, ತಾಯಿ ಬಸಮ್ಮ (ಜನನ: 27 ಫೆಬ್ರುವರಿ 1922). ವಿದ್ಯಾರ್ಥಿಯಾಗಿದ್ದಾಗ ನಡೆದ ಹಲವು ಘಟನೆಗಳು ಚಾರಿತ್ರಿಕ. 1938ರಲ್ಲಿ ಬಳ್ಳಾರಿಯಲ್ಲಿ ಆರ್.ಆರ್. ದಿವಾಕರ ಅವರ ಅಧ್ಯಕ್ಷತೆಯಲ್ಲಿ ನಡೆದ 23ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿದ್ಯಾರ್ಥಿ ಸ್ವಯಂ ಸೇವಕರಾಗಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಕನ್ನಡ, ಸಂಸ್ಕೃತಿಗೆ ನಿಷ್ಠರಾಗಿ ರೂಪುಗೊಂಡರು. ಹದಿನಾರರ ಪ್ರಾಯದಲ್ಲಿಯೇ ಕೋ. ಚೆನ್ನಬಸಪ್ಪ ನಿರ್ಭೀತ ಗುಣವನ್ನು, ಮುಕ್ತ ಅಭಿವ್ಯಕ್ತಿಯನ್ನು ಸ್ಪಷ್ಟ ಪ್ರತಿಪಾದನೆಯನ್ನು ಮೈಗೂಡಿಸಿಕೊಂಡಿದ್ದರು. 1939–44ರವರೆಗೆ ಅನಂತಪುರದ ಸೀಡೆಡ್ ಕಾಲೇಜಿನಲ್ಲಿ ಕಾನೂನು ಅಭ್ಯಾಸ ನಡೆಸಿದರು. ಕಾನೂನು ಶಿಕ್ಷಣ ಪಡೆದ ಮೇಲೆ ಅವರು 1946–1965ರವರೆಗೆ ಬಳ್ಳಾರಿಯಲ್ಲಿ ವಕೀಲ ವೃತ್ತಿ ನಡೆಸಿದರು.

ಪ್ರಕಟಣೆಯಾಗುತ್ತಿರುವ ಸಾಹಿತ್ಯ ನಿಲುವುಗಳೇನು? ಯಾವ ಸಮಾಜ ಇದನ್ನು ಒಪ್ಪುತ್ತಿದೆ? ಪ್ರಕಟಣೆಗೆ ನಿರಾಕರಣೆಯಾಗುತ್ತಿರುವ ಸಾಹಿತ್ಯದ ನಿಲುವುಗಳೇನು? ಯಾವ ಸಮಾಜ ಇದನ್ನು ಒಪ್ಪುತ್ತಿಲ್ಲ?! ಎಂಬುದು ಕೋ. ಚೆನ್ನಬಸಪ್ಪನವರಿಗೆ ಅರ್ಥವಾಗಿದ್ದು ಅನಂತಪುರದ ಸೀಡೆಡ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ. ತಮ್ಮೂರಿನ ಜೊತೆಗಾರರೂ, ಸಹಪಾಠಿಗಳೂ ಆದ ಎ.ಬಿ. ಆರ್. ಕೊಟ್ರಗೌಡ, ಅ. ನಂಜಪ್ಪ, ನೀಲಂ ರಾಜಶೇಖರ ರೆಡ್ಡಿ, ಕಮ್ಯುನಿಸ್ಟ್ ಸಿದ್ಧಾಂತದ ನಾಗಿರೆಡ್ಡಿ, ರಾಜ್ಯಮಟ್ಟದಲ್ಲಿ ಉದಯೋನ್ಮುಖರಾಗಿ ಗುರುತಿಸಿಕೊಳ್ಳುತ್ತಿದ್ದ ಜಿ. ವೆಂಕಟರೆಡ್ಡಿ, ಕೆ.ರಾಘವಾಚಾರ್, ಪಪ್ಪುಲು ರಾಮಾಚಾರ್ಯ, ಪ್ರಾಂತ ವಲಯದಲ್ಲಿ ಗಮನ ಸೆಳೆದಿದ್ದ ರಾಜಾಜಿ, ಪ್ರಕಾಶಂ, ಬೆಜವಾಡ ಗೋಪಾಲರೆಡ್ಡಿ, ಪ್ರೊ.ರಂಗ, ಭಾರತಿರಂಗ, ಸಹಪಾಠಿಗಳಾದ ಜ್ಯೋತಿ, ಶಿವಲಿಂಗಪ್ಪ, ಕುಬೇರಪ್ಪ, ಮಹಾನಂದಯ್ಯ, ಆದಿನಾರಾಯಣರೆಡ್ಡಿ, ಅಯ್ಯಪ್ಪರೆಡ್ಡಿ, ಬುಡಾನ್ ಸಾಹೇಬ್ ಇವರ ಒಡನಾಟಗಳಿಂದ ಚೆನ್ನಬಸಪ್ಪನವರು ನಾಡಿನ ಸಮಾಜೋರಾಜಕೀಯ ಸಮಗ್ರ ಮಾಹಿತಿಗಳ ಸಂಪನ್ಮೂಲ ವ್ಯಕ್ತಿಯಾಗಿ ರೂಪಗೊಂಡಿದ್ದರು.

100ರ ನೆನಪು

ದೇಶದ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಲು ಸ್ಥಾಪನೆಗೊಂಡಿದ್ದ ಸ್ಟಿಕ್ಕರ್ಸ್ ಕ್ಲಬ್‌ನ (Sticker's club) ಪ್ರಮುಖ ಸೂತ್ರಧಾರಿಗಳಾಗಿ ಚೆನ್ನಬಸಪ್ಪನವರು ಸಹಪಾಠಿಗಳಾಗಿದ್ದ ನಂಜಪ್ಪ, ಕೊಟ್ರಗೌಡ ಅವರೊಂದಿಗೆ ಸಮರ್ಥವಾಗಿ ನಿರ್ವಹಿಸಿದ್ದರು. ಆಗ ಇವರ ವಯಸ್ಸು 18ರಿಂದ 20 ವರ್ಷ. ಈ ಚಟುವಟಿಕೆಗಳು ಅದೆಷ್ಟು ತೀವ್ರವಾಗಿದ್ದವೆಂದರೆ 1942ರ ಕ್ವಿಟ್ ಇಂಡಿಯಾ ಚಳವಳಿಯು ಕಾವೇರಿದ್ದ ಸಂದರ್ಭದಲ್ಲಿ ‘ಅಸಂಬದ್ಧ ಮಾಹಿತಿಗಳ ಹಿನ್ನೆಲೆಯಲ್ಲಿ’ ಆಗಿನ ಸರ್ಕಾರ ಈ ಮೂವರು ಯುವಕರನ್ನು ಬಂಧಿಸಲು ಆದೇಶಿಸಿತ್ತು. ನ್ಯಾಯಾಂಗ ತನಿಖೆಗೆ ಒಳಪಡಿಸಿ ಇವರ ಭವಿಷ್ಯ ನಾಶಪಡಿಸಲು ಅಂದಿನ ಪ್ರಭುತ್ವ ಯೋಜಿಸಿದ್ದಾಗ ಹೆಸರಾಂತ ವಕೀಲರೂ ಅಂತರರಾಷ್ಟ್ರೀಯ ಶ್ರೇಷ್ಠ ಕಲಾವಿದರೂ ಆಗಿದ್ದ ‘ಬಳ್ಳಾರಿ ರಾಘವ’ ಈ ಯುವಕರ ಪರ ವಾದಿಸಿ ಆರೋಪಮುಕ್ತಗೊಳಿಸಿದ್ದರು.

ಕೇಳ್ಕರ್ ಅವರ ಅವೈಜ್ಞಾನಿಕ ವರದಿಯ ಪರಿಣಾಮವಾಗಿ ಮೂಡಿಬಂದ ಆರ್.ಕೆ.ಧರ್ ಕಮಿಟಿ ವರದಿ, ಜೆ.ಎ.ಪಿ.ವರದಿ, ಕೆ.ಎಸ್. ವಾಂಛೂ ವರದಿ, ಎಸ್.ಆರ್. ಮಿಶ್ರಾ ವರದಿ, ಫಜಲ್ ಆಲಿ ಕಮಿಟಿ ವರದಿಗಳ ಮಂಡನೆ, ಪ್ರತಿಕ್ರಿಯೆ ಸಂದರ್ಭಗಳಲ್ಲಿ ಬಳ್ಳಾರಿ ಜಿಲ್ಲೆಗೆ ನ್ಯಾಯ ಒದಗಿಸಲು ಚೆನ್ನಬಸಪ್ಪನವರು ಕಾನೂನು ತಜ್ಞರಾಗಿ ‘ಅವತಾರ ಪುರುಷ’ರಂತೆ ಸಮರ್ಥವಾಗಿ ಒದಗಿಬಂದರು. ಸ್ವತಂತ್ರ ಭಾರತ ಮೊದಲ ಭಾಷಾವಾರು ರಾಜ್ಯವಾಗಿ ರೂಪುಗೊಂಡ (1 ಅಕ್ಟೋಬರ್ 1953) ಆಂಧ್ರಪ್ರದೇಶ ರಚನೆಯ ಸಂದರ್ಭದಲ್ಲಿ ಮೈಸೂರು ರಾಜ್ಯ ಬಳ್ಳಾರಿ ಜಿಲ್ಲೆಯನ್ನು ತನ್ನೊಳಗೆ ಸೇರಿಸಿಕೊಳ್ಳುವ ಸಂದರ್ಭದಲ್ಲಿ ಮೂಡಿದ ಅಪಸ್ವರಕ್ಕೆ ಬಳ್ಳಾರಿಯ ತಂಡ – ಅಲ್ಲಂ ಕರಿಬಸಪ್ಪನವರ ನೇತೃತ್ವದಲ್ಲಿ ಚೆನ್ನಬಸಪ್ಪ, ಗಡಗಿ ಮರಿಸ್ವಾಮಪ್ಪ, ಅಂಗಡಿ ಚೆನ್ನಬಸಪ್ಪ, ಮತ್ತು ಸೌದಾಗರ್ ಅಬ್ದುಲ್ ರಜಾಕ್ ಸಾಹೇಬ್ ಅವರು ಮೈಸೂರು ರಾಜ್ಯದ ಎಲ್ಲಾ ಶಾಸಕರನ್ನು ಸ್ವತಃ ಸಂಪರ್ಕಿಸಿ ಪರಿಸ್ಥಿತಿಯನ್ನು ವಿವರಿಸಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಮನವೊಲಿಸಿ ಬಳ್ಳಾರಿಯನ್ನು ಮೈಸೂರು ರಾಜ್ಯಕ್ಕೆ ಸೇರಿಸಿದರು (ಈ ಐವರು ಓಡಾಡಿದ ಕಾರು; ಮಾರಿಸ್ ಮೈನರ್ –135 ಇಂದಿಗೂ ಅಲ್ಲಂ ವೀರಭದ್ರಪ್ಪ ಅವರ ಮನೆಯಲ್ಲಿ ಮೂಕ ಸಾಕ್ಷಿಯಾಗಿ ನಿಂತಿದೆ). ಬಳ್ಳಾರಿ ವಿಲೀನ ಸಂದರ್ಭದಲ್ಲಿ ‘Welcome Bellary-ಸ್ಮರಣ ಸಂಚಿಕೆಯೂ ಒಂದು ದಾಖಲೆಯಾಗಿದೆ.

ಬಳ್ಳಾರಿಗೆ, ಅದರ ಹೆಮ್ಮೆಯ ಪುತ್ರ ಕೊಟ್ಟ ಕೊಡುಗೆ ಇದಾದರೆ, ಬಳ್ಳಾರಿಯು ನಾಡಿಗೆ ಕೊಟ್ಟ ಅಭಿಮಾನದ ಕಾಣಿಕೆಯೂ ಇವರಾಗಿದ್ದಾರೆ. ಬದುಕಿನ ಕೊನೆಯ ಕ್ಷಣದವರೆಗೆ ನ್ಯಾಯಕ್ಕಾಗಿ ಹಂಬಲಿಸಿದ ನ್ಯಾಯ ನಿಷ್ಠುರಿ ಅವರು. ಬಡವರ ಪರ ಅನನ್ಯ ಕಾಳಜಿ ಹೊಂದಿದ್ದರು. ವಕೀಲರಾಗಿ, ನ್ಯಾಯಾಧೀಶರಾಗಿ, ಲೇಖಕರಾಗಿ ನಾಡು, ನುಡಿಯ ಸೇವೆಯನ್ನು ಪರಿಪರಿಯಾಗಿ ಮಾಡಿದವರು.

ಒಂದು ಕಾಲದ ಚರಿತ್ರೆಯ ಘಟಕವಾಗಿ ಒಬ್ಬ ವ್ಯಕ್ತಿ, ಒಬ್ಬ ವ್ಯಕ್ತಿಯ ಜೀವನ ಚರಿತ್ರೆ, ಒಂದು ನಾಡಿನ ಚರಿತ್ರೆ ಅವಿಭಜಿತವಾಗಿರುವುದು. ಈ ಮಾತಿಗೆ ಚೆನ್ನಬಸಪ್ಪನವರ ವಿಷಯದಲ್ಲಿ ಸತ್ಯನಿದರ್ಶನವಾಗಿದೆ. ಅಂತಹ ಚೇತನದ ಶತಮಾನೋತ್ಸವ ನಮ್ಮನ್ನು ಮತ್ತೆ ಕರ್ತವ್ಯಕ್ಕೆ ಸಮರ್ಪಿಸಿಕೊಳ್ಳಲು ಪ್ರೇರಣೆದಾಯಕವಾಗಿದೆ.

ಹಲವು ಜ್ಞಾನ ಟಿಸಿಲುಗಳ ‘ಆಲದ ಮರ’

ಮೋಹನ್ ಕುಮಾರ್ ಮಿರ್ಲೆ

ಪು: 208 ₹225

ಅಪ್ಪ ನೆಟ್ಟ ಆಲದ ಮರ
ಲೇ: ಡಾ. ಜಿ.ಎಸ್. ಶಿವಪ್ರಸಾದ್
ಪ್ರ: ನವಕರ್ನಾಟಕ, ಬೆಂಗಳೂರು
ಸಂ: 080-22161900

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಪುತ್ರ ಡಾ. ಜಿ.ಎಸ್. ಶಿವಪ್ರಸಾದ್ ಅವರು ವೃತ್ತಿಯಲ್ಲಿ ಮಕ್ಕಳ ತಜ್ಞರು. ಇಂಗ್ಲೆಂಡ್ ನಿವಾಸಿಯಾಗಿರುವ ಇವರ ನಾಲ್ಕನೆಯ ಕನ್ನಡ ಕೃತಿ ‘ಅಪ್ಪ ನೆಟ್ಟ ಆಲದ ಮರ’.

ಈ ಕೃತಿಯಲ್ಲಿ ಒಟ್ಟು ಮೂವತ್ತೊಂದು ಲೇಖನಗಳಿವೆ. ಲೇಖಕರು ಇವುಗಳನ್ನು ಬಿಡಿ ಬರಹಗಳೆಂದು ಕರೆದಿದ್ದಾರೆ. ಇಲ್ಲಿ ಲೇಖಕರ ಬಾಲ್ಯದ ನೆನಪುಗಳಿವೆ. ತಂದೆಯೊಂದಿಗಿನ ಒಡನಾಟದ ಚಿತ್ರಣಗಳಿವೆ. ಕನ್ನಡ ಪ್ರೀತಿಯಿದೆ. ಕೊರೊನಾ ಕಾಲದ ಬಿಕ್ಕಟ್ಟುಗಳಿವೆ. ಬ್ರಿಟಿಷ್ ಸಂಸ್ಕೃತಿಯ ಪರಿಚಯವಿದೆ. ಸಾಹಿತ್ಯ, ಚಲನಚಿತ್ರ, ಧಾರಾವಾಹಿ ಮತ್ತು ರಾಜಕೀಯಗಳಿಗೆ ಸಂಬಂಧಿಸಿದ ಬರಹಗಳಿವೆ.

ಗಿರೀಶ ಕಾಸರವಳ್ಳಿ, ಎಚ್ಚೆಸ್ವಿ, ಮಾಸ್ಟರ್ ಹಿರಣ್ಣಯ್ಯ ಹಾಗೂ ನಿಸಾರ್ ಅಹಮದ್ ಅವರ ಇಂಗ್ಲೆಂಡ್ ಪ್ರವಾಸದ ನೆನಪುಗಳು, ಸಂದರ್ಶನಗಳು ಇವೆ. ರಾಷ್ಟ್ರ ಪ್ರಜ್ಞೆ ಮತ್ತು ಧರ್ಮ ಪ್ರಜ್ಞೆಯನ್ನು ಕುರಿತ ಸೂಕ್ಷ್ಮ ನೋಟಗಳಿವೆ. ಜೊತೆಗೆ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳು ಮತ್ತು ಲೇಖಕರ ವೃತ್ತಿ ಅನುಭವಗಳೂ ಇವೆ.

ಅನಿವಾಸಿ ಕನ್ನಡಿಗನಾಗಿ ಬ್ರಿಟಿಷ್ ಸಮಾಜದಲ್ಲಿನ ಕೆಲವೊಂದು ಲೋಪಗಳನ್ನು ಹೇಳುತ್ತಲೇ ಲೇಖಕರು ಅಲ್ಲಿನ ಸಂಸ್ಕೃತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ತಮ್ಮ ಮೂವತ್ತು ವರ್ಷಗಳ ಸುದೀರ್ಘ ಅನಿವಾಸಿ ಬದುಕಿನಲ್ಲಿ ಕಂಡ ಅನುಭವಗಳನ್ನು ಎರಡೂ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ತೌಲನಿಕವಾಗಿ ಚರ್ಚಿಸಿದ್ದಾರೆ. ತಲೆಮಾರುಗಳ ನಡುವಿನ ಪಲ್ಲಟಗಳನ್ನು ಮತ್ತು ಸಾಂಸ್ಕೃತಿಕ ತಲ್ಲಣಗಳನ್ನು ನಿರ್ಭಾವುಕತೆಯಿಂದ ನಿರೂಪಿಸಿದ್ದಾರೆ.

ಅನಿವಾಸಿ ಕನ್ನಡಿಗರಿಗೆ ಕನ್ನಡ ಕಲಿಕೆ ಏಕೆ ಮತ್ತು ಹೇಗೆ ಅವಶ್ಯಕ ಮತ್ತು ಕಲಿತದ್ದು ಎಷ್ಟರಮಟ್ಟಿಗೆ ಪ್ರಸ್ತುತ ಎಂಬುದನ್ನು ವೈಜ್ಞಾನಿಕವಾಗಿ ಚರ್ಚಿಸಿದ್ದಾರೆ. ಇಂಗ್ಲೆಂಡ್ ನಿವಾಸಿಯಾಗಿ ಅವರು ಎದುರಿಸಿದ ಹಲವು ಸಾಮಾಜಿಕ ವೈರುಧ್ಯಗಳು, ಸಾಂಸ್ಕೃತಿಕ ಸಂಘರ್ಷಗಳು ಇಲ್ಲಿನ ಹಲವು ಲೇಖನಗಳಲ್ಲಿ ದಾಖಲಾಗಿವೆ. ಈ ಕಾರಣಗಳಿಗಾಗಿ ಇದು ವ್ಯಕ್ತಿಯೊಬ್ಬರ ಅನುಭವ ಕಥನವಾಗಿಯಷ್ಟೇ ಉಳಿಯದೆ ಒಂದು ಸಾಂಸ್ಕೃತಿಕ ಕಥನವಾಗಿ ರೂಪುಗೊಂಡಿದೆ.

ಇನ್ನು ಮಗನಾಗಿ ತಂದೆಯ ಬದುಕಿನ ಮೌಲ್ಯಗಳನ್ನು ಕಟ್ಟಿಕೊಡುವ ಪ್ರಯತ್ನವೂ ಇಲ್ಲಿನ ಕೆಲವು ಲೇಖನಗಳಲ್ಲಿದೆ. ಯಾವಾಗಲೂ ಪ್ರತಿಭೆ ಮತ್ತು ಅರ್ಹತೆಗೆ ಒತ್ತು ಕೊಡುತ್ತಿದ್ದ ಜಿ.ಎಸ್.ಎಸ್. ಬಡವರು ಮತ್ತು ಹಿಂದುಳಿದವರ ವಿಚಾರದಲ್ಲಿ ಮಾತ್ರ ಮೀಸಲಾತಿ ನಿಯಮವನ್ನು ಪಾಲಿಸುತ್ತಿದ್ದುದನ್ನು ಇಲ್ಲಿ ಸ್ಮರಿಸಿದ್ದಾರೆ.

ಒಳನೋಟ

ಹಾಗೆಯೇಸ್ಪರ್ಧೆಮತ್ತುಶ್ರದ್ಧೆಕುರಿತ ಜಿ.ಎಸ್.ಎಸ್. ಧೋರಣೆಗಳನ್ನು, ಅವರ ಸ್ವಾಭಿಮಾನ, ಪ್ರಾಮಾಣಿಕತೆ ಹಾಗೂ ವೈಚಾರಿಕತೆಗಳಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ನೆನಪಿಸಿಕೊಂಡಿದ್ದಾರೆ. ಅಪ್ಪನ ಶಿಸ್ತಿನ ಬಗ್ಗೆ ಹೇಳುತ್ತಾ ‘ಬಹುಶಃ ಇದು ದಕ್ಕಿದ್ದು, ಇನ್ನೂರು ವರ್ಷಗಳ ಕಾಲದ ಬ್ರಿಟಿಷ್ ಆಳ್ವಿಕೆಯಿಂದ, ಇದು ನನ್ನ ಊಹೆ’ ಎಂದು ಅಭಿಪ್ರಾಯಪಡುತ್ತಾರೆ. ಈ ಊಹೆಯ ಹಿಂದೆ ಅವರ ಅನಿವಾಸಿ ಬದುಕಿನ ಅನುಭವವೂ ಪ್ರಭಾವ ಬೀರಿರಬಹುದು ಎನಿಸುತ್ತದೆ.

ಶಿವಪ್ರಕಾಶರು ತಮ್ಮ ತಂದೆಯ ಮೇಲಿನ ಕೊನೆಯಿಲ್ಲದ ಪ್ರೀತಿಯನ್ನೂ ಅಭಿಮಾನವನ್ನೂ ದಾಖಲಿಸುತ್ತಲೇ ತಂದೆ ರಾಷ್ಟ್ರಕವಿ ಎಂಬ ಹಿಗ್ಗನ್ನು ಅತಿಮಾಡದೆ ಸಂಯಮವನ್ನೂ ತೋರಿದ್ದಾರೆ. ಒಂದು ಅಂತರದಲ್ಲಿ ನಿಂತು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹೇಳಿಕೊಂಡಿದ್ದಾರೆ. ಅಲ್ಲದೆ ತಾನು ದೊಡ್ಡ ಲೇಖಕರ ಮಗ ಎಂಬ ಅಹಂಕಾರವನ್ನಾಗಲೀ ಇಲ್ಲವೆ ಅವರಷ್ಟು ಬೆಳೆಯಲಾಗದ ಕೀಳರಿಮೆಯನ್ನಾಗಲೀ ಎಲ್ಲೂ ಪ್ರಕಟಪಡಿಸದೆ ತಮ್ಮ ಹಿಡಿತಕ್ಕೆ, ತಮ್ಮ ವ್ಯಾಪ್ತಿಗೆ ದಕ್ಕಿದ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತಾ ಹೋಗುತ್ತಾರೆ.

ಇನ್ನು ಕೃತಿಯ ಶೀರ್ಷಿಕೆ ಸ್ಥಾಪಿತ ಅರ್ಥದ ನೆಲೆಗೆ ವಿರುದ್ಧವಾದ ನೆಲೆಯಲ್ಲಿ ಇದೆ. ಹಾಗಾಗಿ ಇದು ಒಂದು ಹೊಸ ರೂಪಕದಂತೆ ನಮಗೆ ಕಾಣುತ್ತದೆ. ಇಲ್ಲಿ ‘ಅಜ್ಜ ನೆಟ್ಟ ಆಲ’ ಎಂಬ ಲೋಕರೂಢಿಯ ಮಾತು ‘ಅಪ್ಪ ನೆಟ್ಟ ಆಲ’ವಾಗಿ ರೂಪುಗೊಂಡಿದೆ. ತಂದೆ ಜಿ.ಎಸ್.ಎಸ್. ಹುಟ್ಟುಹಾಕಿದ ಕೌಟುಂಬಿಕ ಚೌಕಟ್ಟೇ ಇಲ್ಲಿ ಆಲದ ಮರವಾಗಿದೆ. ಈ ಆಲದ ಮರದ ಆಸರೆಯಲ್ಲಿ ಬೆಳೆದ ಜಿ.ಎಸ್.ಎಸ್. ಕುಟುಂಬ ಮತ್ತು ಅವರ ಆಪ್ತ ಬಳಗದ ಒಡನಾಟಗಳ ಕೆಲವೊಂದು ಅಪೂರ್ವ ಚಿತ್ರಣಗಳೂ ಈ ಕೃತಿಯಲ್ಲಿವೆ.

ಒಂದೇ ಓದಿನಲ್ಲಿ ಹಲವು ಶಿಸ್ತುಗಳ ಜ್ಞಾನವನ್ನು ಪಡೆಯಲು ನೆರವಾಗುವ ಈ ಕೃತಿ, ಓದುಗರನ್ನು ಹಲಬಗೆಯ ಚಿಂತನೆಗಳಿಗೆ ಒಡ್ಡುವ ಶಕ್ತಿಯನ್ನೂ ಹೊಂದಿದೆ. ತಾವು ಬದುಕುತ್ತಿರುವ ಕಾಲಘಟ್ಟಕ್ಕೆ ಹೇಗೆ ಸ್ಪಂದಿಸಬೇಕು ಮತ್ತು ಅದಕ್ಕೆ ತಮ್ಮ ನಿಲುವು ಏನು ಎಂಬುದನ್ನು ಲೇಖಕರು ಇಲ್ಲಿನ ಲೇಖನಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಈ ನಿಟ್ಟಿನಲ್ಲಿ ಲೋಕ ಎದುರಿಸುತ್ತಿರುವ ಸವಾಲುಗಳಿಗೆ ಒಂದು ಸ್ಪಂದನೆಯಾಗಿಯೂ ಈ ಕೃತಿ ಕಂಡುಬರುತ್ತದೆ.

ಮೊದಲ ಓದು

ಅನನ್ಯ ಜೀವಗಳ ನಂಟಿನ ಕಟ್ಟು



ಪು: 204 ₹200

ಜೀವ ಜೀವದ ನಂಟು
ಲೇ: ಬಿ.ಎಸ್. ಜಯಪ್ರಕಾಶ ನಾರಾಯಣ
ಪ್ರ: ವಂಶಿ ಪಬ್ಲಿಕೇಷನ್ಸ್, ಬೆಂಗಳೂರು
ಸಂ: 9916595916

ಈ ಕೃತಿ ಸುಮಾರು ಐದಾರು ವರ್ಷಗಳ ಹಿಂದೆ ಬಿಡುಗಡೆಯಾಗಿದ್ದ ಜಯಪ್ರಕಾಶ ನಾರಾಯಣ ಅವರ ‘ಜೀವ ಜೀವದ ನಂಟು: ಸಾದಾ ಸೀದಾ ಮನುಷ್ಯರು’ ಕೃತಿಯ ಎರಡನೇ ಕಟ್ಟು. ಈ ಹೊಸ ಕಟ್ಟು ಅಂತರಂಗದ ಅನನ್ಯರಿಗೆ ಮೀಸಲು.

ಅನುವಾದಕರಾಗಿ ಖ್ಯಾತಿ ಪಡೆದಿರುವ ಲೇಖಕರು ಹುಟ್ಟಿ ಬೆಳೆದಿದ್ದು, ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರಿದ ಅಗ್ರಹಾರ ಬೆಳಗುಲಿಯಲ್ಲಿ. ಈ ಊರಿಗೆ ಸುಮಾರು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ ಎನ್ನುವ ಲೇಖಕರು, ಅಲ್ಲಿನ ಇತಿಹಾಸ, ವಾಸಿಸುವ ಕುಟುಂಬಗಳು ಮತ್ತು ಅಲ್ಲಿನ ಸಮಾಜದಲ್ಲಿ ಉಂಟಾದ ಪಲ್ಲಟಗಳನ್ನು ವ್ಯಕ್ತಿಚಿತ್ರಣಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಇದು ಲೇಖನಗಳ ಗುಚ್ಛ ಎನ್ನುವುದರ ಜೊತೆಗೆ ನೆನಪಿನ ಸುರುಳಿಗಳನ್ನು ಬಿಡಿಸುತ್ತಾ ಲೇಖನಿ ಮೂಲಕ ಹದವಾಗಿ ಹರಡಿ ಓದುಗರ ಮುಂದಿಟ್ಟಿರುವ ಪ್ರಬಂಧ ಎನ್ನಬಹುದು. ಲೇಖಕರು ಅನುಭವಿಸಿದ ಪ್ರಸಂಗಗಳು, ಕಣ್ಣಿಗೆ ಕಂಡ ಪರಿಚಿತ ವ್ಯಕ್ತಿಗಳ ನಿತ್ಯದ ನಡವಳಿಕೆ, ಹವ್ಯಾಸ, ಬದುಕು–ಬವಣೆಗಳನ್ನು ಅನನ್ಯ ವ್ಯಕ್ತಿಚಿತ್ರಣಗಳ ಮೂಲಕ ಚಿತ್ರಿಸಿದ್ದಾರೆ. ‘ನಶ್ಯೆ ತ್ವಾಪ’ ಅಲಿಯಾಸ್ ತೋಪಯ್ಯನ ವರ್ಣನೆ, ಗಿರಿಯಪ್ಪ ಮೇಷ್ಟ್ರ ಮೂಲಕ ಜಾತಿ ವ್ಯವಸ್ಥೆಯ ಆಯಾಮದ ವಿಶ್ಲೇಷಣೆ ಹಾಗೂ ಸಮಾಜದಲ್ಲಿನ ಸಂಕೀರ್ಣತೆಯ ಸೂಕ್ಷ್ಮವನ್ನು 20 ವ್ಯಕ್ತಿಚಿತ್ರಣಗಳಲ್ಲಿ ಲೇಖಕರು ಮುಂದಿಟ್ಟಿದ್ದಾರೆ. ಹೀಗಾಗಿಯೇ ಓದುಗರಿಗೆ ತಮ್ಮ ಬಾಲ್ಯ, ಊರಿನ ಚಿತ್ರಣ, ಅಲ್ಲಿನ ಕೆಲ ವಿಶೇಷ ವ್ಯಕ್ತಿಗಳ ನೆನಪೂ ಸ್ಮೃತಿಪಟಲದಲ್ಲಿ ಹಾದುಹೋಗಬಹುದು. ವ್ಯಕ್ತಿಚಿತ್ರಣಗಳಲ್ಲಿ ಬಳಸಿರುವ ಭಾಷೆಯಲ್ಲಿನ ಮಿಶ್ರಣ ಓದಿಗೆ ಮುದ. ಚನ್ನರಾಯಪಟ್ಟಣ ಸೀಮೆಯ ಕನ್ನಡದ ಸೊಬಗು ಇಲ್ಲಿನ ಹಲವು ಪಾತ್ರಗಳಲ್ಲಿ ಇದೆ. ಹಲವು ವಿಶಿಷ್ಟ ಪದಗಳೂ ಇಲ್ಲಿ ಜೋಡಣೆಯಾಗಿವೆ.

ಉದಯ ಪ್ರಕಾಶ್ ಅವರ
ನೀರ್ಗುದುರೆ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸ್ಮಿತಾ ಅಮೃತರಾಜ್ ಅವರ
ಮೀರಬೇಕು ಒಮ್ಮೆಯಾದರೂ
ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬದುಕಿಗೆ ಹಿಡಿದ ಕನ್ನಡಿಯಾಗಿ ‘ಹೋಳಿ’

ಚಿದಾನಂದ ಸಾಲಿ



ಪು: 68 ₹60

ಹೋಳಿ
ಲೇ: ಹೇಮಾ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ, ಧಾರವಾಡ
ಸಂ: 94488 61604

ಭಾರತೀಯ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ನಾಲ್ವರು ಶ್ರೇಷ್ಠ ನಾಟಕಕಾರರೆಂದು ಹೆಸರಾದವರು ಮರಾಠಿಯ ವಿಜಯ್ ತೆಂಡೂಲ್ಕರ್, ಮಹೇಶ್ ಎಲಕುಂಚವಾರ, ಹಿಂದಿಯ ಹಬೀಬ್ ತನ್ವೀರ್ ಹಾಗೂ ಕನ್ನಡದ ಗಿರೀಶ ಕಾರ್ನಾಡರು. ಮಹೇಶ್ ಎಲಕುಂಚವಾರರ ‘ಚಿರೇಬಂದಿ ವಾಡೆ’ ನಾಟಕವು ನೀನಾಸಂ ತಿರುಗಾಟದ ಭಾಗವಾಗಿ ಪ್ರದರ್ಶಿತಗೊಂಡು ಕನ್ನಡದ ರಂಗಾಸಕ್ತರ ಮನಸ್ಸಲ್ಲಿ ಮೂಡಿಸಿದ ಛಾಪು ಅಚ್ಚಳಿಯದಂಥದ್ದು. ಅದಾದ ದಶಕಗಳ ನಂತರ ಅಷ್ಟೇ ಸಶಕ್ತವಾಗಿ ಕನ್ನಡೀಕರಣಗೊಂಡು ಬಂದಿರುವ ಅವರದೇ ಮತ್ತೊಂದು ಧ್ವನಿಪೂರ್ಣ ನಾಟಕ ಈ ‘ಹೋಳಿ’.

ಒಂದೇ ದಿನದಲ್ಲಿ ನಡೆಯುವ ಈ ಒಂದಂಕದ ನಾಟಕದಲ್ಲಿ- ಕಾಲೇಜು ಹಾಸ್ಟೆಲಿನಲ್ಲಿರುವ ವಿದ್ಯಾರ್ಥಿಗಳು ಹೋಳಿ ಹಬ್ಬಕ್ಕಾಗಿ ರಜೆ ಬೇಕು ಎಂಬ ಬೇಡಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಶುರು ಮಾಡುವ ಮಾತುಕತೆಯು, ವೈಯಕ್ತಿಕ ತೇಜೋವಧೆಯತ್ತ ತಿರುಗಿದ ಪರಿಣಾಮವಾಗಿ, ಇಬ್ಬರು ಹುಡುಗರ ಜಗಳ ವಿಪರೀತಕ್ಕೆ ತಲುಪುತ್ತದೆ. ಪ್ರಿನ್ಸಿಪಾಲರು ತನ್ನ ಸಂಬಂಧಿಯಾದವನನ್ನು ಬಿಟ್ಟು, ತೇಜೋವಧೆಗೊಳಗಾದವನನ್ನೇ ಕಾಲೇಜಿನಿಂದ ರಸ್ಟಿಕೇಟ್ ಮಾಡಿ ತಾರತಮ್ಯ ಪ್ರದರ್ಶಿಸುತ್ತಾರೆ. ಕುಪಿತರಾದ ವಿದ್ಯಾರ್ಥಿಗಳು ಕಾಲೇಜಿಗೆ ಕರೆಸಲಾಗಿದ್ದ ಅತಿಥಿಗೆ ಪ್ರಿನ್ಸಿಪಾಲರೆದುರೇ ಸಭೆಯಲ್ಲೇ ಗೋಳು ಹೊಯ್ದುಕೊಂಡು, ಮೊಟ್ಟೆ ಎಸೆದು ತೀವ್ರ ಅವಮಾನ ಉಂಟು ಮಾಡುತ್ತಾರೆ. ಇವರ ಮೇಲೆ ಕ್ರಮಕ್ಕೆ ಮುಂದಾಗುವ ಪ್ರಿನ್ಸಿಪಾಲರಿಗೆ ಇವರೆಲ್ಲರ ಹೆಸರನ್ನು ಆನಂದನೆಂಬುವವನು ನೀಡಿದ್ದು ಗೊತ್ತಾದ ಮೇಲೆ ಈ ಹುಡುಗರೆಲ್ಲ ಸೇರಿ ಆನಂದನಿಗೆ ಸೀರೆ ಉಡಿಸಿ, ಕಾಡಿಸಿ ಅವಮಾನ ಮಾಡುವುದಲ್ಲದೆ ‘ನಾಳೆ ಹುಬ್ಬು ಬೋಳಿಸಿ ಕಾಲೇಜಿನಲ್ಲಿ ಮೆರವಣಿಗೆ ಮಾಡುತ್ತೇವೆ’ ಎಂದು ಹೇಳಿ, ಕೋಣೆಯಲ್ಲಿ ಕೂಡಿ ಹಾಕುತ್ತಾರೆ. ಅವಮಾನ ತಾಳಲಾಗದ ಆನಂದ ಆತ್ಮಹತ್ಯೆ ಮಾಡಿಕೊಂಡ ಪರಿಣಾಮವಾಗಿ ವಿದ್ಯಾರ್ಥಿಗಳ ‘ಪೋಲೀಸ್ ವಿಚಾರಣೆ’ ಶುರುವಾಗುವುದರೊಂದಿಗೆ ನಾಟಕ ಮುಗಿಯುತ್ತದೆ.

ಕೇವಲ ಐವತ್ತು ಪುಟಗಳಲ್ಲಿ ಹರಡಿಕೊಂಡಿರುವ ಈ ನಾಟಕ ಎಷ್ಟೊಂದು ಬಗೆಯ ವ್ಯಕ್ತಿತ್ವಗಳ ಬಗ್ಗೆ, ಜೀವನಶೈಲಿಗಳ ಬಗ್ಗೆ, ಮನಸ್ಥಿತಿಗಳ ಬಗ್ಗೆ ಮಾತಾಡುತ್ತದಲ್ಲ ಎಂದು ಆಶ್ಚರ್ಯವಾಗುತ್ತದೆ.

ಒಳನೋಟ

ಆರ್ಥಿಕತೆಗೂ ಐಶಾರಾಮಿ ಜೀವನಶೈಲಿಗೂ ಇರುವ ಸಂಬಂಧ (ಬ್ಯಾನರ್ಜಿಯ ತಾಯಿ), ಅನಾಥ ಬಾಲ್ಯಕ್ಕೂ ಅಪರಾಧೀ ಕೌಮಾರ್ಯಕ್ಕೂ ಇರುವ ಸಂಬಂಧ (ರಣಜಿತ್) ಮತ್ತು ಜಾತಿಗಳಿಗೂ ಮನಸ್ಥಿತಿಗಳಿಗೂ ಇರುವ ಸಂಬಂಧ (ಶ್ರೀವಾಸ್ತವ, ದೇಶಮುಖ, ಕಾಟಕರ್, ವಣಕರ್, ಠಾಕೂರ್, ಪಾಟೀಲ, ಮ್ಹಾತ್ರೆ)ಗಳ ಸ್ವರೂಪಗಳು ಬಹಳ ಸೂಚ್ಯವಾಗಿ, ಸೂಕ್ಷ್ಮ ಒಳನೋಟಗಳಲ್ಲಿ ಕೆತ್ತಲ್ಪಟ್ಟಿವೆ. ಯೌವನದ ವಯೋಸಹಜ ‘ಆವೇಶ’ವು ಹೇಗೆ ವಿದ್ಯಾರ್ಥಿಗಳ ಬದುಕನ್ನು ಆಪೋಶನ ತೆಗೆದುಕೊಂಡುಬಿಡುತ್ತದೆ ಎಂಬುದರ ಬಗ್ಗೆ ಕೊನೆಯಲ್ಲಿ ಒಂದು ವಿಷಾದ ಭಾವವು ಓದುಗನಲ್ಲಿ ಜಾಗೃತವಾಗುವಂತೆ ನಾಟಕದ ಸಂಘರ್ಷವನ್ನು ಕ್ರಮೇಣವಾಗಿ ಉತ್ಕರ್ಷಕ್ಕೇರಿಸುತ್ತ ಪರಾಕಾಷ್ಠೆಯ ಸ್ಥಿತಿಗೆ ತಲುಪಿಸುತ್ತಾರೆ ನಾಟಕಕಾರರು. ಆವೇಶ ಮತ್ತು ಆಲೋಚನೆಗಳ ಕವಲಿನಲ್ಲಿ ಸರಿ ಆಯ್ಕೆ ತೋಚದೆ ಕಂಗಾಲಾಗಿ ನಿಂತಿರುವ ಯುವಸಮೂಹಕ್ಕೆ ಸಂಬಂಧಿಸಿದಂತೆ ಕುಟುಂಬ, ಸಮಾಜ ಮತ್ತು ಶಿಕ್ಷಣ ವ್ಯವಸ್ಥೆ ವಹಿಸಬೇಕಾದ ಜವಾಬ್ದಾರಿಯತ್ತ ಮಿತ್ರಸಂಹಿತೆ ಮಾದರಿಯಲ್ಲಿ ನಮ್ಮ ಗಮನ ಸೆಳೆಯುತ್ತಿದೆ ಈ ನಾಟಕ.

ಸಮೂಹಗತಿಶಾಸ್ತ್ರದ ಸ್ವಭಾವ, ರಕ್ಷಣಾತ್ಮಕ ತಂತ್ರಗಳ ಪ್ರಭಾವ, ದೂರಗಾಮಿ ಪರಿಣಾಮಗಳ ವಿವೇಚನೆಯ ಅಭಾವ ಹೀಗೆ ಅದೆಷ್ಟೋ ಅಂಶಗಳು ಇಲ್ಲಿನ ಪಾತ್ರಗಳ ಮೂಲಕ ಅನಾವರಣಗೊಂಡಿವೆ. ಇಲ್ಲಿರುವ ಅಶ್ಲೀಲ ಪದಗಳು ಎಲ್ಲೂ ಅಶ್ಲೀಲವೆನಿಸದಿರಲು ಕಾರಣ ಅವುಗಳನ್ನು ನುಡಿಯುವ ಪಾತ್ರಗಳ ವಯಸ್ಸು ಮತ್ತು ಮನಸ್ಸುಗಳಿಗೆ ಅವು ಅನುಗುಣವಾಗಿರುವುದೇ ಆಗಿದೆ. ಮುಖ್ಯವಾಗಿ ಈ ನಾಟಕದ ಶಕ್ತಿ ಅಡಗಿರುವುದೇ ಅದರ ಭಾಷೆಯ ಸೌಂದರ್ಯದಲ್ಲಿ ಮತ್ತು ಆ ಮೂಲಕ ಅದು ಹೊಮ್ಮಿಸಲು ಬಯಸುತ್ತಿರುವ ಆಳದ ಸಾಮಾಜಿಕ ಕಾಳಜಿಯಲ್ಲಿ. ಆ ವಯೋಮಾನದ, ಸ್ವಭಾವದ ಕನ್ನಡಿಯಂತಿರುವ ಭಾಷೆಯನ್ನು ಹಾಗೆ ಇಲ್ಲಿ ತುಂಬಾ ಕೌಶಲಪೂರ್ಣವಾಗಿ ಬಳಸಲಾಗಿದೆ. ಹಾಗೆಯೇ ಯೌವನವೆಂಬ ಹುದಲಿನ ಹೊಳೆಯಲ್ಲಿ ಆಡಾಡ್ತಾ ಪ್ರಾಣ ಕಳೆದುಕೊಳ್ಳುವ ವಿದ್ಯಾರ್ಥಿಗಳಿಗೆ ಸರಿಯಾದ ಒಂದು ಜೀವನಪಾಠವನ್ನೂ ಆಟದ ಮೂಲಕವೇ ಅರ್ಥಪೂರ್ಣವಾಗಿ ದಾಟಿಸಲಾಗಿದೆ.

ಸೊಗಸಾದ ಧಾರವಾಡೀ ಕನ್ನಡದಲ್ಲಿ ಅನುವಾದಗೊಂಡಿರುವ ಈ ನಾಟಕವು ಪ್ರದರ್ಶನಕ್ಕೆ ಹೇಳಿ ಮಾಡಿಸಿದಂತಿದ್ದು, ಯುವಜನತೆಯನ್ನು ಸರಿದಾರಿಗೆ ಹಚ್ಚುವ ಕಾರಣಕ್ಕಾಗಿಯಾದರೂ ಹೆಚ್ಚೆಚ್ಚು ಪ್ರದರ್ಶನಗೊಳ್ಳಬೇಕು ಎಂಬ ಆಸೆ ಹುಟ್ಟಿಸುವಂತಿದೆ. ಹೇಮಾ ಪಟ್ಟಣಶೆಟ್ಟಿಯವರ ಸಾಹಿತ್ಯ ಮತ್ತು ರಂಗಭೂಮಿ ಹಿನ್ನೆಲೆಗಳು ನಿರ್ದಿಷ್ಟವಾಗಿ ಈ ನಾಟಕದ ಭಾಷೆಯಲ್ಲಿ ಮತ್ತು ಒಟ್ಟಂದದಲ್ಲಿ ಇಡೀ ಅನುವಾದದಲ್ಲಿ ಅನುರಣಗೊಂಡಿವೆ.

ಮೂಲದಷ್ಟೇ ಸಶಕ್ತವಾಗಿ ಕನ್ನಡದ ಅವತರಣಿಕೆಯೂ ಮೂಡಿಬಂದಿದೆ.

ಸ್ವರಯಾನ

ರಂಜನಿ, ಗಾಯತ್ರಿ

10ನೇ ಪುಟದಿಂದ...

‘ಯಂಗ್ ಆರ್ಟಿಸ್ಟ್ಸ್ ಬ್ರೈಟೆನ್ ದಿ ಫೆಸ್ಟಿವಲ್’ (Young artists brighten the festival) ಅಂತ. ಆಗ ನಮಗಾದ ಆನಂದ ಬಹುಶಃ ದೇಶದ ಅತ್ಯುನ್ನತ ಪ್ರಶಸ್ತಿ ಸ್ವೀಕರಿಸಿದವರಿಗೂ ಆಗಿರಲಿಕ್ಕಿಲ್ಲ.

1997ರಿಂದ ನಾವು ಸಂಪೂರ್ಣವಾಗಿ ನಮ್ಮನ್ನು ಗಾಯನಕ್ಕೇ ತೊಡಗಿಸಿಕೊಳ್ಳಲಾರಂಭಿಸಿದೆವು. ಅದು 1999ನೇ ಜನವರಿ ತಿಂಗಳು. ಚೆನ್ನೈಯ ತಿರುಮಲ ತಿರುಪತಿ ದೇವಸ್ಥಾನದಲ್ಲಿ ನಮ್ಮ ಕಛೇರಿ ಏರ್ಪಾಡಾಗಿತ್ತು. ಸಭಾಂಗಣ ಕಿಕ್ಕಿರಿದು ತುಂಬಿತ್ತು. ನಾವು ಗಾಯನ ಕಛೇರಿ ನೀಡಿದೆವು. ವರ್ಣ, ಕೃತಿ, ಕೀರ್ತನೆ, ತಿಲ್ಲಾನಗಳನ್ನು ಮನದುಂಬಿ ಹಾಡಿದೆವು. ಈ ಕಛೇರಿ ನಮ್ಮನ್ನು ಸಂಪೂರ್ಣ ಗಾಯಕಿಯರನ್ನಾಗಿ ಪ್ರತಿಷ್ಠಾಪಿಸಿತು.

ವಿದೇಶದಲ್ಲಿ ಹಲವಾರು ಪ್ರತಿಷ್ಠಿತ ಸಭಾಂಗಣಗಳಲ್ಲಿ ಹಾಡಿದೆವು. ಎಲ್ಲವೂ ಒಂದು ರೀತಿಯಲ್ಲಿ ‘ಮ್ಯಾಜಿಕಲ್ ಮೂವ್‌ಮೆಂಟ್’ ಎಂದೇ ಹೇಳಬಹುದು. ಪೋಲೆಂಡ್‌ನಲ್ಲಿ ಸುಮಾರು ಐದು ವರ್ಷಗಳ ಹಿಂದೆ ನೀಡಿದ ಕಛೇರಿ ನಮ್ಮ ಮೇಲೆ ಬಹಳ ಪ್ರಭಾವ ಬೀರಿತು. ಅಲ್ಲಿನ ಜನರಿಗೆ ಶಾಸ್ತ್ರೀಯ ಸಂಗೀತದ ಗಂಧವಿಲ್ಲ. ಆದರೆ ಆಸ್ವಾದಿಸುವ ಮನಸ್ಸಿದೆ. ಇಡೀ ಕಛೇರಿಯನ್ನು ಆಲಿಸಿದ ಅನೇಕ ಕೇಳುಗರು, ಸಂಗೀತ ಮುಗಿದಮೇಲೆ ಅಕ್ಷರಶಃ ಕಣ್ಣುಗಳಲ್ಲಿ ನೀರು ತುಂಬಿಕೊಂಡರು. ನಮ್ಮ ಗಾಯನ ಅವರ ಹೃದಯ ತಟ್ಟಿತ್ತು. ಸಂಗೀತಕ್ಕಿರುವುದು ಮಾಂತ್ರಿಕ ಶಕ್ತಿ, ಚುಂಬಕ ಸೆಳೆತ ಎಂಬುದನ್ನು ಅವರು ಸಾಬೀತುಪಡಿಸಿದರು. ಕೆಲವು ಕೇಳುಗರಂತೂ ತಮಗೆ ಏನನ್ನಿಸಿತು ಎಂಬುದನ್ನು ಬರೆದೂ ತೋರಿಸಿದರು.

ಮನೋಧರ್ಮದ ಅಭಿವ್ಯಕ್ತಿ: ಯುಗಳ ಗಾಯನದಲ್ಲಿ ಹೊಂದಾಣಿಕೆ ಮಾಡಿಕೊಂಡು ಹಾಡುವ ಬಗ್ಗೆ ಹೇಳಲೇಬೇಕು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಇಬ್ಬರು ಸೇರಿ ಹಾಡುವಾಗ ಹೊಂದಾಣಿಕೆ ಬಹಳ ಮುಖ್ಯ. ಮೊದಲಿಗೆ ರಾಗದ ಆಲಾಪ, ಮುಂದೆ ಸ್ವರಪ್ರಸ್ತಾರ, ಸಾಹಿತ್ಯ, ನೆರವಲ್, ತನಿಯಾವರ್ತನ... ಇವೆಲ್ಲ ಗಾಯನದ ವಿವಿಧ ಹಂತಗಳು. ಇಲ್ಲೆಲ್ಲ ಒಬ್ಬರ ಮನೋಧರ್ಮವನ್ನು ಇನ್ನೊಬ್ಬರೊಂದಿಗೆ ಮ್ಯಾಚ್ ಮಾಡಿಕೊಂಡು ಹಾಡಬೇಕಾಗುತ್ತದೆ. ನಾವು ಸಾಮಾನ್ಯವಾಗಿ ವೇದಿಕೆಗೆ ಹೋದ ಮೇಲೆಯೇ ಹೊಂದಾಣಿಕೆ ಮಾಡಿಕೊಳ್ಳುವುದು. ಎಲ್ಲವೂ ‘ಆನ್ ದಿ ಸ್ಪಾಟ್’. ಮೂವತ್ತು ವರ್ಷಕ್ಕೂ ಮೇಲ್ಪಟ್ಟು ಕಛೇರಿ ಕೊಡುತ್ತಾ ಬಂದಿರುವುದರಿಂದ ಹೊಂದಾಣಿಕೆ ಎಂಬುದು ತನ್ನಷ್ಟಕ್ಕೇ ಬರುತ್ತದೆ. ಹಾಡುತ್ತ ಹಾಡುತ್ತ ನಾವು ಒಂದಾಗಿ ಬಿಡುತ್ತೇವೆ.

ಯಾವುದೇ ರಾಗವಿರಲಿ. ಅಲ್ಲಿ ಬರೀ ಮಾಧುರ್ಯ ಇರುವುದಿಲ್ಲ. ಭಕ್ತಿ, ತನ್ಮಯತೆ, ಲಯ, ಭಾವ, ಸೌಂದರ್ಯ ಎಲ್ಲವೂ ಅಲ್ಲಿ ಅಡಗಿರುತ್ತದೆ. ಇದಕ್ಕೇ ಹೇಳುವುದು ‘ಮ್ಯೂಸಿಕ್ ಈಸ್ ಡಿವೈನ್’ ಎಂದು. ನಾವು ಆಯ್ದುಕೊಳ್ಳುವ ರಾಗ ಸಾವೇರಿ, ಮಧ್ಯಮಾವತಿ, ರೀತಿಗೌಳ... ಹೀಗೆ ಯಾವುದೇ ಇರಲಿ. ಅದು ರಸಿಕರ ಹೃದಯ ತುಂಬುವಂತಿರಬೇಕು.

ಸಂಗೀತ ಎಂದರೆ ಅದು ಸಾಧನಾ. ಅದೊಂದು ಧ್ಯಾನ. ಇದನ್ನು ತಪಸ್ಸಿನಂತೆ, ವ್ರತದಂತೆ ಮಾಡಿದರೆ ಖಂಡಿತಾ ಯಶಸ್ಸು ಸಿಗುತ್ತದೆ. ಆದರೆ ಇದು ನಿಂತ ನೀರಲ್ಲ. ಇದು ‘ಲೈಫ್‌ಟೈಮ್ ಪ್ರೋಸೆಸ್’. ನಾವು ಹಾಡುತ್ತೇವೆ, ಕಲಿಯುತ್ತೇವೆ, ಕಲಿಸುತ್ತೇವೆ, ದಿನವೂ ಸಂಗೀತದಲ್ಲಿ ಹೊಸತನ ಕಾಣುವುದು ನಮ್ಮ ಜಾಯಮಾನ. ನಮ್ಮ ಶಿಷ್ಯಂದಿರಿಗೂ ಸಂಗೀತದಲ್ಲಿ ಹೊಸ ಸಾಧ್ಯತೆಗಳನ್ನು ಹುಡುಕಲು ಪ್ರೇರೇಪಿಸುತ್ತೇವೆ.

ತಮ್ಮ ಸಂಗೀತ ಬದುಕಿನ ಬಗ್ಗೆ ಹಲವು ವಿಚಾರಗಳನ್ನು ಹಂಚಿಕೊಂಡ ಬಳಿಕ ಕೊನೆಗೆ ತಮಗೆ ಒಲಿದಿರುವ ‘ಸಾಮಗಾನ ಮಾತಂಗ’ ಪ್ರಶಸ್ತಿಯ ಬಗ್ಗೆ ಹರ್ಷ ವ್ಯಕ್ತಪಡಿಸಿದರು ಈ ಗಾಯಕಿಯರು.

‘ಮಾತಂಗ ಪ್ರಶಸ್ತಿ ನಮಗೆ ಗ್ರೇಟ್ ಆನರ್. ಸಂಗೀತ ದಿಗ್ಗಜರಾದ ಡಾ. ಬಾಲಮುರಳಿಕೃಷ್ಣ, ಎಲ್. ಸುಬ್ರಹ್ಮಣ್ಯಂ, ಹರಿಪ್ರಸಾದ್ ಚೌರಾಸಿಯ ಮುಂತಾದ ಗಣ್ಯರಿಗೆ ಸಿಕ್ಕಿದ ಪ್ರಶಸ್ತಿಗೆ ಇಂದು ನಾವು ಭಾಜನರಾಗುತ್ತಿರುವುದು ಸೌಭಾಗ್ಯವೇ ಎನ್ನಬೇಕು. ಕಳೆದ 36 ವರ್ಷಗಳಿಂದ ಹಾಡುತ್ತಾ ಬಂದ ನಮಗೆ ಸಂದ ಗೌರವವಿದು ಎಂದೇ ಭಾವಿಸುವೆವು’ ಎನ್ನುತ್ತಾ ರಂಜನಿ–ಗಾಯತ್ರಿ ‘ಸಂ’ಗೆ ಬಂದರು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಕೇಶ್ರಸ್ಟ ಕಥೆಯ — ಪುಂಗಿ ಮತ್ತು ಹಾವು

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಅಕ್ಷರ ಆಟ

ಅಕ್ಷರ ಆಟ ಇಲ್ಲಿ ಕೊಟ್ಟಿರುವ ರಗು ಅಕ್ಷರಗಳ ಹಿಂದೆ ಒಂದು ಅಕ್ಷರ ತುಂಬಿ ಅರ್ಥಬದ್ಧ ಪದ ರಚಿಸಿ

1. __ರಗು
2. __ರಗು
3. __ರಗು
4. __ರಗು
5. __ರಗು
6. __ರಗು
7. __ರಗು
8. __ರಗು
9. __ರಗು
10. __ರಗು
11. __ರಗು
12. __ರಗು
13. __ರಗು

ಹೊಂದಿಸು ಆನಂದಿಸು

ರಾಜ್ಯಗಳಿಗೂ ರಾಜಧಾನಿಗಳಿಗೂ ಹೊಂದಿಸಿ

1.	ಆಂಧ್ರಪ್ರದೇಶ	A.	ಚಂಡೀಗಢ
2.	ಅರುಣಾಚಲ ಪ್ರದೇಶ	B.	ರಾಂಚಿ
3.	ತೆಲಂಗಾಣ	C.	ಶಿಮ್ಲಾ
4.	ಬಿಹಾರ	D.	ರಾಯಪುರ
5.	ಛತ್ತೀಸ್‌ಗಢ	E.	ಗಾಂಧಿನಗರ
6.	ಗೋವಾ	F.	ಸೀಮಾಂಧ್ರ
7.	ಗುಜರಾತ್	G.	ಪಣಜಿ
8.	ಹರಿಯಾಣ	H.	ಹೈದರಾಬಾದ್
9.	ಹಿಮಾಚಲಪ್ರದೇಶ	I.	ಪಾಟ್ನಾ
10.	ಜಾರ್ಖಂಡ್	J.	ಇಟಾನಗರ

ಹಿಂಗಂದ್ರ ಏನು?

1 ಹೋಗಿ 9 ಆಯ್ತು

ಹಿಂದಿನ ಕಾಲದಲ್ಲಿ ಬ್ಯಾಂಕ್‌ಗಳು ಇರಲಿಲ್ಲ. ಆ ಕಾಲದಲ್ಲಿ ಶ್ರೀಮಂತರು ಬಡವರಿಗೆ ಹಣ ಸಾಲ ಕೊಡುತ್ತಿದ್ದರು. 100, 10,000 ಹೀಗೆ ಕೊಟ್ಟ ಮೊತ್ತವನ್ನು ಕಾಗದದಲ್ಲಿ ನಮೂದಿಸುತ್ತಿದ್ದರು. ಸಾಲ ಮರಳಿಸುವಾಗ ಶ್ರೀಮಂತರು 1ನ್ನು ಸುಲಭವಾಗಿ ತಿದ್ದಿ 9 ಎಂದು ಬರೆಯುತ್ತಿದ್ದರು. ಆಗ ಅದು 10 ಸಾವಿರ ಎಂದಿದ್ದರೆ 1ನ್ನು 9 ಎಂದು ಬರೆದಾಗ ಅದು 90 ಸಾವಿರ ಆಗಿ ಕಾಣಿಸುತ್ತದೆ. ಹೀಗೆ ಸಾಲ ಪಡೆದವರು ವಾಪಸ್ ಕೊಡುವಾಗ ಮೋಸ ಹೋಗುತ್ತಿದ್ದರು. ಹೀಗೆ 1 ಹೋಗಿ 9 ಆಗುವುದನ್ನು ತಪ್ಪಿಸಲು ಕಾಲ ಕ್ರಮೇಣ ಹಣಕಾಸು ವ್ಯವಹಾರ ಪತ್ರಗಳಲ್ಲಿ ಮೊತ್ತವನ್ನು ಅಕ್ಷರಗಳಲ್ಲಿ ಬರೆಯುವ ಪದ್ಧತಿ ಬಂದಿತು. ಆದರೆ ಹಳೆಯ ಪದ್ಧತಿಯೊಂದು ಜನರ ಮನಸ್ಸಿನಲ್ಲಿ ಉಳಿದು 1 ಹೋಗಿ 9 ಆಯ್ತು ಅನ್ನುವ ಮಾತು ಚಾಲ್ತಿಗೆ ಬಂದಿತು.

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳಲ್ಲಿರುವ ಅಕ್ಷರಗಳನ್ನು ಅದಲು ಬದಲಾಗಿಸಿ ಹೊಸ ಪದ ರಚಿಸಿ

1. ಬೆಲೆ ಇರದ = ____________
2. ಗಳಕಾರಣ = ____________
3. ರವಿಹಾಯುವಾ = ____________
4. ವನಚೇತನ = ____________

ಗಣಿತದಲ್ಲಿ ಗರ್ದಿ ಗಮ್ಮತ್ತು

ಯಾವಾಗಲೂ 21

10ರ ಒಳಗಿನ ಒಂದು ಸಂಖ್ಯೆಯನ್ನು ಬರೆದಿಟ್ಟುಕೊಳ್ಳಿ. ಮುಂದೆ ನಾನು ಹೇಳಿದಂತೆ ಮಾಡಿ, ಆ ಸಂಖ್ಯೆಯನ್ನು 3ರಿಂದ ಗುಣಿಸಿ. ಅದಕ್ಕೆ 2ನ್ನು ಕೂಡಿಸಿ ಮತ್ತೆ 3ರಿಂದ ಗುಣಿಸಿ. ನಂತರ ನೀವು ಬರೆದುಕೊಂಡ ಸಂಖ್ಯೆ ಕೂಡಿಸಿ. ಈಗ ಬಂದ ಉತ್ತರದಲ್ಲಿ ಕೊನೆಯ ಅಂಕಿ ಹೊಡೆದುಹಾಕಿ. ನಂತರ ಮತ್ತೆ 2ನ್ನು ಕೂಡಿಸಿ. ಈಗ 4ರಿಂದ ಭಾಗಿಸಿ. ಮತ್ತೆ 19ನ್ನು ಕೂಡಿಸಿ. ಈಗ ನಿಮ್ಮ ಉತ್ತರವನ್ನು ನಾನು ಹೇಳುತ್ತೇನೆ.

ಉತ್ತರ: 21 ತಾನೆ ?

ಉದಾಹರಣೆಗೆ: ನಿಮ್ಮ ಸಂಖ್ಯೆ 7 ಆಗಿರಲಿ

ಅದನ್ನು x 3 ಮಾಡಿದಾಗ (ಅಂದರೆ 3ರಿಂದ ಗುಣಿಸಿದಾಗ)

= 21
+ 2
23
x 3
69
+ 7
76

ಇಲ್ಲಿ ಮೊದಲನೇ ಅಂಕಿ 7ನ್ನು ಹೊಡೆದು ಹಾಕಿದಾಗ 6 ಉಳಿಯುತ್ತದೆ.

+ 2
4) 8 (2
8
0

ಇಲ್ಲಿ 2 ಭಾಗಲಬ್ಧಕ್ಕೆ 19ನ್ನು ಕೂಡಿಸಿದಾಗ = 21

ಹೌದು ನಾನು ಹೇಳಿದ ಉತ್ತರವೂ 21. ಈಗ ನಿಮ್ಮ ಗೆಳೆಯರೊಂದಿಗೆ ಮೇಲಿನ ಕ್ರಮದಂತೆ ಅನುಸರಿಸಿ ನೀವೂ ಆಟವಾಡಿ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜಾಣಪದ ಆಟ

ಇಲ್ಲಿಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ನೀಡಲಾದ ವಾಕ್ಯಗಳಲ್ಲಿರುವ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಹೊಸ ಪದ ರಚಿಸಿ

1. __ಪಾದ__ ಪಾದಚಾರಿಗಳಿಗೆ ಆಗುವ ತೊಂದರೆಯನ್ನು ಬರೆಯುವ ಸುದ್ದಿ ಸಂಗ್ರಹಕಾರರ ಮುಖ್ಯಸ್ಥ
2. __ಕಾಲ__ ಕಾಲಕ್ಕೆ ತಕ್ಕಂತೆ ಒಬ್ಬರ ಪರವಾಗಿ ಕೋರ್ಟ್‌ನಲ್ಲಿ ನಡೆಸುವ ವಾದ
3. __ಮನೆ__ ಮನೆ ಕಟ್ಟಲು ಹುಡುಕಿದ ಸಮತಟ್ಟಾದ ಭೂಮಿ
4. __ಪತ್ರ__ ಪತ್ರ ಬರೆದಾಗ ಉಂಟಾದ ಕಷ್ಟ
5. __ಮಾಣಿ__ ಮಾಣಿ ಈತ ಸತ್ಯವಂತ

ಸರಿ ಉತ್ತರ ಮುಂದಿನ ವಾರ... ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1. ಅಮಂಗಳ 2. ಆವರಣ 3. ಹೆದರಿಸು
4. ವಿಂಗಡಿಸು 5. ಪರಾಮರ್ಶೆ

ಜಾಣಪದ ಆಟ

1. ಪರಕಾರ 2. ಪಡಿತರ 3. ಪರಿಸರ
4. ಪನಿವಾರ 5. ಪರಸ್ಪರ 6. ಪರಿಹಾರ

ಅದಲು ಬದಲು

1. ಕರಿಮಣ್ಣು 2. ಮಸಾರಿ ನೆಲ
3. ಸಣ್ಣ ವಿರಾಮ 4. ಯಮನತಾಯಿ

ಹೊಂದಿಸು ಆನಂದಿಸು

1- G, 2-J, 3-I, 4-E, 5- B
6-C, 7-F, 8-D, 9-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಮಾನವಿ ಟಿ.ವಿ.
ಕಾರಿಗನೂರು

ಆಯಾನ್ ಎಂ.ಎನ್.
ಭಾಗ್ಯನಗರ, ಕೊಪ್ಪಳ

ನಿರೀಕ್ಷಾ ಪಿ.ಎಂ.
ಚನ್ನಗಿರಿ (ದಾವಣಗೆರೆ)

ಪರಿಸರ ಕಾಳಜಿಯ ಶಿಲಾ ಮಾಂತ್ರಿಕ



ಮಲೆನಾಡಿನಲ್ಲಿ ಬೇರು ಹೊಂದಿರುವ ಈ ಕಲಾವಿದ ತಮ್ಮ ಕಲಾಕೃತಿಗಳ ಮೂಲಕ ಜಗದೆಲ್ಲೆಡೆ ಟೊಂಗೆ ಬಿಟ್ಟವರು. ಇವರ ಕಲಾಯಾತ್ರೆಯತ್ತ ಒಂದು ನೋಟ



ಅರುಣಕುಮಾರ್

ಡಿ.ಎಸ್.ಚೌಗಲೆ

ದೆಹಲಿ ಕನ್ನಡಿಗ ಅರುಣಕುಮಾರ್ ಎಚ್.ಜಿ. ಅಂತರರಾಷ್ಟ್ರೀಯ ಖ್ಯಾತಿಯ ಶಿಲ್ಪ ಕಲಾವಿದ. ಮಲೆನಾಡ ಮಣ್ಣಿನ ನಂಟು ಮತ್ತು ಬೇರಿನ ಸತ್ವವನ್ನು ಅವರು ಬಿಟ್ಟುಕೊಟ್ಟಿಲ್ಲ. ಒಂದು ಮರದಂತೆ ಬೆಳೆದಿರುವ ಅವರ ಕಲಾ ಜಗತ್ತಿನ ಟೊಂಗೆಗಳು ಭಾರತ ಮಾತ್ರವಲ್ಲದೆ ಜಪಾನ್, ಆಸ್ಟ್ರೇಲಿಯಾ, ಅಮೆರಿಕ ಮುಂತಾದ ದೇಶಗಳಲ್ಲಿ ಹರಡಿರಬಹುದು. ಆದರೆ, ಕನ್ನಡದ ಮಲೆನಾಡಿನ ಮಣ್ಣಲ್ಲೇ ಬೇರುಗಳಿವೆ ಎಂಬುದನ್ನು ಅವರು ಸದಾ ನೆನಪಿನಲ್ಲಿಟ್ಟಿದ್ದಾರೆ. ಅದನ್ನು ತ್ಯಜಿಸದೇ ಪ್ರಾಕೃತಿಕ ಸಂತುಲನದ ಧ್ಯೇಯ, ಧಾರೆಯ ನಿಷ್ಠೆ ಕಾಪಿಟ್ಟುಕೊಂಡಿದ್ದಾರೆ.

'CON-struction' ಎಚ್ಚರದ ಸೃಜನಶೀಲ ಧಾರೆಯ ಅರುಣಕುಮಾರ್ ತ್ಯಾಜ್ಯ ವಸ್ತುಗಳನ್ನು ಆಯ್ದು ಶಿಲ್ಪ ಕಲಾಕೃತಿ ಮತ್ತು ಪ್ರತಿಷ್ಠಾಪನ ಕೃತಿಗಳನ್ನು ಪ್ರಪಂಚದಾದ್ಯಂತ ತಮ್ಮ ಪರಿಕಲ್ಪನೆಯಲ್ಲೇ ರಚಿಸಿ ಹೆಸರುವಾಸಿದವರು. ಕಸದತೊಟ್ಟಿ ಸೇರಿದ ಮರದ ತುಂಡು, ಘನತ್ಯಾಜ್ಯ, ರಸ್ತೆ ಬದಿ ಚೆಲ್ಲಿದ ಕಸ ಹಾಗೂ ಕಟ್ಟಡದ ತ್ಯಾಜ್ಯದಿಂದ ಅವರ ಕೈಯಲ್ಲಿ ಕಲಾಕೃತಿಗಳು ಜೀವ ಪಡೆಯುತ್ತವೆ.

ಅರುಣಕುಮಾರ್ ಅವರ 'ಕಾನ್-ಸ್ಟ್ರಕ್ಷನ್' ಸರಣಿ ಪರಿಕಲ್ಪನೆಯ ಶಿಲ್ಪಗಳು ಪರಿಸರೀಯ ಅಸಂಗತತೆಯ ಕುರುಡು ಚುಕ್ಕೆಗಳು. ತಮ್ಮ ಸ್ವಭಾವಕ್ಕೆ ಎರಕ ಹೊಯ್ದು ದೃಗ್ಗೋಚರ ರೂಪದಲ್ಲಿ ಅನ್ವೇಷಣೆಗೊಳ್ಳುತ್ತವೆ. ಅರಣ್ಯ, ಜೀವಜಗತ್ತು, ಮಣ್ಣು, ನೀರು ಇವೆಲ್ಲದರ ನಾಶ ಮಾನವ ಕುಲಕ್ಕೆ ಮಾರಕ ಎಂಬುದನ್ನು ಮಲೆನಾಡಿನವರೇ ಆದ ಅರುಣಕುಮಾರ್ ಅವರು ಆಳವಾಗಿ ಬಲ್ಲವರು. ಅದು ಅವರ ಕಾಳಜಿಯೂ ಹೌದು. ಅವರು ತಮ್ಮ ಶಿಲ್ಪಗಳ ಮೂಲಕ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಾರೆ.



ಪ್ರಪಂಚವು ವಾಸ್ತವವಾಗಿ ಬದುಕಿನ ಶೈಲಿಯನ್ನು ಬದಲಿಸಿದೆ. 'ಹೈ ಕಾಸ್ಟ್' ಬದುಕು! ಅರುಣಕುಮಾರ್ ಅವರ ವಿಷ್ಯುವಲ್ ತಂತ್ರಗಳು ಪರೋಕ್ಷವಾಗಿ ನಗರದ ವಿಸ್ತರಣೆ, ಏರುತ್ತಿರುವ ಜಾಗತಿಕ ತಾಪಮಾನ ಮುಂತಾದ ಪ್ರಶ್ನೆಗಳಿಗೆ ಒಳನೋಟಗಳಿಂದ ಉತ್ತರ ಕಂಡುಕೊಳ್ಳುವ ಯತ್ನ ಮಾಡುತ್ತವೆ.

ಅರುಣಕುಮಾರ್ (ಜನನ; 1968) ಅವರ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ದೊಂಬೆಕೊಪ್ಪ. ಅವರು ದಾವಣಗೆರೆಯ ಕಲಾಶಾಲೆ ಸೇರಿದರು. ಅಲ್ಲಿ ದ್ವಿತೀಯ ವರ್ಷದಲ್ಲಿ ಶಿಕ್ಷಣ ಪಡೆಯುತ್ತಿರುವಾಗಲೇ ದಾವಣಗೆರೆ ತ್ಯಜಿಸಿ ವಡೋದರ ರೈಲು ಹತ್ತಿದರು. ವಡೋದರದ 'ಫ್ಯಾಕಲ್ಟಿ ಆಫ್ ಫೈನ್ ಆರ್ಟ್' ಸೇರಿದಾಗ ಅವರಿಗೆ ಹಿಂದಿ ಮತ್ತು ಇಂಗ್ಲಿಷ್ ಎರಡೂ ಭಾಷೆಗಳು ಬರುತ್ತಿರಲಿಲ್ಲ. ಕಲಾಶಿಕ್ಷಣದ ಹಸಿವು ಎಲ್ಲವನ್ನೂ ಕಲಿಸಿತು. ಇಂದು ಎರಡೂ ಭಾಷೆಗಳನ್ನು ನಿರರ್ಗಳವಾಗಿ ಮಾತಾಡಬಲ್ಲರು.

ವಡೋದರದ ಕಲಾಶಾಲೆಯು ಅರುಣಕುಮಾರ್ ಅವರ ಬದುಕಿನ ದಿಕ್ಕನ್ನೇ ಬದಲಿಸಿತು. ಬದುಕಿನ ನಿಜಾರ್ಥದ ದಾರಿ ತೋರುವ ಗುರುಗಳು ಸಿಕ್ಕರು. ಅವರೇ ಕೃಷ್ಣಾ ಛತ್ತಪುರ. ಅವರ ಮೊದಲ ಪಾಠವೇ- 'ಮೊದಲು ನೀ ಮನುಷ್ಯನಾಗು!' ಎಂಬುದು. 'ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳದ ಹೊರತು ಯಾರೂ ಕಲಾವಿದನಾಗಲು ಸಾಧ್ಯವಿಲ್ಲ. ಖರೆ ಅರ್ಥದ ಕಲೆ ಎಂದರೇನು? ಬರೇ ಚಿತ್ರ ಬಿಡಿಸುವುದೇ? ಶಿಲ್ಪ ರಚನೆಯೇ? ಕಲೆಯೇ ಜೀವನದ ಒಂದು ಭಾಗವಾಗಲೂ ಎಲ್ಲಾ ರೀತಿಯಿಂದಲೂ ಮಾನವನಾಗುವ ಮನೋಧೋರಣೆ ಅಗತ್ಯ' ಎಂದು ಕೃಷ್ಣಾ ಛತ್ತಪುರರ ನುಡಿಯನ್ನು ಅರುಣಕುಮಾರ್ ಮೆಲುಕು ಹಾಕುತ್ತಾರೆ. ಆ ಜೀವದ್ರವ್ಯವು ಅವರ ಎಲ್ಲ ರಚನೆಯಲ್ಲೂ ದೊರೆಯುವುದನ್ನು ಗಮನಿಸಬಹುದು.

ಬಿ.ವಿ.ಕಾರಂತರು ತಮ್ಮ ರಂಗ ಶಿಷ್ಯರಿಗೆ ಸಮಾಜದ ಸರ್ವ ಮಾನವ ಸ್ವಭಾವಗಳು ಮತ್ತು ಅವನಿಂದ ಜರುಗುವ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಲು ಹೇಳುತ್ತಿದ್ದರು. ಹಾಗೆಯೇ ಛತ್ತರಪುರ ಗುರುಗಳು ಸಹ ನಮಗೆ ಶೋಧ ನಡೆಸಲು, ರೂಪ ಕಲ್ಪನೆಗಳು ಹೇಗೆ ತೆರೆದುಕೊಳ್ಳುವುವು ಎಂಬುದನ್ನು ಅರಿಯಲು ಹೇಳಿಕೊಟ್ಟರೆಂದು ಅರುಣಕುಮಾರ್ ನೆನೆಯುವರು. ಆ ಹುಡುಕಾಟಗಳಲ್ಲಿ ಸೃಜನಗೊಳ್ಳುವ ಶಿಲ್ಪಗಳು ಗಹನ ಆಲೋಚನೆಗೆ ಕೊಂಡೊಯ್ಯುತ್ತವೆ.

ನಿಸರ್ಗದ ವಿರುದ್ಧ ಪ್ರಜ್ಞಾಶೂನ್ಯತೆಯಿಂದ ವಸ್ತುಗಳನ್ನು ನಿರ್ಮಿಸುವ ಕಾಲಘಟ್ಟದಲ್ಲಿ ಅರುಣಕುಮಾರ್ ಒಲವು ಇದ್ದುದು ಅದೇ ತ್ಯಾಜ್ಯ ವಸ್ತುಗಳ ಬಳಕೆಯ ಕಲಾಸೃಷ್ಟಿಯಲ್ಲಿ. ಕಾಗದದ ತಿರುಳು, ಪ್ಯಾಕೇಜಿನಲ್ಲಿ ನಾಶಗೊಂಡ ಕಟ್ಟಿಗೆಯ ತುಣುಕುಗಳು, ಸಿಮೆಂಟ್ ಅಂಟಿನಿಂದ ಇವರ ಕೃತಿಗಳು ರೂಪ ಪಡೆಯುವವು. ಪ್ರಕೃತಿ ವಿನಾಶಕ್ಕೆ ಧಕ್ಕೆ ತರುವ, ನೈಸರ್ಗಿಕ ಅಸಮತೋಲನಕ್ಕೆ ಕಾರಣವೆನಿಸುವುದು ಸರ್ವತ್ರ ಜರುಗುತ್ತಿದೆ. ಅದನ್ನು ಒಂದು ಚಳವಳಿಯಂತೆ ವಿರೋಧಿಸುವ ಚಿಂತನೆಯ ಶಿಲ್ಪ ಕೃತಿಗಳನ್ನು ಇವರು ರಚಿಸಿದ್ದಾರೆ.

ಭಾರತದ ಸಾಂಸ್ಕೃತಿಕ, ನೈಸರ್ಗಿಕ ಪರಿಪೇಕ್ಷದಲ್ಲಿ ಇವರ ಪ್ರಾಣಿ ಸಂಗ್ರಹಾಲಯ ರಚನಾಲೋಕ ಮಹತ್ವದ್ದು. ಮಾನವ ದೇಹಗಳ ಒಳನೋಟಗಳ ಬಳಿಕ ಖಡ್ಗಮೃಗ, ಹುಲಿ, ಆನೆ, ಪಕ್ಷಿಗಳನ್ನು ದೃಶ್ಯ ಪ್ರಬಂಧದ ರೂಪದಲ್ಲಿ ರಚಿಸಿದ್ದಾರೆ. ಪ್ರಾಚ್ಯ ವಾಸ್ತು ಶಿಲ್ಪಗಳಲ್ಲಿಯ ಮ್ಯೂರಲ್ ರೂಪದ ಭಂಗಿಗಳಾಚೆಯ ಆನೆಯ ಶಿಲ್ಪಗಳು. ಪಂಚತಂತ್ರದ ಕತೆಗಳ ಮಾನವರೂಪಿ ಸಾಮರ್ಥ್ಯವನ್ನು ಪಡೆದ ಪ್ರಾಣಿಗಳ ರೂಪಕಗಳು ಮಧುರವಾಗಿ ಧ್ವನಿಸುತ್ತವೆ. ಈ ಉದ್ಧರಣೆಗಳು ಮನುಷ್ಯನಷ್ಟೇ ನೈಸರ್ಗಿಕ ಸಮತೋಲನಕ್ಕೆ ಪ್ರಾಣಿಗಳ ಸಂಬಂಧವೂ ಪ್ರಧಾನ. ಅದನ್ನು ನಿರಾಕರಿಸಲಾಗದೆಂಬುದನ್ನು ಸಾರುತ್ತದೆ. ಇದು ಮಾನವತ್ವದ ಕಾಣ್ಕೆಯೂ ಹೌದು.

ಅರುಣಕುಮಾರ್ ಅವರ ಕೃತಿಗಳು ಜಗತ್ತಿನಾದ್ಯಂತ ಪ್ರತಿಷ್ಠಾಪಿತಗೊಂಡಿವೆ. ಭಾರತದ ಪ್ರಮುಖ ನಗರಗಳು ಸೇರಿದಂತೆ ನ್ಯೂಯಾರ್ಕ್ ಅಮೆರಿಕ, ಡೆನ್ಮಾರ್ಕ್, ಜರ್ಮನಿ, ಚೀನಾ, ಬೆಲ್ಜಿಯಂ, ಶ್ರೀಲಂಕಾ, ನಾರ್ವೆ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಪ್ರದರ್ಶನಗೊಂಡಿವೆ. ಆಸ್ಟ್ರೇಲಿಯಾದ ಅಡಿಲೇಡ್, ಶ್ರೀಲಂಕಾದ ಕೊಲಂಬೊ, ನಾರ್ವೆಯ ಬರ್ಗನ್, ಜಪಾನ್ ಮೋರಿಯಾದಲ್ಲಿ ಹಲವಾರು ತಿಂಗಳುಗಳ ಕಾಲಾವಧಿಗೆ ಕಾರ್ಯಾಗಾರಗಳನ್ನು ನಡೆಸಿದ್ದಾರೆ.

ಸಾರ: 'ಸಾರ' ಎಂಬುದು ಮಣ್ಣಿನ ಸತ್ವ ಹೇಳುವ ರೈತಾಪಿ ಅಚ್ಚಗನ್ನಡದ ದೇಸಿ ಪದ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹುದೊಡ್ಡ ಹೆಸರಿದ್ದರೂ ಮಲೆನಾಡಿನ ಜನುಮ ತಾಣವನ್ನು ಅವರು ಮರೆತಿಲ್ಲ. ಶಿವಮೊಗ್ಗ ಜಿಲ್ಲೆಯ ದೊಂಬೆಕೊಪ್ಪದಲ್ಲಿ 'ಸಾರ' ಕೇಂದ್ರ ತೆರೆದರು (Sustainable Alternatives for Rural Accord- 'SARA'). ಇದೊಂದು ವಿಚಾರ ವಿನಿಮಯಗಳ ವೇದಿಕೆ. ಕಲಾವಿದರು, ಬುದ್ಧಿಜೀವಿಗಳು, ರಂಗಕರ್ಮಿಗಳು, ಪರಿಸರವಾದಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಇಲ್ಲಿ ನಡೆಯುತ್ತಿರುತ್ತದೆ. ಜನರಲ್ಲಿ ಸಾರ್ವಜನಿಕ ಜಾಗೃತಿ ಮೂಡಿಸುವುದು, ಪರಿಸರ ಕಾಳಜಿಯನ್ನು ಬಿತ್ತುವುದು, ಸುಸ್ಥಿರ ಜೀವನ ಅಭ್ಯಾಸದ ಕುರಿತು ಜಾಗೃತಿ ಮೂಡಿಸುವುದು, ಪಶ್ಚಿಮಘಟ್ಟದ ರೈತ ಮತ್ತು ಕೂಲಿಗಳ ಸಮಸ್ಯೆಗಳ ಚರ್ಚೆ ಮತ್ತು ಪರಿಹಾರ ಕಂಡುಕೊಳ್ಳುವುದು ಅದರ ಧ್ಯೇಯೋದ್ದೇಶಗಳು.

ಕಲಾಪ್ರದರ್ಶನ, ಕಲಾ ಚಟುವಟಿಕೆಗಳು, ಪ್ರಾಯೋಗಿಕ ಕಲಿಕೆಗಳ ಘಟಕಗಳ ಅಗತ್ಯವನ್ನು ಪೂರೈಸಿ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ- ನೀರಿನ ಸದ್ಬಳಕೆ, ಸುಸ್ಥಿರ ಜೀವನ ಮತ್ತು ಪರಿಸರದ ಅರಿವು ಮೂಡಿಸುವ ಕಾರ್ಯದಲ್ಲೂ ಈ ಸಂಸ್ಥೆ ನಿರತವಾಗಿದೆ. 'ಸಾರ'ದ ಈ ಕಾಯಕವನ್ನು ನಿರಂತರ ನಡೆಸಿಕೊಂಡು ಒಂದು ಸಂವೇದನಶೀಲ ಸಮಾಜದ ನಿರ್ಮಿತಿಗೆ ಅರುಣಕುಮಾರ್ ಕಾರಣಕರ್ತರಾಗಿರುವರು.



ಫೈನಲ್‌ಗೆ ಪರ್ಸೆಲ್, ಡಕ್ವರ್ಥ್

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಅನಿರುದ್ಧ್– ವಿಜಯ್ ರನ್ನರ್ಸ್ ಅಪ್

• ಮಹಮ್ಮದ್ ನೂಮಾನ್

ಬೆಂಗಳೂರು: ಭಾರತದ ಭರವಸೆ ಎನಿಸಿದ್ದ ಅನಿರುದ್ಧ್ ಚಂದ್ರಶೇಖರ್ ಮತ್ತು ಎನ್.ವಿಜಯ್‌ಸುಂದರ್ ಪ್ರಶಾಂತ್ ಜೋಡಿ, ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಎಡವಿತು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಕೊರಿಯದ ಯುನ್ ಸಾಂಗ್ ಚುನ್– ಚೀನಾ ತೈಪೆಯ ಯು ಸಿಯು ಸು ಜೋಡಿ 3–6, 7–6, 11–9 ರಲ್ಲಿ ಭಾರತದ ಜೋಡಿಯನ್ನು ಮಣಿಸಿ ಚಾಂಪಿಯನ್ ಆಯಿತು. ಮೊದಲ ಸೆಟ್ ಗೆದ್ದರೂ ಅನಿರುದ್ಧ್–ವಿಜಯ್ ಅವರು ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕಳೆದುಕೊಂಡರು.

'ಆಲ್ ಆಸ್ಟ್ರೇಲಿಯನ್' ಫೈನಲ್: ಭಾನುವಾರ ನಡೆಯಲಿರುವ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಮತ್ತು ಜೇಮ್ಸ್ ಡಕ್ವರ್ಥ್ ಪೈಪೋಟಿ ನಡೆಸಲಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಡಕ್ವರ್ಥ್ 6–3, 6–3 ರಲ್ಲಿ ತಮ್ಮದೇ ದೇಶದ ಜೇಮ್ಸ್ ಮೆಕೇಬ್ ಅವರನ್ನು ಮಣಿಸಿದರು.

ಪ್ರಬಲ ಹೋರಾಟ ನಡೆದ ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಪರ್ಸೆಲ್ 6–2, 5–7, 7–6 (7–4) ರಲ್ಲಿ ಸರ್ಬಿಯದ ಹಮದ್ ಮೆಜೆಡೊವಿಚ್ ವಿರುದ್ಧ ಗೆದ್ದರು. ಈ ಹೋರಾಟ 2 ಗಂಟೆ 10 ನಿಮಿಷ ನಡೆಯಿತು.

ಪರ್ಸೆಲ್ ಮೊದಲ ಸೆಟ್ ನಿರಾಯಾಸದಿಂದ ಗೆದ್ದರಾದರೂ, ಹಮದ್ ಎರಡನೇ ಸೆಟ್ ಗೆದ್ದು ಸಮಬಲ ಸಾಧಿಸಿದರು. ಮೂರನೇ ಸೆಟ್‌ನಲ್ಲೂ ರೋಚಕ ಹಣಾಹಣಿ ನಡೆದು 6–6 ರಲ್ಲಿ ಸಮಬಲ ಕಂಡುಬಂತು. ಟೈಬ್ರೇಕರ್‌ನಲ್ಲಿ ಶಿಸ್ತಿನ ಆಟವಾಡಿದ ಪರ್ಸೆಲ್ ಫೈನಲ್‌ಗೆ ಲಗ್ಗೆಯಿಟ್ಟರು.

ಹಮದ್ ಅವರು ಚೇರ್ ಅಂಪೈರ್‌ಗಳು ನೀಡಿದ ತೀರ್ಪಿನ ವಿರುದ್ಧ ಹಲವು ಸಲ ಅಸಮಾಧಾನ ಹೊರಹಾಕಿದರು. ಪಾಯಿಂಟ್ ಕೈಬಿಟ್ಟಾಗ ಆಗಿಂದಾಗ್ಗೆ ತಾಳ್ಮೆ ಕಳೆದುಕೊಂಡರು. ಮತ್ತೊಂದೆಡೆ ಶಾಂತವಾಗಿ ಆಡಿದ ಪರ್ಸೆಲ್, ಪ್ರೇಕ್ಷಕರ ಮನಗೆದ್ದರು.

ಪರ್ಸೆಲ್ (9) ಅವರಿಗೆ ಹೋಲಿಸಿದರೆ ಹಮದ್ (14) ಹೆಚ್ಚು ಏಸ್‌ಗಳನ್ನು ಸಿಡಿಸಿದರು. ಆದರೆ ಸ್ವಯಂಕೃತ ತಪ್ಪುಗಳು ಅವರಿಗೆ ಮುಳುವಾಗಿ ಪರಿಣಮಿಸಿದವು. ಸರ್ಬಿಯದ ಆಟಗಾರ ಕ್ವಾರ್ಟರ್ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ ಚೀನಾ ತೈಪೆಯ ಚುನ್ ಸಿನ್ ಸೆಂಗ್ ಅವರಿಗೆ ಆಘಾತ ನೀಡಿದ್ದರು.

ಡಕ್ವರ್ಥ್–ಮೆಕೇಬ್ ನಡುವಣ ಪಂದ್ಯ ಒಂದು ಗಂಟೆ 20 ನಿಮಿಷ ನಡೆಯಿತು. ಮೊದಲ ಸೆಟ್‌ನಲ್ಲಿ 3–3 ರಲ್ಲಿ ಸಮಬಲ ಕಂಡುಬಂತು. ಏಳನೇ ಗೇಮ್‌ನಲ್ಲಿ ಡಕ್ವರ್ಥ್, ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಮುನ್ನಡೆ ಗಳಿಸಿದರು. ತಮ್ಮ ಸರ್ವ್‌ನಲ್ಲಿ ಪಾಯಿಂಟ್ ಗಳಿಸಿದ-ರಲ್ಲದೆ, ಒಂಬತ್ತನೇ ಗೇಮ್‌ನಲ್ಲೂ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಸೆಟ್ ಗೆದ್ದರು. ಮೆಕೇಬ್ ಅವರು ಡಬಲ್ ಫಾಲ್ಟ್ಸ್ ಮಾಡಿದರಲ್ಲದೆ, ಕೆಲವೊಂದು ರಿಟರ್ನ್‌ಗಳು ಕೋರ್ಟ್‌ನ ಹೊರಕ್ಕೆ ಹೋದವು.

ಎರಡನೇ ಸೆಟ್‌ನ ಮೊದಲ ಏಳು ಗೇಮ್‌ಗಳಲ್ಲಿ ಯಾವುದೇ ಸರ್ವಿಸ್ ಬ್ರೇಕ್ ಆಗಲಿಲ್ಲ. ಎಂಟನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಡಕ್ವರ್ಥ್ 5–3 ರಲ್ಲಿ ಮೇಲುಗೈ ಪಡೆದರು. ಒಂಬತ್ತನೇ ಗೇಮ್‌ನಲ್ಲಿ ತಮ್ಮ ಸರ್ವ್‌ನಲ್ಲಿ ಪಾಯಿಂಟ್ ಗಳಿಸಿ ಪಂದ್ಯ ಗೆದ್ದರು. ಡಕ್ವರ್ಥ್ ಅವರು ಬೇಸ್‌ಲೈನ್ ಬಳಿಯ ಆಟದಲ್ಲಿ ಚುರುಕುತನ ತೋರಿದ್ದು ಮಾತ್ರವಲ್ಲದೆ, ಅವಕಾಶ ಸಿಕ್ಕಾಗ ನೆಟ್ ಬಳಿ ಧಾವಿಸಿ ಡ್ರಾಪ್ ಶಾಟ್‌ಗಳ ಮೂಲಕ ಪಾಯಿಂಟ್ ಕಲೆಹಾಕಿದರು. ಕೆಲವೊಂದು ಏಸ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಚೆಂಡನ್ನು ರಿಟರ್ನ್ ಮಾಡಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಮುಖ್ಯಾಂಶಗಳು

- ಡಬಲ್ಸ್ ವಿಭಾಗದಲ್ಲಿ ಚುನ್–ಸು ಚಾಂಪಿಯನ್
- ಸಿಂಗಲ್ಸ್‌ನಲ್ಲಿ ಇಂದು 'ಆಲ್ ಆಸ್ಟ್ರೇಲಿಯನ್ ಫೈನಲ್'
- ಸೆಮಿಯಲ್ಲಿ ಸೋತ ಹಮದ್, ಮೆಕೇಬ್

ಇಂದಿನಿಂದ ರಾಷ್ಟ್ರೀಯ ಹಾಕಿ

ಬೆಂಗಳೂರು: ಹಾಕಿ ಇಂಡಿಯಾ ಆಶ್ರಯದಲ್ಲಿ ಪುರುಷರ ರಾಷ್ಟ್ರೀಯ ಅಂತರ ಇಲಾಖಾ ಹಾಕಿ ಟೂರ್ನಿ ಭಾನುವಾರ ಇಲ್ಲಿ ಆರಂಭವಾಗ-ಲಿದ್ದು, 18 ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಮೂರನೇ ಆವೃತ್ತಿಯ ಟೂರ್ನಿ ಮಾರ್ಚ್ 8ರ ವರೆಗೆ ನಡೆಯಲಿದೆ.

ಕಳೆದ ಬಾರಿಯ ಚಾಂಪಿಯನ್ ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ ಅಲ್ಲದೆ ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ, ಏರ್ ಇಂಡಿಯಾ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್, ಸ್ಪೋರ್ಟ್ಸ್ ಅಥಾರಿಟಿ ಆಫ್ ಗುಜರಾತ್, ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್, ಎಸ್‌ಎಐ ಒಳಗೊಂಡಂತೆ ಪ್ರಮುಖ ತಂಡಗಳು ಪಾಲ್ಗೊಳ್ಳುತ್ತಿವೆ.

ವಿಶ್ವ ಬ್ಯಾಂಕ್‌ನ ಹೊಸ ಮುಖ್ಯಸ್ಥರನ್ನು ಯು.ಎಸ್. ಅಧ್ಯಕ್ಷರು ನಾಮ ನಿರ್ದೇಶನ ಮಾಡಿದ್ದಾರೆ!

ವಿಶ್ವಕಪ್ ಫೈನಲ್: 6ನೇ ಪ್ರಶಸ್ತಿ ಮೇಲೆ ಆಸ್ಟ್ರೇಲಿಯಾ ಕಣ್ಣು

ಇತಿಹಾಸದ ಹೊಸ್ತಿಲಲ್ಲಿ ದಕ್ಷಿಣ ಆಫ್ರಿಕಾ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರು ಹೊಸ ಇತಿಹಾಸ ರಚಿಸುವ ಛಲದಲ್ಲಿದ್ದಾರೆ.

ಇದೇ ಮೊದಲ ಬಾರಿಗೆ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ತಲುಪಿರುವ ತಂಡವು ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಮಣಿಸುವ ಉತ್ಸಾಹದ-ಲ್ಲಿದೆ. ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿದ ಆತ್ಮವಿಶ್ವಾಸ ಸನಿ ಲುಸ್ ನಾಯಕತ್ವದ ಬಳಗಕ್ಕಿದೆ.

ದಕ್ಷಿಣ ಆಫ್ರಿಕಾ ತಂಡವೂ ಕಳೆದ ಒಂದು ವರ್ಷದಲ್ಲಿ ಬೆಳೆದಿರುವ ರೀತಿ ಗಮನಾರ್ಹ. ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೂ ತಂಡವು ಪ್ರವೇಶಿಸಿತ್ತು. ಪ್ರಸ್ತುತ ಟಿ20 ಟೂರ್ನಿಯಲ್ಲಿ ಪ್ರಶಸ್ತಿ ಸನಿಹ ಬಂದು ನಿಂತಿದೆ.

ತಂಡದಲ್ಲಿರುವ ಪ್ರಮುಖ ಆಟಗಾರ್ತಿಯರೂ ಉತ್ತಮ ಲಯದ-ಲ್ಲಿದ್ದಾರೆ. ವಿಶ್ವ ಜೂನಿಯರ್ ಜಾವೆಲಿನ್ ಚಾಂಪಿಯನ್ ಲಾರಾ ವೊಲ್ವಾರ್ಡ್‌ಟ್ ಮತ್ತು ತಜ್ಮೀನ್ ಬ್ರಿಟ್ಸ್ 11 ವರ್ಷಗಳ ಹಿಂದೆ ಅಪಘಾತಕ್ಕೊಳಗಾಗಿ ಗಾಯಗೊಂಡಿದ್ದರು. ಅದರಿಂದಾಗಿ 2012ರ ಒಲಿಂಪಿಕ್ ಕೂಟದಲ್ಲಿ ಭಾಗವಹಿಸುವ ಅವಕಾಶ ಕಳೆದು-ಕೊಂಡಿದ್ದರು. ಅದರ ನಂತರ ಕ್ರಿಕೆಟ್ ಕಣದಲ್ಲಿ ಬಹಳಷ್ಟು ಪರಿಶ್ರಮದಿಂದ ಬೆಳೆದರು. ಇದೀಗ ವಿಶ್ವಕಪ್ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಇವರಿಬ್ಬರೂ ದಕ್ಷಿಣ ಆಫ್ರಿಕಾ ತಂಡಕ್ಕೆ ಈ ಟೂರ್ನಿಯಲ್ಲಿ ಉತ್ತಮ ಆರಂಭ ನೀಡುವಲ್ಲಿ ಯಶಸ್ವಿಯಾಗಿ-ದ್ದಾರೆ. ಸೆಮಿಫೈನಲ್‌ನಲ್ಲಿ ಮಿಂಚಿದ್ದ ಆಲ್‌ರೌಂಡರ್ ಮೆರಿಝಾನೆ ಕ್ಯಾಪ್, ಬೌಲರ್‌ಗಳಾದ ಶಬ್ನಿಮ್ ಇಸ್ಮಾಯಿಲ್ ಹಾಗೂ ಅಯಾಬೊಂಗಾ ಕಾಕಾ ಅವರ ಮೇಲೆ ನಾಯಕ ಲುಸ್‌ಗೆ ಅಪಾರ ವಿಶ್ವಾಸವಿದೆ.

ಆದರೆ, ಮ್ಯಾಗ್ ಲ್ಯಾನಿಂಗ್ ನಾಯಕತ್ವದ ಆಸ್ಟ್ರೇಲಿಯಾ ತಂಡದ ಮುಂದೆ ಜಯಿಸುವುದು ಸುಲಭವಲ್ಲ. ನಾಲ್ಕರ ಘಟ್ಟದಲ್ಲಿ ಗೆಲುವಿನತ್ತ ಸಾಗಿದ್ದ ಭಾರತ ತಂಡದ ಎದುರು ಕೊನೆಯ ಹಂತದ ಓವರ್‌ಗಳಲ್ಲಿ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತ್ತು. ಪಂದ್ಯದ ಯಾವುದೇ ಹಂತದಲ್ಲಿಯೂ ಒಂದು ಸಣ್ಣ ಅವಕಾಶ ಸಿಕ್ಕರೂ ಗೆಲುವು ಒಲಿಸಿಕೊಳ್ಳುವ ಕಲೆ ಆಸ್ಟ್ರೇಲಿಯಾ ಬಳಗಕ್ಕೆ ಕರಗತವಾಗಿದೆ. ಆದ್ದರಿಂದ ಆತಿಥೇಯ ಬಳಗವು ಎಚ್ಚರಿಕೆಯಿಂದ ಆಡಬೇಕಾದ ಸವಾಲು ಕೂಡ ಇದೆ.

ಪಂದ್ಯ ಆರಂಭ: ಸಂಜೆ 6.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ದಕ್ಷಿಣ ಆಫ್ರಿಕಾ ತಂಡದ ನಾಯಕಿ ಸನಿ ಲುಸ್ (ಎಡ) ಆಸ್ಟ್ರೇಲಿಯಾ ತಂಡದ ನಾಯಕಿ ಮೆಗ್ ಲ್ಯಾನಿಂಗ್ –ಎಎಫ್‌ಪಿ ಚಿತ್ರ

ಪ್ರಣಯ್‌ಗೆ ಆಘಾತ ನೀಡಿದ ಕಿರಣ್ ಜಾರ್ಜ್

ಪುಣೆ (ಪಿಟಿಐ): ಅಗ್ರಶ್ರೇ-ಯಾಂಕದ ಆಟಗಾರ ಎಚ್.ಎಸ್.ಪ್ರಣಯ್ ಅವರು ಇಲ್ಲಿ ನಡೆಯುತ್ತಿರುವ 84ನೇ ರಾಷ್ಟ್ರೀಯ ಸೀನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಘಾತ ಅನುಭವಿಸಿದರು.

ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಜಾರ್ಜ್ 21–12, 21–15 ರಲ್ಲಿ ಪ್ರಣಯ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಇನ್ನೊಂದು ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ 19-21, 21-18, 17-21 ರಲ್ಲಿ ಮಣಿಪುರದ ಮೈಸ್ನಮ್ ಮಿರಾಬ ಎದುರು ಪ್ರಯಾಸದಿಂದ ಗೆದ್ದರು.

ಮಹಿಳೆಯರ ವಿಭಾಗದಲ್ಲಿ ಆಕರ್ಷಿ ಕಶ್ಯಪ್ ಅವರು ತಾನ್ಯಾ ಹೇಮಂತ್ ಅವರನ್ನು ಮಣಿಸಿ ಅಚ್ಚರಿಗೆ ಕಾರಣರಾದರು.

ಇತರ ಪಂದ್ಯಗಳಲ್ಲಿ ಅದಿತಿ ಭಟ್ 21–11, 21–5 ರಲ್ಲಿ ಏಳನೇ ಶ್ರೇಯಾಂಕದ ಆಟಗಾರ್ತಿ ಸಾದ್ ಧರ್ಮಾಧಿಕಾರಿ ವಿರುದ್ಧ ಗೆದ್ದರೆ, ದೀಪಶಿಖಾ ಸಿಂಗ್ 14–21, 21–10, 11–21 ರಲ್ಲಿ ಸೂರ್ಯ ಚರಿಷ್ಮಾ ಕೈಯಲ್ಲಿ ಪರಾಭವಗೊಂಡರು.

ಟೂರ್ನಿಯ ಆಟಗಾರ್ತಿ ಸ್ಪರ್ಧೆಯಲ್ಲಿ ರಿಚಾ

ದುಬೈ (ಪಿಟಿಐ): ಭಾರತದ ವಿಕೆಟ್‌ಕೀಪರ್ ಬ್ಯಾಟರ್ ರಿಚಾ ಘೋಷ್ ಅವರು ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ 'ಶ್ರೇಷ್ಠ ಆಟಗಾರ್ತಿ' ಪ್ರಶಸ್ತಿಗೆ ಸ್ಪರ್ಧೆಯಲ್ಲಿದ್ದಾರೆ. ಈ ಗೌರವ ಗಿಟ್ಟಿಸಲು ಒಟ್ಟು ಒಂಬತ್ತು ಆಟಗಾರ್ತಿಯರ ನಡುವೆ ಪೈಪೋಟಿ ಇದೆ.

19 ವರ್ಷದ ರಿಚಾ ಐದು ಇನಿಂಗ್ಸ್‌ಗಳಿಂದ ಒಟ್ಟು 168 ರನ್ ಕಲೆಹಾಕಿದ್ದಾರೆ. ಅವರು ಎರಡು ಸಲ ಮಾತ್ರ ಔಟಾಗಿದ್ದಾರೆ. 130ಕ್ಕೂ ಅಧಿಕ ಸ್ಟ್ರೈಕ್‌ರೇಟ್ ಹೊಂದಿದ್ದಾರೆ. ವಿಕೆಟ್ ಹಿಂದುಗಡೆಯೂ ಅವರು ಚುರುಕಿನ ಪ್ರದರ್ಶನ ನೀಡಿದ್ದರು. ಭಾರತ ತಂಡ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಐದು ರನ್‌ಗಳಿಂದ ಸೋತು ಹೊರಬಿದ್ದಿತ್ತು.

ಆಸ್ಟ್ರೇಲಿಯಾ ತಂಡದ ಮೂವರು, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತಲಾ ಇಬ್ಬರು ಮತ್ತು ವೆಸ್ಟ್ ಇಂಡೀಸ್‌ನ ಒಬ್ಬರು ಸ್ಪರ್ಧೆಯ-ಲ್ಲಿದ್ದಾರೆ.

ಬ್ಯಾಟರ್‌ಗಳಾದ ಮೆಗ್ ಲ್ಯಾನಿಂಗ್ (139 ರನ್), ಅಲಿಸಾ ಹೀಲಿ (171 ರನ್) ಮತ್ತು ಆಲ್‌ರೌಂಡರ್ ಆ್ಯಶ್ ಗಾರ್ಡನರ್ (81 ರನ್ ಮತ್ತು 9 ವಿಕೆಟ್) ಅವರು ಕಣದಲ್ಲಿರುವ ಆಸ್ಟ್ರೇಲಿಯಾ ತಂಡದ ಆಟಗಾರ್ತಿಯರು.

ದಕ್ಷಿಣ ಆಫ್ರಿಕಾದ ಆರಂಭಿಕ ಬ್ಯಾಟರ್ ಲಾರಾ ವಾಲ್ವಾರ್ಡ್, ತಜ್ಮಿನ್ ಬ್ರಿಟ್ಸ್ ಮತ್ತು ವೆಸ್ಟ್ ಇಂಡೀಸ್‌ನ ಹೇಯ್ಲಿ ಮ್ಯಾಥ್ಯೂಸ್ ಅವರೂ ಪ್ರಶಸ್ತಿ ರೇಸ್‌ನಲ್ಲಿ ಇದ್ದಾರೆ. ಲಾರಾ ಅವರು ಸೆಮಿಫೈನಲ್‌ನಲ್ಲಿ ಅರ್ಧಶತಕ ಗಳಿಸಿದ್ದರು.

ರಿಚಾ ಘೋಷ್

ಲೈಂಗಿಕ ಸಮಸ್ಯೆ
ಅಡ್ಡಪರಿಣಾಮಗಳಿಲ್ಲ
ಶಕ್ತಿ, ತಾಜಾತನ ಮತ್ತು ಪರಿಪೂರ್ಣ ಉತ್ಸಾಹದ ಮಧುರ ಬಾಂಧವ್ಯಕ್ಕಾಗಿ ಧನ್ವಂತರಿ ಆಯುರ್ವೇದ.
ಇಂದ್ರಿಯವನ್ನು 7-8 ಇಂಚು ಉದ್ದ 3-4 ಇಂಚು ದಪ್ಪ, ಸೆಕ್ಸ್ ಸಮಯ 30-40 ನಿಮಿಷ ಹೆಚ್ಚಿಸುತ್ತದೆ. 21 ರಿಂದ 75 ವರ್ಷದವರ ತನು-ಮನವನ್ನು ನವ ಯೌವನದಿಂದಿರುವಂತೆ ಮಾಡುತ್ತದೆ.
100% ಗ್ಯಾರಂಟಿ. ಅಂಗವರ್ಧಕ ಮಿಷಿನ್ ಲಭ್ಯವಿದೆ.
ಮಹಿಳೆಯರ ಆಕರ್ಷಕ ಸ್ತನವರ್ಧನೆಗೆ ಔಷಧಿ ದೊರೆಯುತ್ತದೆ.
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
7411506650

‘ಐಸಿಸಿ ಟೂರ್ನಿ ಜಯಿಸದ್ದಕ್ಕೆ ವಿಫಲ ನಾಯಕನೆಂದು ಕರೆಯುತ್ತಾರೆ’

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಆಯೋಜಿತ ಟೂರ್ನಿಗಳಲ್ಲಿ ಟ್ರೋಫಿ ಜಯಿಸದ ಕಾರಣಕ್ಕೆ ತಮ್ಮನ್ನು 'ವಿಫಲ' ನಾಯಕನೆಂದು ಕರೆಯುತ್ತಾರೆ ಎಂದು ಕ್ರಿಕೆಟಿಗ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಕೊಹ್ಲಿ ನಾಯಕತ್ವದಲ್ಲಿ ಭಾರತ ತಂಡವು 2017ರ ಚಾಂಪಿಯನ್ಸ್ ಟ್ರೋಫಿ, 2019ರ ಏಕದಿನ ವಿಶ್ವಕಪ್, 2021ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಹಾಗೂ 2021ರ ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಪರಾಭವ-ಗೊಂಡಿತ್ತು.

'ಗೆಲ್ಲುವ ಉದ್ದೇಶದಿಂದಲೇ ಟೂರ್ನಿಗಳಲ್ಲಿ ಆಡುತ್ತೇವೆ. ಆದರೆ ಸೋಲುಗಳನ್ನೇ ಮುಂದಿಟ್ಟುಕೊಂಡು ಟೀಕಿಸಲಾಗುತ್ತದೆ. ಐಸಿಸಿ ಟ್ರೋಫಿಯನ್ನು ನನ್ನ ನಾಯಕತ್ವದ ತಂಡವು ಗೆದ್ದಿರಲಿಲ್ಲ. ಆದರೆ ಫೈನಲ್ ಮತ್ತು ಸೆಮಿಫೈನಲ್ ಹಂತದವರೆಗೂ ತಂಡ ತಲುಪಿತ್ತು. ಆದರೂ ನನ್ನನ್ನು ವಿಫಲ ನಾಯಕನೆಂದು ಕರೆಯುತ್ತಾರೆ' ಎಂದು ಆರ್‌ಸಿಬಿ ಪಾಡ್‌ಕಾಸ್ಟ್‌ನಲ್ಲಿ ಅವರು ಹೇಳಿದ್ದಾರೆ.

'ಆದರೆ ಐಸಿಸಿ ಟೂರ್ನಿಗಳ ಯಶಸ್ಸು ಅಥವಾ ವೈಫಲ್ಯಗಳ ಹಿನ್ನೆಲೆಯಲ್ಲಿ ನನ್ನನ್ನು ನಾನು ವಿಶ್ಲೇಷಿಸುವುದಿ-ಲ್ಲ. ಒಂದು ತಂಡವಾಗಿ ಮಾಡಿರುವ ಸಾಧನೆ ಹಾಗೂ ಬಳಗದಲ್ಲಿ ಸಾಂಸ್ಕೃತಿಕ ನಡೆನುಡಿಗಳ ಬದಲಾ-ವಣೆಯನ್ನು ಅವಲೋಕಿಸುತ್ತೇನೆ. ಆದರೆ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ 2011ರ ಏಕದಿನ ಕ್ರಿಕೆಟ್ ವಿಶ್ವಕಪ್ ಹಾಗೂ 2013ರ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡದಲ್ಲಿ ಆಡಿದ್ದೆ' ಎಂದರು.

'ಸಚಿನ್ ತೆಂಡೂಲ್ಕರ್ ಅವರು ಆಡಿದ ಆರನೇ ವಿಶ್ವಕಪ್ ಟೂರ್ನಿಯಲ್ಲಿ ತಂಡವು ಟ್ರೋಫಿ ಜಯಿಸಿತ್ತು. ಅ ಬಳಗದಲ್ಲಿ ನಾನೂ ಒಬ್ಬನಾಗಿದ್ದೆ. ಕೇವಲ ಘಟಿಸಿಹೋದ ತಪ್ಪುಗಳ ಲೆಕ್ಕಾಚಾರ ಮಾಡುವುದಕ್ಕಿಂತ ಯಶಸ್ಸು-ಗಳನ್ನು ನೋಡುತ್ತ ಹೋಗಬೇಕು. ಅದರಿಂದ ನಮ್ಮ ವೃತ್ತಿಜೀವನದ ಬಗ್ಗೆ ಹೆಮ್ಮೆಯೆನಿಸುತ್ತದೆ. ಅದಕ್ಕಾಗಿ ಆಭಾ-ರಿಯಾಗಿರುತ್ತೇನೆ' ಎಂದು ವಿರಾಟ್ ಹೇಳಿದ್ದಾರೆ.

'ನನ್ನ ಕಪಾಟಿನಲ್ಲಿ ಟ್ರೋಫಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹಿಸಬೇಕು ಎನ್ನುವ ಹುಚ್ಚು ನನಗಿಲ್ಲ. ಶಿಸ್ತು, ಸತತ ಪರಿಶ್ರಮ ಮತ್ತು ಪರಿಪೂರ್ಣತೆಯ ಪ್ರಯತ್ನಗಳಿಗೆ ಲಭಿಸಿದ ಉಪಉತ್ಪನ್ನ-ಗಳಾಗಿ ಟ್ರೋಫಿಗಳನ್ನು ಪರಿಗಣಿಸುತ್ತೇ-ನೆ. ಆದರೆ ಅವುಗಳೇ ಎಲ್ಲವೂ ಅಲ್ಲ' ಎಂದಿದ್ದಾರೆ.

ಧೋನಿ ಒಬ್ಬರೇ ಬೆನ್ನಿಗಿದ್ದರು: ಕೊಹ್ಲಿ

'ಕಳೆದ ಕೆಲವು ವರ್ಷಗಳಲ್ಲಿ ನಾನು ಫಾರ್ಮ್ ಕಳೆದುಕೊಂಡಿದ್ದೆ. ಆ ಕಠಿಣ ಸಮಯದಲ್ಲಿ ಮಹೇಂದ್ರಸಿಂಗ್ ಧೋನಿ ಕರೆ ಮಾಡಿ ಧೈರ್ಯ ತುಂಬಿದ್ದರು. ನನ್ನ ಬಾಲ್ಯದ ಕೋಚ್, ಪತ್ನಿ ಅನುಷ್ಕಾ ಹಾಗೂ ಕುಟುಂಬದ ಸದಸ್ಯರನ್ನು ಬಿಟ್ಟರೆ ನನಗೆ ಬೆಂಬಲವಾಗಿ ನಿಂತ ಏಕೈಕ ವ್ಯಕ್ತಿ ಧೋನಿ' ಎಂದು ಕೊಹ್ಲಿ ನೆನಪಿಸಿಕೊಂಡರು.

'ಧೋನಿ ಫೋನ್ ಕರೆಗೆ ಸಿಗುವುದು ಅಪರೂಪ. ಅವರು ಫೋನ್ ಬಳಸುವುದೇ ಕಮ್ಮಿ. ಆದರೆ ಕಠಿಣ ಸಮಯದಲ್ಲಿ ನನ್ನಲ್ಲಿ ವಿಶ್ವಾಸ ತುಂಬುವವರ ನಿರೀಕ್ಷೆಯಲ್ಲಿ ಇದ್ದೆ. ಆಗ ಅವರು ಕರೆ ಮಾಡಿ ಮಾತನಾಡಿದರು. ಆ ಮಾತುಗಳಿಂದ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಿತು' ಎಂದರು.

ಕೆಸಿಸಿ: ವಾರಿಯರ್ಸ್ ಚಾಂಪಿಯನ್

ಬೆಂಗಳೂರು: ಗಂಗಾ ವಾರಿಯರ್ಸ್ ತಂಡವು ಕನ್ನಡ ಚಲನಚಿತ್ರ ಕಪ್ (ಕೆಸಿಸಿ) ಮೂರನೇ ಆವೃತ್ತಿಯ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ನಟರಾದ ಧನಂಜಯ ಮತ್ತು ಡಾರ್ಲಿಂಗ್ ಕೃಷ್ಣ ಅವರನ್ನೊಳಗೊಂಡ ವಾರಿಯರ್ಸ್ ತಂಡ, ನಟ ಉಪೇಂದ್ರ ಅವರ ಸಾರಥ್ಯದ ವಿಜಯನಗರ ಪೇಟ್ರಿಯಟ್ಸ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ವಾರಿಯರ್ಸ್ ಫೀಲ್ಡಿಂಗ್ ಮಾಡಲು ನಿರ್ಧರಿಸಿತು. ಮೊದಲು ಬ್ಯಾಟ್ ಮಾಡಿದ ಪೇಟ್ರಿಯಟ್ಸ್ ನಿಗದಿತ 10 ಓವರ್‌ಗಳಲ್ಲಿ 81 ರನ್ ಗಳಿಸಿತು. ವಾರಿಯರ್ಸ್ 7.1 ಓವರ್‌ಗಳಲ್ಲಿ ಗೆಲುವಿನ ಗುರಿ ಮುಟ್ಟಿತು. 29 ಎಸೆತಗಳಲ್ಲಿ 54 ರನ್ ಗಳಿಸಿದ ಸುರೇಶ್ ರೈನಾ ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಎರಡು ದಿನ ನಡೆದ ಈ ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಪಾಲ್ಗೊಂಡವು.

ಕ್ರಿಕೆಟ್: ಕೃತಿಕ್ ಕೃಷ್ಣಗೆ ನಾಯಕತ್ವ

ಬೆಂಗಳೂರು: ವಿಕೆಟ್‌ಕೀಪರ್ ಕೃತಿಕ್ ಕೃಷ್ಣ ಅವರು 23 ವರ್ಷದೊಳಗಿನ-ವರ ಆಹ್ವಾನಿತ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡವನ್ನು ಮುನ್ನಡೆಸುವರು.

ಟೂರ್ನಿಯ ಪಂದ್ಯಗಳು ಮಾರ್ಚ್ 3ರಿಂದ 18ರವರೆಗೆ ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ನಡೆಯಲಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರಕಟಣೆಯಲ್ಲಿ ತಿಳಿಸಿದೆ.

ತಂಡ: ಕೃತಿಕ್ ಕೃಷ್ಣ (ನಾಯಕ/ ವಿಕೆಟ್‌ಕೀಪರ್), ಆದಿತ್ಯ ನಾಯರ್, ಅನೀಶ್ವರ್ ಗೌತಮ್, ಭೀಮರಾವ್, ಎಲ್.ಆರ್. ಚೇತನ್, ಧನುಷ್ ಗೌಡ, ಆಶಿಶ್ ಮಹೇಶ್ (ವಿಕೆಟ್‌ಕೀಪರ್), ಎಲ್.ಆರ್. ಕುಮಾರ್, ಮೊಹ್ಸಿನ್ ಖಾನ್, ಎಸ್. ನಿತಿನ್, ಪಾರಸ್ ಜಿ ಆರ್ಯಾ, ಪ್ರಕಾರ್ ಚತುರ್ವೇದಿ, ಆರ್. ಸ್ಮರಣ್, ವಿಶಾಲ್ ಒನತ್, ಯಶೋವರ್ಧನ ಪರಂತಾಪ್. ಪಿ.ವಿ. ಶಶಿಕಾಂತ್ (ಕೋಚ್), ರೋಹಿತ್ ಸಬರವಾಲ್ (ಫೀಲ್ಡಿಂಗ್ ಕೋಚ್)

ಗಜಕರ್ಣ, ತುರಿಕೆ, ಇಸಬು
ಆಯುರ್ವೇದಿಕ ಮಲ್ಹಮ್‌ನಿಂದ ಮುಕ್ತರಾಗಿ
ಇಚ್ಗಾರ್ಡ್®
ಆಯುರ್ವೇದಿಕ ಮಲ್ಹಮ್
24x7 Helpline: 83058 53333
इचगार्ड आयुर्वेदिक मलहम
दाद, खाज, खुजली
● ಮೊದಲ ದಿನವೇ ಫಲಿತಾಂಶ ಕಾಣುವಿರಿ
● ಯಾವುದೇ ಜಿಗುಟುತನ, ಕಲೆಗಳಿಲ್ಲ

ಡ್ರ್ಯಾಗನ್ ಬೋಟ್ ಸ್ಪರ್ಧೆ ಕರ್ನಾಟಕಕ್ಕೆ ಚಿನ್ನದ ಸಂಭ್ರಮ

ಉಡುಪಿ: ಕರ್ನಾಟಕ ತಂಡದವರು ಬ್ರಹ್ಮಾವರ ಹೇರೂರು ಸಮೀಪದ ಸುವರ್ಣ ನದಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಡ್ರ್ಯಾಗನ್ ಬೋಟ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಒಂದು ಚಿನ್ನದ ಪದಕ ಜಯಿಸಿದರು.

ಡಿ–20 ವಿಭಾಗದ 500 ಮೀಟರ್ಸ್ ಪುರುಷರ ಸ್ಪರ್ಧೆಯಲ್ಲಿ ಹರಿಯಾಣ ತಂಡವನ್ನು ಸೋಲಿಸಿದ ಆತಿಥೇಯ ತಂಡ ಚಿನ್ನದ ಪದಕ ಮುಡಿಗೇರಿಸಿ-ಕೊಂಡಿತು. ಡಿ–20 ಮಿಶ್ರ ವಿಭಾಗದ 500 ಮೀಟರ್ ಸ್ಪರ್ಧೆಯಲ್ಲಿ ಮಧ್ಯಪ್ರದೇಶದ ವಿರುದ್ಧ ಸೋಲನುಭವಿಸಿದ ಕರ್ನಾಟಕ ಬೆಳ್ಳಿಗೆ ತೃಪ್ತಿಪಟ್ಟುಕೊಂಡಿತು.

ದೆಹಲಿ ಪಾರಮ್ಯ: ಚಾಂಪಿಯನ್‌ಶಿಪ್‌ನ ಎರಡನೇ ದಿನ ದೆಹಲಿ ಕ್ರೀಡಾಪಟುಗಳು ಪಾರಮ್ಯ ಮೆರೆದರು. ಡಿ–20 ಮಹಿಳಾ ವಿಭಾಗ, ಡಿ–10 ಜೂನಿಯರ್ ಮಹಿಳಾ ವಿಭಾಗ, ಡಿ–10 ಜೂನಿಯರ್ ಮಿಶ್ರ, ಡಿ–10 ಮಹಿಳಾ, ಡಿ–10 ಮಿಶ್ರ ವಿಭಾಗಗಳ 500 ಮೀಟರ್ ಸ್ಪರ್ಧೆಯಲ್ಲಿ ದೆಹಲಿ ತಂಡಕ್ಕೆ ಚಿನ್ನದ ಪದಕ ಒಲಿಯಿತು.

ಭಾರತ ಕಯಾಕಿಂಗ್, ಕೆನೊಯಿಂಗ್, ಕಯಾಕಿಂಗ್ ಕೊನೊಯಿಂಗ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ಜಿಲ್ಲಾಡ-ಳಿತದಿಂದ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಸ್ಪರ್ಧೆ ನಡೆಯುತ್ತಿದೆ.

ಫಲಿತಾಂಶ: ಮಹಿಳೆಯರು: ಡಿ–20 ವಿಭಾಗ 500 ಮೀಟರ್ಸ್: ದೆಹಲಿ–1, ಹರಿಯಾಣ–2, ಪಂಜಾಬ್–3, ಜೂನಿಯರ್ ಡಿ–10 500 ಮೀ: ದೆಹಲಿ–1, ಹರಿಯಾಣ–2, ಕರ್ನಾಟಕ–3, ಜೂನಿಯರ್ ಮಿಶ್ರ ಡಿ–10 500 ಮೀ: ದೆಹಲಿ–1, ಮಧ್ಯಪ್ರದೇಶ–2, ಹರಿಯಾಣ–3.

ಡಿ–10 500 ಮೀ: ದೆಹಲಿ–1, ಹರಿಯಾಣ–2, ಮಧ್ಯಪ್ರದೇಶ–3, ಮಿಶ್ರ ಡಿ–10 500 ಮೀ: ದೆಹಲಿ–1, ಪಂಜಾಬ್–2, ಕರ್ನಾಟಕ –3, ಪುರುಷರ ಡಿ–10 500 ಮೀ: ಪಂಜಾಬ್–1, ಮಧ್ಯಪ್ರದೇಶ–2, ಗೋವಾ–3.

ಪುರುಷರು: ಡಿ–20 500 ಮೀ: ಕರ್ನಾಟಕ–1, ಹರಿಯಾಣ–2, ಮಧ್ಯಪ್ರದೇಶ–3.

ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿ

ಎಎಸ್‌ಸಿ, ಎಂಇಜಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಎಸ್‌ಸಿ, ಎಂಇಜಿ ಮತ್ತು ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡಗಳು ಇಲ್ಲಿ ನಡೆಯುತ್ತಿರುವ ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಪಡೆದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಎಎಸ್‌ಸಿ 3–2 ಗೋಲುಗಳಿಂದ ಗೋಕುಲಂ ಕೇರಳ ಎಫ್‌ಸಿ ತಂಡವನ್ನು ಮಣಿಸಿತು.

ರೋಚಕ ಹಣಾಹಣಿ ನಡೆದ ಪಂದ್ಯದಲ್ಲಿ ಶಕ್ತಿ ಗುರುಂಗ್ (15ನೇ ನಿ.), ಅಜೇಂದ್ರ ಸಿಂಗ್ (35) ಮತ್ತು ಇ.ಅಲ್ವಿನ್ (82) ಅವರು ಎಎಸ್‌ಸಿ ಪರ ಗೋಲು ಗಳಿಸಿದರು. ಗೋಕುಲಂ ತಂಡದ ಎರಡೂ ಗೋಲುಗಳನ್ನು ಸ್ಯಾಮುಯೆಲ್ ಮನ್ಸಾ (14 ಹಾಗೂ 24ನೇ ನಿ.) ತಂದಿತ್ತರು.

ಇನ್ನೊಂದು ಪಂದ್ಯದಲ್ಲಿ ಎಂಇಜಿ ತಂಡ 2–1 ಗೋಲುಗಳಿಂದ ಎಫ್‌ಸಿ ಡೆಕ್ಕನ್ ವಿರುದ್ಧ ಗೆದ್ದಿತು. ವಿಜಯಿ ತಂಡದ ಪರ ಶೈಕ್ ಮುಜೀಬ್ (35 ಮತ್ತು 60ನೇ ನಿ.) ಹಾಗೂ ಡೆಕ್ಕನ್ ತಂಡ ಪರ ಎಸ್.ಸಚ್ಚಿದಾನಂದ (42) ಗೋಲು ಗಳಿಸಿದರು.

'ಎ' ಗುಂಪಿನ ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ 4–0 ಗೋಲುಗಳಿಂದ ಡೆಂಪೊ ಎಸ್‌ಸಿ ವಿರುದ್ಧ ಜಯಿಸಿತು.

ಸೆಲ್ವಿನ್ ಫ್ರೇಜರ್ ಮಿರಾಂಡ ಅವರು 6ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರೆ, ಇತರ ಗೋಲುಗಳನ್ನು ಇರ್ಫಾನ್ ಯಾದವಾಡ್ (33), ಸುಭಾ ಘೋಷ್ (89) ಮತ್ತು ಏನಮ್ ಜುರ್ವಾ (90 + 1) ತಂದಿತ್ತರು.

ಇಂದಿನ ಪಂದ್ಯಗಳು

ಕೆಂಕ್ರೆ ಎಫ್‌ಸಿ– ಶ್ರೀನಿಧಿ ಡೆಕ್ಕನ್ ಎಫ್‌ಸಿ (ಬೆಳಿಗ್ಗೆ 8.15)
ಚೆನ್ನೈಯಿನ್ ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ (ಬೆಳಿಗ್ಗೆ 10.45)
ಬಿಎಫ್‌ಸಿ– ಡೆಲ್ಲಿ ಎಫ್‌ಸಿ (ಮಧ್ಯಾಹ್ನ 1.30)
ಎಆರ್‌ಎ ಎಫ್‌ಸಿ– ಕೇರಳ ಯುನೈಟೆಡ್ ಎಫ್‌ಸಿ (ಸಂಜೆ 4)

ಗೋಕುಲಂ ಎಫ್‌ಸಿ ತಂಡದ ಗೋಕುಲ್ ಕೃಷ್ಣ (ಎಡ) ಮತ್ತು ಎಎಸ್‌ಸಿಯ ಸೋಮಾನಂದ ಸಿಂಗ್ ನಡುವಣ ಪೈಪೋಟಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಮುಂಬೈ ರೇಸ್

ಮಿಲಿಯನ್ ಗೆಲ್ಲುವ ನಿರೀಕ್ಷೆಯಲ್ಲಿ ಎಲ್ವೆನರ್

ಪೂನಾವಾಲ ಬ್ರೀಡರ್ಸ್ ಮಲ್ಟಿ-ಮಿಲಿಯನ್ ಮೂರು ವರ್ಷದ ಕುದುರೆಗಳಿಗೆ ಆಯೋಜಿಸುವ ದೇಶದ ಅತ್ಯಂತ ಶ್ರೀಮಂತ ರೇಸ್ ಆಗಿದ್ದು, ಒಟ್ಟು ₹ 1.50 ಕೋಟಿ ಬಹುಮಾನ ಮೊತ್ತ ಒಳಗೊಂಡಿದೆ. ಅತೋಲಾಹಿ ತರಬೇತಿಯಲ್ಲಿ ಪಳಗಿರುವ ಎಲ್ವೆನರ್ ಈ ಪ್ರತಿಷ್ಠಿತ ರೇಸ್ ಗೆಲ್ಲುವ ಉತ್ತಮ ಅವಕಾಶ ಹೊಂದಿದೆ. ಸಂಜೆ 5.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಕೈಹಾಕ್ 3, ಮೆಜಾರಿಟಿ ಬ್ಲೂ 7, ಮೊನಾರ್ಕಿ 2
2ನೇ ರೇಸ್: ಮುರ್ವಾರ ಪ್ರಿನ್ಸೆಸ್ 3, ಜರಾಕ್ 4
3ನೇ ರೇಸ್: ರೋಡ್ರಿಗೊ 4, ಸೂಪ್ ಅಂಡ್ ಸ್ಯಾಂಡ್‌ವಿಚ್ 3
4ನೇ ರೇಸ್: ಡ್ರೀಮ್ ಸೆಲ್ಲರ್ 1, ಮದ್ರಾಸ್ ಚೆಕ್ 7, ಸಿಯಾನ 6
5ನೇ ರೇಸ್: ಎಲ್ವೆನರ್ 4, ಫೈಟಾನ್ 5, ಜಮಾರಿ 9
6ನೇ ರೇಸ್: ಡಾಕ್ ಮಾರ್ಟಿನ್ 2, ಮಲಾಖಿ 6, ಮಸ್ಕಾರ 9
7ನೇ ರೇಸ್: ದಿ ಸಾವರಿನ್ ಆರ್ಬ್ 1, ಮೊಜೆಲ್ 9, ಮಾರ್ಕೆಟ್ ಕಿಂಗ್ 2
8ನೇ ರೇಸ್: ಜೆಟ್ ಟೈಫೂನ್ 1, ಲುಮಿನಾಸಿಟಿ 10, ಜೆಟ್‌ಫೈರ್ 2

ಉತ್ತಮ ಬೆಟ್: ಡಾಕ್ ಮಾರ್ಟಿನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಅಪರೂಪದ 67 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲಾದ 'ಸಚ್ಚಿ ಸಹೇಲಿ' ಆಯುರ್ವೇದಿಕ ಟಾನಿಕ್ ಈ ಕೆಳಗಿನ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗಿದೆ
Helps in:
ಕಠಿಣ ನೋವು
ಸಿಡುಕುತನ
ಆಯಾಸ
ಅಶಕ್ತತೆ
ಬೆನ್ನು ನೋವು
ಇಮ್ಯುನಿಟಿ

ಸಚ್ಚಿ ಸಹೇಲಿ®
24x7 Helpline: 77106 44444 | www.sachisaheli.in | Available at all medical & general stores